ಮಾನವಿಕ ಕರ್ಣಾಟಕ

ಸಂಪುಟ ೮ ಸಂಚಿಕೆ ೪

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೮

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದನಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸ ಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕ ಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೮ ಸಂಚಿಕೆ ೪

ಆಗಸ್ಟ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೮

MANAVIKA KARNATAKA, Kannada quarterly (Humanities) of the University of Mysore, Volume 8, Number 4, August 1978. Edited by Dr. B. R. Gopal and Dr. B. S. Srikantaradhya.

ಪ್ರಕಾಶಕರು : ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ-570 012

ಮುದ್ರಕರು : ಹರ್ಷ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು–570008

ವಿಷಯಸೂಚಿ

ಈ ಸಂಚಿಕೆಯ ಲೇಖಕರು

1.	ಜಿ. ಟಿ. ನಾರಾಯಣರಾವ್	ಸಂಪಾದಕರು, ವಿಶ್ವಕೋಶ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦೦೦೬.
2.	ಎಚ್. ಎಸ್. ಹರಿಶಂಕರ್	ಅಧ್ಯಾಪಕರು, ಭಾಷಾಂತರ ಮತ್ತು ಪಠ್ಯ ಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ.
3.	ಡಾ. ಕೆ. ಜಿ. ವಸಂತಮಾಧವ	ಅಧ್ಯಾಪಕರು, ಇತಿಹಾಸ ವಿಭಾಗ, ವಿಜಯಕಾಲೇಜು, ಮುಲ್ಕಿ, ದ. ಕ. ಜಿಲ್ಲೆ.
4.	ಚಿ. ನಾ. ಸೋಮೇಗೌಡ	ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಎಸ್. ಎ. ಸಿ. ಕಾಲೇಜ್ ಆಫ್ ಆರ್ಟ್ಸ್ ಅಂಡ್ ಕಾಮರ್ಸ್ ಆದಿಚುಂಚನಗಿರಿ ಕ್ಷೇತ್ರ–571418
5.	ಒ. ಡಿ. ಹೆಗ್ಗಡೆ	ಉಪನ್ಯಾಸಕರು, ಅರ್ಥವಿಜ್ಞಾನ ವಿಭಾಗ, ಮಂಗಳಗಂಗೋತ್ರಿ, ದ. ಕ. ಜಿಲ್ಲೆ.
6.	ಯನ್. ಬಿ. ಪಾಂಗಣ್ಣಾಯ	ಅಧ್ಯಾಪಕರು, ಗ್ರಂಥಾಲಯ ವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬.
7.	ಎ. ಜಾನಕಿ	ಗ್ರಂಥಾಲಯ ಸಹಾಯಕರು, ವಿಶ್ವವಿದ್ಯಾನಿಲಯ ಗ್ರಂಥಾಲಯ, ಮಾನಸಗಂಗೋತ್ರಿ.
8.	ಡಿ. ಎನ್. ಜಂಟುಪ್ಪಗೌಡ	ಸಂಶೋಧನ ಸಹಾಯಕರು, ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
9.	ಡಾ. ಬಾ. ರಾ. ಗೋಪಾಲ್	ಶಾಸನ ತಜ್ಞರು, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
10.	ರಾ. ಕೇಶವ್	ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಹಾರಾಜಾ ಕಾಲೇಜು, ಮೈಸೂರು ೫೭೦೦೦೫

ಜಿ. ಟಿ. ನಾರಾಯಣರಾವ್

ನಾಪೋಕ್ಲಿನ ಕರ್ಮಯೋಗಿ ಕೆ. ಎಸ್ ನಂಜುಂಡನವರು

ಕೊಡಗು ನೈಸರ್ಗಿಕವಾಗಿ ಸಂಪದ್ಭರಿತ ಪ್ರದೇಶ. ಇಲ್ಲಿನ ಜನ ಕಷ್ಟಸಹಿಷ್ಣುಗಳು ಮತ್ತು ಶ್ರಮಜೀವಿಗಳು. ಹಾಗಿದ್ದರೂ ಶೈಕ್ಷಣಿಕವಾಗಿ ಈ ಜಿಲ್ಲೆ ಕರ್ನಾಟಕದಲ್ಲಿ ಹಿರಿ ಹೆಸರನ್ನೇನೂ ಮಾಡಿಲ್ಲ. ಈ ವಿಪರ್ಯಾಸದ ಕಾರಣವೇನು ?

ಜನಶಕ್ತಿಯನ್ನು ನಿಸರ್ಗಕ್ಕೆ ಉದ್ದೇಶಪೂರ್ವಕವಾಗಿಯೂ ವ್ಯವಸ್ಥಿತವಾಗಿಯೂ ಅನ್ವಯಿಸಿದಾಗ ಮಾತ್ರ ಸಂಪತ್ತು ವರ್ಧಿಸಿ ಬದುಕು ಕುದುರುತ್ತದೆ. ಕ್ರಮಬದ್ಧ ಶಿಕ್ಷಣ ಹಾಗೂ ಶಿಸ್ತಿನ ನಡೆಗಳಿಂದ ಮಾತ್ರ ಇದು ಸಿದ್ಧಿಸೀತು.

1940ರ ದಶಕದ ತನಕವೂ ಕೊಡಗು ಶಿಕ್ಷಣರಂಗದಲ್ಲಿ ತೀರ ಹಿಂದುಳಿದಿತ್ತು. ನಾಡಿನ ಪ್ರತಿಭಾನ್ವಿತ ಯುವಕ ಯುವತಿಯರಿಗೆ ವಿದ್ಯೆ ಕಲಿತು ಪ್ರಗತಿ ಸಾಧಿಸಲು ಯೋಗ್ಯ ಅವಕಾಶಗಳೇ ಇರಲಿಲ್ಲ. ಇಡೀ ಕೊಡಗಿನಲ್ಲಿ ಇದ್ದದ್ದು ಕೇವಲ ಮೂರು ಪ್ರೌಢಶಾಲೆಗಳು ಮಾತ್ರ: ಮಡಿಕೇರಿಯಲ್ಲಿ ಎರಡು (ಆ ಪೈಕಿ ಒಂದು ಹುಡುಗಿಯರಿಗೆ ಮೀಸಲು), ವಿರಾಜಪೇಟೆಯಲ್ಲಿ ಒಂದು. ನಾಪೋಕ್ಲು, ಪೊನ್ನಂಪೇಟೆ, ಸೋಮವಾರಪೇಟೆ ಮೊದಲಾದ ಹಿರಿಹಳ್ಳಿಗಳಲ್ಲಿ ಲೋಯರ್ ಸೆಕಂಡರಿ ಉನ್ನತ ಶಿಕ್ಷಣ ಪಡೆದ 'ಪ್ರಭೃತಿಗಳು' ಪ್ರೌಢಶಾಲೆಯ ಉಚ್ಚ ಶಿಕ್ಷಣ ದೊರಕಿಸಲು ರಾಜಧಾನಿ ಮಡಿಕೇರಿಗೆ ಇಲ್ಲವೇ ಉಪರಾಜಧಾನಿ ವಿರಾಜಪೇಟೆಗೆ ವಲಸೆ ಹೋಗುವುದು ಅನಿವಾರ್ಯವಾಗಿತ್ತು. ಬಹುಮಂದಿ ಬಡ ರೈತ ತಂದೆತಾಯಂದಿರ ಮಕ್ಕಳಿಗೆ ಮಡಿಕೇರಿ ವಿರಾಜಪೇಟೆ 'ಮಹಾನಗರಗಳು' ಎಂದೂ ಕೈಗೆಟುಕದ ಅಮರಾವತಿಗಳೇ ಆಗಿದ್ದುವು.

1931-40ರ ವೇಳೆಗೆ ಹೊಸ ಅಲೆಯೊಂದು ಭಾರತವಿಡೀ ಕ್ರಮೇಣ ಹಬ್ಬುತ್ತಿತ್ತು: ಮಹಾತ್ಮಾ ಗಾಂಧಿಯವರ ಹಿರಿತನದಲ್ಲಿ ಸ್ವಾತಂತ್ರ್ಯಾಂದೋಳನ. ಗಿರಿವನನದಿರಕ್ಷಿತ ದುರ್ಗ ಕೊಡಗಾದರೂ ಈ ಅಲೆಯ ಪ್ರಭಾವದಿಂದ ಹೊರಗೆ ಉಳಿಯುವುದು ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯ ಸಮರದ ಹೊಳಹುಗಳು ಇಲ್ಲಿಯೂ ಕಾಣಿಸಿಕೊಂಡುವು. ಆ ಚಳವಳಿಯ ಅಂಗವಾಗಿ ಗ್ರಾಮಸುಧಾರಣೆ, ಹರಿಜನೋದ್ಧಾರ ಖಾದಿಪ್ರಚಾರ, ಜ್ಞಾನಪ್ರಸಾರ, ಹಿಂದಿಕಲಿಕೆ, ಗುಡಿ ಕೈಗಾರಿಕೆಗಳ ನವೀಕರಣ ಹೀಗೆ ಹಲವು ಹನ್ನೊಂದು ರಚನಾತ್ಮಕ ಚಟುವಟಿಕೆಗಳು ಜನರ ಸ್ವಪ್ರೇರಣೆಯಿಂದ ಕಾರ್ಯಗತವಾದುವು.

ಅದೇ ವೇಳೆ ನೆರೆನಾಡುಗಳಿಂದ, ಮೈಸೂರು ಹಾಗೂ ದಕ್ಷಿಣ ಕನ್ನಡ ವಲಯಗಳಿಂದ, ಹಿರಿಕಿರಿಮರಿ ಸಾಹಿತಿಗಳು ಅಧಿಕ ಸಂಖ್ಯೆಯಲ್ಲಿ ಕೊಡಗಿಗೆ ಬಂದು ಮಡಿಕೇರಿ, ವಿರಾಜಪೇಟೆಗಳಲ್ಲಿ ಮಾತ್ರ ಅಲ್ಲ, ನಾಪೋಕ್ಲು, ಪೊನ್ನಂಪೇಟೆ, ಸೋಮವಾರಪೇಟೆಗಳಲ್ಲಿ ಕೂಡ ಭಾರತೀಯ ಕಲೆ ಸಾಹಿತ್ಯ ಸಂಸ್ಕೃತಿಗಳ ವೈಭವ, ಕನ್ನಡ ಸಾಹಿತ್ಯದ ಸೊಗಸು, ಕರ್ನಾಟಕದ ಹಿರಿಮೆ ಮುಂತಾದ

ಉದ್ಬೋಧಕ ವಿಷಯುಗಳ ಮೇಲೆ ರೋಚಕ ಉಪನ್ಯಾಸಗಳನ್ನು ನೀಡಿ ಜನರ ಸುಪ್ತ ರಸಪ್ರಜ್ಞೆಯ ಮೇಲೆ ವಿಶೇಷ ಪರಿಮುದ್ರೆ ಒತ್ತುತ್ತಿದ್ದರು.

1939ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾಗಿ ಪ್ರಪಂಚದ ದೃಷ್ಟಿ ಮತ್ತು ಶಕ್ತಿಮೊದಲಿಗೆ ಯೂರೊಪಿನತ್ತ ತರುವಾಯ ಪೂರ್ವ ವಲಯದತ್ತ ಹೊರಳಿದುವು. ಜನರಲ್‌ಗಳ ತೂಗುತೊಟ್ಟಿಲೂ ಆಡುಂಬೊಲವೂ ಆದ ಕೊಡಗಿನ, ಹುಲಿಯ ಹಾಲಿನ ಮೇವುಂಡ, ವೀರ ತರುಣರು ಅಧಿಕ ಸಂಖ್ಯೆಯಲ್ಲಿ ಆಳರಸರ ಪಟಾಲಮ್ಮುಗಳನ್ನು ಸೇರಿದರು. ಹಳ್ಳಿಗಮಾರನನ್ನೂ ರಾಜಕುಮಾರನನ್ನು ಸೈನ್ಯದ ಸಮವಸ್ತ್ರ ಸಮೀಕರಿಸಿ ಒಂದಾಗಿ ಬೆಸೆಯಿತು ವಿಶಾಲ ರಣರಂಗದ ಕಠೋರ ಸತ್ಯಗಳು ಅವರ ಪೌರುಷವನ್ನ ಪ್ರಶ್ನಿಸುವ ಸವಾಲುಗಳಾದುವು. ಪ್ರಪಂಚದ ವಿವಿಧ ರಣಾಂಗಣಗಳಲ್ಲಿ ಹರಡಿಹೋದ ಈ ವೀರಾಗ್ರಣಿ ಮುಗ್ಧರಿಗೆ "ಕಾವೇರಮ್ಮೆಯ ಪವಿತ್ರ ನಾಡಾದ" ಕೊಡಗಿಗಿಂತಲೂ ಆಚೆಗೆ ಪ್ರಪಂಚ ನಿಜಕ್ಕೂ ಇದೆ ಎಂಬ ಅರಿವು ಮೂಡಿತು. ಋತುಗಳ ಲಯಬದ್ಧ ಗತಿಗೆ ಹೊಂದಿಕೊಂಡು ಹುಟ್ಟು ಸಾವು ಎಂಬ ಎರಡು ಕೊನೆಬಿಂದುಗಳ ನಡುವಿನ ಬಾಳೆಂಬ ನೇರ ಗೆರೆಯ ಮೇಲೆ ನೋವು–ನಲಿವು ಅಡಿಗಳನ್ನಿಟ್ಟು ಸಾಗುತ್ತಿದ್ದ ಈ ಸಾಚಾ ಮಂದಿಗೆ ಬದುಕು ಆಕಾಶ–ಕಾಲಗಳ ನಾಲ್ಕು ಆಯಾಮಗಳಲ್ಲಿ ಅತಿ ಸಂಕೀರ್ಣ ಪದರಗಳಾಗಿ ಹೆಣೆದುಕೊಂಡಿರುವ ವಿಶೇಷ ವಿದ್ಯಮಾನ ಎಂಬುದರ ಕಲ್ಪನೆ ತಕ್ಕಮಟ್ಟಿಗಾದರೂ ಆಯಿತು. ಇಂಥ ಸಂಚಿತಾನುಭವಗಳ ಫಲವಾಗಿ ಈ ವೀರಯೋಧರು ದೂರದ ತಮ್ಮ ನೆಲವನ್ನು (ಕೊಡಗು) ಎಂದಿಗಿಂತ ಹೆಚ್ಚಿನ ಆತ್ಮೀಯತೆಯಿಂದ ಪ್ರೀತಿಸಲಾರಂಭಿಸಿದರು, ತಮ್ಮ ಬಂಧುಬಾಂಧವರ ಬಗ್ಗೆ ಅಧಿಕ ಅಭಿಮಾನ ತಳೆದರು, ತಮ್ಮ ಜ್ಞಾತಿಗಳು ಪ್ರಪಂಚದ ಪ್ರಗತಿವಂತ ಜನರ ಸಾಲಿನಲ್ಲಿ ಸಮಭುಜರಾಗಿ ಮೆರೆಯುವಂತಾಗಬೇಕು ಎಂಬ ಕನಸು ಕಾಣತೊಡಗಿದರು. ಇಳೆಯ ಕೊಳುಗುಳಗಳಲ್ಲಿ ಹರಡಿಹೋಗಿದ್ದ ಕೊಡಗಿನ ಕೆಚ್ಚೆದೆ ತರುಣರ ಉಳಿಕೆ ಹಣ ಹೊನಲಾಗಿ ಕೊಡಗಿಗೆ ಹರಿದು ಬರಲಾರಂಭಿಸಿತು.

ಹೀಗೆ, 1941–50ರ ದಶಕ ಎಳೆಎಳೆಯಾಗಿ ಬಿಡಿಸಿಕೊಳ್ಳುವ ಹೊತ್ತಿಗೆ, ಕೊಡಗಿನ ವಿರಾಟ್ಪುರುಷನ ಸುಪ್ತ ಪ್ರಜ್ಞೆ ಮೂರು ವಿಧವಾದ ಹೊಸಬಲಗಳಿಂದ ತಾಡನೆಗೊಂಡು ಎಚ್ಚರಗೊಳ್ಳುವುದನ್ನು ನೋಡುತ್ತೇವೆ; ಮಲೆನಾಡಮ್ಮನ ತಣ್ಪು ಮಡಿಲಲ್ಲಿ ಯುಗ ಯುಗಗಳಿಂದಲೂ ಒರಗಿ ನೆಮ್ಮದಿ ಕಂಡಿದ್ದ ಈ ಶಿಶು ಈಗ ಕಣ್ತೆರೆಯುವುದನ್ನು ಕಾಣುತ್ತೇವೆ; ಜನರಿಗೆ ಹೊಸ ಅಲೆ ತಾಗಿ ಅವರು ಹುರುಪಿನಿಂದ ಹೊಸ ಹಾದಿ ಅರಸುವುದನ್ನು ಗಮನಿಸುತ್ತೇವೆ. ಗಾಂಧಿ ಅಲೆ, ಸಾಹಿತ್ಯ ಅಲೆ, ಯುದ್ಧ ಅಲೆ ಇವೇ ಆ ಬಲಗಳು. ಇವುಗಳ ಪರಿಣಾಮವಾಗಿ ನಾಡಿನ ಹಿರಿಯರಲ್ಲಿ ಶಿಕ್ಷಣ ಕ್ಷೇತ್ರವನ್ನು ಕುರಿತಂತೆ ಹೊಸ ಚಿಂತನೆ ರೂಪುಗೊಂಡಿತು.

೨

ಕೊಡಗಿನ ಸಂಸ್ಕೃತಿ ಇಲ್ಲಿನ ನೈಸರ್ಗಿಕ ಪರಿಸರ ಹಾಗೂ ರಾಜಕೀಯ ಹವೆಗಳಿಗೆ ಅನುಗುಣವಾಗಿ ವಿಕಸಿಸಿದೆ. ನಂಬಿಕೆ, ಮಾತು, ನಡವಳಿಕೆ, ಭಾಷೆ, ಹಬ್ಬಹರಿದಿನ ಮುಂತಾದವುಗಳಲ್ಲಿ ಒಂದೇ ಪರಂಪರೆಗೆ ಸೇರಿದ ಕೊಡವರು ಈ ನಾಡಿನಲ್ಲಿ ಇತರ ಯಾವುದೇ ಕೋಮಿನ ಜನರಿಗಿಂತ ಹೆಚ್ಚು ಸಂಖ್ಯೆಯಲ್ಲಿ ನೆಲೆಸಿದ್ದಾರೆ — ಇವರದು ಒಂಟಿ ಬಹುಸಂಖ್ಯಾತ ಪಂಗಡ. ಮೂಲತಃ ಇವರು ಬೇಸಾಯಗಾರರು, ಬೇಟೆಗಾರರು, ಹೋರಾಟಗಾರರು. ಇವರ ಬದುಕಿನ ಬವಣೆಗಳಲ್ಲಿ ನಿಸರ್ಗದ ಪಾತ್ರ ಅತಿ ಪ್ರಧಾನ. ಅದರ ರುದ್ರ ಬಲಗಳ ಎದುರು, ಗಹನ ಗಹ್ವರಗಳ ಮುಂದೆ, ಬಾನನ್ನು ಎತ್ತಿ ಹಿಡಿದಿಟ್ಟಿರುವ ಹಿರಿಬೆಟ್ಟಗಳ ಬುಡದಲ್ಲಿ ವ್ಯಕ್ತಿಗಳಿಗೆ ಏನು ಸ್ಥಾನ ತಾನೇ ಇದ್ದೀತು!

ನಾಡಿನ ವಿಶೇಷ ಭೌಗೋಳಿಕ ಪರಿಸ್ಥಿತಿಯಿಂದಾಗಿ — ತೀರ ಈಚೆಗಿನತನಕವೂ ಕೊಡಗು ಪರನಾಡುಗಳವರಿಗೆ ದುರ್ಗಮಾಭೇದ್ಯ ಬೆಟ್ಟಕೋಟೆ ಆಗಿತ್ತು — ಕೊಡವ ಸಂಸ್ಕೃತಿ ಬಲು ಮಟ್ಟಿಗೆ ಬಾಹ್ಯ ಬಲಗಳ ಪ್ರಭಾವ ವರ್ಚಸ್ಸುಗಳಿಗೆ ಈಡಾಗದೆ ಸ್ವತಂತ್ರವಾಗಿ ವಿಕಸಿಸುವುದು ಸಾಧ್ಯವಾಯಿತು. ಗಟ್ಟಿ ನೆಲಗಟ್ಟಿರುವ ಈ ಒಂಟಿ ಸಂಸ್ಕೃತಿಯ ಛಾಯೆ ಕೊಡಗಿನ ಇತರ ಎಲ್ಲ ಕೋಮಿನವರ ಮೇಲೆಯೂ ಎದ್ದು ತೋರುವುದು ತೀರ ಸಹಜ ಪ್ರಕ್ರಿಯೆ — ಕೊಡಗು ಎನ್ನುವ ಅಖಂಡ ಭಾಂಡದೊಳಗೆ ನಡೆಯುತ್ತಿರುವ ಪಾಕಕ್ರಿಯೆಯಲ್ಲಿ ಮುಖ್ಯ ಪರಿಕರ ಕೊಡವ ಸಂಸ್ಕೃತಿ.

ಬೇಸಾಯ, ಬೇಟೆ, ಹೋರಾಟ ಇವನ್ನು ಅನುಸರಿಸಿ ದೇವದೈವಗಳೂ ಮಂತ್ರಮಾಟಗಳೂ ತಂತ್ರಕೂಟಗಳೂ, ಇತರ ಎಲ್ಲ ಆದಿಮ ಸಂಸ್ಕೃತಿಗಳಲ್ಲಿನಂತೆಯೇ, ಇಲ್ಲಿಯೂ ಮೈದಳೆದಿವೆ. ತದನುಗುಣವಾಗಿ ಪೂಜಾರಿಗಳು, ಐಗಳು, ತಂತ್ರಕುಶಲಿಗಳು, ವಣಿಕರು, ಮಾಟಗಾರರು ಮುಂತಾದವರು ಇಲ್ಲಿ ಕೂಡ ಹುಟ್ಟಿಕೊಂಡಿದ್ದಾರೆ. ಇವರು ಬೇರೆ ಬೇರೆ ಕೋಮುಗಳವರಾದರೂ ಇವರ ನಡುವೆ ವಿಶೇಷ ಸಾಮರಸ್ಯ ಬೆಸುಗೆಗೊಂಡಿತು. ಶುಭಾಶುಭ ಸಂದರ್ಭಗಳಲ್ಲಿ, ಬೇಸಾಯ ಬೇಟೆಗಳಲ್ಲಿ, ಮತ್ತು ನಾಡಿನ ರಕ್ಷಣೆಯನ್ನು ಕುರಿತ ಮಂತ್ರಾಲೋಚನೆ ಹಾಗೂ ಏರ್ಪಾಡುಗಳಲ್ಲಿ ಇವರೆಲ್ಲರೂ ಪರಸ್ಪರ ಕಲೆತು "ಒಬ್ಬನೆಲ್ಲರಿಗೆಲ್ಲರೊಬ್ಬನಿಗೆ" ಎಂಬ ಸೂತ್ರವನ್ನು ಅನುಷ್ಠಾನಕ್ಕೆ ತಂದಿದ್ದರು.

ಸಣ್ಣ ನೆಲ, ಕಡಿಮೆ ಜನ, ಅನೂನ ಸಂಸ್ಕೃತಿ, ಪರಸ್ಪರ ವಿಶ್ವಾಸಯುಕ್ತ ಮನೋಭಾವ, ವಿಪುಳ ನೈಸರ್ಗಿಕ ಸಂಪತ್ತು, ಕಷ್ಟಸಹಿಷ್ಣು ಮಂದಿ ಇಂಥ ಪರಸ್ಪರ ಪೂರಕ ಪ್ರಭಾವಗಳಿಂದ ಕೂಡಿದ್ದ ಕನ್ನೆನೆಲದಲ್ಲಿ ಸಹಕಾರಾಂದೋಳನ (cooperative movement) ಸಹಜವಾಗಿ ಬಲವಾದ ನೆಲೆ ಪಡೆಯಿತು. ಪ್ರಸಕ್ತ ಶತಮಾನದ ಆದಿ ಭಾಗದಲ್ಲಿ ಭಾರತಾದ್ಯಂತ ಸಹಕಾರ ಚಳವಳಿ ಪಸರಿಸಿದಾಗ ಕೊಡಗಿನ ದೃಢ ಅಸ್ತಿಭಾರ ಅಯಾಚಿತವಾಗಿ ಅದಕ್ಕೆ ಒದಗಿಬಂತು. ಇಲ್ಲಿನ ಸಹಕಾರರಂಗ ಬಲು ಬೇಗ ಭಾರತಕ್ಕೇ ಮಾದರಿ ಎಂಬ ಹಿರಿಮೆ ಗಳಿಸಿದ್ದು ಈ ಕಾರಣದಿಂದ – ಅದು ಜನರ ಅಂತರಂಗಕ್ಕೆ ಬಾಹ್ಯ ಪ್ರತಿಮೆಯನ್ನು ಒದಗಿಸಿದ್ದರಿಂದ, ಅವರ ಆಶೋತ್ತರಗಳ ಪ್ರತ್ಯಕ್ಷ ರೂಪವಾಗಿ ಮೈತಳೆದದ್ದರಿಂದ.

ಹಳ್ಳಿ ಹಳ್ಳಿಗಳಲ್ಲಿ ಸಹಕಾರ ಸಂಘಗಳ ಕಿರಿ ಒರತೆಗಳು ಅಲ್ಲಲ್ಲಿನ ಜನರ ಸ್ವಪ್ರೇರಣೆಯಿಂದ (ಸರಕಾರದ ಬಾಹ್ಯಬಲದಿಂದ ಅಲ್ಲ) ಹುಟ್ಟಿಕೊಂಡುವು. ಈ ಒರತೆಗಳು ಕೂಡಿ ತೊರೆ ನದಿಗಳಾದುವು. ಇಡೀ ನಾಡೇ ಇವುಗಳ ಜಾಲದಿಂದ ನೇಯಲ್ಪಟ್ಟು ಜನರಲ್ಲಿ ಹೊಸಬಗೆಯ ಜೀವನೋತ್ಸಾಹ ತುಂಬಿ ತುಳುಕುವಂತಾಯಿತು. 1931–40ರ ದಶಕದಲ್ಲಿ ಕಂಡುಬರುತ್ತಿದ್ದ ಉತ್ತೇಜಕ ಸನ್ನಿವೇಶವಿದು.

ವಿದ್ಯೆಯಲ್ಲಿ ಈ ಮಂದಿ ಹಿಂದುಳಿದಿದ್ದರೂ ಬುದ್ಧಿಯಲ್ಲಿ ಯಾರಿಗೂ ಕಡಿಮೆ ಇರಲಿಲ್ಲ. ನಾಗರಿಕತೆಯ ಫಲಗಳು ಇವರಿಂದ ಬಲು ದೂರದಲ್ಲಿದ್ದರೂ ಸಂಸ್ಕೃತಿಯ ಸಿದ್ಧಿಗಳಲ್ಲಿ ಇವರು ಯಾರಿಗೂ ಹಿಂದೆ ಇರಲಿಲ್ಲ. ಸಿರಿವಂತಿಕೆಯೊ ಬಡತನವೊ ಬದುಕನ್ನು ನೇರವಾಗಿ ಸ್ವೀಕರಿಸಿ ಪ್ರಾಮಾಣಿಕವಾಗಿ ಬಾಳುವ ದಿಟ್ಟರು ಇವರಾಗಿದ್ದರು.

೩

ಬಯಲುಸೀಮೆಯವರ ಸರ್ವಜ್ಞ ದೃಷ್ಟಿಯಲ್ಲಿ (ಇದು ಮಲೆನಾಡಿನವರ ದೂರ್ವಾಸ ದೃಷ್ಟಿಗಿಂತ ಬೇರೆ ಆದದ್ದು) ಮಲೆನಾಡು ಎಂದರೆ ಮೈವೆತ್ತ ಅಂಡಮಾನ್ ದ್ವೀಪವೇ! ಮಳೆ ಮಲೇರಿಯಾ, ಬದುಕಿಗೆ ಬೇಕಾಗುವ ಎಲ್ಲ ಅನುಕೂಲತೆಗಳ ಕೊರತೆ, ದಿನಬಳಕೆ ಪದಾರ್ಥಗಳ

ಅಭಾವ, ದುಬಾರಿ ಬೆಲೆ, ವಿದ್ಯೆ ಮತ್ತು ವೈದ್ಯಕೀಯ ಸೌಕರ್ಯಗಳು ಇಲ್ಲದಿರುವಿಕೆ – ಹೀಗೆ ಈ "ಇಲ್ಲ"ಗಳನ್ನೂ "ಅಭಾವ"ಗಳನ್ನೂ "ಕೊರತೆ"ಗಳನ್ನೂ ಬೆಳೆಸುತ್ತ ಹೋಗಬಹುದು. ಇದೊಂದು ನರಕಕೂಪವೆ, ಕುಂಭೀಪಾಕವೆ! ಆಡಳಿತ ಬಂಡಿಯ ಚುಕ್ಕಾಣಿಗಾಲಿ ಹಿಡಿದವರೂ ಹೆಚ್ಚಿನ ಸಹಾಯಕ ಸಾರಥಿಗಳೂ ಬಯಲುಸೀಮೆಯವರೆ ಆದದ್ದರಿಂದ ಮಲೆನಾಡಿಗೆ ವರ್ಗವಾಗಿ ಹೋಗುವುದೆಂದರೆ ಅದೊಂದು ಪರಮ ಶಿಕ್ಷೆಯೆ, ನರಕವಾಸವೆ, ನಾಗರಿಕತೆಯ ಶಿಖರದಿಂದ ಅನಾಗರಿಕತೆಯ ಪ್ರಪಾತಕ್ಕೆ ಆದ ಮಹಾಪತನವೆ ಸರಿ ಎಂಬ ಭಾವನೆ ಪ್ರಬಲವಾಗಿ ಬೇರೂರಿತು. ಅಂದಿನ ಮಲೆನಾಡುಗಳು ನಿಜಕ್ಕೂ ಇಂಥ ಭಾವನೆಗಳನ್ನು ಪುಷ್ಟೀಕರಿಸುವಂತೆ ತೀರ ಹಿಂದುಳಿದ ಪ್ರದೇಶಗಳಾಗಿದ್ದುದು ನಿಜ ಸಂಗತಿ.

ಸಾಪೇಕ್ಷವಾಗಿ ಕೊಡಗು ಸಂಪದ್ಭರಿತ ಹಾಗೂ ಪ್ರಗತಿಪರ ಮಲೆನಾಡಾಗಿದ್ದರೂ ಸಾರಿಗೆ, ಸಂಪರ್ಕ, ವಿದ್ಯೆ, ವೈದ್ಯಕೀಯ, ಜೀವನಾವಶ್ಯಕ ಪದಾರ್ಥಗಳ ಪೂರೈಕೆ ಮೊದಲಾದವನ್ನು ಕುರಿತಂತೆ ಇದು ಇನ್ನೂ ಗತಶತಮಾನದಲ್ಲಿಯೇ ಇತ್ತು. ಇಲ್ಲಿನ ಗಾಳಿ ಮಳೆ ನೆರೆ ಚಳಿ ಕಣಿವೆ ಗುಡ್ಡ ಬೆಟ್ಟ ಕಾಡು ಕೆರೆ ತೊರೆ ಹೊಳೆ ಒಂದೊಂದೂ "ಯಥಾಶಕ್ತಿ ಸೇವೆ ಸಲ್ಲಿಸಿ" ಕೊಡಗಿನಲ್ಲಿ ಕಾಲರಾಯನ ಮುನ್ನಡೆಯನ್ನು ತಡೆಹಿಡಿದಿದ್ದುವು. ಹಿಂದುಳಿದ ಈ ನಾಡಿಗೆ ಕಳಶಪ್ರಾಯವಾಗಿ ಮೆರೆಯುತ್ತಿತ್ತು ನಾಪೋಕ್ಲು.

ನಾಪೋಕ್ಲು ! ಅದು ಎಲ್ಲಿದೆ ?

ನಿಸರ್ಗ ಬಲಗಳೂ ಫಲಗಳೂ ಹುಚ್ಚು ಹರಿದಿರುವ ಕೊಡಗಿನಲ್ಲಿ ಯಾವ ಹಳ್ಳಿಯಲ್ಲಿಯೂ ಒತ್ತೊತ್ತಿಗೆ ಹಬ್ಬಿರುವ ಮನೆಗಳ ಸಮುದಾಯ ಕಂಡುಬರುವುದು ಅಪರೂಪ. ಗುಡಿಸಲುಗಳು ಮತ್ತು ಮನೆಗಳು ಪ್ರಧಾನತಃ ಬೇಸಾಯದ ಜಾಗಗಳನ್ನು ಅನುಸರಿಸಿ ನೀರ್ದಾಣಗಳ ಸಮೀಪ ತಲೆ ಎತ್ತುವುದು ವಾಡಿಕೆ. ವಿಮಾನದಲ್ಲಿ ಕುಳಿತೊ ಬಲು ಎತ್ತರದ ಬೆಟ್ಟದ ಕೊಡಿಯನ್ನು ಏರಿಯೊ ಕೆಳನೋಟ ಬೀರುವಾತನಿಗೆ ಕಾಣುವುದು ಒಂದೇ ದೃಶ್ಯ : ಹಸಿರು ಕಡಲಿನ ಅಲೆಯಲೆ ಹರವು. ಈ ಅಲೆಗಳು ಎತ್ತರ ಎತ್ತರವಾಗಿ ಚಾಚಿಕೊಂಡಿರುವಲ್ಲಿ ಕೋಡು ಮಲೆಗಳು ಎದ್ದು ನಿಂತಿವೆಯೆಂದೂ ತಗ್ಗು ತಗ್ಗಾಗಿ ಸುರುಳಿಕೊಂಡಿರುವಲ್ಲಿ ಕಣಿವೆ ಕಂದಕಗಳು ಬಾಯಿ ಕಳೆದು ಮಲಗಿವೆಯೆಂದೂ ತಿಳಿಯಬೇಕು. ಅಲ್ಲಿ ಇಲ್ಲಿ ಅತಿ ವಿರಳವಾಗಿ, ರುಂಡಕ್ಕೆ ಸಿಬ್ಬು ಹತ್ತಿ ಹಿಡಿ ಕೂದಲು ಎಳಕಿ ಹೋಗಿ ಬಿಳಿ ತೊಗಲು ಕಾಣುವಂತೆ, ಗದ್ದೆಗಳ ಬಿಳಿತೇಪೆಗಳು ಕಂಡರೆ ಅದೊಂದು ವಿಶೇಷ ದೃಶ್ಯ. ಇಂಥಲ್ಲಿ, ಈ ಮೇರೆ ಅರಿಯದ ಹಸಿರ ಕಡಲಿನ ನಡುವೆ, ಇದು ಇದೇ ಹಳ್ಳಿ ಎಂದು ಬೊಟ್ಟಿಟ್ಟು ತೋರಿಸುವುದು ಹೇಗೆ? ರಾಜಮಾರ್ಗದ ಬದಿಯಲ್ಲಿ ಹೂಡಿರುವ ಕೈಗಂಬ, ಇಲ್ಲವೆ ನೆಟ್ಟಿರುವ ಮೈಲಿಗಲ್ಲು (ಕಿಮೀಕಲ್ಲು ?), ಇಲ್ಲವೆ ಅಲ್ಲೆ ನಿರ್ಯೋಜನೆಯಿಂದ ನಿಂತಿರುವ ಯುಗಯಾತ್ರಿ ಸರ್ಕಾರಿ ಕಟ್ಟಡ ಆ ಹಳ್ಳಿಯ ಉಗಮ ಎನ್ನಿಸುತ್ತದೆ. ಸಾಧಾರಣವಾಗಿ ಅಂಚೆ ಕಛೇರಿ, ದವಾಖಾನೆ, ಪ್ರಾಥಮಿಕ ಶಾಲೆ ಇವಿಷ್ಟು ಮುಂದುವರಿದ ಹಳ್ಳಿಯ ಅವಿಭಾಜ್ಯ ಅಂಗಗಳು. ಇವುಗಳಿಗೆ ಅಂತುಕೊಂಡು ಒಂದೆರಡು ಕಿರಾಣಿ ಅಂಗಡಿಗಳು ಮತ್ತು ಉಡುಪಿ ಕೃಷ್ಣಭವನಗಳು ಇರುವುದು ಅಪರೂಪವೇನಲ್ಲ. ರಾಜಮಾರ್ಗದ ಇಕ್ಕೆಲಗಳಲ್ಲೂ ಇವು ಹರಡಿಹೋಗಿರುತ್ತವೆ. ದಿನಕ್ಕೆ ಒಂದೊ ಎರಡೊ ಬಾರಿ ಬಸ್ಸು ಈ ಹಾದಿಯ ಮೇಲೆ ತೆವಳುವಾಗ ಆ ಹಳ್ಳಿಗೆ ಎಲ್ಲಿಲ್ಲದ ಚೇತನ ಬಂದು ಅಲ್ಲಿ ಜೀವಕಳೆ ಸ್ಪಂದಿಸುತ್ತದೆ. ಕಾಡಿನ ಅಂತರಾಳಗಳಿಂದ ಅಲ್ಲಿಗೆ ಆ ವೇಳೆಗೆ ಸರಿಯಾಗಿ ಹಳ್ಳಿಗರು ಬರುವುದುಂಟು : ಟಪ್ಪಾಲು ನೋಡಲು, ದಿನಪತ್ರಿಕೆಯಿಂದ ಅಧುನಾತನ ವಾರ್ತೆ ತಿಳಿದು ನಾಗರಿಕರಾಗಲು (ಇದು ಆಗಲೇ ಮೂರು ದಿವಸಗಳಷ್ಟು ಹಳೆಯದಾದರೂ ಇವರಿಗೆ ಚಿಂತೆ ಇಲ್ಲ. ಹಾಗೆ ವಿಶ್ಲೇಷಿಸುವುದಾದರೆ ನಾವು ದಿನ ದಿನ ನೋಡುವ ಸೂರ್ಯ ಪ್ರತಿ ಕ್ಷಣವೂ ಎಂಟು ಮಿನಿಟುಗಳಷ್ಟು ತಡವಾಗಿಯೆ

ನಮಗೆ ಕಾಣಿಸುತ್ತಿದ್ದರೂ ದೂರದೂರದ ನಕ್ಷತ್ರಗಳು ಸಾವಿರಾರು ವರ್ಷಗಳಷ್ಟು ತಡವಾಗಿಯೆ ಗೋಚರಿಸುತ್ತಿದ್ದರೂ ನಾವು ಮಾತ್ರ ಅತ್ಯಂತ ಆಧುನಿಕರು, ವರ್ತಮಾನಕಾಲದ ಅಸಿಧಾರೆಯ ಮೇಲೆಯೆ ಬಾಳುತ್ತಿರುವವರು ಎಂದುಕೊಳ್ಳುತ್ತಿಲ್ಲವೆ! ಹೀಗೆ ಭಾವಿಸಲು ನಮಗೇನು ಅಧಿಕಾರ?), ಕಾಕನ ಅಂಗಡಿ ಚಾಯಾ ಹೀರಿ ಕೃತಾರ್ಥರಾಗಲು, ಕಡೆಗೆ ಏನಿಲ್ಲವೆಂದರೆ ಬಸ್ಸನ್ನು ನೋಡಿ ಅದು ರಾಡಿಸುವ ಧೂಳಿನ ಹೊನಲಿನಲ್ಲಿ ಮಿಂದು ಪೆಟ್ರೋಲ್ ಪರಿಮಳ ಮೂಸಿ ಬೇಜಾರು ಕಳೆದುಕೊಳ್ಳಲು.

ನಾಪೋಕ್ಲು ಕೂಡ ಇದೇ ತೆರನಾದ ಒಂದು ಹಳ್ಳಿ. ಕೊಡಗಿನ ರಾಜಧಾನಿಯಾದ ಮಡಿಕೇರಿಯಿಂದ ಬಳಸುಹಾದಿಯಾಗಿ ಕೊಡಗಿನ ಎರಡನೆಯ ಪಟ್ಟಣವಾದ ವೀರರಾಜೇಂದ್ರಪೇಟೆಗೆ (ವಿರಾಜಪೇಟೆ) ನೀವು ಸಾಗುತ್ತಿದ್ದೀರಿ. ಮಡಿಕೇರಿಯಿಂದ ಸುಮಾರು ಹದಿನೈದು ಕಿಮೀ ದೂರದಲ್ಲಿ ನಿಮಗೆ ಕಾವೇರಿ ಹೊಳೆ ಎದುರಾಗುತ್ತದೆ. ಮೂಡುಸೀಮೆಯವರ ಮಾತಿನಲ್ಲಿ ಇದು ನದಿ, ಮಹಾನದಿ! ನಾಪೋಕ್ಲಿನಲ್ಲಿ ಇದು ನಿಜವಾಗಿ ತೊರೆ. ಭೌತವಾಗಿ ಇದು ಕಿರಿದಾದರೂ ಇದರ ಪಾವಿತ್ರ್ಯ ಮತ್ತು ಮಹಿಮೆ ಅಪಾರವಾದವು. ಕೊಡವರ ದೇವತೆ ಕಾವೇರಿ. ಅವಳು ಇವರಿಗೆ ಕಾವೇರಿ ಮಾತೆ. ಬೇಸಗೆಯ ಬರದಿನಗಳಂದು ಕಾವೇರಿಯಲ್ಲಿ ನೀರಾರಿ ಮಗು ಕೂಡ ಅದರ ಒಣ ಜಾಡಿನ ಮೇಲೆ ಅಂಬೆಗಾಲಿಡುತ್ತ ಅಡ್ಡ ದಾಟುವುದು ಸಾಧ್ಯ. ಹಾಗೆಂದು ನೀವು ಆಕೆಯನ್ನೇನಾದರೂ ತಾತ್ಸಾರ ಮಾಡಿದಿರೊ — ಬಂದು ನೋಡಿ ಮೃಗಶಿರಾ ಆದ್ರ್ರ್ ಮಳೆಗಳ ಮುಸಲಧಾರೆಗಳ ದಿನಗಳಂದು ಕಾವೇರಿಯ ಕಾವೇರಿಕೆಯನ್ನು, ರುದ್ರ ಭಯಂಕರತ್ವವನ್ನು! ಅವಳು ಯಥೇಚ್ಛ ನೀರ್ಗುಡಿದು ಉಬ್ಬಿಹಿಗ್ಗಿ ಹದಿನಾರು ಹಳ್ಳಿಕೇರಿಗಳನ್ನು ಕಬಳಿಸಿ ಕೆಂಬಣ್ಣವನ್ನು ತಳೆದು ಮುಂದಗಾಮಿಯಾಗಿ ಸಾಗುತ್ತಿರುತ್ತಾಳೆ. ಇಂಥ ದಿವಸಗಳಲ್ಲಿ ಮಡಿಕೇರಿ—ನಾಪೋಕ್ಲು ಬಸ್‌ಪ್ರಯಾಣ ಬಂದ್ ಆಗಿರುತ್ತದೆ. ಜನ ಜಾನುವಾರು ಬಂಡಿ ಸರಕು ಏನಿದ್ದರೂ ದೋಣಿ ಜಂಗಲ್ಲುಗಳ ನೆರವಿನಿಂದಲೇ ಕಾವೇರಿ ಮಾತೆಯ ವಿಶಾಲ ವಕ್ಷವನ್ನು ಅಡ್ಡ ಹಾಯಬೇಕಷ್ಟೆ. ಮಳೆಗಾಲವಿಡೀ ನಾಪೋಕ್ಲು ಮಹಾಜನತೆಗೆ ಅಂಡಮಾನ್ ಸೆರೆವಾಸ. ಆದರೆ ಅದು ಅವರ ಬಲುಬಿರುಸಿನ ಹಂಗಾಮು — ಗದ್ದೆ ತೋಟಗಳ ಕೆಲಸ ತ್ವರೆಯಿಂದ ಸಾಗಬೇಕಾದ, ಮುಂದಿನ ಸುಗ್ಗಿಹಡೆತಕ್ಕೆ ನೆಲವನ್ನು ಹದಗೊಳಿಸಬೇಕಾದ ಪರ್ವಕಾಲ. ಮಳೆಗಾಲ ಹಿಂದೆ ಸರಿದಂತೆ, ಮೋಡ ಬೆಟ್ಟ ಕಾಡುಗಳ ರಸವನ್ನು ಕಾವೇರಿ ಹೀರಿ ಪರೋಪಕಾರಾರ್ಥವಾಗಿ ಕೆಳಕೆಳಗೆ ಕೊಂಡೊಯ್ದಂತೆ ಅವಳ ಅಂಚುಮೀರಿದ ನಡಿಗೆ ತಹಬಂದಿಗೆ ಬಂದಿರುತ್ತದೆ. ಮತ್ತೆ ಮಂತ್ರಮುಗ್ಧ ಸರ್ಪದಂತೆ ನದೀಪಾತ್ರೆಯ ಬುಟ್ಟಿಯನ್ನು ಅವಳು ಸೇರಿಕೊಳ್ಳುತ್ತಾಳೆ.

ಕಾವೇರಿಯ ಬೆಳ್ಳಿ ಸರಿಗೆಯನ್ನು ಭಕ್ತಿಯಿಂದ ಎತ್ತಿ ನೆತ್ತಿಗೆ ಪೂಸಿಕೊಂಡು ಮುಂದೆ ನಡೆಯುತ್ತೀರಿ. ಆ ವಿಶಾಲವಾದ ಹಸಿರಿನ ಹರವೇ ಕೊಟ್ಟಮುಡಿ ಪರಂಬು. ಮಳೆಗಾಲದಲ್ಲಿ ನೆರೆ ಎರಕಿ ಇಲ್ಲೆಲ್ಲ ನೀರು ನಿಂತಿರುತ್ತದೆ. ನೀರಿಳಿದಾಗ ಅತಿ ಫಲವತ್ತಾದ ಗಸಿ ಇಲ್ಲೇ ಉಳಿದು ಹುಲ್ಲು ಗಿಡ ಮರಗಳಿಗೆ ಸಮೃದ್ಧ ಪೋಷಕವಸ್ತುವಾಗುತ್ತದೆ. ಹಾಗಾಗಿ ಇಲ್ಲಿನ ಸಸ್ಯಸಂಪತ್ತು ಅಪೂರ್ವ ಕಾಂತಿಯಿಂದ ಸೊಗಸುತ್ತಿದೆ.

ಕೊಟ್ಟಮುಡಿ ಪರಂಬಿನಲ್ಲಿ ನಿಂತು ಹಾದಿಯ ನೇರ ನೋಡುತ್ತ ನೋಡುತ್ತ ದೃಷ್ಟಿಯನ್ನು ಮೆಲ್ಲನೆ ಮೆಲ್ಲನೆ ಸರಿಸುತ್ತೀರಿ. ನೆಲ ಏರುತ್ತ ಏರುತ್ತ ಸಾಗಿ ಮತ್ತೆ ಆಚೆ ಕಡೆ ಕಣ್ಮರೆ ಆಗುತ್ತದೆ. ಸಾಲಾಗಿ ನಿಂತಿರುವ ತೋಟಮರಗಳೂ ಯಾದೃಚ್ಛಿಕವಾಗಿ ಸೆಟೆದಿರುವ ಕಾಡುಮರಗಳೂ ಈ ಚಡಾವಿಗೆ ಅಂದವಾದ ಹಸಿರುಮೆಯನ್ನು ತೊಡಿಸಿವೆ. ಗಗನರೇಖೆಯ ಸನಿಹದಲ್ಲಿ ಭವ್ಯವಾಗಿ ನಿಂತಿರುವ ಹಲವಾರು ಸೌಧಗಳು ಇಲ್ಲಿನ ಪ್ರಾಚೀನತೆಗೆ ಆಧುನಿಕತೆಯ ಮೆರುಗನ್ನು

ನೀಡುತ್ತಿವೆ. ಅವು ಇಂದು (1978) ಸರ್ಕಾರೀ ಜೂನಿಯರ್ ಕಾಲೇಜಿನ ಕಟ್ಟಡಗಳು. ಒಂದು ಕಾಲದಲ್ಲಿ ಪಾಳುಬಿದ್ದಿದ್ದ ಈ ಹರವಿನಲ್ಲಿ ಸರಸ್ವತೀಮಂದಿರ ಮೈದಳೆದದ್ದು ನಾಡಿನ ಪುಣ್ಯ ವಿಶೇಷದಿಂದ, ಹಿರಿ ಚೇತನವೊಂದರ ಎಡೆಬಿಡದ ದುಡಿಮೆಯಿಂದ, ಅಸಂಖ್ಯಾತ ಅನಾಮಿಕ ತ್ಯಾಗಿಗಳ ಒಲುಮೆಯ ಕೊಡುಗೆಗಳಿಂದ. ಮಂದಿರದ ಆಕರ್ಷಣೆಯಿಂದ ಮುಂದೆ ಮುಂದೆ ನಡೆದ ನೀವು ಬಲು ಬೇಗ ಅದನ್ನು ತಲಪಿ ಕೃತಾರ್ಥರಾಗುತ್ತೀರಿ. ಅಲ್ಲಿಂದ ಮುಂದಕ್ಕೆ ಹರಡಿ ಹೋಗಿರುವ ತಗ್ಗು ಪ್ರದೇಶವೇ ನಾಪೋಕ್ಲು.

ಊರ ಜಾತ್ರೆ, ಮದುವೆ, ಮುಂಜಿ, ಸಾವು, ಕೈದುಪೊಳದು, ಹುತ್ತರಿ ಕುಣಿತ – ಇವಿಷ್ಟರ ಸುತ್ತ ನಾಪೋಕ್ಲು ಜನತೆಯ ಜನಜೀವನದ ಸಂಭ್ರಮ ಸಡಗರ ಸುಖದುಃಖಗಳು ಹೆಣೆದುಕೊಂಡಿದ್ದುವು. ನಾಟಕ ಸರ್ಕಸ್ ಏನಾದರೂ ನೋಡಬೇಕೆಂದಾದರೆ ಈ ಜನ ದೂರದ ಮಡಿಕೇರಿಗೊ ವಿರಾಜಪೇಟೆಗೊ ಹೋಗಬೇಕಾಗಿತ್ತು. ಇಂಥ ದಂಡಕಾರಣ್ಯದಲ್ಲಿಯೂ ಜನತೆಗೆ ಕಿರುಸೊಡರಿನ ಮಿಣುಕು ಬೆಳಕನ್ನು ಬೀರುವ ಪ್ರಾಥಮಿಕ ಶಾಲೆ ಇತ್ತು.

1876ರಲ್ಲಿ ಸ್ಥಾಪನೆಗೊಂಡ ಈ ಶಾಲೆ 1936ರಲ್ಲಿ ಸರ್ಕಾರಿ ಮಾದರಿ ಶಾಲೆಯಾಗಿ ಪ್ರವರ್ಧಿಸಿ ತನ್ನ ವಜ್ರಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಆ ಸಂದರ್ಭದಲ್ಲಿ ಪ್ರಕಟಿಸಿದ ನೆನಪಿನ ಸಂಚಿಕೆಯಲ್ಲಿ, ಇದೇ ಶಾಲೆಯ ಮಾಜಿ ವಿದ್ಯಾರ್ಥಿಯೂ ಹಾಲಿ ಅಧ್ಯಾಪಕರೂ ಆದ ಶ್ರೀ ಎಂ. ಎಸ್. ಸುಬ್ರಾಯರು ಬರೆದ "ನಮ್ಮ ಶಾಲೆ" ಎಂಬ ಇಡೀ ಲೇಖನವನ್ನು ಇಲ್ಲಿ ಉದ್ಧರಿಸಿದೆ.

೪

"1834ರಲ್ಲಿ ಕೊಡಗು ಇಂಗ್ಲಿಷರ ಸ್ವಾಧೀನವಾದೊಡನೆ ಪಾಶ್ಚಾತ್ಯರ ರಾಜ್ಯಭಾರ ಕ್ರಮವು ಇಲ್ಲಿ ಪ್ರಾರಂಭವಾಯಿತು. ಅದರೊಂದಿಗೆ ಜನರ ಶಿಕ್ಷಣ ವಿಚಾರವಾದ ಆಲೋಚನೆಗಳೂ ನಡೆದವು. ಇದಕ್ಕಿಂತ ಮೊದಲು ಅಲ್ಲಲ್ಲಿ ಕೈಮಠಗಳಿದ್ದು, ಜನರು ಅವರಿಂದ ಓದು ಬರಹವನ್ನು ಮಾತ್ರ ಕಲಿಯುತ್ತಿದ್ದರು. 1834ರಲ್ಲಿ ಮಡಿಕೇರಿ, ವಿರಾಜಪೇಟೆಗಳಲ್ಲೊಂದೊಂದು ಇಂಗ್ಲಿಷ್ ಶಾಲೆಗಳೂ ಹತ್ತುಗಟ್ಟು ನಾಡಿನಲ್ಲೊಂದು ಕನ್ನಡ ಕಲಿಸುವ ಶಾಲೆಯೂ ಸ್ಥಾಪಿಸಲ್ಪಟ್ಟಿತು. ಫ್ರೇಜರ್‌ಪೇಟೆಯ (ಈಗಿನ ಕುಶಾಲನಗರ) ಸಾಹುಕಾರರೊಬ್ಬರಲ್ಲಿ ಜನರಲ್ ಫ್ರೇಜರರು ಮುನ್ನೂರು ರೂಪಾಯಿಗಳನ್ನು ಕೊಟ್ಟು ಅವರ ಬಡ್ಡಿಯಿಂದ ತಿಂಗಳಿಗೆ ಮೂರು ರೂಪಾಯಿಯ ಸಂಬಳದಲ್ಲೊಬ್ಬ ಉಪಾಧ್ಯಾಯನನ್ನು ನೇಮಿಸಿದರು. 1842ರಲ್ಲಿ ವಿರಾಜಪೇಟೆಯಲ್ಲಿ ರೋಮನ್ ಕೇಥಲಿಕ್ ಮಿಷನಿನವರು ಒಂದು ಶಾಲೆಯನ್ನು ಸ್ಥಾಪಿಸಿ ಎಲ್ಲಾ ಮತದ ಬಾಲಕ ಬಾಲಕಿಯರಿಗೆ ವಿದ್ಯಾಭ್ಯಾಸವನ್ನು ಕೊಡಲುಪಕ್ರಮಿಸಿದರು. ಆಗ್ಗೆ ಸರಕಾರಿ ಶಾಲೆಯನ್ನು ಮುಚ್ಚಿ ಉಳಿಕೆಯಾದ ಹಣದಿಂದ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಒಂದೊಂದು ಕನ್ನಡ ಶಾಲೆಗಳನ್ನು ತೆರೆದರು. ಇದರ ಫಲವಾಗಿಯೇ ನಮ್ಮ ನಾಪೋಕ್ಲು ಶಾಲೆಯು 1842ರಲ್ಲಿ ಸ್ಥಾಪಿಸಲ್ಪಟ್ಟಿತು.

"ಮೊಟ್ಟಮೊದಲು ಇಪ್ಪತ್ತು ಬಾಲಕರಿಂದ ಕೂಡಿ ಒಬ್ಬ ಉಪಾಧ್ಯಾಯರ ಶಾಲೆಯು ಪ್ರಾರಂಭವಾಯಿತು. ಅವರಿಗೆ ಎರಡೂವರೆ ರೂಪಾಯಿ ಸಂಬಳವಿತ್ತು. ಆಗ್ಗೆ ಸುತ್ತಮುತ್ತಲಿನ ಪ್ರದೇಶಗಳಿಂದ ವಿದ್ಯಾಭ್ಯಾಸಕ್ಕೆ ಬಾಲಕರು ಬರುತ್ತಿದ್ದರು. ಉಪಾಧ್ಯಾಯರುಗಳು ಯಾರಾಗಿದ್ದರೆಂದು ತಿಳಿದು ಬರುವುದಿಲ್ಲ. ಆದರೂ ಬಹಳ ವರ್ಷಗಳಿಂದ ಇದೇ ಗ್ರಾಮವಾಸಿಗಳಾಗಿದ್ದ ಉಪಾದರಿ ಗೋವಿಂದಯ್ಯನವರು ಹುಡುಗರಿಗೆ ಬೋಧನೆಯನ್ನು ಕೊಡುತ್ತಿದ್ದರು. ಇವರನಂತರ ಮೂಟೇರಿ ಕೃಷ್ಣಯ್ಯನವರು ಕನ್ನಡವನ್ನು ಮಕ್ಕಳಿಗೆ ಕಲಿಸುತ್ತಿದ್ದರು. ಈಗಿನ

ಹಾಗೆ ಆಗ್ಗೆ ಶಾಲಾ ಕಟ್ಟಡಗಳಾಗಲೀ ಬೆಂಚು ಡೆಸ್ಕುಗಳಾಗಲೀ ಇರಲಿಲ್ಲ. ಹಳೇ ಕಚೇರಿಯ ಹತ್ತಿರ ಎಂದರೆ ಉದ್ದುಮಾನೆಯಲ್ಲಿ ಒಂದು ಚಿಕ್ಕ ಹುಲ್ಲಿನ ಚಾವಣಿಯನ್ನು ಕಟ್ಟಿ ಅಲ್ಲಿ ಸ್ಕೂಲನ್ನು ನಡೆಸುತ್ತಿದ್ದರು.

"ಕೆಲವು ವರ್ಷಗಳಲ್ಲಿ ಇಂಗ್ಲಿಷ್ ವಿದ್ಯೆಯನ್ನು ಕಲಿಸಬೇಕೆಂದು ಆಶೆಯು ಜನರಲ್ಲಿಯೂ ಸರಕಾರದವರಲ್ಲಿಯೂ ಹುಟ್ಟಿತು. 1854ರಲ್ಲಿ ಬಾಸೆಲ್ ಮಿಷನಿಗೆ ಸೇರಿದ ಡಾ. ಮೊಗ್ಲಿಗನ್ ಎಂಬವರು ಕೊಡಗು ಶಾಲೆಗಳ ಮುಖ್ಯಾಧಿಕಾರತ್ವವನ್ನು ಸರಕಾರದವರಿಂದ ವಹಿಸಿಕೊಂಡರು. ಇಷ್ಟರವರೆಗಿದ್ದ ಶಾಲೆಗಳು ಹಿಂದಿನ ಕಾಲದ ಕೈಮಠಗಳ ಹಾಗಿದೆಯೆಂದೂ, ತಕ್ಕ ಮೇಲ್ವಿಚಾರಣೆ ನಡೆಯಬೇಕೆಂದೂ, ಅಷ್ಟು ದಿವಸಗಳವರೆಗೆ ಕೊಡಗಿನಲ್ಲಿ ವಿದ್ಯಾಪ್ರಚಾರವಾಗಿದ್ದರೂ ಯಾವ ತರದ ಪ್ರಯೋಜನ ಆಗಲಿಲ್ಲವೆಂದೂ ಡಾಕ್ಟರು ಅಭಿಪ್ರಾಯಪಟ್ಟರು.

"ಕೊಡಗಿನ ಜನಸಂಖ್ಯೆಯು ಕೆಳುವಾಗಿದ್ದರೂ ತಾಲೋಕು ಖಚೇರಿಗಳಿದ್ದ ಸ್ಥಳಗಳಲ್ಲಿ ಸಹ ಐದಾರು ಮನೆಗಳಿರಲಿಲ್ಲ. ನಿವಾಸಿಗಳ ಮನೆಗಳು ದೂರ ದೂರವಾಗಿ ಕಾಡುಗಳ ಮಧ್ಯ ದಲ್ಲೂ ಬೆಟ್ಟಗುಡ್ಡಗಳ ಬದಿಗಳಲ್ಲೂ ಇದ್ದವು. ಆದ್ದರಿಂದ ಇಂಗ್ಲೀಷ್ ಶಾಲೆಗಳನ್ನು ಬೇಗನೆ ಸ್ಥಾಪಿಸಲಾಗಲಿಲ್ಲ. ತಾಲೋಕು ಸ್ಥಳಗಳಲ್ಲಿ ಇಂಗ್ಲೀಷ್ ಸ್ಕೂಲುಗಳನ್ನು ಸ್ಥಾಪಿಸಿ ಮಡಿಕೇರಿಯ ಮಧ್ಯವರ್ತಿ ಶಾಲೆಗೆ (ಮಿಡಲ್ ಸ್ಕೂಲ್) ಹುಡುಗರನ್ನು ತಯಾರುಮಾಡುವ ಆಲೋಚನೆ ಯಿಂದ ತಾಲೋಕು ಹುಡುಗರಿಗೆ ಸ್ಕಾಲರ್‌ಶಿಪ್ ಕೊಡಲಾಯಿತು. ಆಗ್ಗೆ ಮಡಿಕೇರಿಯಲ್ಲಿದ್ದ ಇಂಗ್ಲೀಷ್ ಸ್ಕೂಲಿಗೂ ಬೋರ್ಡಿಂಗು ಮನೆಗೂ ಹೆಚ್ಚಿನ ಹುಡುಗರು ಬಂದದ್ದರಿಂದ ಸುಮಾರು 1870ರಲ್ಲು ತಾಲೋಕು ಸ್ಥಳಗಳಲ್ಲಿ ಕನ್ನಡ ಸ್ಕೂಲುಗಳೊಂದಿಗೆ ಇಂಗ್ಲೀಷ್ ಸ್ಕೂಲುಗಳನ್ನು ಸ್ಥಾಪಿಸಬೇಕೆಂದು ಸರಕಾರಕ್ಕೆ ಸೂಚನೆ ಹೋಗಲಾಗಿ 1870-71ರಲ್ಲು ವಿರಾಜಪೇಟೆ, ಹುದಿಕೇರಿ, ನಾಪೋಕ್ಲು ಮತ್ತು ಫ್ರೇಜರ್‌ಪೇಟೆಗಳಲ್ಲಿ ಒಂದೊಂದು ಇಂಗ್ಲೀಷ್ ಸ್ಕೂಲುಗಳನ್ನು ಸ್ಥಾಪಿಸಿ ದರು. ಆಗ್ಗೆ ಕೊಡಗಿನಲ್ಲಿ ಎರಡು ಬೋರ್ಡಿಂಗು ಮನೆಗಳಿಂದ ಕೂಡಿದ ಮಡಿಕೇರಿಯ ಒಂದು ಇಂಗ್ಲೀಷ್ ಸ್ಕೂಲೂ, ಒಂದು ಟ್ರೈಯಿನಿಂಗ್ ಸ್ಕೂಲೂ, ಐದು ತಾಲೋಕು ಸ್ಕೂಲುಗಳೂ, 74 ಕನ್ನಡ ಶಾಲೆಗಳೂ ಇದ್ದವು. ಸರಕಾರದವರು ವಿದ್ಯಾ ಇಲಾಖೆಯನ್ನು ಬೇರೆ ಸ್ಥಾಪಿಸಿ ಮೇಲ್ವಿಚಾರಣೆಯನ್ನು ಚೆನ್ನಾಗಿ ನಡೆಸುತ್ತಾ ಬಂದರು.

"ನಮ್ಮ ಶಾಲೆಯಲ್ಲಿ ಆಗ್ಗೆ ಇಂಗ್ಲೀಷ್ ಕ್ಲಾಸನ್ನು ಇಡಲು ಹುಡುಗರು ಇದ್ದಿದ್ದರೂ ಸ್ಥಳ ಅಭಾವವಾಗಿತ್ತು. ಅರಮನೆಗೆ ಹೋಗುವ ದಾರಿಯಲ್ಲಿ ಕೊಳುವಂಡ ಮನೆಯವರು ಕಟ್ಟಿಸಿದ್ದ "ಧರ್ಮದ ಮನೆ"ಯಲ್ಲಿ ಇಂಗ್ಲೀಷ್ ಸ್ಕೂಲನ್ನು ಸ್ಥಾಪಿಸಿದರು. ಕನ್ನಡ ಶಾಲೆಯಲ್ಲಿ ಪಾಸಾಗಿ ಬಂದ ಹುಡುಗರು ಇಂಗ್ಲೀಷ್ ಸ್ಕೂಲಿಗೆ ಬಂದು ಸೇರುತ್ತಿದ್ದುದರಿಂದ 25ರಿಂದ 30ರ ವರೆಗೆ ಮಾತ್ರ ಹುಡುಗರ ಸಂಖ್ಯೆ ಇರುತ್ತಿತ್ತು. ಮೊದಲಿಗೆ ಇಂಗ್ಲೀಷ್ ಮಾಸ್ಟರಾಗಿ ಮಡಿಕೇರಿ ಯಿಂದ ಮ. ಕೆ. ರಾಮುರಾಯರು ಬಂದರು. ಕನ್ನಡ ಶಾಲೆಗೆ ಮೂಟೇರಿ ಕೃಷ್ಣಯ್ಯನವರು ಉಪಾಧ್ಯಾಯರಾಗಿದ್ದರು. ಹುಡುಗರ ಸಂಖ್ಯೆಯು 80 ಇತ್ತು. ಆಗ ಹುಡುಗಿಯರೂ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂಬ ಸಂಗತಿ ಸ್ಪಷ್ಟವಾಗಿದೆ.

"ಹುಡುಗರ ಸಂಖ್ಯೆಯು ಹೆಚ್ಚುತ್ತಿದ್ದುದರಿಂದಲೂ ಸರಕಾರದವರು ಕಟ್ಟಡವನ್ನು ಕಟ್ಟಲು ಆಲೋಚನೆ ಪಟ್ಟದ್ದರಿಂದಲೂ ಕೇಲಟ್ಟಿ ಮನೆಯವರಿಗೆ ಸೇರಿದ್ದ ಸ್ಥಳವನ್ನು ಪಡೆದುಕೊಂಡು 1875–76ರಲ್ಲಿ ನಾಲ್ಕು ಕೊಠಡಿಯ ಕಟ್ಟಡವನ್ನು ಕಟ್ಟಿದರು. ಎರಡು ಶಾಲೆಗಳೂ ಒಂದೇ ಮನೆಯಲ್ಲಿ ನಡೆಯಲು ಪ್ರಾರಂಭವಾಯಿತು. ನಾಲ್ಕುನಾಡು ರಾಮಣ್ಣನವರು (ಈ ಹೆಸರಿನಿಂದಲೇ ಅವರನ್ನು ಎಲ್ಲರೂ ಕರೆಯುತ್ತಿದ್ದರು.) ಐದಾರು ವರ್ಷಗಳವರೆಗೆ ಕೆಲಸಮಾಡಿ ಮಡಿಕೇರಿಯ ಫಾರೆಸ್ಟು ಆಫೀಸಿಗೆ ಹೆಚ್ಚಿನ ಸಂಬಳದಲ್ಲಿ ವರ್ಗವಾಗಿ ಹೋದರು. ಅವರ ಬದಲಿಗೆ ಮ.

ಶ್ರೀನಿವಾಸ ಐಯ್ಯಂಗಾರರು ಒಂದು ಎರಡು ವರ್ಷಗಳವರೆಗೆ ಇಂಗ್ಲೀಷ್ ಪಾಠವನ್ನು ಹೇಳಿದರು. ದೇಹಾರೋಗ್ಯವಿಲ್ಲದೆ ಶಾಲೆಯ ಕೆಲಸವನ್ನು ಬಿಟ್ಟು ಮಡಿಕೇರಿಗೆ ಹೋದರು. ಅವರ ಬದಲಿಗೆ ಮೆ. ಪಾಂತಂಡ ಅಪ್ಪಚ್ಚುನವರು ಇಂಗ್ಲೀಷ್ ಉಪಾಧ್ಯಾಯರಾಗಿ ಬಂದರು. ಇವರು ಬಹಳ ಮುತುವರ್ಜಿಯಿಂದ ಮೂರು ವರ್ಷಗಳವರೆಗೆ ಕೆಲಸ ಮಾಡಿದರು. ಕನ್ನಡ ಶಾಲೆಯಲ್ಲಿ ನೂರರ ಮೇಲೆ ಹುಡುಗರ ಸಂಖ್ಯೆಯು ಏರಿದ್ದರಿಂದ ಮೆ. ಮೂಟೇರಿ ಕೃಷ್ಣಯ್ಯನವರಿಗೊಬ್ಬ ಸಹಾಯಕ ಉಪಾಧ್ಯಾಯರನ್ನು ನೇಮಿಸಿಕೊಳ್ಳಬೇಕಾಯಿತು. ಇವರೇ ಕೊಳಕೇರಿ ಗ್ರಾಮದ ಪಾರೆ ತಿಮ್ಮಪ್ಪಯ್ಯನವರು. ಇವರು ಮಡಿಕೇರಿ ಟ್ರೆಯಿನಿಂಗ್ ಶಾಲೆಯಲ್ಲಿ ತರಬೇತನ್ನು ಹೊಂದಿದ್ದರು. 1879ರಲ್ಲಿ ಅಪ್ಪಚ್ಚುನವರು ಮಡಿಕೇರಿಗೆ ವರ್ಗವಾಗಿ ಹೋದರು. ಪಟ್ರಪಂಡ ಸೋಮಯ್ಯನವರು ಇಂಗ್ಲೀಷ್ ಮಾಸ್ಟರಾಗಿ ಬಂದರು. ಮೂರು ವರ್ಷಗಳಲ್ಲೇ ಇಲ್ಲಿನ ತಾಲೋಕು ಕಚೇರಿಗೆ ವರ್ಗವಾದ್ದರಿಂದ ಅವರ ಬದಲಿಗೆ ಅಜ್ಜಿಕುಟ್ಟಿರ ಐಯ್ಯಂಣನವರು ಉಪಾಧ್ಯಾಯರಾಗಿ ಬಂದರು. ಆರು ವರ್ಷಗಳ ವರೆಗೆ ಕೆಲಸಮಾಡಿ ಮಡಿಕೇರಿಗೆ ಮುನ್ಸಿಯಾಗಿ ವರ್ಗವಾದರು.

"ಅನಂತರ ಮುಕ್ಕಿ ಸುಬ್ರಾಯರು ಕಕ್ಕಬ್ಬೆಯಿಂದ ಇಲ್ಲಿಗೆ ಬಂದರು. ಇಂಗ್ಲೀಷ್ ಪರೀಕ್ಷೆಯು ಎಂದರೆ, ಪ್ರೈಮರಿ ಪರೀಕ್ಷೆಯು ಸುಮಾರು 1896ರ ವರೆಗೆ ಮಡಿಕೇರಿಯಲ್ಲಿ ನಡೆಯುತ್ತಿತ್ತು. 1897ರಲ್ಲಿ ಪ್ರಥಮತಃ ಪ್ರೈಮರಿ ಪರೀಕ್ಷೆಯು ನಾಪೋಕ್ಲು ಶಾಲೆಯಲ್ಲಿ ನಡೆದು ಹತ್ತು ಹುಡುಗರು ತೇರ್ಗಡೆ ಹೊಂದಿದರು. 1904ರಲ್ಲಿ ಮೋಡಲ್ ಶಾಲೆಯಾಗಿ ಪರಿವರ್ತಿಸಲ್ಪಟ್ಟಿತು. ಆಗ ಕ್ಲಾಸಿಗೊಬ್ಬನಂತೆ ಐದು ಉಪಾಧ್ಯಾಯರುಗಳಿದ್ದರು. ಕಮಿಷನರ್ ಸಾಹೇಬರು ಶಾಲೆಯನ್ನು ಸಂದರ್ಶಿಸುತ್ತಾ ಪ್ರತಿ ಸಾರಿಯಲ್ಲೂ ಶಾಲೆಗೊಂದು ಆಟದ ಮೈದಾನಬೇಕೆಂದು ಹೇಳುತ್ತಿದ್ದರು. ಅಂತೆಯೇ ಕೇಲಟ್ಟ ಮನೆಯವರ ಹಿತ್ತಲಾದ ನಮ್ಮ ಈಗಿನ ಆಟದ ಮೈದಾನವನ್ನು ಅವರಿಂದ ತೆಗೆದುಕೊಂಡು ಆ ಜಾಗದ ಬದಲಿಗೆ ಎರಡರಷ್ಟು ಪೈಸಾರಿ ಜಾಗವನ್ನು ಅವರಿಗೆ ಬಿಟ್ಟುಕೊಡಲಾಯಿತು. 1910 – 11ರಲ್ಲು ಸರಕಾರದವರು ಆರುನೂರು ರೂಪಾಯಿಗಳನ್ನು ಖರ್ಚುಮಾಡಿ ಆಟದ ಮೈದಾನವೊಂದನ್ನು ಶಾಲೆಗೆ ಒದಗಿಸಿಕೊಟ್ಟರು.

"ಶಾಲೆಯ ಅಭಿವೃದ್ಧಿಯು ಅಲ್ಲಿಗೇ ನಿಲ್ಲಲಿಲ್ಲ. 1912ರಲ್ಲು ಕಟ್ಟಡದ ಹಿಂದೆ ಮುಂದೆ ಎರಡು ಕೋಣೆಗಳನ್ನು ಸರಕಾರದವರು ಕಟ್ಟಿ ಕೊಟ್ಟದ್ದರ ಫಲಿತಾಂಶವಾಗಿ 1913ರಲ್ಲು ಆರನೇ ತರಗತಿಯನ್ನು ತೆರೆಯಲಾಯಿತು. ಆಗ ಸರಕಾರದವರು ಜನರು ಸತ್ಪ್ರಜೆಗಳಾಗಲಿಕ್ಕೂ ಬುದ್ಧಿವಂತರಾಗಲಿಕ್ಕೂ ಕಮ್ಮಿ ಖರ್ಚಿನಿಂದ ಲೋವರ್ ಸೆಕೆಂಡರಿ ವಿದ್ಯಾಭ್ಯಾಸವನ್ನು ಪ್ರತಿಯೊಬ್ಬನೂ ಪಡೆಯಬೇಕೆಂದು ಯೋಚಿಸಿ ಹೈಯರ್ ಎಲಿಮೆಂಟರಿ ವಿದ್ಯಾಭ್ಯಾಸದ ರಚನೆಯನ್ನು ಜಾರಿಗೆ ತಂದರು. ಶಾಲೆ ಬಿಡುವಾಗ ಗ್ರಾಮವಾಸಿಗಳ ಮಕ್ಕಳಿಗೆ ತಕ್ಕ ಕೈಕಸಬನ್ನು ಕಲಿಸಬೇಕೆಂಬ ಉದ್ದೇಶದಿಂದ ಕೆಲವು ಶಾಲೆಗಳಲ್ಲಿ ಬಡಗಿ, ಚಿತ್ರ, ನೆಯಿಗೆ ಮೊದಲಾದ ಉಪವೃತ್ತಿಗಳನ್ನು ಕಲಿಸಲು ಜಾರಿಗೆ ತಂದ ಪ್ರಯುಕ್ತ ನಾಪೋಕ್ಲಿನಲ್ಲಿ ಚಿತ್ರದ ಕೆಲಸವನ್ನು 1914ರಲ್ಲು ಕಲಿಸಲು ಪ್ರಾರಂಭವಾಯಿತು.

"ಮುಂದಿನ ವರ್ಷ ಎಂಟನೇ ತರಗತಿಯನ್ನು ತೆರೆಯಲು ಹುಡುಗರು ದೊರೆಯದೇ ಇದ್ದರೂ ಕೆಳಗಿನ ತರಗತಿಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿದರು. ಆದರೆ 1918ರಲ್ಲು ಸರಕಾರದವರು ಪೇಟೆಯಲ್ಲಿರುವ ಛತ್ರದಲ್ಲಿ ಒಂದು ಬಾಲಕಿಯರ ಪಾಠಶಾಲೆಯನ್ನು ತೆರೆದದ್ದರಿಂದ ಕೆಳಗಿನ ತರಗತಿಯ ಎಂಭತ್ತು ಮಕ್ಕಳು ಅಲ್ಲಿಗೆ ಹೋದರು 1921–22ರಲ್ಲಿ ಮಹಾಜನರ ಉದಾರ ಸಹಾಯದಿಂದಲೂ ಸರಕಾರದ ಗ್ರಾಂಟಿನಿಂದಲೂ ಈಗಿರುವ ಹಾಲನ್ನು ಕಟ್ಟಲಾಯಿತು. ಅದೇ ವರ್ಷ ಎಂಟನೇ ತರಗತಿಯನ್ನು ಸಹ ತೆರೆಯಲಾಯಿತು. ಇಲ್ಲಿನ ಎಂಟನೇ ತರಗತಿಯಿಂದ

ಪಾಸಾದ ಹುಡುಗರನ್ನು ಹೈಸ್ಕೂಲುಗಳಲ್ಲಿ ಮೇಲಿನ ತರಗತಿಗೆ ಸೇರಿಸದೇ ಇದ್ದುದರಿಂದ ಇಲ್ಲಿನ ಎಂಟನೇ ತರಗತಿಯಲ್ಲಿ ಹೆಚ್ಚಿಗೆ ಹುಡುಗರು ಬರುತ್ತಿರಲಿಲ್ಲ. ಮೊದಲನೇ ಸಾರಿಯಾಗಿ 1942ರಲ್ಲಿ ನಾಲ್ಕು ಹುಡುಗರು ವೀರಾಜಪೇಟೆ ಹೈಸ್ಕೂಲಿಗೆ ಸೇರಲೋಸುಗ ಹೋದರು. ಅವರನ್ನು ಪರೀಕ್ಷಿಸಲಾಗಿ ಮೂವರು ನಾಲ್ಕನೇ ಫಾರಂನ್ನು ಸೇರಿದರು.

"ಹುಡುಗರ ಸಂಖ್ಯೆಯೇನೋ ಹೆಚ್ಚುತ್ತಾ ಬಂದ ಹಾಗೆ ಉಪಾಧ್ಯಾಯರುಗಳ ಸಂಖ್ಯೆಯೂ ಹೆಚ್ಚಿತು. ಸರಕಾರದ ಆರ್ಥಿಕ ಸ್ಥಿತಿಯೂ ಚೆನ್ನಾಗಿತ್ತು. 1925ರಲ್ಲಿ ನಾಲ್ಕು ಹೆಚ್ಚಿನ ಉಪಾಧ್ಯಾಯರುಗಳನ್ನು ಹೊಸ ಕಟ್ಟಡವಾಗುವ ವರೆಗೆ ಒಂದು ಗುಡಿಸಲನ್ನು ಕಟ್ಟಲು ಹಣವನ್ನು ಶಾಲೆಗೆ ಒದಗಿಸಿಕೊಟ್ಟರು. 1926ರಲ್ಲಿ ದೈವಾನುಗ್ರಹದಿಂದ ಕೊಡಗಿಗೆಲ್ಲಾ ಏಕ ಪ್ರಕಾರವಾಗಿ ಎಂಟನೇ ಅಥವಾ ಮೂರನೇ ಫಾರಂನ ಬೋರ್ಡು ಪರೀಕ್ಷೆಯು ಜಾರಿಗೆ ಬಂತು. ಇಲ್ಲಿ ಪಾಸಾದ ಹುಡುಗರಿಗೆ ನಾಲ್ಕನೇ ಫಾರಂಗಳಲ್ಲಿ ಸ್ಥಳ ಸಿಕ್ಕಲಾಗಿ, ಆರು, ಏಳು, ಮತ್ತು ಎಂಟನೆ ತರಗತಿಗಳಲ್ಲಿ ಹುಡುಗರ ತುಮುಕು ಹೆಚ್ಚಾಯಿತು. ಕಮ್ಮಿ ಖರ್ಚಿನಿಂದ ಹೆಚ್ಚಿನ ವಿದ್ಯೆಯು ದೊರೆಯುತ್ತಿದ್ದುದೇ ಇದಕ್ಕೆ ಕಾರಣ.

"1926ರಲ್ಲಿ ಹೊರಗಿನಿಂದ ಬರುವ ಬಾಲಕರ ಪ್ರಯೋಜನಾರ್ಥವಾಗಿ ಒಂದು ವಸತಿ ಗೃಹವನ್ನು ಸ್ಥಾಪಿಸುವ ಯೋಚನೆಯು ತಲೆದೋರಿತು. ಸರಕಾರದವರು ತಿಂಗಳುವಾರು ಗ್ರಾಂಟನ್ನು ಸಾಮಾನುಗಳಿಗಾಗಿ ರೂಪಾಯಿಗಳನ್ನು ಒದಗಿಸಿಕೊಟ್ಟ ಪ್ರಯುಕ್ತ ಒಂದು ಬೋರ್ಡಿಂಗು ಮನೆಯು ಮೊದಲು ಪೇಟೆಯಲ್ಲೂ ಆಮೇಲೆ ಶಾಲೆಯ ಸಮೀಪದ ಬಾಡಿಗೆ ಮನೆಯಲ್ಲೂ ನಡೆಯುತ್ತಾ ಬರುತ್ತಿದೆ. ಶಾಲೆಗೊಂದು ಹೊಸ ಕಟ್ಟಡವನ್ನೂ ಬೋರ್ಡಿಂಗು ಮನೆಯನ್ನೂ ಕಟ್ಟಲು ಸರಕಾರದವರು ಆಲೋಚನೆ ಮಾಡಿ ಶಾಲೆಯ ಎದುರುಗಡೆಗೂ ಒತ್ತಿಗೂ ಇರುವ ಜಾಗವನ್ನು (ಹೊಸ ಕಟ್ಟಡ ನಿಂತಿರುವ ಸ್ಥಳ) ಕೇಲಟ್ಟಿ ಮನೆಯವರಿಂದ ಪಡೆ ಕೊಂಡರು. ಈ ಜಾಗದ ಬದಲು ಬೇರೆ ಜಾಗವನ್ನು ಕೊಟ್ಟದ್ದು ಮಾತ್ರವಲ್ಲದೆ, ಆ ಮನೆಯವರ ಮಕ್ಕಳು ಈ ಶಾಲೆಯ ಎಂಟನೇ ಕ್ಲಾಸಿನವರೆಗೆ ಓದುವವರೆಗೂ ಪುತ್ರ ಪೌತ್ರ ಪಾರಂಪರ್ಯವಾಗಿ ಸ್ಕೂಲು ಫೀಜು ಮಾಫಿಯಾಗಿದೆಯೆಂದು ಸರಕಾರದವರು ಹುಕುಂ ಕೊಟ್ಟಿರುವರು. ಅಷ್ಟರಲ್ಲೇ ಸರಕಾರಕ್ಕೆ ಹಣದ ಅಡಚಣೆಯು ಬಂದೊದಗಿದ್ದರಿಂದ ಯೋಚಿಸಿದ್ದ ಹೊಸ ಕಟ್ಟಡವನ್ನು ಕಟ್ಟಲು ಮೂರು ವರ್ಷಗಳು ಹಿಡಿದು 1929ರಲ್ಲಿ ಮುಗಿಯಿತು. ಹಾಲ್ ಬಹಳ ಅಭದ್ರ ಸ್ಥಿತಿಯಲ್ಲಿದ್ದುದರಿಂದ 1930ರಲ್ಲಿ ಸರಕಾರದವರೇ ರಿಪೇರಿ ಮಾಡಿದರು. ಆದರೆ ಬೋರ್ಡಿಂಗು ಮನೆಯು ಇನ್ನೂ ಆಗಿರುವುದಿಲ್ಲ.

"1932ರಲ್ಲಿ ಮುಸ್ಲಿಂ ಹುಡುಗರಿಗೆ ಉರ್ದು ಭಾಷೆಯನ್ನು ಕಲಿಸಬೇಕೆಂದು ಉರ್ದು ಪಂಡಿತರೊಬ್ಬರನ್ನು ಶಾಲೆಗೆ ಕಳುಹಿಸಿಕೊಟ್ಟರು. ಅಂದಿನಿಂದ ಉರ್ದು ಕಲಿಯಬೇಕಾದವರಿಗೆ ಆ ಭಾಷೆಯನ್ನು ಸಹ ಕಲಿಸುತ್ತಿರುವರು.

"ಕೆಲವು ವರ್ಷಗಳ ಹಿಂದೆ ಐದಾರು ಮೈಲಿಗಳ ಸುತ್ತಮುತ್ತಲಿನಲ್ಲಿ ಎಂದರೆ ಕಕ್ಕಬೆ, ಕೊಟ್ಟೂರು, ಮೂರ್ನಾಡು ಮತ್ತು ಕಾಕೋಟುಪರಂಬು ಈ ಕಡೆಗಳಲ್ಲಿ ಹೈಯರ್ ಎಲಿಮೆಂಟರಿ ಶಾಲೆಗಳು ತೆರೆಯಲ್ಪಟ್ಟಿದ್ದರಿಂದ ಮೊದಲಿದ್ದ ಹುಡುಗರ ಸಂಖ್ಯೆಯು ಈಗ ಇರುವುದಿಲ್ಲ. ಬೋರ್ಡುಪರೀಕ್ಷೆಯು ಪ್ರಾರಂಭವಾಗಿ ಈವರೆಗೆ ಎಂಟನೇ ತರಗತಿಯಿಂದ 156 ಮಕ್ಕಳು ಪಾಸಾಗಿ ನಾಲ್ಕನೇ ಫಾರಂನ್ನು ಸೇರಿರುವರು.

"ಶಾಲೆಯೊಳಗೆ ಮಾತ್ರ ಬಾಲಕರಿಗೆ ಪಾಠಹೇಳಿಕೊಟ್ಟರೆ ಸಾಲದೆಂದು ಯೋಚಿಸಿ, ಈ ವರ್ಷದಿಂದ ಸರಕಾರದವರು ಗ್ರಾಮದ ಮುಂದಿನ ರೈತರಾಗುವ ಹುಡುಗರಿಗೆ ವ್ಯವಸಾಯದ ಕೆಲವು ಭಾಗಗಳಲ್ಲಿ ಮಾಹಿತಿಗಳನ್ನು ಕಲಿಸಿಕೊಡಬೇಕೆಂಬ ಪ್ರಯತ್ನದಲ್ಲಿರುವರು. ಈ ಕಾರಣ

ಗಳಿಂದ ಶಾಲಾ ಬಾಲಕರಿಗೆ ತರಕಾರಿ ಮೊದಲಾದ ಕರೆಫಸಲನ್ನು ಬೆಳಸಲಿಕ್ಕೂ, ಕೋಳೀ ಸಾಕುವಿಕೆ, ಜೇನುನೊಣ ಸಾಕುವಿಕೆ ಮೊದಲಾದ ವಿಷಯಗಳನ್ನು ಕಲಿಸಲೂ ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವರು.

“ಇಂದಿಗೆ ಈ ಶಾಲೆಯು ಇಲ್ಲಿ ಸ್ಥಾಪಿತವಾಗಿ ಅರುವತ್ತು ವರ್ಷಗಳಾದವು. ಅಂದಿನಿಂದ ವೃದ್ಧಿಯನ್ನು ಹೊಂದುತ್ತಾ ಬಂದು ಇಂದು ಈ ಸ್ಥಿತಿಯಲ್ಲಿದೆ. ಮುಂದೆಯೂ ಹೀಗೆಯೇ ವೃದ್ಧಿಯನ್ನು ಹೊಂದುತ್ತಾ ಹೋಗಿ ನಾಡಿಗೆ ಮಹದುಪಕಾರವನ್ನು ಮಾಡಲೆಂದು ದೇವರನ್ನು ಪ್ರಾರ್ಥಿಸುತ್ತೇನೆ.”

೫

ಮುಂದಾಳುಗಳು ಹೇಗೆ ಹುಟ್ಟುತ್ತಾರೆ ಎನ್ನುವುದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ: ನೆಲದ ನೀರಡಿಕೆಗೆ ತಣ್ಪೆರೆಯಲು ಅವರು ಅದೇ ನೆಲದಿಂದ ಉದ್ಭವಿಸುತ್ತಾರೆ.

ನಾಪೋಕ್ಲು ನೆಲದಲ್ಲಿ ಇಂಥ ನೀರಡಿಕೆ ತೀವ್ರವಾಗಿ ತಲೆದೋರಿತು: ಅದು ವಿದ್ಯಾದಾಹ. ಪ್ರತಿಭೆ, ಸಾಹಸ, ಕೆಚ್ಚೆದೆ, ಸಚ್ಚಾರಿತ್ರ್ಯ ಒಂದೊಂದರಲ್ಲಿಯೂ ಇತರರಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ಇಲ್ಲಿನ ಗಂಡುಗಲಿಗಳು ವಿದ್ಯೆಯ ಅಭಾವದಿಂದ ಹಿಂದೆ ಉಳಿದಿರುವುದು ಸರಿಯೆ? ಆಳರಸರ ಸರಕಾರ, ಹಸಿದ ನಾಯಿಗೆ ಎಸೆದ ಎಂಜಲ ಚೂರಿನಂತೆ, ಜನತೆಗೆ ಒದಗಿಸಿದ್ದ ಪ್ರಾಥಮಿಕ ಶಿಕ್ಷಣವೊಂದರಿಂದಲೇ ಈ ಬಡಜನ ತೃಪ್ತರಾಗಿರಬೇಕಾದದ್ದು ಅನಿವಾರ್ಯವೆ? ನಿಸರ್ಗದ ರುದ್ರಬಲಗಳೊಡನೆ ಹೋರಾಡಿ ಶಿವ ಫಲಗಳನ್ನು ಪಡೆಯಬಲ್ಲ ಈ ಅದಟಿನ ಜನ ಸ್ವಪ್ರಯತ್ನದಿಂದ ನೂತನ ವಿದ್ಯಾಮಂದಿರವನ್ನು ಕಟ್ಟಿ ನಾಡಿನಲ್ಲಿ ಹೆಚ್ಚಿನ ವಿದ್ಯಾಪ್ರಕಾಶ ಬೆಳಗಿ ಪಸರಿಸುವಂತೆ ಮಾಡುವುದು ಸಾಧ್ಯವಾಗದೆ?

ಇಂಥ ಸವಾಲುಗಳನ್ನು ಪರಿಹರಿಸಲೋ ಎಂಬಂತೆ ಇದೇ ನೆಲದಿಂದ ಮೇಲೆದ್ದ ಹಿರಿಚೇತನದ ಹೆಸರು ಕುಂಚೆಟ್ಟಿರ ಸುಬ್ಬಯ್ಯ ನಂಜುಂಡ (ಜನನ 18–8–1897). ನಾಪೋಕ್ಲು ಶಾಲೆಯಲ್ಲಿ ಪ್ರಾಥಮಿಕ ಪರೀಕ್ಷೆ ಮುಗಿಸಿದ (1910) ಬಳಿಕ ಇವರು ಮಡಿಕೇರಿಯಲ್ಲಿ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವ್ಯಾಸಂಗವನ್ನು ಮಾಡಿ ಎಸ್ ಎಸ್ ಎಲ್ ಸಿ (ಮೆಟ್ರಿಕ್ಯುಲೇಶನ್) “ಪದವಿ” ಗಳಿಸಿದರು (1918). ಇದು ಮದ್ರಾಸಿನ ಬೋರ್ಡ್ ಪರೀಕ್ಷೆ; ಮಡಿಕೇರಿಯಲ್ಲಿ ಮಾತ್ರ ಪ್ರೌಢಶಾಲೆ ಇದ್ದುದರಿಂದ ಕೊಡಗಿನ ಏಕೈಕ ಎಸ್ ಎಸ್ ಎಲ್ ಸಿ ಕೇಂದ್ರ ಇದಾಗಿತ್ತು. ಆದ್ದರಿಂದ ಅಂದಿಗೆ ಎಸ್ ಎಸ್ ಎಲ್ ಸಿ ತೇರ್ಗಡೆ ನಿಜಕ್ಕೂ ಮಹಾ ವಿಜಯವೇ ಸೈ.

ಆಟ ಓಟ ಶಿಸ್ತು ಸನತೆಗಳಲ್ಲಿ ಕಟ್ಟುನಿಟ್ಟಿನವರೂ ಓದಿನಲ್ಲಿ ಬುದ್ಧಿವಂತರೂ ಆಗಿದ್ದ ನಂಜುಂಡ ಐಗಳ ಹುದ್ದೆ ಸ್ವೀಕರಿಸಿದ್ದು ಸಹಜವಾದ ಹೆಜ್ಜೆ. ಮಡಿಕೇರಿ ಪುರಸಭೆ ನಡೆಸುತ್ತಿದ್ದ ಹಿಂದೂಸ್ಥಾನಿ ಶಾಲೆಯಲ್ಲಿ ಇವರ ಮೊದಲ ನೇಮಕವಾಯಿತು (1918). ಮರುವರ್ಷ ಉಪಾಧ್ಯಾಯಶಿಕ್ಷಣ ತರಬೇತಿ ಪಡೆಯಲು ಮಂಗಳೂರಿಗೆ ಹೋದರು. ಅಲ್ಲಿ ತೋನ್ಸೆಯವರ ಹಿರಿತನದಲ್ಲಿ ಹೊಸ ಹುರುಪು ಪಡೆದು ಹೊಸ ದೃಷ್ಟಿ ತಳೆದು ಮಡಿಕೇರಿಗೆ ಮರಳಿದರು. ಇವರ ಉತ್ಸಾಹ, ಆದರ್ಶಪಾಲನೆ ಮತ್ತು ವಿದ್ಯಾರ್ಥಿಪ್ರಿಯತೆಯನ್ನು ಗುರುತಿಸಿದ ವಿದ್ಯಾಧಿಕಾರಿಯವರು ಇಂಥ ತರುಣ ಮಡಿಕೇರಿಯ ಪ್ರೌಢಶಾಲೆಯಲ್ಲಿಯೇ ಇರತಕ್ಕದ್ದೆಂದು ಯೋಚಿಸಿ ಅಲ್ಲಿಗೆ ಬಡ್ತಿ ವರ್ಗ ಕೊಡಲು ನಿರ್ಧರಿಸಿದರು. ಆದರೆ ಅದೇ ವೇಳೆ ನಾಪೋಕ್ಲು ಪ್ರಾಥಮಿಕ ಶಾಲೆಯಲ್ಲಿನ ಉಪಮುಖ್ಯೋಪಾಧ್ಯಾಯ ಹುದ್ದೆ ಇವರ ಆಗಮನವನ್ನೆ ನಿರೀಕ್ಷಿಸುತ್ತಿರುವಂತೆ ತೋರುತ್ತಿತ್ತು.

ನಂಜುಂಡನವರ ಬದುಕಿನಲ್ಲಿ ಅದೊಂದು ಪರ್ವಕಾಲ: ಕೊಡಗಿನ ವರಿಷ್ಠ ಶಾಲೆಯಲ್ಲಿ ಕನಿಷ್ಠನಾಗಿ ಮುಸುಳುವುದೇ ಅಥವಾ ಕನಿಷ್ಠ ಶಾಲೆಯಲ್ಲಿ ವರಿಷ್ಠನಾಗಿ ಮುಸಗುವುದೇ? ನಿರ್ಣಯ ಸುಲಭವಾದದ್ದೇನೂ ಆಗಿರಲಿಲ್ಲ. ಬಹುಶಃ ತನ್ನ ನೆಲದಲ್ಲಿ ತಾನು ಏನಾದರೂ ಸಾರ್ಥಕ ಕಾರ್ಯ ನಿರ್ವಹಿಸಬೇಕೆಂಬ ಉತ್ಕಟ ವಾಂಛೆಯೇ ಈ ಆದರ್ಶವಾದಿ ತರುಣನನ್ನು ನಾಪೋಕ್ಲಿನ ಹುದ್ದೆಯನ್ನು ಆಯುವತ್ತ ಮುನ್ನೂಕಿರಬೇಕು. ನೆಲದ ಬಯಕೆ, ನೆಲದ ಒಲವು, ನೆಲದ ಕರೆ ಅದೇ ನೆಲದ ಕೂಸಾದ ಮನುಷ್ಯನನ್ನು ಎಂಥ ತ್ಯಾಗಕ್ಕೂ ಅಣಿಗೊಳಿಸಬಲ್ಲವು.

೬

1921ರ ಶಾಲಾವರ್ಷ ಆರಂಭವಾದಾಗ, ಜುಲೈ 1, ವರ್ಷಾಘಾತ ಪ್ರಕೋಪಸ್ಥಿತಿ ಇದಿದಾಗ, ಕಾವೇರಿಯ ಮಹಾಪೂರ ಗರಿಷ್ಠ ಮಟ್ಟ ಏರಿದಾಗ ನಂಜುಂಡ ತಾವು ಓದಿದ ಶಾಲೆಯಲ್ಲೇ ಉಪಮುಖ್ಯೋಪಾಧ್ಯಾಯರಾಗಿ, ಅಂದರೆ ಫಸ್ಟ್ ಅಸಿಸ್ಟೆಂಟ್ ಆಗಿ, ಕಾರ್ಯನಿರತರಾದರು. ನಾಯಡ ಸಿ. ಚಿಣ್ಣಪ್ಪನವರು ಮುಖ್ಯೋಪಾಧ್ಯಾಯರು. ಆಗ ಈ ಶಾಲೆಯಲ್ಲಿ ಫಸ್ಟ್ ಮತ್ತು ಸೆಕೆಂಡ್ ಫಾರ್ಮ್‌ಗಳು — ಅಂದರೆ ಮಾಧ್ಯಮಿಕ ಶಾಲೆಯ ಮೊದಲ ಎರಡು ತರಗತಿಗಳು — ಮಾತ್ರ ಇದ್ದುವು.

ಶಾಲೆಯ ಜೋಪಡಿ, ಮೈತಳೆದ ಬಡತನವೇ ಆಗಿತ್ತು. ಅಲ್ಲಿಯೂ ಮಕ್ಕಳು ಕುಳಿತಿರಲು ಸಾಕಷ್ಟು ಎಡೆ ಇರಲಿಲ್ಲ. ಆದ್ದರಿಂದ ಸರಿಯಾದ ಸೂರಿನ ಅಡಿ ಅಡಕವಾದ ಜಾಗವನ್ನು ಒದಗಿಸುವುದು ಮೊದಲ ಜರೂರಿನ ಆವಶ್ಯಕತೆ ಎಂದು ಚಿಣ್ಣಪ್ಪನವರಿಗೂ ನಂಜುಂಡನವರಿಗೂ ಮನವರಿಕೆ ಆಯಿತು. ಇದನ್ನು ಸಾಧಿಸುವುದು ಹೇಗೆ? ಸರಕಾರದ ಜಡಯಂತ್ರಕ್ಕೆ ಕಾಗದ ಗುಜರಾಯಿಸಿ ಆ ಅರ್ಜಿಯ ಬೆಂಬತ್ತಿ ಯಂತ್ರದ ನಟ್ಟು ಬೋಲ್ಟು ಸರಿಗೆ ಸಲಾಕಿಗಳಾದ ಅಧಿಕಾರಿಗಳ ಮುಂದೆ ಹಲ್ಕಿರಿದು ಗೋಗರೆದು ಮುಸಲತ್ತು ಮಾಡಿ ಬೇಕಾದ್ದನ್ನು ಗಿಟ್ಟಿಸುವುದು ಒಂದು ಹಾದಿಯಾದರೆ ಜನತಾಜನಾರ್ದನನ ಜೀವಂತ ಸರಕಾರಕ್ಕೆ ನೇರ ಮನವಿ ಅರ್ಪಿಸಿ ಪರಿಸ್ಥಿತಿಯನ್ನು ಸಮರ್ಪಕವಾಗಿ ವಿವರಿಸಿ ಸ್ವಂತಾದರ್ಶ ತ್ಯಾಗಗಳಿಂದ ಜನರ ಮನವೊಲಿಸಿ ಅವರಿಂದ ಬಿಡಿ ಬಿಡಿಯಾಗಿ ಹನಿಯುವ ಬಿಂದು ಕೊಡುಗೆಗಳನ್ನು ಒಟ್ಟಯಿಸಿ ಸಿಂಧುವನ್ನೇ ನಿರ್ಮಿಸುವುದು ಇನ್ನೊಂದು ಹಾದಿ. ಮೊದಲನೆಯದು ಸುಲಭ ಮಾರ್ಗ, ಆದರೆ ಪ್ರವರ್ತನಶೀಲತೆಯನ್ನು ಮೊಟಕುಗೊಳಿಸುವುದು ಅದರ ಸ್ವಭಾವ; ಎರಡನೆಯದು ಕಠಿನ ಮಾರ್ಗ, ಆದರೆ ಪ್ರವರ್ತನಶೀಲತೆಯನ್ನು ಪ್ರವರ್ಧಿಸುವುದು ಇದರ ಧರ್ಮ. ನಂಜುಂಡ ಆಯ್ದುದ್ದು ಎರಡನೆಯ ಹಾದಿಯನ್ನು. ಇದು ಅವರ ವ್ಯಕ್ತಿತ್ವಕ್ಕೆ ಅನುಗುಣವಾಗಿಯೇ ಇತ್ತು.

ಆ ವರ್ಷದ ಶಾರದಾಪೂಜೆ ಕೇವಲ ಪುಸ್ತಕ ಮತ್ತು ಪಟಗಳಿಗೆ ಅರ್ಚನೆ ಮತ್ತು ಮಂಗಳಾರತಿ, ಭಾಷಣ, ಪ್ರಸಾದವಿನಿಯೋಗ ಈ ಸಾಂಕೇತಿಕ ಕ್ರಿಯೆಗಳಿಗೆ ಸೀಮಿತವಾಗಿ ಉಳಿಯಲಿಲ್ಲ; ಬದಲು, ಸರಸ್ವತಿಗೊಂದು ಹೊಸ ದೇಗುಲ ಕಟ್ಟಲು ಯೋಜನೆ ಹೂಡುವ ಪ್ರತ್ಯಕ್ಷ ಪೂಜೆಯೇ ಆದಾಗಿತ್ತು. ನಾಡಿನ ಹಿರಿಯರ ಸಮಿತಿ ಸೇರಿಸಿದ್ದಾಯಿತು, ಜನರಿಂದ ವಂತಿಗೆ ಕೂಡಿಸಲು ಏರ್ಪಾಡು ಮಾಡಿದ್ದಾಯಿತು, ಮಳೆ ಮುಗಿದೊಡನೆ ಶಾಲೆಗೆ ಬದಾವಣೆ ಕಟ್ಟಬೇಕೆಂದು ನಿರ್ಧರಿಸಿದ್ದೂ ಆಯಿತು.

ಕೊಡಗಿನಲ್ಲಿ ಕಡು ಬಡತನದ ಕೊಂಪೆಯಾದ ನಾಪೋಕ್ಲಿನಲ್ಲಿ, ಆರ್ಥಿಕವಾಗಿ ಕುಚೇಲರ ಬೀಡಾದ ಆ ಹಾಸಲೆಯಲ್ಲಿ, 1921ರಲ್ಲಿ, ರೂಪಾಯಿಗೆ ಪ್ರಾಯಶಃ ಅರ್ಧ ಪಲ್ಲ ಅಕ್ಕಿ ದೊರೆಯುತ್ತಿದ್ದ ದಿನಗಳಲ್ಲಿ, ಸಂಗ್ರಹವಾದ ನಗದು ನ್ಯಾಸನಿಧಿ ಎಷ್ಟು ಗೊತ್ತೇ? ಐದು ನೂರು ರೂಪಾಯಿಗಳು! ಘನ ಸರಕಾರವಾದರೂ ಜನರ ಈ ಕೊಡುಗೆಯನ್ನು ಗಮನಿಸದಿರಲಿಲ್ಲ —

ಪೂರಕವಾಗಿ ಅಷ್ಟೇ ಸಹಾಯ ಧನವನ್ನು ಮಂಜೂರುಮಾಡಿತು ಹೀಗೆ 1921 – 22ರ ಅವಧಿಯಲ್ಲಿ ನಾಪೋಕ್ಲು ಶಾಲೆಗೆ ಹೊಸ ಕಟ್ಟಡ ಒದಗಿ ಜಾಗದ ಕೊರತೆ ನೀಗಿತ್ತು. ಮಕ್ಕಳು ವಿಶಾಲ ವಾತಾವರಣದಲ್ಲಿ ಪಾಠ ಕಲಿಯಲು ಅವಕಾಶ ಉಂಟಾಯಿತು. ಶಾಲೆಯ ಅಂತಸ್ತು ಏರಿತು. ನಂಜುಂಡನವರ ಸಂಘಟನ ಕೌಶಲದ ಪ್ರತೀಕವದು, ಜನತಾ ಪ್ರಯೋಗ ಮಂದಿರದಲ್ಲಿ ಅವರಿಗೆ ಲಭಿಸಿದ ಪ್ರಥಮ ಫಲವದು, ಅವರ ಅಖಂಡ ಸೇವಾಜೀವನಕ್ಕೆ ನಿರ್ದಿಷ್ಟ ದಿಶೆಯನ್ನು ತೋರಿಸಿದ ಕೈಗಂಬವದು.

ಆಗ ಕೊಡಗಿನಲ್ಲಿ ಶಾಲಾ ಇನ್ಸ್‌ಪೆಕ್ಟರ್ ಆಗಿದ್ದವರು ಪ್ರಸಿದ್ಧ ಶಿಕ್ಷಣವೇತ್ತ ಪಂಜೆ ಮಂಗೇಶರಾಯರು. ಇವರಿಗೂ ನಂಜುಂಡನವರ ಗುರುಗಳಾದ ತೋನ್ಸೆಯವರಿಗೂ ಶಿಕ್ಷಣ ವಿಚಾರಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿದ್ದುವು. ಹೀಗಾಗಿ ಪಂಜೆಯವರು ಮಾಮೂಲಿ ವಾರ್ಷಿಕ ತಪಾಸಣೆಗಾಗಿ ನಾಪೋಕ್ಲು ಶಾಲೆಗೆ ಹೋದಾಗ (1922) ಅವರಿಗೆ ನಂಜುಂಡನವರ ಬಗ್ಗೆ ವಿಶೇಷ ಆಸ್ಥೆ ಮಮತೆಗಳೇನೂ ಇದ್ದಿರಲಾರವು. ಇದರ ಅರಿವು ನಂಜುಂಡನವರಿಗಿತ್ತು. ಆದರೆ ಇವರ ಕೆಲಸವನ್ನು ಪಂಜೆಯವರು ಕಣ್ಣಾರೆ ಕಂಡರು – ಪ್ರಥಮ ಸಹಾಯಕರಾಗಿ ಇವರು ಹೊಣೆ ನಿರ್ವಹಣೆಯಲ್ಲಿ ಪ್ರದರ್ಶಿಸುತ್ತಿದ್ದ ಶಿಸ್ತು ಅಚ್ಚುಕಟ್ಟು, ಉಪಾಧ್ಯಾಯರಾಗಿ ಪಾಠ ಬೋಧನೆಯಲ್ಲಿ ಅನುಸರಿಸುತ್ತಿದ್ದ ರೀತಿ ರಿವಾಜು ಮತ್ತು ಪ್ರಜೆಯಾಗಿ ಸಾರ್ವಜನಿಕ ಜೀವನದಲ್ಲಿ ಪಾಲಿಸುತ್ತಿದ್ದ ಸಂಯಮ ಗಾಂಭೀರ್ಯ ಇವನ್ನು ಗ್ರಹಿಸಿದ ಗುಣಗ್ರಾಹಿ ಪಂಜೆಯವರು ನಂಜುಂಡನವರ ಬಗ್ಗೆ ಅಪಾರ ಅಭಿಮಾನ ತಳೆದರು, ಪ್ರೇಮಾದರಗಳನ್ನು ವ್ಯಕ್ತಪಡಿಸಿದರು. "ಇದ್ದಾನೆ ಕೊಡಗಿನಲ್ಲಿ ಒಬ್ಬ ನಂಜುಂಡ" ಎಂಬ ಅರ್ಥಗರ್ಭಿತ ವಾಕ್ಯದಲ್ಲಿ ಪಂಜೆಯವರು ಇವರ ಪುತ್ತಳಿತನವನ್ನು ಅಂದೇ ಕ್ರೋಡೀಕರಿಸಿ ಹೇಳಿದರು.

ಪರಿಣಾಮವಾಗಿ ನಂಜುಂಡನವರು ನಾಪೋಕ್ಲು ಶಾಲೆಯ ಮುಖ್ಯೋಪಾಧ್ಯಾಯರಾಗಿ ಬಡ್ತಿ ಪಡೆದರು (1922).

ಮುಂದಿನ ವರ್ಷಗಳಲ್ಲಿ, 1922–23, ನಂಜುಂಡನವರು ಇಡೀ ಕೊಡಗು ಸಂಚರಿಸಿ "ಸಾರ್ವಜನಿಕ ಭಿಕ್ಷಾಟನೆ" ನಡೆಸಿದರು. ಉದ್ದೇಶ? ನಾಪೋಕ್ಲು ಶಾಲೆಗೆ ಹಂಚು ಹೊದೆಸುವುದು ಮತ್ತು ಅಲ್ಲಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸುವುದು. ಈ ಪರ್ಯಟನೆಯಲ್ಲಿ ದೊರೆತ ಅಪೂರ್ವಾನುಭವದಿಂದ ಉತ್ತೇಜಿತರಾದ ನಂಜುಂಡ ನಾಪೋಕ್ಲಿನಲ್ಲಿ ವಿದ್ಯಾರಂಗ ಪ್ರಗತಿಗೊಳ್ಳುವುದರ ಕನಸನ್ನು ಕಾಣತೊಡಗಿದರು. ಆದರೆ ಅವರಿನ್ನೂ ಬೆಟ್ಟದ ಬುಡ ಕೂಡ ತಲಪಿರಲಿಲ್ಲ, ಕೊಡಿ ಏರುವುದೆಂದು ?

ಜರೂರಾಗಿ ಆಚರಣೆಗೆ ತರಲೇಬೇಕಾಗಿದ್ದ ಸುಧಾರಣೆಗಳು ಹೇರಳವಾಗಿದ್ದುವು. ಆದ್ಯಗಮನ ಬೇಡುತ್ತಿದ್ದುದೆಂದರೆ ಲೋಯರ್ ಸೆಕೆಂಡರಿ ಪ್ರವೇಶ ಪರೀಕ್ಷೆಯಲ್ಲಿ ನಾಪೋಕ್ಲು ವಿದ್ಯಾರ್ಥಿಗಳು ಯಶಸ್ವಿಗಳಾಗುವಂತೆ ಮಾಡುವ ಕರ್ತವ್ಯ. ಆಗ ಮಡಿಕೇರಿ ಮತ್ತು ವಿರಾಜಪೇಟೆಗಳಲ್ಲಿ ಮಾತ್ರ ಈ ಪರೀಕ್ಷೆಯನ್ನು ನಡೆಸುತ್ತಿದ್ದರು. ಹಳ್ಳಿಯ ಶಾಲೆಗಳಿಂದ ಆ "ಮಹಾನಗರ"ಗಳಿಗೆ ಹೋಗುತ್ತಿದ್ದ ಹೆಚ್ಚಿನ "ಹುಂಬ" ವಿದ್ಯಾರ್ಥಿಗಳು ಲೋಯರ್ ಸೆಕೆಂಡರಿ ವೈತರಣೀ ನದಿಉತ್ತರಣೆ ಮಾಡಲಾಗದೆ ತಮ್ಮ ವಿದ್ಯಾಭ್ಯಾಸವನ್ನು ಅಲ್ಲಿಗೆ ಮೊಟಕುಗೊಳಿಸುವ ದುಸ್ಥಿತಿಗೆ ಕೆಡೆಯುತ್ತಿದ್ದರು. ಇದರ ಕಾರಣ ಮುಖ್ಯವಾಗಿ ಹಳ್ಳಿಶಾಲೆಗಳಲ್ಲಿ ಸಾಕಷ್ಟು ವ್ಯವಸ್ಥಿತ ತರಬೇತಿನ ಅಭಾವ. ಇದನ್ನು ಸ್ವಂತಾನುಭವದಿಂದ ಚೆನ್ನಾಗಿ ಅರಿತಿದ್ದ ನಂಜುಂಡ ತಮ್ಮ ವಿದ್ಯಾರ್ಥಿಗಳಿಗೆ ಹೀಗಾಗಕೂಡದೆಂದು ನಿರ್ಧರಿಸಿ ಪರೀಕ್ಷಾಪೂರ್ವ ಶಿಕ್ಷಣವನ್ನು ವ್ಯವಸ್ಥಿತವಾಗಿ ನೀಡಿದರು. 1924ನೆಯ ಇಸವಿಯಲ್ಲಿ ನಾಪೋಕ್ಲಿನ ಮೊದಲ ತಂಡದ ವಿದ್ಯಾರ್ಥಿಗಳು – ನಂಜುಂಡನವರ ಗರಡಿಯಿಂದ ಹೊರಬಂದ ಪೈಲ್ವಾನರು - ಲೋಯರ್ ಸೆಕೆಂಡರಿ ಪರೀಕ್ಷಾಕಳದಲ್ಲಿ

ಉತ್ತೀರ್ಣರಾದರು ಹಾಗೂ ಪ್ರೌಢಶಾಲೆಯ ಮೊದಲ ತರಗತಿಯನ್ನು (ಫೋರ್ತ್ ಫಾರ್ಮ್) ಸೇರಿದರು. ನಾಪೋಕ್ಲಿನವರಿಗೆ ಹೇಗೊ ಇತರ ಹಳ್ಳಿಗಳವರಿಗೂ ಹಾಗೆ ಇದೊಂದು ದಾಖಲೆ ಆಗಿತ್ತು. ಕೊಡಗಿನ ಬಲು ಹಿಂದುಳಿದ ಹಳ್ಳಿ ನಾಪೋಕ್ಲು ಶಿಕ್ಷಣ ಕ್ಷೇತ್ರದಲ್ಲಿ ಪ್ರದರ್ಶಿಸಿದ ಈ ಸಿದ್ಧಿಯನ್ನು ವಿದ್ಯಾ ಇಲಾಖೆ ಗಮನಿಸದಿರಲಿಲ್ಲ. ಎಂದೇ 1926ರಲ್ಲಿ ಇಡೀ ಕೊಡಗಿಗೆ ಅನ್ವಯವಾಗುವಂತೆ ಲೋಯರ್ ಸೆಕಂಡರಿ ಪರೀಕ್ಷೆಯನ್ನು ವಿಸ್ತರಿಸಲಾಯಿತು. ಇದರಿಂದಾಗಿ ಆಯಾ ಶಾಲೆಯವರು ತಮ್ಮ ಪರಿಸರದಲ್ಲಿಯೇ ಈ ಪರೀಕ್ಷೆಗೆ ಕೂರಲು ಅನುಕೂಲತೆ ಒದಗಿತು. ಇದರಲ್ಲಿ ತೇರ್ಗಡೆ ಆದವರು ಬೇರೆ ಯಾವ ಪ್ರವೇಶ ಪರೀಕ್ಷೆಯ ಅಡ್ಡಗೋಡೆಯನ್ನು ದಾಟುವ ಆವಶ್ಯಕತೆ ಇರಲಿಲ್ಲ – ನೇರವಾಗಿ ಪ್ರೌಢಶಾಲೆಯನ್ನು ಪ್ರವೇಶಿಸಬಹುದಾಗಿತ್ತು.

೭

ನೈಸರ್ಗಿಕವಾಗಿ ಭಾರತ ಅತ್ಯಂತ ಸಂಪದ್ಭರಿತ ದೇಶ; ಆದರೆ ಆರ್ಥಿಕವಾಗಿ ಭಾರತ ಕಡು ಬಡವರನಾಡು ಎಂಬ ಒಂದು ಜನಜನಿತ ಹೇಳಿಕೆ ಉಂಟು. ನಾಪೋಕ್ಲಿನ ಮಟ್ಟಿಗಂತೂ ಇದು ಪೂರ್ತಿ ನಿಜ: ನಿಸರ್ಗದ ಮಹಾ ಸಮೃದ್ಧಿಯ ನಡುವೆ ಜನ ಹೊಟ್ಟೆ ಬಟ್ಟೆ ದಟ್ಟಿಗೆಗಳಿಗಾಗಿ ಸಾಕಷ್ಟು ಬವಣೆ ಪಡುವುದು ಇಲ್ಲಿ ರೂಢಿ ಆಗಿ ಹೋಗಿತ್ತು. ಸ್ವಾವಲಂಬನೆಯ ವಿವಿಧ ಮಾರ್ಗಗಳನ್ನು ಈ ಜನರಿಗೆ ಬೋಧಿಸಿ ಬಳಕೆಗೆ ತಂದದ್ದಾದರೆ ನಾಪೋಕ್ಲು ನಂದನವನವಾದೀತೆಂದು ನಂಜುಂಡ ಕನಸು ಕಂಡರು. ಒಡನೆ ಅವನ್ನು ತಮ್ಮ ಶಾಲೆಯ ಮಕ್ಕಳ ಮೂಲಕ ನನಸಾಗಿಸಲು ಉದ್ಯುಕ್ತರೂ ಆದರು. ಶಾಲೆಯಲ್ಲಿ ಸಹಕಾರ ಸಂಘದ ಸ್ಥಾಪನೆ (1927–28), ಬಡಮಕ್ಕಳಿಗೆ ಒಪ್ಪೊತ್ತಿನ ಊಟದ ಯೋಜನೆ ಮತ್ತು "ಸಂಬಳ" (ಫೀಸ್) ಪಾವತಿ ಮಾಡಲು ನೆರವು, ಶಾಲಾವರಣದಲ್ಲಿ ತೋಟಗಾರಿಕೆ, ಜೇನುಸಾಕಣೆ ಮತ್ತು ಕೋಳಿಸಾಕಣೆ ಏರ್ಪಾಡು, ಕ್ರೀಡಾಂಗಣದ ನಿರ್ಮಾಣ ಮುಂತಾದ ರಚನಾತ್ಮಕ ಕಾರ್ಯಗಳನ್ನು ನಂಜುಂಡನವರು ಸಹೋದ್ಯೋಗಿಗಳ ನೆರವಿನಿಂದ ಅನುಷ್ಠಾನಕ್ಕೆ ತಂದರು. ಇದೇ ವೇಳೆ ವಾರ್ಷಿಕ ಸಾಹಿತ್ಯೋತ್ಸವವನ್ನು ಏರ್ಪಡಿಸಿ ನೆರೆನಾಡುಗಳ ವಿದ್ವಾಂಸರಿಂದ ನಾಪೋಕ್ಲಿನ ಸಾರ್ವಜನಿಕರಿಗೆ ಸಾಹಿತ್ಯಾತಣವನ್ನೇ ಬಡಿಸಲು ತೊಡಗಿದರು. ಇಂಥ ಪಟು ಕಾರ್ಯಕ್ರಮಗಳಲ್ಲಿ ಭಾಗಿಗಳಾದ ವಿದ್ಯಾರ್ಥಿಗಳು ಸಹಜವಾಗಿಯೇ ಅಳುಕನ್ನು ಕಳೆದುಕೊಂಡು ಬಾಳನ್ನು ಉತ್ಸಾಹದಿಂದ ಸ್ವಾಗತಿಸಲು ಮುಂದಾದರು.

ಸಹಕಾರ ಸಂಘದ ಮುಖ್ಯೋದ್ದೇಶ "ಸದಸ್ಯರುಗಳ ಪ್ರಯೋಜನಾರ್ಥವಾಗಿ ಚಿಲ್ಲರೆ ಮತ್ತು ರಖಂ ಆಗಿ ಉಪಾಧ್ಯಾಯ ಮೆಂಬರುಗಳ ಮತ್ತು ಶಾಲಾಮಕ್ಕಳ ಸಾಮಗ್ರಿಗಳ ವ್ಯಾಪಾರವನ್ನು ನಡೆಯಿಸುವುದು." ಈ ಸಂಘದ ವತಿಯಿಂದ ಬಡಹುಡುಗರ ನಿಧಿಯನ್ನು ಸ್ಥಾಪಿಸಲಾಯಿತು. ಅದರ ಉದ್ದೇಶ "ನಾಪೋಕ್ಲು ಶಾಲೆಯಲ್ಲಿ ಓದುವ ಬಡಹುಡುಗರಿಗೆ ಸ್ಕೂಲ್ ಫೀಸಿನ ಅಥವ ಅದರ ಅರ್ಧವನ್ನು ಸ್ಕಾಲರ್‌ಶಿಪ್ಪ್ ಆಗಿ ಕೊಡತಕ್ಕದ್ದು. ಕೊಡುವಾಗ ಹುಡುಗನ ಬಡತನವನ್ನು ತರಗತಿಯಲ್ಲಿ ಯೋಗ್ಯತೆಯನ್ನು ಆಲೋಚಿಸತಕ್ಕದ್ದು." ಈ ನಿಧಿಗೆ ಸಹಕಾರ ಸಂಘದಿಂದ ಬರುವ ಲಾಭಾಂಶದ ಜೊತೆಗೆ ಸಾರ್ವಜನಿಕ ಮೂಲಗಳಿಂದ ಕೂಡ ಹಣವನ್ನು ಶೇಖರಿಸಲು ಏರ್ಪಾಡಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸರಕಾರದ ವತಿಯಿಂದ ಪ್ರಚಾರದ ಡೋಲು ಡಮರು ಬಾಜಣೆ ಕೊಂಬು ಕಹಳೆ ಮೊಳಗು ಸಮೇತ ಚಾಲ್ತಿಗೆ ತರಲಾದ ಹಲವಾರು ಸುಧಾರಣೆಗಳನ್ನು 1930ರ ಮೊದಲೇ ನಂಜುಂಡನವರು ನಾಪೋಕ್ಲಿನಲ್ಲಿ ಸದ್ದುಗದ್ದಲ ಅಬ್ಬರಗಳಿಲ್ಲದೆ ತೀರ ಸಹಜವಾಗಿ ಇದೊಂದು ನಿರ್ವಹಿಸಲೇಬೇಕಾದ ಕರ್ತವ್ಯ ಎಂಬ ದೃಷ್ಟಿಯಿಂದ ಆಚರಣೆಗೆ ತಂದಿದ್ದರು.

ನಾಪೋಕ್ಲಿನ ಅತಿ ಸೀಮಿತ ವಲಯದಲ್ಲಿ ಹಿರಿಹೆಜ್ಜೆ ಇಡುತ್ತ ನೂತನ ಪ್ರಯೋಗಗಳನ್ನು

ಮಾಡುತ್ತ ಹೊಸ ಹರವನ್ನು ಅರಸುತ್ತ ಮುನ್ನಡೆಯುತ್ತಿದ್ದ ನಂಜುಂಡನವರು ತಮ್ಮ ಕೆಲವು ಅನುಭವಗಳನ್ನು, 1936ರಲ್ಲಿ ಪ್ರಕಟವಾದ "ಶಾಲಾಟಿಪ್ಪಣಿಗಳು" ಎಂಬ ಭಾಗದಲ್ಲಿ, ನಮೂದಿಸಿದ್ದಾರೆ. ಅವರಿಂದ ಕೆಲವು ಅಂಶಗಳನ್ನು ಇಲ್ಲಿ ಉದ್ಧರಿಸಿದೆ.

"ಸ್ತ್ರೀ ವಿದ್ಯಾಭ್ಯಾಸ. ನಮ್ಮ ಸ್ಥಳೀಯ ಬಾಲಿಕಾ ಪಾಠಶಾಲೆಯಲ್ಲಿ ಮತ್ತು ಈ ಶಾಲೆಯಲ್ಲಿ ಸೇರಿ ಒಟ್ಟು 111 ಸ್ತ್ರೀ ವಿದ್ಯಾರ್ಥಿಗಳಿರುತ್ತಾರೆ. ಇವರ ಪೈಕಿ ಮೇಲಿನ ತರಗತಿಗಳ ಸಂಖ್ಯೆಯು ಬರೇ 12 ಎಂದು ಹೇಳುವುದಕ್ಕೆ ವಿಷಾದಿಸಬೇಕಾಗಿದೆ. ಹೆಚ್ಚಿನ ಸಂಖ್ಯೆಯವರು 5ನೇ ತರಗತಿ ವಳಗೆ ಶಾಲೆ ಬಿಟ್ಟುಬಿಟ್ಟು ತಾವು ಕಲಿತ ವಿದ್ಯೆಯನ್ನು ಅಭಿವೃದ್ಧಿ ಪಡಿಸಿಕೊಳ್ಳುವುದಕ್ಕೆ ಅನುಕೂಲವಿಲ್ಲದೆ ಬೇಗನೆ ನಿರಕ್ಷರಕುಕ್ಷಿಗಳಾಗುತ್ತಾರೆ. ಈ ಆರ್ಥಿಕ ದುಃಸ್ಥಿತಿಯ ಕಾಲದಲ್ಲಿ ಪುಸ್ತಕ, ಫೀಜು ವಗೈರೆ ಖರ್ಚುಮಾಡಿ ಮಕ್ಕಳನ್ನು ಓದಿಸಲು ಸಾಧ್ಯವಿಲ್ಲವೆಂದೂ ಹೆಣ್ಣುಮಕ್ಕಳಿಗೆ ಅಷ್ಟು ವಿದ್ಯೆ ಬೇಡವೆಂದೂ ತಾಯಿಗೆ ಮನೆಗೆಲಸಕ್ಕೆ ಸಹಾಯಕಳಾಗಬೇಕೆಂದೂ ಹೇಳುವುದು ವಾಡಿಕೆಯಾಗಿದೆ. ಹಣದ ಮುಗ್ಗಟ್ಟಿನ ಸಮಯದಲ್ಲಿ ಸೇವಕರನ್ನು ಮನೆಕೆಲಸಕ್ಕೆ ಇಟ್ಟುಕೊಂಡು ಜೀವನ ನಡೆಸುವುದು ಶೇಕಡ 99ರಷ್ಟು ಗ್ರಾಮವಾಸಿಗಳಿಗೆ ಸಾಧ್ಯವಿಲ್ಲ. ಆದರೆ ಪ್ರಪಂಚದ ಮಹಿಳೆಯರು ತಮ್ಮ ಮಕ್ಕಳ ಕ್ಷೇಮಕ್ಕಾಗಿ ತಮ್ಮ ಜನಾಂಗದ ಅಭಿವೃದ್ಧಿಗಾಗಿ, ತಮ್ಮ ದೇಶದ ಮೋಕ್ಷಗಾಗಿ, ಪುರುಷರೊಂದಿಗೆ ಸರಿಸಮಾನ ಹಕ್ಕುಗಳನ್ನು ಕೇಳಿ ಕೆಲಸ ಮಾಡುತ್ತಿರುವ ಈ ಸಮಯದಲ್ಲಿ ನಮ್ಮ ಹೆಣ್ಣುಮಕ್ಕಳಿಗೆ ಜ್ಞಾನಾಭಿವೃದ್ಧಿದೃಷ್ಟಿಯಿಂದಲಾದರೂ ಶಾಲೆಗೆ ಕಳುಹಿಸಿ ವೃತ್ತಾಂತ ಪತ್ರಿಕೆಗಳನ್ನೂ, ಮಾಸಪತ್ರಿಕೆಗಳನ್ನೂ, ಒಳ್ಳೆ ತರಹದ ಪುಸ್ತಕಗಳನ್ನೂ ಓದಿ ಜ್ಞಾನ ಸಂಪಾದಿಸಿಕೊಳ್ಳಲು ಶಕ್ತರಾಗಲು ಎಂಟನೇ ದರ್ಜೆಯವರೆಗಾದರೂ ವಿದ್ಯಾಭ್ಯಾಸವನ್ನು ಕೊಡುವುದು ಅವಶ್ಯಕವು. ಸ್ತ್ರೀಯರ ಜವಾಬ್ದಾರಿಕೆಯು ಬರೇ ಅಡಿಗೆ ಮಾಡಿ ಇಕ್ಕುವುದಲ್ಲ. ಚಿಕ್ಕ ಮಕ್ಕಳ ಆರೋಗ್ಯ, ಶಿಕ್ಷಣ, ನೀತಿ ಮನಶುಚಿತ್ವ ಇತ್ಯಾದಿ ವಿಷಯಗಳೂ ಇವೆ. ಓಟಿನ ಹಕ್ಕನ್ನು ವಿಸ್ತರಿಸುವ ಈಗಿನ ಕಾಲದಲ್ಲಿ (ಎಂಟನೇ ದರ್ಜೆ ಪಾಸಾದವರಿಗೆ ಓಟಿನ ಹಕ್ಕಿದೆ) ಅನೇಕ ಸ್ತ್ರೀಯರು ಓಟು ಕೊಡಲು ಅರ್ಹರಾಗುವವರು. ಅವರಿಗೆ ಓಟಿನ ಬೆಲೆಯು ದೇಶದ ಕ್ಷೇಮ ಎಂಬುವುದು ತಿಳಿದಿರಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ ಸ್ತ್ರೀಯರು ಸುಶೀಲರೂ, ಯೋಗ್ಯ ಗೃಹಿಣಿಯರೂ, ಪರೋಪಕಾರ ಬುದ್ಧಿಯುಳ್ಳವರೂ ಆಗಿದ್ದು ತಮ್ಮ ಹಾಗೂ ತಮ್ಮ ಪತಿಯ, ಕುಟುಂಬದ ಉದ್ಧಾರಕರಾಗಿ ಸಮಾಜದ ಏಳಿಗೆಗೆ ಸಹಾಯಕರಾಗಬೇಕಾದರೆ ಅವರ ಜವಾಬ್ದಾರಿಕೆಯನ್ನು ಅರಿತುಕೊಳ್ಳುವಷ್ಟು ವಿದ್ಯಾಭ್ಯಾಸವನ್ನು ಅವರಿಗೆ ಖಂಡಿತ ಕೊಡಬೇಕು.

"ಶಾಲೆಯ ತೋಟ. ಈಗ ನಮ್ಮ ದೇಶದಲ್ಲಿ ಹಾಗೂ ಭರತಖಂಡದಲ್ಲಿ ಗ್ರಾಮ ಜೀವನ ಸುಧಾರಣೆ ಮತ್ತು ಪುನರುಜ್ಜೀವನವು ಎಲ್ಲರ ಮನಸ್ಸನ್ನು ಆವರಿಸಿದೆ. ಗ್ರಾಮಾಭಿವೃದ್ಧಿಗಾಗಿ ಇಂಡಿಯಾ ಸರ್ಕಾರವು ಒಂದು ಕೋಟಿ ರೂಪಾಯಿಗಳನ್ನು ವೆಚ್ಚಮಾಡುತ್ತಿರುವುದೂ ಅದರಲ್ಲಿ ಒಂದಂಶವು ಕೊಡಗಿಗೂ ಸಿಕ್ಕಿ, ಇಲ್ಲಿಯ ಅಧಿಕಾರಿಗಳು ಕೆಲಸನಡೆಸುತ್ತಿರುವುದೂ ಎಲ್ಲರಿಗೂ ತಿಳಿದ ವಿಷಯವಾಗಿದೆ. ನಮ್ಮ ದೇಶದಲ್ಲಿ ಶೇಕಡ 90ರಷ್ಟು ಜನರು ರೈತರು. ವ್ಯವಸಾಯವೇ ಮುಖ್ಯ ಕಸಬು. ಪೂರ್ವದಲ್ಲಿ ಹಳ್ಳಿಗಳು ಉತ್ತಮ ಸ್ಥಿತಿಯಲ್ಲಿದ್ದುವು. ಜನರು ಸ್ವಾವಲಂಬಿಗಳಾಗಿದ್ದರು. ಬಡತನವೆಂಬುದು ಗೊತ್ತೇ ಇರಲಿಲ್ಲ. ಈಗ ಹಿಂದಿನ ಅನಂದಗಳು ಮರೆಯಾಗಿವೆ. ಈ ಆರ್ಥಿಕ ದುಃಸ್ಥಿತಿಯ, ನಿರುದ್ಯೋಗದ ಕಾಲಗಳಲ್ಲಿ ಶಾಲೆಗೆ ಬರುವ ಮಕ್ಕಳ ಪೈಕಿ ಶೇಕಡ 90ರಷ್ಟು ತಮ್ಮ ಕುಲ ಕಸಬನ್ನೇ ಅವಲಂಬಿಸುವುದರಿಂದ ನಾಳೆಯ ಜನಾಂಗವಾದ ಇಂದಿನ ಮಕ್ಕಳನ್ನು ಸುಖನಾಗರಿಕರನ್ನಾಗಿ ಮಾಡಲು ಶಾಲೆಯ ಕೂಟವು ಪ್ರಯತ್ನಿಸುತ್ತದೆ. ವ್ಯವಸಾಯವು ವೃತ್ತಿಗಳಲ್ಲಿ ಉತ್ತಮ ವೃತ್ತಿ ಎಂಬುವುದರಲ್ಲಿ ಸಂದೇಹವಿಲ್ಲ. ಆದರೆ ವ್ಯವಸಾಯ ಕ್ರಮವು ಉತ್ತಮಗೊಳ್ಳಬೇಕು. ಧಾನ್ಯಗಳಿಗೆ ಬೆಲೆ ಇಲ್ಲದ ಈ ಸಮಯದಲ್ಲಿ ಹೆಚ್ಚಿನ ಬೆಳೆಗಳನ್ನು

ಬೆಳೆಯಬೇಕು. Whoever could make two ears of corn or two blades of grass to grow upon a spot of ground where only one grew before would deserve better of mankind and do more essential service to his country than the whole race of politicians put together (Swift). ಈ ಮಾತು ಇನ್ನೂರು ವರ್ಷಗಳ ಹಿಂದೆ ಹೇಳಲ್ಪಟ್ಟರೂ ಇಂದಿಗೂ ಅದು ಸರಿಯಾಗಿ ಒಪ್ಪತಕ್ಕದ್ದಾಗಿದೆ. ಶಾಲೆಯ ತೋಟವು ವ್ಯವಸಾಯದ ವಿಷಯದಲ್ಲಿ ಸಂಪೂರ್ಣ ಜ್ಞಾನವನ್ನು ಕೊಡುತ್ತದೆಯೆಂದು ನಾವು ಹೇಳುವುದಿಲ್ಲ. ಜನಜೀವನಕ್ಕೆ ಬೇಕಾದ ಯಾವ ಯಾವ ಬೆಳೆಗಳು ಇಲ್ಲಿ ಬೆಳೆಯುತ್ತವೆ, ಹೇಗೆ ಬೆಳೆಯಬಹುದು, ಜನರು ಹೆಚ್ಚಾಗಿ ಮಾರಾಟ ಮಾಡದಿದ್ದರೂ ಕೊಂಡುಕೊಳ್ಳುವ ಅವಶ್ಯಕತೆಯನ್ನು ಹೇಗೆ ಕಡಮೆ ಮಾಡಬಹುದು ಎಂಬುವುದನ್ನು ತೋರಿಸುವುದೇ ನಮ್ಮ ಪ್ರಯತ್ನವಾಗಿದೆ. ಈ ವರ್ಷದ ಮಟ್ಟಿಗೆ ಕೆಲವು ಇಂಗ್ಲೀಷ್ ಮತ್ತು ಸ್ಥಳೀಯ ತರಕಾರಿಗಳನ್ನೂ, ಕಾಫಿ, ಕಿತ್ತಳೆ, ಪಪ್ಪಾಯ, ಅನಾನಸು, ಕಸಿ ಮಾಡಿದ ಕಿತ್ತಳೆ, ಮಾವಿನ ಗಿಡ, ಸೀಬೆ ಗಿಡಗಳನ್ನು ನೆಟ್ಟಿರುತ್ತೇವೆ.

"ಬಾಲಚಮು (ಸ್ಕಾಟಿಂಗ್). ಈ ಶಾಲೆಯಲ್ಲಿ ಸ್ಕಾಟ್ (ಬಾಲಚಮು) ಶಿಕ್ಷಣವನ್ನು ಒಮ್ಮೆ 1926ರಲ್ಲಿ ಪ್ರಾರಂಭಿಸಿದೆವು. ತಕ್ಕ ಪ್ರೋತ್ಸಾಹವಿಲ್ಲದೆ ಬಿಟ್ಟು ಹೋಯಿತು. ಪುನಃ ಈ ವರ್ಷ ಅದನ್ನು ಪ್ರಾರಂಭಿಸಿದ್ದೇವೆ. ಸರ್ಕಾರದ ಬೆಂಬಲವೂ ಇದೆ. ಈ ಶಿಕ್ಷಣವು ಎಷ್ಟು ಅವಶ್ಯವೆಂಬುದನ್ನು ಈ ಸಂಕ್ಷೇಪ ಟಿಪ್ಪಣಿಯಲ್ಲಿ ವಿವರಿಸಲು ಸಾಧ್ಯವಿಲ್ಲ. ಬಾಲಚಮುವಿಗೆ ಜಾತಿ ಮತಗಳ ವ್ಯತ್ಯಾಸವಿಲ್ಲ. ಅವನು ಯಾವಾಗಲೂ ನ್ಯಾಯವಾದ ಕೆಲಸವನ್ನು ಮಾಡಲು ಸಿದ್ಧವಾಗಿದ್ದಾನೆ. ಪರೋಪಕಾರವಾದ ಕೆಲಸಗಳನ್ನು ಮಾಡಬೇಕೆಂಬುದೇ ಅವನ ಮಂಗಳ ವಾಕ್ಯ. ತಾನು ಇತರರಿಗೆ ಎಂಬುವುದೇ ಅವನ ಧ್ಯೇಯ. ಬಾಲಚಮು ಪದ್ಧತಿಯು ಹುಡುಗರ ನಿಷ್ಕಳಂಕವಾದ ಗುಣಗಳನ್ನು ಪ್ರಚುರಪಡಿಸಿದೆ. ಮೊಟ್ಟಮೊದಲು ತಾಯಿತಂದೆಗಳು ಈ ಬಾಲಚಮು ಪದ್ಧತಿಯು ತಮ್ಮ ಮಕ್ಕಳ ಓದುಗಾರಿಕೆಯನ್ನು ಅಡ್ಡಗಟ್ಟುತ್ತದೆಂದು ನಂಬಿ ಅದರಲ್ಲಿ ಪೂರ್ತಿಯಾಗಿ ತಮ್ಮ ನಿರುತ್ಸಾಹವನ್ನು ತೋರಿಸುತ್ತಿದ್ದರು. ಆದರೆ ಬಾಲಚಮು ಪದ್ಧತಿಯು ಹುಡುಗರನ್ನು ವಿವೇಕಿಗಳನ್ನಾಗಿಯೂ ಸುಶಿಕ್ಷಿತರನ್ನಾಗಿಯೂ ಮಾಡಿದೆ ಎಂಬುವುದನ್ನು ಯಾರೂ ಮರೆಯಬಾರದು. ಪ್ರತಿಯೊಬ್ಬ ಬಾಲಚಮುವೂ ತನ್ನನ್ನು ತಾನೇ ಆಳಿಕೊಳ್ಳುವಷ್ಟು ಶಕ್ತಿಯುಳ್ಳವನಾಗಿರುತ್ತಾನೆ. ಮನುಷ್ಯನಿಗೆ ತನ್ನ ಯಾವ ಕೋರಿಕೆಯಾದರೂ ನೆರವೇರಬೇಕಾದರೆ ತನ್ನನ್ನು ತಾನೆ ಆಳಿಕೊಳ್ಳುವ ಶಕ್ತಿಯನ್ನು ಮೊದಲು ಸಂಪಾದಿಸಬೇಕು. ನಮ್ಮ ಯಾವ ಉದ್ದೇಶವೇ ಆಗಲಿ ಅದು ಸಂಸ್ಥೆಯ ಮೂಲಕ ನೆರವೇರಬೇಕಾದರೆ, ಸಮಾಜದ ಏಳಿಗೆಯಾಗಬೇಕಾದರೆ, ಜನಸಾಮಾನ್ಯರಲ್ಲಿ ಸ್ವಾತಂತ್ರ್ಯಾಭಿಲಾಷೆಯು ಹುಟ್ಟಬೇಕಾದರೆ ನಮ್ಮನ್ನು ನಾವೇ ಆಳಿಕೊಳ್ಳುವ ಶಕ್ತಿಯೂ, ಇಂದ್ರಿಯನಿಗ್ರಹ ಪಟುತ್ವವೂ ಅಗತ್ಯವಾಗಿದೆ. ಆ ಬಾಲಚಮು ಪದ್ಧತಿಯು ಹುಡುಗರಲ್ಲಿ ಉತ್ತಮ ಗುಣಗಳನ್ನು ಕಾರ್ಯತಃ ಹೊರತೋರ್ಪಡಿಸುವುದಲ್ಲದೆ ಅವರನ್ನು ಅತೀ ಉದಾರದ ಮನೋಭಿಪ್ರಾಯ ಉಳ್ಳವರನ್ನಾಗಿ ಮಾಡಿದೆ. ಆದ್ದರಿಂದ ಪ್ರಪಂಚದ ಪ್ರತಿಯೊಂದು ರಾಷ್ಟ್ರವೂ ಈ ಬಾಲಚಮು ಪದ್ಧತಿಯನ್ನು ಆಚರಿಸಿದೆ.

"ಮುಕ್ತಾಯ. ಸಂಸಾರದಲ್ಲಿ ಹೇಗೆ ಚಿಕ್ಕಮಕ್ಕಳಿಗೆ ತಂದೆತಾಯಿಗಳ ನೆರವು, ಸತಿಗೆ ಪತಿಯ ನೆರವು, ವೃದ್ಧ ಮಾತಾಪಿತೃಗಳಿಗೆ ವಯಸ್ಸಿಗೆ ಬಂದ ಮಕ್ಕಳ ನೆರವು ಅವಶ್ಯವೋ ಹಾಗೆಯೇ ಶಾಲಾಭಿವೃದ್ಧಿಗೆ ಶಿಕ್ಷಕರಿಗೆ ಪೋಷಕರ ನೆರವು ಅವಶ್ಯ. ಉತ್ತಮ ವ್ಯವಸಾಯ, ಉತ್ತಮ ವ್ಯಾಪಾರ, ಉತ್ತಮ ಜನಜೀವನವೆಂಬ ಸಹಕಾರ ಬೀಜಮಂತ್ರಗಳನ್ನು ಗುರಿಯಾಗಿ ಇಟ್ಟುಕೊಂಡು ಕೆಲವು ಮಟ್ಟಿಗೆ ಮುಂದೆ ವಿವರಿಸಿದ ರೀತಿಗಳಿಂದ ಬೋಧನೆಯನ್ನು ಕೊಡಲು, ಪೋಷಕರು ಹಳೇ ವಿದ್ಯಾರ್ಥಿಗಳು, ಶಾಲಾ ಹಿತಚಿಂತಕರು, ಶಾಲಾ ಮಾತೆಯ ಉನ್ನತಿಯನ್ನು

ಬಯಸಿ, ಶಿಕ್ಷಕರೊಂದಿಗೆ ಸಹಕರಿಸಿ ಕೆಲಸಮಾಡಿ ಮುಂದಿನ ಜನಾಂಗದ ಏಳಿಗೆಯನ್ನು ಬಯಸ ಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇವೆ."

೮

ಹೀಗೆ ಕ್ರಮಶಃ ಅಭಿವರ್ಧಿಸಿದ ನಂಜುಂಡನವರ ವ್ಯಕ್ತಿತ್ವ ಸಹಜವಾಗಿ ಅಖಿಳ ಕೊಡಗಿನ ವಿಸ್ತಾರರಂಗದಲ್ಲಿ ತನ್ನ ಪಾತ್ರವನ್ನು ಕಂಡುಕೊಳ್ಳಲು ಹವಣಿಸಿತು. ಕೊಡಗು ಉಪಾಧ್ಯಾಯರ ಸಂಘ 1929ರಲ್ಲಿ ಸ್ಥಾಪಿತವಾಗಿ ತನ್ನ ವಾರ್ಷಿಕಾಧಿವೇಶನವನ್ನು ಮಡಿಕೇರಿ, ವಿರಾಜಪೇಟೆಗಳಂಥ ಪಟ್ಟಣಗಳಲ್ಲಿ ನಡೆಸಿಕೊಂಡು ಬರುತ್ತಿತ್ತು. ನಾಪೋಕ್ಲು ಈ ಉತ್ಸವಕ್ಕೆ ಅತಿಥೇಯ ಆಗುವ ಅವಕಾಶ ಎಂದಾದರೂ ಪ್ರಾಪ್ತವಾದೀತೋ ಎಂದು ಸಂದೇಹಿಸುತ್ತಿದ್ದವರಿಗೆ ಜವಾಬೋ ಎಂಬಂತೆ 1932ರ ಅಧಿವೇಶನವನ್ನು ನಂಜುಂಡನವರು ಆ "ಮಹಾನಗರಕ್ಕೆ" ಆಹ್ವಾನಿಸಿಯೇ ಬಿಟ್ಟರು. ಆ ನಾಡಹಬ್ಬದ ಸಂಭ್ರಮ ಅಚ್ಚುಕಟ್ಟು ಆತ್ಮೀಯತೆ ನಂಜುಂಡನವರ ಅದ್ಭುತ ಸಂಘಟನ ಸಾಮರ್ಥ್ಯದ ಪ್ರಕಟಿತ ಪ್ರತೀಕಗಳು.

ಅದು ತನಕದ ವಿವಿಧ ಪ್ರಯೋಗಗಳಿಂದ ಗಳಿಸಿದ ಅನುಭವ. ಮಡಿಕೇರಿ ಮತ್ತು ವಿರಾಜಪೇಟೆ ನಿವಾಸಿ ವಿದ್ಯಾರ್ಥಿಗಳಿಗೆ ಕೇವಲ ಜನ್ಮಸ್ಥಳದ ಆಕಸ್ಮಿಕತೆಯಿಂದಾಗಿ ಒದಗುತ್ತಿದ್ದ ಸುಲಭ ಶಿಕ್ಷಣ ಸೌಕರ್ಯ ಮತ್ತು ಅದೇ ವೇಳೆಗೆ ನಾಪೋಕ್ಲು ವಿದ್ಯಾರ್ಥಿಗಳು ಅದೇ ಜನ್ಮಸ್ಥಳದ ಆಕಸ್ಮಿಕತೆಯಿಂದಾಗಿ ಪ್ರೌಢ ಶಿಕ್ಷಣ ಪಡೆಯಲು ಪಡುತ್ತಿದ್ದ ಬವಣೆ ಇವುಗಳಿಂದ ತೀವ್ರ ಪ್ರಭಾವಿತರಾದ ನಂಜುಂಡ ಪ್ರೌಢಶಾಲಾಶಿಕ್ಷಣಗಂಗೆಯನ್ನು ನಾಪೋಕ್ಲಿನ ಪಾತಾಳಕ್ಕೆ ಹರಿಸುವ ದಿಶೆಯಲ್ಲಿ ಯೋಚನಾಮಗ್ನರಾದರು. ಈ ಯೋಜನೆ ಅವರಿಂದ ಎಂಥ ತ್ಯಾಗ ಹಾಗೂ ಭಗೀರಥ ಪ್ರಯತ್ನಗಳನ್ನು ಬೇಡಬಹುದು ಎಂಬ ಅಂಶ ಆಗ ಸ್ವತಃ ಅವರಿಗೇ ಇದ್ದಿರಲಾರದು. ಫುಪ್ಪುಸಗಳು ಇನಿತಾದರೂ ಆಡಿ ಉಸಿರನ್ನು ಹಿಡಿದಿಟ್ಟಿರುವ ತನಕ ಕಾಲಿನ ಮೀನಖಂಡಗಳು ಕೊನೆಯ ರಜ್ಜುವಿನ ವರೆಗೂ ತೇದು ಹೋಗುವ ತನಕ, ಗುಂಡಿಗೆಯ ನಲ್ನುಡಿ ನಲುಗಿ ಕೇಳದಂತಾಗುವ ತನಕ ಧ್ರುವತಾರೆ ಎಡೆಗೆ ಮುನ್ನಡೆಯುತ್ತಿರುವುದೊಂದೇ ಅವರ ಕಾಯಕ.

1934ರಲ್ಲಿ "ನಾಪೋಕ್ಲು ಪ್ರೌಢಶಾಲೆ" ಎಂಬ ವಿಶಿಷ್ಟ "ಕೀಟ" ನಂಜುಂಡನವರ ಮಿದುಳನ್ನು ಹೊಕ್ಕಿತು. ಘನಸರ್ಕಾರ — ಅಂದರೆ ಬ್ರಿಟಿಷ್ ಚಕ್ರಾಧಿಪತ್ಯದ ಭಾರತದ ಪ್ರತಿನಿಧಿ ವೈಸರಾಯಿಯ ಬಂಟ ಕೊಡಗಿನ ಚೀಫ್ ಕಮಿಷನರ್ — ಕರುಣಿಸಬೇಕಾದ ವರವದು, ಖಾಸಗಿ ಪ್ರಯತ್ನ ಇಲ್ಲವೇ ನೆರವಿನಿಂದ ಕೈಗೆಟುಕಬಹುದಾದ ಹಣ್ಣು ಸುತರಾಂ ಅಲ್ಲ. ಈ ದಿಶೆಯಲ್ಲಿ ಘನ ಸರ್ಕಾರದ ಕೃಪಾಕಟಾಕ್ಷವನ್ನು ಹರಿಸಲು ನಂಜುಂಡನವರು ಮಾಡಿದ ಪ್ರಯತ್ನ ಫಲಕಾರಿ ಆಗಲಿಲ್ಲ. ಮಡಿಕೇರಿಯಲ್ಲಿ ಮಂಡಿಸಿದ್ದ ಅಧಿಕಾರಿಗಳ ಸೂಕ್ಷ್ಮದೃಷ್ಟಿಯಲ್ಲಿ ಅಥವಾ ಅವರ ಮೇಲೆ ಬೆಂಗಳೂರಿನಲ್ಲಿ ಸುಖಾಸೀನರಾಗಿದ್ದ ವರಿಷ್ಠರ ದಿವ್ಯಾಭಿಪ್ರಾಯದಲ್ಲಿ ನಾಪೋಕ್ಲಿಗೆ ಮಾತ್ರ ಪ್ರೌಢಶಾಲೆಯನ್ನು ಮಂಜೂರು ಮಾಡಿದರೆ ಸಾಕೇ? ನಾಪೋಕ್ಲಿಗಿಂತ ದೊಡ್ಡವಾದ ಸೋಮವಾರಪೇಟೆ ಪೊನ್ನಂಪೇಟೆಗಳಿಗೂ ಮಾಡಬೇಡವೇ? ಆಗ ಖಜಾನೆಗೆ ತಾಗುವ ಒಟ್ಟು ವೆಚ್ಚವೆಷ್ಟು? ಅದನ್ನು ಭರಿಸುವುದು ಸಾಧ್ಯವಾದೀತೇ? ಹೀಗೆ ಅಪರಿಹಾರ್ಯ ಪ್ರಶ್ನೆಗಳ ಕಂಪದಲ್ಲಿ ಹುಗಿದು ಹೋದ ನಾಪೋಕ್ಲು ಪ್ರೌಢಶಾಲೆ ಮೇಲೆ ಏಳಲೇ ಇಲ್ಲ, ಯಥಾಸ್ಥಿತಿ ಮುಂದುವರಿಯಿತು.

೯

ಎರಡನೆಯ ಮಹಾಯುದ್ಧದ ಕಾಳಮೇಘಗಳು ಕ್ರಮೇಣ ದಟ್ಟಯಿಸುತ್ತಿದ್ದುವು.

ಭಾರತದ ಆರ್ಥಿಕ ಸ್ಥಿತಿ ತೀರ ನಿಮ್ನ ಮಟ್ಟಕ್ಕೆ ಕುಸಿದಿತ್ತು. ದೇಶವಿಡೀ ಅನಾಥ ಪ್ರಜ್ಞೆಯ ಬಿಗಿ ಹಿಡಿತದಿಂದ ವಿಲವಿಲನೆ ಒದ್ದಾಡುತ್ತಿತ್ತು. ಅಂಥ ದಿನಗಳಲ್ಲಿ ನಂಜುಂಡನವರ ಒಂಟಿದನಿ ನಾಪೋಕ್ಲು ಪ್ರೌಢಶಾಲೆಯ ಕೂಗು, ಕೊಟ್ಟಮುಡಿ ಪರಂಬನ್ನು ದಾಟದಿದ್ದುದು ಆಶ್ಚರ್ಯವೇನಲ್ಲ.

ಯುದ್ಧದ ವಜ್ರಾಘಾತ ಮತ್ತು ವರ್ಷಾಘಾತ ಅತಿ ತೀವ್ರವಾಗಿ ಬಡಿದೇ ಬಡಿದುವು. ಜೀವನ ಮೌಲ್ಯಗಳ ಸಾಮೂಹಿಕ ಹಾಗೂ ಸಾರ್ವತ್ರಿಕ ನಾಶ ಭೀಕರ ವ್ಯಾಪಾರವಾಯಿತು. ಕೊಡಗಿನ ಕಡುಗಲಿಗಳು, ಈ ಹಿಂದೆ ಹೇಳಿದಂತೆ, ಜಾಗತಿಕ ರಣಾಂಗಣದಲ್ಲಿ ವೀರಯೋಧರಾಗಿ ಕಾದಾಡಿದರು. ಇತ್ತ ದೇಶದಲ್ಲಿ ಸ್ವಾತಂತ್ರ್ಯಸಮರದ ರಂಗೂ ಏರುತ್ತಿತ್ತು. ಭಾರತದ ಅಂತಃಪ್ರಜ್ಞೆ ದೀರ್ಘಕಾಲದ ಶಿಶಿರನಿದ್ರೆಯಿಂದ ಎದ್ದೇಳಲು ಉದ್ಯುಕ್ತವಾಗಿತ್ತು. ಆಳರಸರಿಗೆ ಭಾರತ ನುಂಗಲಾರದ ಮತ್ತು ಉಗುಳಲಾಗದ ತುತ್ತಾಗಿ ಕುತ್ತಾಗಿ ಕತ್ತಿನಲ್ಲಿ ಸಿಕ್ಕಿಹಾಕಿಕೊಂಡಿತ್ತು. ಇಂಥ (ಅ)ವೇಳೆಯಲ್ಲಿ ಘನಸರ್ಕಾರ ಭಾರತಾದ್ಯಂತ ರಾಷ್ಟ್ರ ಪುನಾರಚನಾ ಕಾರ್ಯವನ್ನು ಉಜ್ಜುಗಿಸಿತು (1943).

ಕೊಡಗು ಸರ್ಕಾರವೂ ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾಗಿ ಕೆಲವು ಯೋಜನೆಗಳನ್ನು ರೂಪಿಸಿತು. ನಾಡಿನ ಮೂರನೆಯ ಹಿರಿಪಟ್ಟಣವಾದ ಪೊನ್ನಂಪೇಟೆಯಲ್ಲಿ ಪ್ರೌಢಶಾಲೆಯ ಸ್ಥಾಪನೆ ಈ ಯೋಜನೆಗಳ ಪೈಕಿ ಒಂದು. ಇಂಥ "ಮಲತಾಯಿ ಧೋರಣೆ"ಯನ್ನು ಸೋಮವಾರಪೇಟೆ ಸಹಿಸೀತೇ? ಉತ್ತರ ಕೊಡಗಿನ ಮುಕುಟಮಣಿ, ಕೊಡಗಿನ ಅತ್ಯಂತ ಸಿರಿವಂತ ಪೇಟೆ, ಶಿಕ್ಷಣರಂಗದಲ್ಲಿ ಬಲು ಹಿಂದುಳಿದಿದ್ದ ನೆಲ ಸೋಮವಾರಪೇಟೆ ದಕ್ಷಿಣ ಕೊಡಗಿನ ನೂಪುರ, ಕೊಡಗಿನ ಹಿರಿವಣಿಜ ಕೇಂದ್ರ, ಶಿಕ್ಷಣರಂಗದಲ್ಲಿ ಸಾಕಷ್ಟು ಮುಂದುವರಿದಿದ್ದ ನೆಲ ಪೊನ್ನಂಪೇಟೆಯ ಎದುರು ತನ್ನ ಹಕ್ಕುಬಾಧ್ಯತೆಗಳನ್ನು ಸ್ಥಾಪಿಸಲು "ಕತ್ತಿ ಝುಳಪಿಸಿತು". ಅಂಗೈ ಅಗಲದ ಕೊಡಗಿನ ರಾಜಕೀಯ ಕಳದಲ್ಲಿ ಕಾವೇರಿತು, ಚಾಬಸಿಯಲ್ಲಿ ಝುಂಝಾವಾತ ತಾಂಡವವಾಡಿತು! ಹೀಗೆ ಉತ್ತರದ ಮತ್ತು ದಕ್ಷಿಣದ (ಕಾವೇರಿ ನದಿ ಕೊಡಗನ್ನು ಉತ್ತರ ಮತ್ತು ದಕ್ಷಿಣ ಕೊಡಗುಗಳಾಗಿ ವಿಭಾಗಿಸಿದೆ; ನಾಪೋಕ್ಲು ಕಾವೇರಿಯ ದಕ್ಷಿಣದಂಡೆಯಲ್ಲಿದೆ; ಮಡಿಕೇರಿ ಉತ್ತರ ಕೊಡಗಿನಲ್ಲೂ ವಿರಾಜಪೇಟೆ ದಕ್ಷಿಣ ಕೊಡಗಿನಲ್ಲೂ ಇವೆ.) ಬಲಿಷ್ಠ "ಕೋಣನೆರಡುಂ ಹೋರೆ" ಮಡಿಕೇರಿಯಲ್ಲಿದ್ದ ಸರ್ಕಾರ ವಸಿಷ್ಠ ವಿಶ್ವಾಮಿತ್ರರ ವಾಗ್ಯುದ್ಧದ ವೇಳೆ ಅಧ್ಯಕ್ಷತೆ ವಹಿಸಿದ್ದ ದೇವೇಂದ್ರನಂತೆ ಚಿಂತಾಜನಕ ಪರಿಸ್ಥಿತಿಗೆ ಈಡಾಯಿತು. ಇಂಥ ಅನನುಕೂಲ ಸನ್ನಿವೇಶದಲ್ಲಿ, ರಾಜಕೀಯವಾಗಿ ಲಘುತೂಕದ, ಆರ್ಥಿಕವಾಗಿ ನಿಮ್ನ ಮಟ್ಟದ ಆದರೆ ಶೈಕ್ಷಣಿಕವಾಗಿ ಅಧಿಕಾಸಕ್ತಿ ಮತ್ತು ಅರ್ಹತೆ ಇದ್ದ ನಾಪೋಕ್ಲಿನ ಮೊರೆಗೆ ಕಿವಿಗೊಡುವವರಾರು? ಇಂದಿನಂತೆ ಅಂದು ಕೂಡ ಆದ್ಯತೆಯನ್ನು ಕುರಿತಂತೆ ಖುದ್ದು ಶಿಕ್ಷಣರಂಗದಲ್ಲಿಯೂ ಶಿಕ್ಷಣಾರ್ಹತೆಗೆ ಅಂತಿಮಸ್ಥಾನವೇ ಗತಿ ಆಗಿತ್ತು – ಗಲಭೆ ಗಾಜಿ ಡೊಂಬಿ ಅದರ ಲಕ್ಷಣಗಳಲ್ಲವಾದ್ದರಿಂದ.

ಕಾರ್ಯಚತುರ ಮತ್ತು ಸಂಘಟನ ಕುಶಲಿ ನಂಜುಂಡ ತಮ್ಮ ಆಶಯವನ್ನು ಕೈಗೂಡಿಸಿಕೊಳ್ಳಲು ಕಂಡುಕೊಂಡದ್ದು ಬೇರೆಯೇ ಹಾದಿಯನ್ನು. ಅವರ ಯೋಜನೆ ಹರಿದ ಘಾಟ ಇದು: ನೇರವಾಗಿ ತಂದೆತಾಯಂದಿರ ಮುಂದೆ ಈ ಸವಾಲನ್ನು ಇಡುವುದು; ಮಳೆಹನಿಗಳು ಒಂದುಗೂಡಿ ಕಾವೇರಿಯಲ್ಲಿ ನೆರೆ ಏರಬಹುದಾದರೆ ಜನಮನಗಳು ಒಟ್ಟು ಸೇರಿ ನಾಪೋಕ್ಲಿನಲ್ಲಿ ಪ್ರೌಢಶಾಲೆ ಅರಳಬಾರದೇಕೆ? ಯುದ್ಧದ "ಕೃಪೆ"ಯಿಂದಾಗಿ ಹಳ್ಳಿಗರ ಕೈಯಲ್ಲಿ ದುಡ್ಡು ಕುಣಿಯುತ್ತಿತ್ತು; ತಮ್ಮ ಮಕ್ಕಳಿಗೆ ವಿದ್ಯೆ ನೀಡುವುದರ ಅವಶ್ಯಕತೆ ಅವರಿಗೆ ಚೆನ್ನಾಗಿ ಮನದಟ್ಟಾಗಿತ್ತು; ತಮ್ಮ ಬಾಳ್ವೆಯಲ್ಲಿ ಸುಧಾರಣೆ ಸಾಧಿಸಬೇಕೆಂಬ ಹಂಬಲ ಅವ

ರನ್ನು ಹೊಸ ಹಸಿರುಗಳ ಅರಸಿಕೆಯತ್ತ ತಳ್ಳುತ್ತಿತ್ತು. ಈ ಅಮೂರ್ತ ಆಶೋತ್ತರಗಳಿಗೆ ಮೂರ್ತ ರೂಪ ನೀಡಿದ್ದಾದರೆ ನಾಪೋಕ್ಲಿನಲ್ಲಿ ಪ್ರೌಢಶಾಲೆ ಮೈದಳೆಯುವುದು ಖಾತ್ರಿ ಎಂದು ನಂಜುಂಡನವರು ಭಾವಿಸಿದರು.

ಕೊಡಗಿನಲ್ಲಿ ಸಹಕಾರಾಂದೋಲನ ಆಳವಾಗಿಯೂ ಅಗಲವಾಗಿಯೂ ನೆಲೆ ಊರಿತ್ತು ಎಂದು ಈ ಹಿಂದೆ ಹೇಳಿರುವುದು ಸರಿಯಷ್ಟೆ. ಈ ಸಹಕಾರಕ್ಷೇತ್ರದಲ್ಲಿ ರಚನಾತ್ಮಕ ಸೇವೆ ಸಲ್ಲಿಸುತ್ತ ಸಮಸ್ತ ಜನರ ಪ್ರೀತಿಗೌರವಗಳಿಗೆ ಪಾತ್ರರಾಗಿದ್ದವರು ಪಟ್ಟಮಾಡ ಪೊನ್ನಪ್ಪನವರು. ಇವರು ನಾಪೋಕ್ಲಿನ ನೆರೆ ಗ್ರಾಮದವರು. ಇವರದು ಅಖಿಳ ಕೊಡಗು (ಆಕುಟ್ಟಕೊಡ್ಲೀಪೇಟೆ) ವ್ಯಕ್ತಿತ್ವ. ನಾಡಿನ ಜನಮನದ ಹಾಗೂ ಆರ್ಥಿಕತೆಯ ನಾಡಿಮಿಡಿತವನ್ನು ಚೆನ್ನಾಗಿ ಬಲ್ಲವರಿವರು. ಈ ಹಿರಿಯರ ಸಲಹೆಯನ್ನೂ ನೆರವನ್ನೂ ನಂಜುಂಡನವರು ಯಾಚಿಸಿದರು. ನಾಪೋಕ್ಲಿನ ಅವಶ್ಯಕತೆ ಅರ್ಹತೆಗಳನ್ನೂ ನಂಜುಂಡನವರ ಯೋಗ್ಯತೆ ಪ್ರಾಮಾಣಿಕತೆಗಳನ್ನೂ ಚೆನ್ನಾಗಿ ಬಲ್ಲವರಾಗಿದ್ದ ಪೊನ್ನಪ್ಪನವರು ತಮ್ಮ ಘನ ವ್ಯಕ್ತಿತ್ವವನ್ನು "ನಾಪೋಕ್ಲು ಪ್ರೌಢಶಾಲೆ" ಎಂಬ, ಕೈಲಾಗದವರ ಕಟಕಿ ಮಾತಿನಲ್ಲಿ "ಹುಚ್ಚು ಯೋಜನೆ"ಗೆ, ಧಾರೆ ಎರೆಯಲು ಮುಂದಾದರು. ಹೀಗೆ ಶಿಕ್ಷಣಾನುಭವ ಮತ್ತು ಸಹಕಾರಾನುಭವ ಎರಡರ ಅವಿಭಾಜ್ಯ ಅಖಂಡ ಬೆಸುಗೆ ಏರ್ಪಟ್ಟಿತು.

ಪೊನ್ನಪ್ಪನವರೂ ಇತರ ಹಿತೈಷಿಗಳೂ ನಂಜುಂಡನವರ ಮುಂದೆ ಪ್ರಾಯೋಗಿಕ ಸಮಸ್ಯೆಯೊಂದನ್ನು ಬಿಂಬಿಸಿದರು: ನಾಪೋಕ್ಲಿನಲ್ಲಿ ಪ್ರೌಢಶಾಲೆ ಪ್ರಾರಂಭವಾದ ಪಕ್ಷದಲ್ಲಿ ನಂಜುಂಡನವರೇ ಅದರ ಪ್ರಥಮ ಮುಖ್ಯೋಪಾಧ್ಯಾಯರಾಗಬೇಕಾದದ್ದು ಸರಿಯಾದ ಕ್ರಮ; ಆದರೆ ಆ ಹುದ್ದೆಗೆ ಅವಶ್ಯವಾಗುವ ವಿದ್ಯಾರ್ಹತೆ ಪಡೆಯದ ನಂಜುಂಡ ತಾವೇ ಕಟ್ಟಿದ ಮನೆಗೆ ಒಡೆಯನಾಗಿ ಬೇರೆ ಒಬ್ಬಾತನನ್ನು ನೆಲೆಗೊಳಿಸಬೇಕಾಗುತ್ತದೆ. ಇದಕ್ಕೇನು ಪರಿಹಾರ ?

"ನಾಪೋಕ್ಲು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ನಾನಾಗುವೆನೋ ಇಲ್ಲವೋ ಎನ್ನುವುದು ನನ್ನ ದೃಷ್ಟಿಯಿಂದ ಸಮಸ್ಯೆಯೇ ಇಲ್ಲ. ಮನುಷ್ಯನ ಯೋಗ್ಯತೆ ಅವನು ನಿರ್ವಹಿಸುವ ಪಾತ್ರದಿಂದ, ಅವನ ಸಮಾಜೋಪಯುಕ್ತತೆಯಿಂದ, ಸಮಗ್ರವಾಗಿ ಅವನು ಬದುಕನ್ನು ಬಾಳುವ ಬಗೆಯಿಂದ ನಿರ್ಣೀತವಾಗುವುದೇ ವಿನಾ ಅವನ ಹುದ್ದೆಯಿಂದ ಅಲ್ಲ. ಮೊದಲು ಪ್ರೌಢಶಾಲೆ ನೆಲೆಗೊಳ್ಳಲಿ. ಅದರ ಹಿರಿತನವನ್ನು ಗುಣವಂತರೂ ವಿದ್ಯಾಪರಿಣತರೂ ಸಮರ್ಥರೂ ಆಗಿರುವ ಮುಖ್ಯೋಪಾಧ್ಯಾಯರಿಗೆ ಸಂತೋಷದಿಂದ ಒಪ್ಪಿಸಿಕೊಡೋಣ. ಇಂಥ ಗುರುಕುಲಾಶ್ರಮದಲ್ಲಿ ಅರಳುವ ನಮ್ಮ ಎಳೆಮುಗುಳುಗಳನ್ನು ನೋಡಿ ಹರ್ಷಿಸೋಣ." ಇದು ನಂಜುಂಡನವರ ಸ್ಪಷ್ಟ ಮತ್ತು ಪರಿಶುದ್ಧ ನಿಲವಾದ್ದರಿಂದ ಸಮಸ್ಯೆಗೆ ತಲೆ ಎತ್ತಲು ಕೂಡ ಅವಕಾಶ ಒದಗಲಿಲ್ಲ. ಶಕುಂತಳೆಯನ್ನು ಕಣ್ವರು ದುಷ್ಯಂತನಿಗೆ ಒಪ್ಪಿಸಿಕೊಟ್ಟಾಗಿನ ಮನೋಭಾವವನ್ನು ಇದು ನಮ್ಮ ಸ್ಮರಣೆಗೆ ತರುತ್ತದೆ.

ನಂಜುಂಡಪೊನ್ನಪ್ಪ ಬಲಯುಗ್ಮವನ್ನು ಬೆಂಬಲಿಸಿದವರು. ನಂಜುಂಡನವರ ಸಹೋದ್ಯೋಗಿಗಳಾಗಿದ್ದ ಎಂ. ಎಸ್. ಸುಬ್ರಾಯರು ಮತ್ತು ಎಂ. ಆರ್. ತಿಮ್ಮಪ್ಪಯ್ಯನವರು. ಶ್ರೇಷ್ಠ ಸಂಘಟಕರೂ ಸಮಾಜಸೇವಾನಿರತರೂ ಆಗಿದ್ದ ಸುಬ್ರಾಯರು ಪ್ರೌಢಶಾಲೆಯ ಯೋಜನೆಯನ್ನು ಸಿದ್ಧಪಡಿಸಿದರೆ ಇಂಗ್ಲಿಷ್ ಸಾಹಿತ್ಯವಿದರೂ ಗಣಿತ ಶಾಸ್ತ್ರಪಾರಂಗತರೂ ಆಗಿದ್ದ ತಿಮ್ಮಪ್ಪಯ್ಯನವರು ಪ್ರೌಢಶಾಲೆಯ ನೀಲನಕ್ಷೆಯನ್ನು ತಯಾರಿಸಿ ಅದನ್ನು ಗಣಿತದ ಗಟ್ಟಿ ಚೌಕಟ್ಟಿನೊಳಗೆ ಅಳವಡಿಸಿದರು.

೧೦

ಇಂದು (1978) ಪೊನ್ನಪ್ಪನವರಾಗಲಿ ತಿಮ್ಮಪ್ಪಯ್ಯನವರಾಗಲಿ ಬದುಕಿಲ್ಲ. ಅವರ ಕೃತಿಯಾದ ನಾಪೋಕ್ಲು ಪ್ರೌಢಶಾಲೆ ಅವರ ಹಿರಿ ಚೇತನಗಳಿಗೆ ಸಾಕ್ಷಿಯಾಗಿ ನಳನಳಿಸುತ್ತಿದೆ. ಸುದೈವದಿಂದ ಸುಬ್ರಾಯರು ಇನ್ನೂ ಚಟುವಟಿಕೆಯಿಂದ ಇದ್ದಾರೆ.* ಇವರ ಬಗ್ಗೆ ನಂಜುಂಡನವರು ಪ್ರೀತಿಯಿಂದ, ಅರ್ಥಪೂರ್ಣವಾಗಿ ಹೇಳಿರುವ ಮಾತು ಸುಬ್ರಾಯರ ಸಂಘಟನ ಕೌಶಲಕ್ಕೆ ಹಿಡಿದ ಕನ್ನಡಿಯಂತಿದೆ "ಇವರು ಮೈಸೂರಿನ ದಿವಾನ್ ಪೂರ್ಣಯ್ಯನವರ ಹಾಗೆ ಬುದ್ಧಿವಂತಿಕೆಯ ಇನ್ನೊಂದು ಹೆಸರು. ದುಡಿವವರು ನಾವು. ಹೇಗೆ ದುಡಿದರೆ ಜಯಸಿದ್ಧ ಎಂಬ ಮಂತ್ರಾಲೋಚನೆ ನೀಡುವವರು ಇವರು. ಕಾಗದ ದಪ್ತರ ಲೆಕ್ಕಾಚಾರ ಇವರ ವಶ. ಇಂಥ ಪೂರ್ಣಯ್ಯ ಅಂಥ ತಿಮ್ಮಪ್ಪಯ್ಯ ಇಲ್ಲವಾಗಿದ್ದರೆ ಪೊನ್ನಪ್ಪನವರ ಮತ್ತು ನನ್ನ ಕೆಲಸ ಕಾವೇರಿ ನೀರಿನೊಡನೆ ಕೊಚ್ಚಿಹೋಗುತ್ತಿತ್ತು. ಆದ್ದರಿಂದಲೇ ನಾನು ಮತ್ತೆ ಮತ್ತೆ ಎಲ್ಲರೊಡನೆ ಹೇಳುತ್ತಿರುವುದು – ನಾನು, ನಂಜುಂಡ, ಈ ಕೆಲಸ ಮಾಡಲಿಲ್ಲ, ನಾವೆಲ್ಲರೂ ಒಟ್ಟಾಗಿ ಮಾಡಿದೆವು, ನಾಪೋಕ್ಲಿನ ಮಹಾಜನತೆ ಇದನ್ನು ನಮ್ಮಿಂದ ಮಾಡಿಸಿತು ಎಂಬುದಾಗಿ."

ಅಂದು (1943) ಪೂರ್ಣಯ್ಯನವರು ನೀಡಿದ ಮಂತ್ರಾಲೋಚನೆಯ ಸಾರವಿಷ್ಟು. ನಾಪೋಕ್ಲು ಪ್ರೌಢಶಾಲೆಯ ಯೋಜನೆಯನ್ನೂ ಅದನ್ನು ಜನತೆಯ ನೆರವಿನಿಂದ ಕಾರ್ಯಗತವಾಗಿಸುವ ವಿಧಾನವನ್ನೂ ನಾಪೋಕ್ಲು ಮಹಾಜನತೆಯ ಮುಂದೆ ಇರಿಸಿ ವಿವರಿಸತಕ್ಕದ್ದು; ಅವರ ಪರವಾನಿಗೆ ಪಡೆದು ಅವರಿಂದ ಧನಸಂಗ್ರಹ ಮಾಡತಕ್ಕದ್ದು; ಈ ಜನತಾ ಬಂಡವಾಳದ ಗಟ್ಟಿ ನೆಲಗಟ್ಟಿನ ಮೇಲೆ ಪ್ರೌಢಶಾಲೆ ಕಟ್ಟಲು ಸರಕಾರದ ಅನುಮತಿ ಕೇಳತಕ್ಕದ್ದು; ಜನರ ಈ ಪ್ರಾಮಾಣಿಕ ಪ್ರಯತ್ನವನ್ನು ಸರಕಾರ ಖಂಡಿತ ಬೆಂಬಲಿಸದಿರದು.

ನಂಜುಂಡ ಪೊನ್ನಪ್ಪ ಕಾರ್ಯೋದ್ಯುಕ್ತರಾದರು. ಮಹಾಸಭೆ ವಿಜೃಂಭಣೆಯಿಂದ ನೆರೆಯಿತು. ಜನರ ಹುಚ್ಚು ಉತ್ಸಾಹದ ಹೊನಲಿನಲ್ಲಿ ತಿಳಿದವರೂ ತಿಳಿಯದವರೂ ಏಕಪ್ರಕಾರವಾಗಿ ಭಾಷಣ ಬಿಗಿದದ್ದೇ ಬಿಗಿದದ್ದು. ಪ್ರೌಢಶಾಲೆ, ಕಾಲೇಜು, ವಿಶ್ವವಿದ್ಯಾಲಯ ಇವೆಲ್ಲ ಪದಗಳೂ ಅಡೆ ತಡೆ ಇಲ್ಲದೆ ಸಂದರ್ಭವೊ ಅಸಂದರ್ಭವೊ ವಿಪುಳವಾಗಿ ಖರ್ಚಾದುವು, ಕಾವೇರಿಗೆ ಮಹಾಪೂರ ಬಂದಾಗ ಮನೆಯೇನು ಮರವೇನು ಜೊಂಡೇನು ಕಲ್ಲೇನು ಎಲ್ಲವನ್ನೂ ನೀರು ಹೊಡಕೊಂಡು ಹರಿಯುವಂತೆ. ಪ್ರೌಢಶಾಲೆಯನ್ನು ಮುಂದಿನ ಜೂನಿನಲ್ಲೇ (1944) ಪ್ರಾರಂಭಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಆದರೆ ಹಣದ ವಿಚಾರ?

ನಲವತ್ತು ಸಾವಿರ ರೂಪಾಯಿಗಳಷ್ಟು ಮೂಲಧನವನ್ನು ಒದಗಿಸುವ ತಾಲೂಕುಗಳಿಗೆ– ನಾಪೋಕ್ಲಾಗಲಿ, ಪೊನ್ನಂಪೇಟೆ ಆಗಲಿ, ಸೋಮವಾರಪೇಟೆ ಆಗಲಿ ಬೇರೆ ಯಾವುದೇ ತಾಲೂಕಾಗಲಿ – ತಲಾ ಒಂದರಂತೆ ಪ್ರೌಢಶಾಲೆಯನ್ನು ಮಂಜೂರು ಮಾಡಬಹುದೆಂದು ಸರಕಾರ ಪ್ರಕಟಿಸಿತ್ತು. ಇದೇನೂ ಸಾಧಾರಣ ಮೊತ್ತವಾಗಿರಲಿಲ್ಲ. 1943ರ ನಾಪೋಕ್ಲಿನ ಹಿನ್ನೆಲೆಯಲ್ಲಿ ಹೇಳುವುದಾದರೆ ಸಾಕ್ಷಾತ್ ವಿಶ್ವಾಮಿತ್ರ ಸತ್ಯ ಹರಿಶ್ಚಂದ್ರನಿಂದ ಪಡೆಯಲು ಇಚ್ಛಿಸಿದ ಸುವರ್ಣ ರಾಶಿಯಷ್ಟೇ ಆಗಿತ್ತು. ಸರಕಾರದ ಈ ನಕ್ಷತ್ರಿಕತಗಾದೆಯಿಂದ ಬಿಡುಗಡೆ ಹೇಗೆ? ಉಂಟೇ? ಜನರೇ ಪರಿಹರಿಸಬೇಕು. ಆದರೆ ಜನರ ಮಾತಿನ ಅಬ್ಬರ ನಾಣ್ಯದ ಠಣತ್ಕಾರದ ಎದುರು ದಿಢೀರನೆ ಕುಸಿದು ಶ್ಮಶಾನಮೌನ ಸರ್ವವ್ಯಾಪಿ ಆಗುವುದು ವಾಡಿಕೆ ಎಂಬ ಸತ್ಯಸಂಗತಿ ನಂಜುಂಡ

---

* 31–7–1978ರಂದು ಎಂ. ಎಸ್. ಸುಬ್ರಾಯರು ಹಠಾತ್ತಾಗಿ ಮೃತರಾದರು. ಆ ಮೊದಲೇ ಈ ಲೇಖನ ಸಿದ್ಧವಾಗಿತ್ತು. ಆದರೆ ಅವರು ಇದನ್ನು ಓದುವ ಅವಕಾಶ ಒದಗಲಿಲ್ಲ.

ನವರಿಗೆ ತಿಳಿದಿತ್ತು. ಅವರು ಅತಿ ಕೌಶಲದಿಂದ ಚಂದಾ ಎತ್ತುವುದರ ಬಗ್ಗೆ ಮಾತಾಡಿದರು. ದಾನ ಧರ್ಮಗಳ ಭವ್ಯ ಪರಂಪರೆ ಇರುವ ತಮ್ಮ ಜನರ ಸಂಸ್ಕೃತಿಯನ್ನು ಹಾಡಿ ಹೊಗಳಿದರು. ಸುದಾಮನ ಅಪಲಕ್ಕಿಯ ಕತೆ ಹೇಳಿದರು. ತಾವೂ ತಮ್ಮ ಸಹೋದ್ಯೋಗಿಗಳೂ ಹೇಗೆ ತಮ್ಮ ಅಲ್ಪ ವೇತನದ ಒಂದು ಅಂಶವನ್ನು ಈ ಮಹಾಕಾರ್ಯಕ್ಕೆ ಮುಡಿಪಾಗಿಟ್ಟಿದ್ದೇವೆ ಎಂಬುದನ್ನು ವಿವರಿಸಿದರು. ಆ ಸಭೆಯಲ್ಲಿಯೇ ಕನಿಷ್ಠ ಪಕ್ಷ ಎರಡು ಸಾವಿರ ರೂಪಾಯಿಗಳಾದರೂ ಸಂಗ್ರಹವಾಗಬೇಕೆಂಬ ತಮ್ಮ ಸದಾಶಯವನ್ನ ವ್ಯಕ್ತಪಡಿಸಿದರು. ಆದರೆ ಸಾರ್ವಜನಿಕ ಕಾರ್ಯಗಳಿಗೆ ಹಣ ಹರಿಯುವುದು ಅತಿ ದಾಕ್ಷಿಣ್ಯದಿಂದಲೇ. ರಾಜನಿಗೆ ಹಾಲಿನ ಕೊಡಗಳ ಬದಲು ಪ್ರತಿಯೊಬ್ಬ ಪ್ರಜೆಯೂ ನೀರಿನ ಕೊಡವನ್ನೇ ಒಯ್ದು ಸುರಿದ ಕತೆ ಕೇಳಿಲ್ಲವೇ ? ಹಾಗೆ !

ನಾಪೋಕ್ಲಿನ ಆ ಮಹಾಸಭೆಯ ಜನಪ್ರವಾಹದಿಂದ ಅಂದು ಹರಿದು ಬಂದದ್ದು ಹಣದ ಹೊನಲಲ್ಲ, ನಾಣ್ಯದ ಹನಿಗಳು ಮಾತ್ರ. ಸಂಗ್ರಹವಾದ ನಗದು ಹಣ ಕೇವಲ ನೂರು ರೂಪಾಯಿಗಳು. ಆ ಸಾವಿರದೊಂಭೈನೂರರ ಕೊರತೆ ನಂಜುಂಡನವರ ಉತ್ಸಾಹವನ್ನು ಪಾತಾಳಕ್ಕೆ ಕೆಡೆಸಿತು. ಅವರು ಮೂರನೆಯ ಕಣ್ಣನ್ನು ತೆರೆದೇ ಮಾತಾಡಿದರು. “ಇದು ನಮ್ಮ ಜನತೆಗೆ ಭೂಷಣ ಖಂಡಿತ ಅಲ್ಲ. ನಾವಿಂಥ ದಟ್ಟ ದರಿದ್ರ ಸ್ಥಿತಿಗೆ ಇಳಿದಿಲ್ಲ. ಇಲ್ಲಿತನಕ ವಿದ್ಯೆ ಇಲ್ಲದ ನಮ್ಮ ತರುಣರು ಪೇಟೆ ಪಟ್ಟಣಗಳಿಗೆ ಹೋಗಿ ಪೇದೆ ಜವಾನರಾಗಿ ಜೀವನಯಾಪನೆ ಮಾಡುತ್ತಿದ್ದರು. ಇನ್ನು ಮುಂದಕ್ಕೂ ನಾಪೋಕ್ಲುಕಾರರು ಶಾಶ್ವತವಾಗಿ ಪೇದೆ ಜವಾನರು ಆಗಲು ಮಾತ್ರ ಲಾಯಕ್ಕಾದ ಮಂದಿ, ಎತ್ತರದ ಎಲ್ಲ ಕೆಲಸಗಳಿಗೂ ಅವರು ಶುದ್ಧ ನಾಲಾಯಕ್ಕು ಎಂಬುದನ್ನು ನೀವು ಚೆನ್ನಾಗಿ ಪ್ರದರ್ಶಿಸಿದ್ದೀರಿ.”

ಮಾತಿನ ಮೊನೆ, ಕೆಂಗಣ್ಣಿನ ಇರಿತ, ಸನ್ನಿವೇಶದ ಕಟು ಸತ್ಯ ಜನತೆಗೆ ತಗಲಿದುವು. ಒಂದಷ್ಟು ಹೊತ್ತು ಮಾತಿಲ್ಲ, ಕತೆಯಿಲ್ಲ, ಯಾರೊಬ್ಬನ ಸುಳಿವೂ ಇಲ್ಲ. ಪೂರ್ಣ ನೀರವ, ನಿಶ್ಚಲ. ಕ್ರಮೇಣ ಪಿಸಪಿಸ ಗುಸಗುಸ ತೊಡಗಿ ಜನ ಸೊಂಟದ ಬಾಳೇ ಕಾಯಿಸಂಚಿಯಿಂದಲೊ ಸುರಾಲಿನ ಒಳಕಿಸೆಯ ಮಡಿಕೆಯಿಂದಲೊ ಅಂಗಿಯ ಒಳಜೇಬಿನ ಪದರದಿಂದಲೊ ನಾಣ್ಯಗಳನ್ನು ಎಣಿಸಿ ಹೊರತೆಗೆದು ಮುಂದೆ ಬಂದರು. ಹಣ, ಹಣದ ಹೊನಲು, ಹರಿದೇ ಹರಿಯಿತು. ವಿದ್ಯಾರಣ್ಯರ ತಪಃಪ್ರಭಾವ ಫಲಿಸಿದಂತೆ. ಆಗ ನಾಪೋಕ್ಲು ಪ್ರೌಢಶಾಲಾ ಸಮಿತಿಗೆ ಸಂಗ್ರಹವಾದ ಮೊತ್ತ ನಂಜುಂಡನವರು ನಿಗದಿ ಮಾಡಿದ್ದ ಎರಡು ಸಾವಿರದ ಮಿತಿಯನ್ನು ಮೀರಿ ಜಿಗಿದಿತ್ತು ! ಅಂತಿಮವಾಗಿ, ಎಲ್ಲ ಸಾರ್ವಜನಿಕ ಕಾರ್ಯಗಳಲ್ಲಿಯೂ ಹಣ ಒದಗುವುದು ಉದ್ದೇಶದ ಘನತೆಯಿಂದಲೇ ಅದನ್ನು ನಿರ್ವಹಿಸಲು ರಂಗಕ್ಕೆ ದುಮುಕಿರುವವರ ಪ್ರಾಮಾಣಿಕ ಪ್ರಯತ್ನದಿಂದಲೇ ಜನರ ಸುಪ್ತ ಔದಾರ್ಯಾಶಯವನ್ನು ಆವರಿಸಿರುವ ಸಂದೇಹ ಪದರವನ್ನು ಈ ಉದ್ದೇಶ ಪ್ರಯತ್ನ ಯುಗ್ಮ ಛೇದಿಸುವುದರಿಂದಲೇ ಎಂಬ ಸಾರ್ವಕಾಲಿಕ ಸತ್ಯ ನಾಪೋಕ್ಲಿನ ಪ್ರಯೋಗಮಂದಿರದಲ್ಲಿಯೂ ಸ್ಥಿರಪಟ್ಟಿತು.

ಹೀಗೆ ಮೊದಲ ಸುತ್ತಿನ ಓಟದಲ್ಲಿ ನಿರೀಕ್ಷೆ ಮೀರಿ ಜಯಗಳಿಸಿದ ನಂಜುಂಡ ಮುಂದೆ ತಮ್ಮ ಶಾಲೆಯ ಕೆಲಸದ ವೇಳೆಯ ಹೊರತು ಉಳಿದೆಲ್ಲ ಹೊತ್ತಿನಲ್ಲಿಯೂ ಹಗಲೆನ್ನದೆ ರಾತ್ರಿ ಎನ್ನದೆ ನಾಲ್ಕುನಾಡನ್ನು ಸುತ್ತಿದರು. ಕಾಲುನಡಿಗೆಯೊಂದೇ ಅಂದಿನ ಸಂಚಾರ ಸಾಧನ. ಶ್ರೀಮಂತರ ಉಪ್ಪರಿಗೆ ಮನೆಗಳಿಗೆ ಹೋದರು, ಮಧ್ಯಮ ವರ್ಗದವರ ನಾಡಹಂಚಿನ ಬಿಡದಿಗಳಿಗೆ ಹೋದರು, ಗರೀಬರ ಹುಲ್ಲು ಗುಡಿಸಲು ಜೋಪಡಿಗಳಿಗೂ ಹೋದರು ಬೇಡುವವನಿಗೆ ತಾರತಮ್ಯವೇನು ಬಂತು ? ತಾರತಮ್ಯದಿಂದ ಕುಪಿಯುವವರು ಇರಲಿಲ್ಲ. ಪ್ರತಿಯೊಂದು ಕಡೆಯಲ್ಲಿಯೂ ಇವರ ಪಲ್ಲವಿ ಒಂದೇ : ಭವತಿ ಭಿಕ್ಷಾಂದೇಹಿ ! “ನಾವು ಭಿಕ್ಷೆ ಕೇಳಲು ಬಂದಿದ್ದೇವೆ. ನೀವು ಕೊಟ್ಟದ್ದನ್ನು ಸಂತೋಷದಿಂದ ಸ್ವೀಕರಿಸಿ ಸರಸ್ವತೀಮಂದಿರನಿರ್ಮಾಣ

ಕಾರ್ಯಕ್ಕೆ ವಿನಿಯೋಗಿಸುತ್ತೇವೆ. ನೀವು ಮನಃಪೂರ್ವಕವಾಗಿ ಕೊಡುವ ಪ್ರತಿಯೊಂದು ದುಗ್ಗಾಣಿಯೂ ನಿಮ್ಮ ಪೀಳಿಗೆಯ ಭವಿಷ್ಯವನ್ನು ಮೇಲೆತ್ತಲು ಇಂದು ಹೂಡುವ ಬಂಡವಾಳ." ಈ ಧಾಟಿಯಲ್ಲಿ ನಂಜುಂಡನವರ "ನಾವು" ವಾಣಿ ನಾಲ್ಕುನಾಡಿನ ಮೂಲೆ ಮೂಲೆಯಲ್ಲಿಯೂ ಮೊಳಗಿತು. ನಾಪೋಕ್ಲು ಪ್ರಾಥಶಾಲೆಗೆ ನಾಲ್ಕುನಾಡಿನ ಹೊರಗೆ ಧನಸಹಾಯ ಯಾಚಿಸತಕ್ಕದ್ದಲ್ಲ ಎಂಬುದು ಅವರ ನಿಲವು.

ಒಮ್ಮೆ ನಂಜುಂಡನವರು ತಮ್ಮ ದೂರದ ಸಂಬಂಧಿ ವೃದ್ಧೆಯೊಬ್ಬರ ಮನೆಗೆ ಧನಯಾಚನೆಗಾಗಿ ಹೋಗಿದ್ದರು. "ಭಿಕ್ಷೆ ಕೇಳಲು ಬಂದಿದ್ದೇವೆ" ಎಂದು ಇವರು ಕೈಜೋಡಿಸಿ ಯಾಚಿಸಿದಾಗ ಆಕೆಗೆ ತುಂಬ ಯಾತನೆಯಾಯಿತು. ನಿಜವಾಗಿಯೂ ತನ್ನ ಈ ನೆಂಟ ಏನೊ ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕಿಹಾಕಿಕೊಂಡು ಭಿಕ್ಷೆ ಕೇಳುವ ಹೀನ ಸ್ಥಿತಿಗೆ ಇಳಿದುಬಿಟ್ಟಿದ್ದಾನೆ ಎಂಬುದಾಗಿ ಆಕೆ ಕಳವಳಪಟ್ಟಳು! ನಿಜಸ್ಥಿತಿ ತಿಳಿದ ಮೇಲೆ ಸಂತೋಷದಿಂದ ಹಣ ಕೊಟ್ಟು ಅವರನ್ನು ಹರಸಿ ಕಳಿಸಿದಳು.

ಇತ್ತ ಪೊನ್ನಪ್ಪನವರು ಸಹಕಾರ ಸಂಘಗಳಿಂದ ಚಂದಾಹಣ ಪ್ರಾಥಶಾಲಾ ಸಮಿತಿಗೆ ಸಲೀಸಾಗಿ ಹರಿದು ಬರುವಂತೆ ಶ್ರಮಿಸಿದರು. ತೀರ ಹಿಂದುಳಿದಿದ್ದ ನಾಲ್ಕುನಾಡಿನಲ್ಲಿ ಕೂಡ, ಆ ದಿನಗಳಂದೇ, ಅಧಿಕ ಸಂಖ್ಯೆಯಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳು ಇದ್ದುದರಿಂದ ಈ ಕಾರ್ಯ ವ್ಯವಸ್ಥಿತವಾಗಿ ನೆರವೇರಿತು.

ನಂಜುಂಡನವರ ಸಹೋದ್ಯೋಗಿಗಳು ತಮ್ಮ ತಮ್ಮ ಪ್ರಭಾವವಲಯಗಳಲ್ಲಿ ಸಂಚರಿಸಿ ಯಥಾಶಕ್ತಿ ಧನಸಂಗ್ರಹ ಮಾಡಿದರು.

ಹೀಗೆ ನಾಪೋಕ್ಲು ಪ್ರಾಥಶಾಲಾಸಮಿತಿ ವಿವಿಧ ಸ್ತರಗಳಲ್ಲಿ ಭರದಿಂದ ಹಣ ಕಲೆ ಹಾಕಿದರೂ ನಲವತ್ತು ಸಾವಿರದ ಗಡಿ ಇನ್ನೂ ಬಲುದೂರವೇ ಇತ್ತು. ಕ್ಲುಪ್ತ ವೇಳೆಯೊಳಗೆ ಮೊಬಲಗು ಪೂರ್ತಿ ಆಗದಿದ್ದರೆ ಪ್ರಾಥಶಾಲೆಯ ಮೊದಲ ತರಗತಿಯನ್ನು (ಫೋರ್ತ್ ಫಾರ್ಮ್) 1944ರ ಜೂನಿನಲ್ಲಿ ಪ್ರಾರಂಭಿಸಲಾಗುವುದಿಲ್ಲ. ಈ ಹತಾಶೆಯ ಹೊಡೆತ ಇಡಿ ಯೋಜನೆಯನ್ನೇ ಬುಡಮೇಲಾಗಿಸದೆ? ಒಮ್ಮೆ ಗುರಿ ಮುಟ್ಟಲಾಗಲಿಲ್ಲವೊ ಮತ್ತೆಂದಾದರೂ ಅದನ್ನು ತಲಪುವುದು ಸಾಧ್ಯವಾದೀತೆ? ಈ ಬ್ರಹ್ಮಗಂಟನ್ನು ಪೂರ್ಣಯ್ಯನವರು ಮಾತ್ರ ಬಿಡಿಸಬಲ್ಲವರಾಗಿದ್ದರು.

ನಾಪೋಕ್ಲಿನ ಪನಾಡದಿಂದ ಸ್ಫೂರ್ತಿಪಡೆದ ಪೊನ್ನಂಪೇಟೆ, ಸೋಮವಾರಪೇಟೆ ನಾಡುಗಳವರು ತಾವೂ ಅದೇ ತೆರನಾಗಿ ಹಣ ಒಟ್ಟಯಿಸಲು ಮುಂದಾಗಿದ್ದರು. ಆ ಸಿರಿವಂತರ ಬೀಡುಗಳಲ್ಲಿ ಕೂಡ ನಲವತ್ತು ಸಾವಿರ ಗಗನ ಕುಸುಮವೇ ಆಗಿತ್ತು.

ಆದ್ದರಿಂದ ಈಗ ಸಮಸ್ಯೆ ನಾಪೋಕ್ಲಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅಖಿಳ ಕೊಡಗು ವ್ಯಾಪ್ತಿಯನ್ನು ಪಡೆದಿತ್ತು. ಈ ಸೂಕ್ಷ್ಮವನ್ನು ಗ್ರಹಿಸಿದ ಪೂರ್ಣಯ್ಯನವರು ಹೊಸ ಹಾದಿಯನ್ನು ತೋರಿಸಿಕೊಟ್ಟರು: ಮೂಲನಿಧಿ ನಲವತ್ತು ಸಾವಿರದ ಗಡಿಯನ್ನು ಮುಟ್ಟದಿದ್ದರೂ 1944ರ ಜೂನಿನಲ್ಲಿ ಪ್ರಾಥಶಾಲೆಯ ಮೊದಲ ತರಗತಿಯನ್ನು ಪ್ರಾರಂಭಿಸಲು ಮತ್ತು ತರುವಾಯದ ವರ್ಷಗಳಲ್ಲಿ ಮುಂದಿನ ತರಗತಿಗಳನ್ನು ಕ್ರಮಶಃ ತೆರೆಯಲು ಅನುಮತಿ ಕೊಡುವಂತೆ ಸರಕಾರವನ್ನು ಪ್ರಾರ್ಥಿಸಬೇಕು; ಮೂಲನಿಧಿ ಕ್ಲುಪ್ತ ಗಡಿ ತಲುಪುವತನಕ ಸಮಿತಿಯೇ ಪ್ರಾಥಶಾಲೆಯನ್ನು ನಡೆಸಬೇಕು; ತಲಪಿದೊಡನೆ ಮೂಲನಿಧಿಯನ್ನೂ ಪ್ರಾಥಶಾಲೆಯನ್ನೂ ಸರಕಾರಕ್ಕೆ ವಹಿಸಿಕೊಡಬೇಕು.

ನಾಪೋಕ್ಲು ಪ್ರಾಥಶಾಲಾಸಮಿತಿಯ ಈ ವಾದವನ್ನು ಸರಕಾರ ಒಪ್ಪಿಕೊಂಡಿತು. ತದನುಗುಣವಾಗಿ ಅದೇ ಜೂನಿನಲ್ಲಿ ನಂಜುಂಡನವರ ಮಾಧ್ಯಮಿಕ ಶಾಲಾವರಣದಲ್ಲಿಯೇ ಪ್ರಾಥ

ಶಾಲೆಯ ಮೊದಲ ತರಗತಿ ಆರಂಭವಾಯಿತು; ಜನರ ದೀರ್ಘಕಾಲದ ಬಯಕೆ ಕೈಗೂಡಿತು, ನಂಜುಂಡನವರ ವಿಜಯ ಯಾತ್ರೆಯ ಮೊದಲ ಘಟ್ಟ ಮುಗಿಯಿತು.

೧೧

ಇನ್ನು ಉಳಿದದ್ದೇನು? ಪ್ರೌಢಶಾಲೆಗೆ ಹೊಸ ನಿವೇಶನ ಆಗಬೇಕು. ಕಟ್ಟಡಗಳನ್ನು ಕಟ್ಟಬೇಕು. ಒಲುಮೆಯ ಈ ಏರುತ್ತಿರುವ ಭಾರವನ್ನು ಸರಕಾರಕ್ಕೆ ವಹಿಸಿಕೊಡುವ ತನಕ ಇವರ ಆಯವ್ಯಯಗಳನ್ನು ಸರಿದೂಗಿಸಿಕೊಂಡು ಹೋಗಬೇಕು. ನಲವತ್ತು ಸಾವಿರದ ಗಡಿಯನ್ನು ಮುಟ್ಟಬೇಕು. ಸಾರಾಂಶ: ನಂಜುಂಡನವರ ಹೊಣೆಗಾರಿಕೆ ಮತ್ತು ದುಡಿಮೆ ಈಗ ಮೊದಲಿಗಿಂತ ಹೆಚ್ಚಾದುವು. ಆದರೆ ಒಂದು ವ್ಯತ್ಯಾಸ. ಮೊದಲಿನ ದುಡಿಮೆಯಲ್ಲಿ ಸಾರ್ವಜನಿಕ ಭಿಕ್ಷಾಟನೆಯ "ಅಮಲು" ಅವರ ಕೆಲಸವನ್ನು ಹಗುರಾಗಿಸಿತ್ತು, ದಿನ ದಿನ ಮುನ್ನುಗ್ಗಲು ಬೇಕಾಗುವ ನೂಕುಬಲವನ್ನು ಪೂರೈಸಿತ್ತು. ಈಗಿನ ದುಡಿಮೆ ಹಾಗಲ್ಲ. ಅವರು ನಿಗಾ ಹರಿಸಬೇಕಾಗಿದ್ದ ಬಿಡಿ ವಿವರಗಳು ಅಸಂಖ್ಯವಾಗಿದ್ದುವು. ಹಿರಿತರಗತಿಯ ವಿದ್ಯಾರ್ಥಿಗಳ ಪಾಠಪ್ರವಚನ, ಹೊಸ ಉಪಾಧ್ಯಾಯರ ನೇಮನ, ಸಮಗ್ರವಾಗಿ ಪ್ರೌಢಶಾಲೆಯ ಅಭಿವರ್ಧನೆ. ಮೊದಲಿನದು ಯುದ್ಧ ಕಾರ್ಯಾಚರಣೆಗೆ ಸಮಾನವಾದರೆ ಎರಡನೆಯದು ಯುದ್ಧಾನಂತರದ ಸಂಘಟನೆಗೆ, ಪುನಾರಚನೆಗೆ ಸಮಾನವಾಗುವುದು.

1944–48ರ ಅವಧಿಯಲ್ಲಿ ನಂಜುಂಡನವರು ಇವೆಲ್ಲ ಹೊಣೆಗಾರಿಕೆಗಳನ್ನೂ ಯಶಸ್ವಿಯಾಗಿ ನಿರ್ವಹಿಸಿದರು. ಪ್ರೌಢಶಾಲೆಗೆ ಹೊಸ ನಿವೇಶನವನ್ನು ಭವತಿ ಭಿಕ್ಷಾಂದೇಹಿ ತಂತ್ರದಿಂದಲೇ ಪಡೆದರು. ಪರಿಣತ ಉಪಾಧ್ಯಾಯರನ್ನು ಪರನಾಡುಗಳಿಂದ ಕರೆದು ತಂದು ಅವರ ವೈಯಕ್ತಿಕ ಯೋಗಕ್ಷೇಮಗಳನ್ನು ಚೆನ್ನಾಗಿ ನೋಡಿಕೊಂಡು ಅವರಿಂದ ವಿದ್ಯಾರ್ಥಿಗಳಿಗೆ ಯೋಗ್ಯ ಮಾರ್ಗದರ್ಶನ ಒದಗುವಂತೆ ಏರ್ಪಡಿಸಿದರು. ಬೇಸಗೆಯಲ್ಲಿ ಸಾಹಿತ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು. ಕ್ರೀಡೆ, ನಾಟಕ, ಸಮಾಜಸೇವೆ, ಸಹಕಾರ ಸಂಘ ಮೊದಲಾದ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳಿಗೆ ನೂತನಾವಕಾಶಗಳನ್ನು ಕಲ್ಪಿಸಿದರು. ಇನ್ನು ಉಳಿದಿದ್ದುದು ಒಂದೇ ಒಂದು: ನಲವತ್ತು ಸಾವಿರ ರೂಪಾಯಿಗಳ ಇಡುಗಂಟಿನ ಸಮೇತ ಪ್ರೌಢಶಾಲೆಯನ್ನು ಸರಕಾರಕ್ಕೆ ವರ್ಗಾಯಿಸುವುದು.

ಅಲ್ಲಿತನಕ ಹೋರಾಟದಿಂದ ಸತತ ದುಡಿಮೆಯಿಂದ, ಅಚಲ ನಿಷ್ಠೆಯಿಂದ ಎಲ್ಲೂ ಅಪಜಯ ಅನುಭವಿಸದೆ ಬಂದಿದ್ದ ನಂಜುಂಡನವರು ಇಡುಗಂಟಿನ ಒಟ್ಟು ಮೊಬಲಗನ್ನು ಕಲೆ ಹಾಕುವಲ್ಲಿ ಅದೇಕೋ ಯಶಸ್ವಿ ಆಗಿರಲಿಲ್ಲ. ಮೂವತ್ತೈದು ಸಾವಿರದ ಗಡಿಯನ್ನು ಏನು ಮಾಡಿದರೂ ದಾಟದೆ ಜಪ್ಪಯ್ಯ ಎಂದು ನಿಂತೇ ಹೋಗಿತ್ತು. ಕೊನೆಗಳಿಗೆ ಬರುತ್ತಿದೆ, ಯಾವ ಮೂಲದಿಂದಲೂ ಕೊರತೆ ಮೊಬಲಗು (ಐದು ಸಾವಿರ) ಭರ್ತಿ ಆಗುವ ಲಕ್ಷಣವಿರಲಿಲ್ಲ. ಇತರ ಪ್ರಯತ್ನಗಳು ಫಲಿಸದಿದ್ದಾಗ ನಂಜುಂಡನವರು ಹಿಂದೆ ಮುಂದೆ ನೋಡದೆ ಬೇರೆ ಯಾರನ್ನೂ ಕೇಳದೆ ಸ್ವಂತಾಸ್ತಿಯನ್ನೇ ಗಿರ್ವಿ ಮಾಡಿ ಹಣ ಸಾಲ ತೆಗೆದು ಇಡುಗಂಟಿನ ಮೊತ್ತವನ್ನು ಪೂರೈಸಿಯೇ ಬಿಟ್ಟರು. ಚರಿತ್ರಾರ್ಹವಾದ ಶಿಬಿದಾನವಿದು. 1948ರಲ್ಲಿ ಈ ಕಣ್ವರು ತಮ್ಮ ಸಾಕುಮಗಳಾದ "ನಾಪೋಕ್ಲು ಪ್ರೌಢಶಾಲೆ"ಯನ್ನು ಭವ್ಯ ಪರಂಪರೆ, ಆದರ್ಶ ಅಧ್ಯಾಪಕ ವೃಂದ, ಉತ್ಸಾಹೀ ವಿದ್ಯಾರ್ಥಿ ಸಮುದಾಯ ಹಾಗೂ "ಕನ್ಯಾಶುಲ್ಕ" ಸಮೇತ ಸರ್ಕಾರಕ್ಕೆ ಒಪ್ಪಿಸಿದರು. ನಂಜುಂಡನವರ ಮಹೋನ್ನತ ಚೇತನ ತನ್ನ ಬಾಳಿನ ಪರಮ ಸಾರ್ಥಕ್ಯವನ್ನು ಈ ಆದರ್ಶ ತ್ಯಾಗದಲ್ಲಿ ಕಂಡಿತು.

೧೨

ಸಂದ ಯುಗದ ಮನಸ್ಸಾಕ್ಷಿಯಂತೆ ನಂಜುಂಡನವರು (81) ಇಂದಿಗೂ (1978) ನಾಪೋಕ್ಲಿನ ಬೀದಿಯಲ್ಲಿ ನೆಟ್ಟಗೆ ದಿಟ್ಟಗೆ ಅಡ್ಡಾಡುವಾಗ ಅವರ ಜೀವನಧರ್ಮವನ್ನು ಕಂಡವರ ಅರಿತವರ ಮತ್ತು ಕೇಳಿದವರ ಮನಸ್ಸಿನಲ್ಲಿ ಮೂಡುವ ಭಾವವೇನು ?

ಬಾನಾಚೆಯಿಂ ವಿಶ್ವಸತ್ತ್ವ ತಾನಿಳಿಳಿಗೆ
ನಾನೆನುವ ಚೇತನದಿ ರೂಪುಗೊಂಡಿಹುದೊ ?
ನಾನೆನುವ ಕೇಂದ್ರದಿನೆ ಹೊರಟ ಸತ್ತ್ವದ ಪರಿಧಿ
ಬಾನಾಚೆ ಹಬ್ಬಿಹುದೊ ? ಮಂಕುತಿಮ್ಮ

ಅಂದಂದಿಗಾದನಿತು ಬುಡ ಕಟ್ಟಿ ಕಳೆ ತೆಗೆದು
ಚೆಂದಳಿರು ದಿನದಿನವುಮೊಗೆಯೆ ನೀರೆರೆದು
ಸಂದ ಬಲದಿಂದ ಜಗದಶ್ವತ್ಥ ಸೇವೆಯಲಿ
ನಿಂದಿರುವುದೆಲೆ ಧರ್ಮ – ಮಂಕುತಿಮ್ಮ

ಸುಂದರವನೆಷಗು ಜೀವನದ ಸಾಹಸದಿಂದೆ
ಕುಂದಿಲ್ಲವದಕೆ ಸಾಹಸಭಂಗದಿಂದೆ
ಮುಂದಕದು ಸಾಗುವುದು ಮರಳಿ ಸಾಹಸದಿಂದೆ
ಚೆಂದ ಧೀರೋದ್ಯಮವೆ – ಮಂಕುತಿಮ್ಮ

ಶಾಲೆಗಳನ್ನು ಸ್ಥಾಪಿಸಿದುದು: ಕೊಡಗಿನಲ್ಲಿ 1834ನೇ ಇಸವಿಗಿಂತ ಹಿಂದೆ ಶಾಲೆಗಳಿರಲಿಲ್ಲ. ರಾಜರುಗಳು ತಮ್ಮ ಮಕ್ಕಳಿಗೆ ಕನ್ನಡ, ಹಿಂದೂಸ್ತಾನಿ ಮತ್ತು ಪರ್ಶಿಯನ್ ಭಾಷೆಗಳಲ್ಲಿ ಓದಿ ಬರೆಯುವುದನ್ನು ಹೇಳಿಕೊಡುವುದಕ್ಕೂ, ಸುಲಭ ಲೆಕ್ಕಗಳನ್ನು ಕಲಿಸುವುದಕ್ಕೂ ಮೌಲ್ವಿಗಳನ್ನೂ ಪಂಡಿತರನ್ನೂ ಇಟ್ಟುಕೊಂಡಿದ್ದರು. ರಾಜನ ಪ್ರಜೆಗಳಲ್ಲಿ ಓದು ಬರಹ ತಿಳಿದವರು ತಮ್ಮ ಮನೆಗಳಲ್ಲಿ ತಮ್ಮ ಮಕ್ಕಳಿಗೂ ತಮ್ಮ ಬಂಧುಗಳ ಮಕ್ಕಳಿಗೂ ತಾವು ಕಲಿತದ್ದನ್ನು ಕಲಿಸುತ್ತಿದ್ದರು.

1834ರಲ್ಲಿ ಜನರಲ್ ಫ್ರೇಸರನು ತನ್ನ ಖರ್ಚಿನಲ್ಲಿಯೇ ಫ್ರೇಸರ್‌ಪೇಟೆಯಲ್ಲಿ ಒಂದು ಕನ್ನಡ ಶಾಲೆಯನ್ನು ನಡೆಸಲು ಏರ್ಪಾಡು ಮಾಡಿದನೆಂದು ಹಿಂದೆಯೇ ನೋಡಿದ್ದೇವೆ. ಅದೇ ವರ್ಷ ಮಡಿಕೇರಿಯಲ್ಲಿ ಮತ್ತು ವೀರರಾಜೇಂದ್ರಪೇಟೆಯಲ್ಲಿ ಇಂಗ್ಲಿಷ್ ಮತ್ತು ಕನ್ನಡ ಕಲಿಸುವ ಪ್ರಾಥಮಿಕ ಶಾಲೆಗಳನ್ನೂ ಮಡಿಕೇರಿಯಲ್ಲಿ ಒಂದು ಕನ್ನಡ ಶಾಲೆಯನ್ನೂ ಸರಕಾರದವರು ಸ್ಥಾಪಿಸಿದರು. ವೀರರಾಜೇಂದ್ರಪೇಟೆಯ ಶಾಲೆಗಳ ವಿದ್ಯಾರ್ಥಿಗಳೆಲ್ಲರೂ ಕೊಂಕಣಿ ಭಾಷೆ ಮಾತನಾಡುವ ರೋಮನ್ ಕ್ಯಾಥಲಿಕ್ ಕ್ರೈಸ್ತರಾಗಿದ್ದುದರಿಂದ ಅವರ ಮತದ ಗುರುಗಳೇ ಚರ್ಚಿನ ಆವರಣದಲ್ಲಿ 1842ನೇ ಇಸವಿಯಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ತೆರೆದರು. ಆ ಶಾಲೆಗೆ ಸರಕಾರಿ ಶಾಲೆಯಲ್ಲಿದ್ದ ವಿದ್ಯಾರ್ಥಿಗಳೆಲ್ಲಾ ಹೋದುದರಿಂದ ವೀರರಾಜೇಂದ್ರಪೇಟೆಯ ಸರಕಾರಿ ಪ್ರಾಥಮಿಕ ಶಾಲೆಯು ಆ ವರ್ಷವೇ ಮುಚ್ಚಿ ಹೋಯಿತು. ಅಷ್ಟರವರೆಗೆ ಮೇಲಿನ ಮೂರು ಶಾಲೆಗಳ ಉಪಾಧ್ಯಾಯರ ಸಂಬಳವು ತಿಂಗಳಿಗೆ 90 ರೂಪಾಯಿಗಳಾಗಿದ್ದವು. 1843ರ ನಂತರ ಮಡಿಕೇರಿಯ ಇಂಗ್ಲಿಷ್ ಶಾಲೆಯ ಹೊರತು 11 ಕನ್ನಡ ಶಾಲೆಗಳೂ ಅನಂತರ 10 ಕನ್ನಡ ಶಾಲೆಗಳೂ ತೆರೆಯಲ್ಪಟ್ಟು 1854ರಲ್ಲಿ 21 ಕನ್ನಡ ಶಾಲೆಗಳಿದ್ದುವು. ಈ ಕನ್ನಡ ಶಾಲೆಗಳಲ್ಲಿದ್ದ ಒಬ್ಬೊಬ್ಬ ಉಪಾಧ್ಯಾಯನಿಗೆ ಆಯಾಯಾ ಶಾಲೆಯಲ್ಲಿ 30 ಮಕ್ಕಳಿಗಿಂತ ಕಡಿಮೆಯಿಲ್ಲದಿದ್ದರೆ ತಿಂಗಳಿಗೆ 5 ರೂಪಾಯಿಗಳ ಸಂಬಳವು ನಿಗದಿ ಮಾಡಲ್ಪಟ್ಟಿತ್ತು. ಯಾವ ಶಾಲೆಯಲ್ಲಾದರೂ 30 ಮಕ್ಕಳಿಗಿಂತ ಕಡಿಮೆ ಮಕ್ಕಳಿದ್ದರೆ ಉಪಾಧ್ಯಾಯನ ಸಂಬಳವು 5 ಮಕ್ಕಳ ಕಡಿಮೆಗೆ 1 ರೂಪಾಯಿಯಂತೆ ಕಡಿಮೆ ಮಾಡಲ್ಪಡುತ್ತಿತ್ತು. 1854ರಲ್ಲಿ ಮೇಲಿನ 21 ಶಾಲೆಗಳಲ್ಲಿ ಮಕ್ಕಳ ಸಂಖ್ಯೆಗನುಗುಣವಾಗಿ ಅವುಗಳಲ್ಲಿದ್ದ ಏಕೋಪಾಧ್ಯಾಯರಿಗೆ $2\frac{1}{2}$ ರೂಪಾಯಿ ಸಂಬಳ ಮಾತ್ರ ಸಿಗುತ್ತಿತ್ತು. 1845ರಲ್ಲಿ ಮಡಿಕೇರಿ ಇಂಗ್ಲಿಷ್ ಶಾಲೆಯಲ್ಲಿದ್ದ ಇಬ್ಬರು ಇಂಗ್ಲಿಷ್ ಮತ್ತು ಕನ್ನಡ ಕಲಿಸುವ ಉಪಾಧ್ಯಾಯರಲ್ಲಿ ಒಬ್ಬನು ತೆಗೆಯಲ್ಪಟ್ಟು ಅವನ ಬದಲಿಗೆ ಒಬ್ಬ ಹಿಂದೂಸ್ತಾನಿ ಕಲಿಸುವ ಉಪಾಧ್ಯಾಯನು ನೇಮಿಸಲ್ಪಟ್ಟನು. ಈ ಎಲ್ಲಾ ಶಾಲೆಗಳಲ್ಲಿ ಕಂಠಪಾಠದ ರೀತಿಯಲ್ಲಿ ಪದ್ಯ, ಒಕ್ಕಣೆ ಮೊದಲಾದುವು ಕಲಿಸಲ್ಪಡುತ್ತಿದ್ದವು. ಈ ಶಾಲೆಗಳ ಕೆಲಸದಲ್ಲಿ ಯಾವ ಮೇಲ್ವಿಚಾರವೂ ಇರಲಿಲ್ಲ.

ಡಿ. ಎನ್. ಕೃಷ್ಣಯ್ಯ "ಕೊಡಗಿನ ಇತಿಹಾಸ"

ಮೂಲ: ರೋಜರ್ ಕೈಲಾಯಿಸ್
ಅನುವಾದ: ಎಚ್. ಎಸ್. ಹರಿಶಂಕರ್

ಸಂಸ್ಕೃತಿಯಿಂದ ಸಂಸ್ಕೃತಿಗೆ

ಭಾಷೆಗಳ ಒಂದು ಗೊಂದಲಮಯ ಪರಿಸ್ಥಿತಿ ಅನಿವಾರ್ಯವಾಗಿ ಉದ್ಭವಿಸಿದಾಗ ಕಲೆಗಳ ಪೈಕಿ ಬ್ಯಾಬೆಲ್ ಶಾಪಕ್ಕೆ ಈಡಾದ ಏಕೈಕ ಕಲೆಯೆಂದರೆ ಸಾಹಿತ್ಯವೆನ್ನಬಹುದು. ನರ್ತನ, ಅಥವಾ ಚಾಲನಕಲೆ; ಸಂಗೀತ ಅಥವಾ ಶಬ್ದಕಲೆ; ವಾಸಯೋಗ್ಯ ಅಥವಾ ಬೃಹತ್ ಗಾತ್ರಗಳಿಂದ ಕೂಡಿರುವ ವಾಸ್ತುಶಿಲ್ಪ; ಸುಸಂಗತ ಅಥವಾ ಅಭಿವ್ಯಕ್ತ್ಯಾತ್ಮಕ ರೂಪಗಳನ್ನುಳ್ಳ ಶಿಲ್ಪವಿದ್ಯೆ; ಕೊನೆಯದಾಗಿ ವರ್ಣ ಮತ್ತು ರೇಖಾ ಕೃತಿಗಳ ಮೂಲಕ ಆಕರ್ಷಕ ಕೃತಿರಚನಾ ಕಲೆಯಿಂದ ಕೂಡಿದ ವರ್ಣಕಲೆ; ಇವೆಲ್ಲವನ್ನೂ ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ —ಪೂರ್ವಸಿದ್ಧತೆಯಿಲ್ಲದೆ ಎಂದು ನಾನು ಹೇಳುತ್ತಿಲ್ಲ—ವರ್ಗಾಯಿಸಬಹುದು. ಆದರೆ ಯಾವುದೇ ಮಾಧ್ಯಮವನ್ನು ಬಳಸದೆ ಇವುಗಳನ್ನು ವರ್ಗಾಯಿಸಬಹುದೆಂದು ಹೇಳುತ್ತೇನೆ. ಈ ಕಲೆಗಳು ಒಂದು ವಿಶ್ವಸಾಮಾನ್ಯಭಾಷೆ (Universal Language) ಯನ್ನು ಕುರಿತು ಮಾತನಾಡುತ್ತವೆ. ಅವುಗಳ ಒಟ್ಟು ಸಮಷ್ಟಿಯನ್ನು ದಾಖಲೆಗೊಳಿಸುವುದು, ಹಾಗೆಯೇ ಅವುಗಳನ್ನು ಪುನರ್ವೇಶನಗೊಳಿಸುವುದಷ್ಟೇ ಅಗತ್ಯದ ಕೆಲಸ. ಅವುಗಳನ್ನು ಭಾಷಾಂತರಿಸುವ ಅಗತ್ಯವಿಲ್ಲ. ಒಂದು ಗ್ರಾಮಫೋನ್ ತಟ್ಟೆ, ವರ್ಣ ಪುನರ್ವೇಶನ, ಒಂದು ನಕಲು—ಇವೆಲ್ಲವೂ ಒಂದು ಸಂದೇಶವನ್ನು ಬೀರುತ್ತವೆ. ಇವುಗಳ ತಿರುಳು ವಿಶ್ವಗ್ರಾಹಿಯಾಗುತ್ತದೆ. ಮ್ಯೂಸಿಯಂಗಳು, ಚಿತ್ರಗಳಿಂದ ತುಂಬಿದ ಪುಸ್ತಕಗಳು ಹಾಗೂ ದಾಖಲೆಗಳು ಕಲಾಕ್ಷೇತ್ರಕ್ಕೆ ಇಡೀ ಪ್ರಪಂಚ ನೀಡಿರುವ ಕೊಡುಗೆಯನ್ನು ಪರಿಚಯಿಸಿಕೊಡುತ್ತವೆ.

ಆದರೆ ಸಾಹಿತ್ಯ ಇಂಥ ಒಂದು ವಲಸೆಯಿಂದ ಲಾಭಗಳಿಸಲು ಅಶಕ್ಯವಾಗಿದೆ. ಏಕೆಂದರೆ ಈ ಕಲೆಯ ವಾಹಕವು ಸಂಜ್ಞಾವ್ಯವಸ್ಥೆಯಿಂದ ಕೂಡಿದ್ದು ಸದಾ ವಿಭಿನ್ನವಾಗಿರುತ್ತದೆ. ಅಷ್ಟೇ ಅಲ್ಲ, ಹಲವು ಸಲ ಅದು ಯಾವುದೇ ಬಗೆಯ ಸಂಬಂಧವನ್ನೂ ಹೊಂದಿರುವುದಿಲ್ಲ. ಯಾವುದೇ ಒಂದು ವಿಲಕ್ಷಣ ನಿಯಮಗಳಿಗನುಣವಾಗಿ ರಚಿಸಲಾದ ಒಂದು ಶಿಲ್ಪವನ್ನಾಗಲೀ, ವಿಭಿನ್ನದೃಷ್ಟಿಕೋನದಿಂದ ಚಿತ್ರಿಸಲಾದ ಭಿತ್ತಿಚಿತ್ರವನ್ನಾಗಲೀ ಅಥವಾ ಒಂದು ಚಿತ್ರವನ್ನಾಗಲೀ, ಮೊದಲು ಕಿವಿಗೆ ಬೀಳುತ್ತಿದ್ದ ಹಾಗೆಯೇ ಆಶ್ಚರ್ಯವನ್ನು ಹುಟ್ಟಿಸುವಂಥ ಲಯಬದ್ಧ ಅಥವಾ ಸ್ವರಗತಿಯಿಂದ ಕೂಡಿದ ಸಂಗೀತದ ಒಂದು ಚಿಕ್ಕ ಕೃತಿಯನ್ನಾಗಲೀ ಮೆಚ್ಚಿಕೊಳ್ಳಬೇಕಾದರೆ ಕೇವಲ ಸಾಮಾನ್ಯ ಅಭ್ಯಾಸವಿದ್ದರೆ ಸಾಕೆಂದು ತೋರುತ್ತದೆ. ಆದರೆ ಕೀಟ್ಸ್, ಸರ್ವಾಂಟಿಸ್, ಲೀಪೋ ಅಥವಾ ಕಾಳಿದಾಸರನ್ನು ಮೊದಲು ಅರ್ಥಮಾಡಿಕೊಳ್ಳದ ಹೊರತು, ಅವರ ಕೃತಿಗಳನ್ನು ಓದುವುದರಿಂದಾಗಲೀ ಅಥವಾ ಆ ಕೃತಿಗಳಿಂದ ಒಂದು ಪುಟದಷ್ಟು ವಿಷಯವನ್ನು ಕೇಳುವುದರಿಂದಲಾಗಲೀ ಸ್ವಲ್ಪವೂ ಪ್ರಯೋಜನ ಲಭಿಸುವುದಿಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ ಅನ್ಯ ಭಾಷಾಂತರ

ಗೊಂಡಿರಬೇಕು. ತರುವಾತ ಅನಂತರ ಬರುತ್ತದೆ. ಕೃತಿಯ ತಿರುಳು ಅಜ್ಞಾತವಾಗಿಯೇ ಇರುತ್ತದೆ. ಅದೇ ಅದರ ಸಂದೇಶವಲ್ಲ. ಅದು ಅರ್ಥದ ವಾಹಕವಾಗಿದ್ದು ಯಾರ ಬಳಿ ಸರಿಯಾದ ಕೀಲಿಕೈ ಇರುವುದಿಲ್ಲವೋ ಅಂಥವರಿಗೆ ಅದು ವಶವರ್ತಿಯಾಗುವುದಿಲ್ಲ. ಎಂದರೆ, ಯಾವ ಭಾಷೆಯಲ್ಲಿ ಅದು [illegible] ಎಂಬ ಸಂಗತಿ ಆತನಿಗೆ ತಿಳಿದಿರುವುದಿಲ್ಲ. ಈ ಒಂದು ಸಾಮಾನ್ಯ ಅವಲೋಕನದಿಂದ ಒಂದು ಮೂಲಭೂತ ಪರಿಣಾಮ ಅಭಿವ್ಯಕ್ತವಾಗುತ್ತದೆ. ಪ್ರತಿಫಲರಹಿತವಾದ, ಸಂಕೀರ್ಣತೆಯಿಂದ ಕೂಡಿದ ಹಾಗೂ ಅವಿಶ್ವಾಸಾತ್ಮಕವಾದಂತಹ ಹಾಗೂ ಹಲವು ವೇಳೆ ಅಪರಿಹಾರ್ಯ ಕಷ್ಟಗಳಿಂದ ಕೂಡಿದ ಭಾಷಾಂತರದ ಅಗತ್ಯತೆ ಉದ್ಭವಿಸುತ್ತದೆ.

ಭಾಷಾಂತರ ಒಂದು ಬಗೆಯ ವಿಸಂಕೇತನ ಕ್ರಿಯೆಯೆಂದು ಕಂಡುಬರುತ್ತದೆ. ವಾಸ್ತವವಾಗಿ ಅದು ಹಾಗೆಯೇ ಆಗಿದೆ. ಯಾವುದೋ ಭಾಷೆಯನ್ನು ಭಾಷಾಂತರಿಸುವಾಗ ಅದು ಜೀವಂತ ಭಾಷೆಯಾಗಿರದೆ, ಗೂಢ ಸಂಕೇತಗಳ ಒಂದು ವಿನ್ಯಾಸವೆಂದು ತೋರಿಬಂದಾಗ –ಬೆಣೆಯಾಕಾರದ ಅಕ್ಷರಗಳಿಂದ ಕೂಡಿದ ಈಜಿಪ್ಷಿಯನ್ ಚಿತ್ರಲಿಪಿಯಂಥ, ಇಂದಿಗೂ ಮಾಯನ್ ಲಿಪಿಯಂಥ–ವರ್ಣಮಾಲೆಯನ್ನು ಗುರುತಿಸುವುದು ಯಾವುದೇ ಸಂದರ್ಭದಲ್ಲಿಯೂ ಮೊದಲ ಘಟ್ಟವೆನಿಸುತ್ತದೆ. ಯಾರೇ ಆಗಲಿ ಇಟ್ರುರಿಯಾ ಭಾಷೆಯನ್ನು ಓದಬಹುದು; ಆದಾಗ್ಯೂ ಇಟ್ರುರಿಯಾ ಭಾಷೆ ಅಭೇದ್ಯವಾದದ್ದು. ಇತರ ಯಾವ ಭಾಷೆಗಳೊಂದಿಗೆ ಅದರ ಸಂಬಂಧವುಂಟು ಎಂಬ ಸಂಗತಿ ನಮಗೆ ತಿಳಿಯದೆ ಇರುವುದರಿಂದ, ಅವುಗಳನ್ನು ವ್ಯಾಖ್ಯಾನಿಸಲು ಸಹಾಯವಾಗುವಂಥ ಸಾಕಷ್ಟು ದೀರ್ಘ ಶಾಸನಗಳಿಲ್ಲದಿರುವುದರಿಂದ, ಹೀಗಾಗಿರುವ ಸಾಧ್ಯತೆ ಉಂಟು. ಮಿನೋಯಾನ್ ಎ ಮತ್ತು ಬಿ ಅವರಿಗೆ ಸಂಬಂಧಿಸಿದಂತೆ, ಚಾಡ್‌ವಿಕ್ ಮತ್ತು ವೆನ್‌ಟ್ರಿಸ್ ಅವರು ಮಾಡಿದಂತೆ ಆಂತರಿಕವಾಗಿ ಅದನ್ನು ವ್ಯಾಖ್ಯಾನಿಸುವುದು ಸಾಧ್ಯವಾಗಿಲ್ಲ.

ಈ ಸಮಸ್ಯೆ ಕೇವಲ ಬರವಣಿಗೆಯ ಮೂಲಕ ಪರಿಚಿತವಾಗಿರುವ ಮೃತ ಭಾಷೆ (ವ್ಯಾವಹಾರಿಕವಲ್ಲದ ಭಾಷೆ)ಗಳಿಗೆ ವಿಶಿಷ್ಟವಾಗಿದ್ದು ಜೀವಂತ ಭಾಷೆಗಳಿಗೆ ಅನ್ವಯಿಸುವುದಿಲ್ಲ. ಇಲ್ಲಿ ಲೇಖಕರು ತಾವೇ ಸ್ವತಃ ವ್ಯಾಖ್ಯಾನ ನೀಡಬಹುದು, ತಾವೇ ಅರ್ಥಮಾಡಿಕೊಳ್ಳುವಂತೆ ಮಾಡಬಹುದು, ಮಧ್ಯವರ್ತಿ ಭಾಷೆಯೊಂದನ್ನು ಬಳಸಬಹುದು. ಹಾಗಾಗಿ ಸಮಾನಾರ್ಥಕ ಇಲ್ಲವೆ ಅದಕ್ಕೆ ಹತ್ತಿರ ಬರುವಂಥ ಶಬ್ದಗಳ ಭಂಡಾರವನ್ನು ಸೃಷ್ಟಿಸಿಕೊಂಡು, ನಿಧಾನವಾಗಿ ಉಭಯ ಭಾಷಾ ನಿಘಂಟನ್ನು ಸೃಷ್ಟಿಸಿಕೊಳ್ಳಬಹುದು. ಇಂಥ ನಿಘಂಟು ಭಾಷಾಂತರ ಕಾರ್ಯದಲ್ಲಿ ಅವಶ್ಯವಾದ ಉಪಕರಣವಾಗಿ ಪರಿಣಮಿಸುತ್ತದೆ. ಇಂಥ ಹೆಜ್ಜೆ ನಿಜಕ್ಕೂ ಮಾಹಿತಿಯನ್ನು ಒದಗಿಸುವ ಹಂತದಲ್ಲಿ ಮಾತ್ರ ಬೆಲೆಯುಳ್ಳದ್ದಾಗಿರುತ್ತದೆ; ಸಾಹಿತ್ಯಕೃತಿಯಲ್ಲಿ ಇದು ಸಾಕಾಗುವುದಿಲ್ಲ. ಸಾಹಿತ್ಯ ಎಂಬುದು ಆಶಯಗಳ ಸಮಗ್ರಾಭಿವ್ಯಕ್ತಿ. ಋಜು ಅಥವಾ ಪಾಂಡಿತ್ಯಪೂರ್ಣದಿಂದ ಕೂಡಿದ ಅಭಿವ್ಯಕ್ತಿಗಳ ಬಳಕೆ ಸಾಹಿತ್ಯದಲ್ಲಿ ಕಂಡುಬರುತ್ತದೆ. ಇಂಥ ಅಭಿವ್ಯಕ್ತಿಗಳು ಅದರಲ್ಲೂ ವಿಶೇಷವಾಗಿ ಲಿಪಿಯಿಲ್ಲದ ಭಾಷೆಗಳಲ್ಲಿ–ಶಬ್ದ, ಕಾಕುಮಾತು, ಭಂಗಿ ಮತ್ತು ಹಾಸ್ಯಗಳನ್ನು ಅವಲಂಬಿಸಿವೆ. ಹಾಗಾಗಿ ಪ್ರತಿ ಲಿಪೀಕರಣವು ಕೃತಿಯ ಅಸ್ಥಿಪಂಜರವಾಗಿ ಬಿಡುವುದಲ್ಲದೆ ಆ ಕೃತಿಯನ್ನು ಅಲಂಕಾರ ಶೈಲಿಯ ಮೂಲಕ, ಅಳವಡಿಕೆಯ ಮೂಲಕ, ನಾಟಕೀಯತೆ ಅಥವಾ ಅಣಕದ ಮೂಲಕ ಚಿತ್ರಿಸುತ್ತಲ್ಲದೆ ಬೇರಾವ ರೀತಿಯಲ್ಲೂ ಚಿತ್ರಿಸುವುದಿಲ್ಲ. ಸಾಹಿತ್ಯವನ್ನು ಅನುಸರಿಸಿ ಬರೆಹ ಹುಟ್ಟಿಕೊಂಡಿತು ಎಂಬ ಸಂಗತಿ ಪ್ರಪಂಚದ ಎಲ್ಲೆಡೆಯಲ್ಲೂ ಪ್ರಸಿದ್ಧವಾದ ಸಂಗತಿಯಾಗಿದೆ. ಆಫ್ರಿಕನ್ ಮಹಾಕಾವ್ಯಗಳನ್ನು, ಅಭಿಚಾರ (ಮಾಟಮಂತ್ರ)ಗಳನ್ನು ಹಾಗೂ ಜೋಗುಳದ ಹಾಡುಗಳನ್ನು ಸಂಗ್ರಹಿಸುವಾಗ ಕೈಗೊಂಡ ವಿಧಾನವನ್ನೇ ಈಗಲೂ ಅನುಸರಿಸಬೇಕು. ಅದನ್ನು ಬರೆಹಕ್ಕೆ ಇಳಿಸಬೇಕು. ಶ್ರವಣದೃಶ್ಯ ಸಾಧನವಾದ ಭಾಷಾಂತರಕ್ಕೂ ಇದನ್ನು ಅನ್ವಯಿಸಬೇಕು.

* * *

ಬರೆವಣಿಗೆಯಿಲ್ಲದ ಭಾಷೆಗಳು ಹಾಗೂ ಬರೆವಣಿಗೆಯಿದ್ದೂ ಮುಂದೆ ಬಳಸದಂಥ ಭಾಷೆಗಳಂಥ ಈ ವೈಪರೀತ್ಯ ಸಂದರ್ಭಗಳನ್ನು ಒಂದು ಕಡೆ ಬದಿಗಿರಿಸಿ ಈಗ ನಾನು ಅತ್ಯಂತ ಸರಳವಾದ ವಿಷಯದ ಮೇಲೆ ಗಮನವನ್ನು ಕೇಂದ್ರೀಕರಿಸಲಿಚ್ಛಿಸುತ್ತೇನೆ. ಅದೃಷ್ಟವಶಾತ್ ಅದೂ ಸಹ ಅತ್ಯಂತ ಸಾಮಾನ್ಯವಿಷಯವಾಗಿದೆ. ಆಡುಮಾತಿನ ಹಾಗೂ ಬರೆವಣಿಗೆಯ ಭಾಷೆಗಳ ತೋಲನ ಹಾಗೂ ಈಗ ಬಹುಮಂದಿ ಮಾತನಾಡುವ ಹಾಗೂ ಬರೆಯುವ ಭಾಷೆಗಳಾದ ಇಂಗ್ಲಿಷ್, ಸ್ಪ್ಯಾನಿಷ್, ರಷ್ಯನ್, ಅರ್‍ಯಾಬಿಕ್, ಚೈನೀಸ್ ಭಾಷೆಗಳ ಬಗ್ಗೆ ನಾನು ಕೇಂದ್ರೀಕರಿಸಲಿಚ್ಛಿಸುತ್ತೇನೆ. ದೈನಂದಿನ ವ್ಯವಹಾರಗಳ ಬಗ್ಗೆ ಅಷ್ಟೊಂದು ಕಷ್ಟಗಳು ಕಂಡುಬರುವುದಿಲ್ಲ. ವೈಜ್ಞಾನಿಕ ಹಾಗೂ ತಾಂತ್ರಿಕ ಕೃತಿಗಳ ವಿಷಯವಾಗಿ ಅವು ಇನ್ನಷ್ಟು ಕಡಿಮೆ. ಈ ಕೃತಿಗಳು ಸಾರ್ವತ್ರಿಕ ಸತ್ಯತೆಯ ಬಗ್ಗೆ ನಿರೂಪಿಸುತ್ತವೆ. ಸಾಹಿತ್ಯದ ಬಗ್ಗೆ ಅದೇ ತತ್ತ್ವವನ್ನು ಅನ್ವಯಿಸುವಂತಿಲ್ಲ. ಅದರ ಪ್ರತಿಯೊಂದು ಸಾಲೂ ಒಂದು ವಿಶಿಷ್ಟಾರ್ಥವನ್ನು ಧ್ವನಿಸುತ್ತದೆ. ಅಲ್ಲದೆ ಒಂದು ಬಗೆಯ ಆವಾಹನೆಗೆ ಎಡೆಮಾಡಿಕೊಡುತ್ತದೆ. ಅದು ಸರಳವಾದ ಉದ್ಯೋಗದಂತಲ್ಲ.

ನೆನಪಿನ ಕೋಶ ಮತ್ತು ಆವೇಗಗಳು ಸಂಪೂರ್ಣವಾಗಿ ನಾಮಮಾತ್ರದವುಗಳಲ್ಲ, ಅಥವಾ ಯಾಂತ್ರಿಕ ಸಮೀಕರಣಗಳ ಪಟ್ಟಿಯಲ್ಲ. ಎರಡೂ ಕಡೆ ಪದಗಳಿದ್ದು ಅವುಗಳಿಗೆ ಸಂವಾದಿ ಪದಗಳು ಇರುವುದಿಲ್ಲ. ಇವು ಅತ್ಯಂತ ಸಾಮಾನ್ಯ ಪದಗಳ ವಿಷಯದಲ್ಲೂ ಸತ್ಯವಾಗಿ ಪರಿಣಮಿಸಿವೆ. ಕಾಂಗೋ ದೇಶಕ್ಕೆ "ಸ್ನೊ" ಎಂಬ ಪದವನ್ನಾಗಲೀ ಅಥವಾ "ಸ್ಪ್ರಿಂಗ್" ಎಂಬ ಪದವನ್ನು ಬ್ರೆಜಿಲ್ ದೇಶಕ್ಕಾಗಲೀ ನೀವು ರವಾನಿಸಬಹುದು. ನೀವು ಯಾವ ವಿಷಯವನ್ನು ಕುರಿತು ಮಾತನಾಡುತ್ತಿದ್ದೀರಿ ಎಂಬುದನ್ನು ವಿವರಿಸುವ ತೊಂದರೆ ತೆಗೆದುಕೊಂಡರೂ ಚಳಿಗಾಲ ಅಥವಾ ಬೇಸಗೆ ಕಾಲಗಳಿಲ್ಲದಂತಹ ಆ ರಾಷ್ಟ್ರಗಳಲ್ಲಿ ಈ ಪದಗಳು ನಿರ್ಜೀವ ಪದಗಳಾಗಿ ಪರಿಣಮಿಸಿ ಬಿಡುತ್ತವೆ. ಸುಮಾರು ಹತ್ತು ವರ್ಷಗಳ ಕೆಳಗೆ ನನ್ನ ಮಿತ್ರನಾದ ಬ್ರೆಜಿಲ್ ದೇಶದ ಕವಿ ಅನ್ನಿಬಾಲ್ ಮಕಾಡೊನ ಮಗಳು ನನ್ನೊಂದಿಗೆ ಭೋಜನಕ್ಕೆ ಬಂದಿದ್ದಳು. ಆಗ ಏಪ್ರಿಲ್ ತಿಂಗಳು. ಗಿಡಗಳು ಸಂಪೂರ್ಣವಾಗಿ ಒಣಗಿಹೋಗಿ ನಿರ್ಜೀವವಾಗಿವೆ ಎಂದು ಭಾವಿಸಿದ್ದ ಆಕೆ ಅವು ಚಿಗುರೊಡೆದಿರುವುದನ್ನು ಕಂಡು ಬೆರಗಾದಳು. ಹೇಗೆ ಯೂರೋಪಿನಲ್ಲಿ ಮರಗಳು ಮರಳಿ ಜೀವಂತವಾಗುತ್ತವೆ ಎಂಬುದನ್ನು ತನ್ನ ತಂದೆಗೆ ತೋರಿಸುವ ಸಲುವಾಗಿ ಕೆಲವು ಚಿಗುರುಗಳನ್ನು ಕಿತ್ತು ಆತನಿಗೆ ತಾನು ಕಳುಹಿಸಿರುವುದಾಗಿ ಆಕೆ ನನ್ನೊಂದಿಗೆ ತಿಳಿಸಿದಳು. ಹಾಗಾಗಿ ಆಕೆಗೆ "ಸ್ಪ್ರಿಂಗ್" ಎಂಬ ಶಬ್ದ ತಿಳಿದಿತ್ತು. ವಾಸ್ತವವಾಗಿ ಪೋರ್ಚುಗೀಸ್ ಭಾಷೆಯಲ್ಲಿ ಆ ಪದವಿದೆ. ಆದರೆ ಆಕೆಗೆ ವಾಸ್ತವಸಂಗತಿಯೇ ತಿಳಿದಿರಲಿಲ್ಲ. ಮೊಟ್ಟಮೊದಲಿಗೆ ಆಕೆ ಅದನ್ನು ನೋಡಿದ್ದರಿಂದ, ಈ ಮುಂಚೆ ಆ ಬಗ್ಗೆ ಅವಳಿಗೆ ಅದರ ಪರಿಚಯವಿಲ್ಲದಿದ್ದುದರಿಂದ, ಪ್ರತ್ಯೇಕ ಪದವನ್ನು ಅದಕ್ಕೆ ಅನ್ವಯಿಸಬೇಕು ಎಂಬ ಸಂಗತಿ ಆಕೆಗೆ ಹೊಳೆದಿರಲಿಲ್ಲ. ಹಾಗೆಯೇ ಸೆನೆಗಲ್ ದೇಶದಲ್ಲಿ ಇಲ್ಲವೆ ಐವರಿ ತೀರ ಪ್ರದೇಶಗಳಲ್ಲಿ ಇನ್ನೂ ಫ್ರೆಂಚ್ ಭಾಷೆಯನ್ನೇ ಕಲಿಯುತ್ತಿರುವ ಶಾಲಾ ಬಾಲಕರಿಗೆ, ತಾವು ಕಂಠಪಾಠಮಾಡಬೇಕಾಗಿ ಬರುವ ಕವನಗಳಲ್ಲಿ ಏಪ್ರಿಲ್ ಹಾಗೂ ಮೇ ತಿಂಗಳುಗಳಿಗೆ ಪ್ರಾಧಾನ್ಯತೆಯನ್ನು ನೀಡಿರುವ ಬಗ್ಗೆ ಆಶ್ಚರ್ಯವೆನಿಸುತ್ತದೆ. ಅವರು ವ್ಯವಹರಿಸುತ್ತಿರುವ ಉಷ್ಣವಲಯದ ಸಸ್ಯವರ್ಗದ ಆವರ್ತದಲ್ಲಿ ವೈಶಿಷ್ಟ್ಯಪೂರ್ಣ ಅಂಶವಿಲ್ಲದಿರುವಾಗ ಇಂಥ ಭಾವೋದ್ರೇಕಕ್ಕೆ ಎಡೆಮಾಡಿಕೊಡುವಂಥ ವಿಶಿಷ್ಟ ಅಂಶವಾದರೂ ಈ ಕವನಗಳಲ್ಲಿ ಎಲ್ಲಿದೆ ? ಎಂಬ ಬಗ್ಗೆ ಅವರಿಗೆ ಆಶ್ಚರ್ಯವಾಗಬಹುದು.

ವಿಭಿನ್ನವಾಯುಗುಣದಿಂದಾಗಿ ಸಸ್ಯವರ್ಗ ಹಾಗೂ ಪ್ರಾಣಿವರ್ಗಗಳಲ್ಲಿ ವ್ಯತ್ಯಾಸ ಕಂಡು

ಬರುತ್ತದೆ. ಉದಾಹರಣೆಗೆ ಬೈಬಲ್ಲಿನ ಜೆನಿಸಿಸ್‌ನ ಮೊದಲ ಅಧ್ಯಾಯಗಳನ್ನು ಉತ್ತರಧ್ರುವದ ಜನರ ಭಾಷೆಗಳಿಗೆ ಅನುವಾದಿಸಿದಾಗ ಕ್ರೈಸ್ತ ಮಿಷನರಿಗಳಿಗೆ ಇದೇ ತೊಂದರೆಯಾಯಿತು. ತೋಟದಲ್ಲಿ ಸೈತಾನನ ಕುತಂತ್ರ, ತೋಟದ ನಿರ್ಮಾಣ ಅಸಾಧ್ಯವೆನ್ನುವಂತಿರುವ ವಾಯುಗುಣದಲ್ಲಿ "ತೋಟ" ಎಂಬ ಶಬ್ದವನ್ನು ಬಳಸುವುದು ಅಷ್ಟು ವಿಹಿತವಲ್ಲ. ಇನ್ನೂ ಅಭಾಸವೆಂದರೆ ಧ್ರುವೀಯ ಪ್ರದೇಶದಲ್ಲಿ ಸರ್ಪಗಳು ವಾಸಿಸುವುದೇ ಇಲ್ಲ. ಸರೀಸೃಪ ಎನ್ನುವುದನ್ನು ವಿವರಿಸಬಹುದೆಂಬ ಸಂಗತಿ ನಿಜ; ಉಗುರುಗಳಿಲ್ಲದ, ರೆಕ್ಕೆಗಳಿಲ್ಲದ, ಕೈಗಳಿಲ್ಲದ ಪ್ರಾಣಿ; ಆದರೆ ಈ ವಿವರಣೆ ವಿಚಿತ್ರವೆಂಬಂತೆ ಭಾಸವಾಗುತ್ತದೆ. ಉದಾಹರಣೆಗೆ ಸರ್ಪದ ಬದಲು ಸ್ಥಳೀಯ ಸೀಲ್ ಪ್ರಾಣಿಯನ್ನು ಬಳಸುವುದು ಇನ್ನೊಂದು ರೀತಿಯ ಪರಿಹಾರ. ಆದರೆ ಇದು ಗೋಚರ ಸತ್ಯ ಹಾಗೂ ದೇವರ ನುಡಿಗೆ ವಿರುದ್ಧವಾಗುವುದರ ಜೊತೆಗೆ ಮೃದುತ್ವ, ಮೋಸ, ದ್ರೋಹ ಹಾಗೂ ಅದರ ಹಾನಿಕಾರಕ ವಿಷ ಇವುಗಳಿಗೆ ಪ್ರಸಿದ್ಧವಾದ ಸರ್ಪದ ಸಮಸ್ತಗುಣಗಳೂ ಸೈತಾನನ ಹೊಸ ಅವತಾರದಲ್ಲಿ ಕಾಣದೆ ಹೋಗುತ್ತವೆ.

ಏನೇ ಇರಲಿ, ಸಾಮಾನ್ಯವಾಗಿ ಬೈಬಲ್ಲಿನ ಬೇರೆ ಬೇರೆ ಭಾಷಾಂತರಗಳು ಇಂಥ ಬಗೆಯ ಮುಗಿಯದ ಕಷ್ಟಗಳನ್ನು ತಂದೊಡ್ಡುತ್ತವೆ. ಅವು ಕೇವಲ ವಾಯುಗುಣ, ಸಸ್ಯವರ್ಗ, ಪ್ರಾಣಿವರ್ಗ, ಜಲಶಾಸ್ತ್ರ, ಇತ್ಯಾದಿಗಳಿಂದ ಮಾತ್ರ ಉಂಟಾದುವಲ್ಲ. ಅವು ವಿನಯ ಹಾಗೂ ಮರ್ಯಾದಾ ನಿಯಮಗಳಿಂದ, ಸಾಮಾನ್ಯರೂಪಕಗಳಿಂದ, ಸಂಪ್ರದಾಯಗಳಿಂದ, ಜಾಣ್ಮೆಯಿಂದ ಕೂಡಿದ ಗಾದೆಗಳಿಂದ, ನೀತಿಶಾಸ್ತ್ರಗಳಿಂದ, ತಾಂತ್ರಿಕ ವಿಜ್ಞಾನಗಳಿಂದ, ಆರ್ಥಿಕತೆಗಳಿಂದ ಹಾಗೂ ಸಂಸ್ಥೆಗಳಿಂದ ಉಂಟಾಗುತ್ತವೆ. ಇಂಕಾ ಸಾಮ್ರಾಜ್ಯವನ್ನು ಗೆದ್ದ ಮೇಲೆ ಅದನ್ನು ಕ್ರಿಶ್ಚಿಯನ್ ಮತಕ್ಕೆ ಮತಾಂತರಿಸಬೇಕಾಯಿತು. ಖಾಸಗಿ ಸ್ವತ್ತಿನ ಬಗೆಗಾಗಲಿ ಅಥವಾ ಹಣಕಾಸಿನ ಬಗೆಗಾಗಲಿ ಯಾವ ಮಾಹಿತಿಯೂ ಇರದ ಕಮ್ಯುನಿಸ್ಟ್ ಸಮಾಜಕ್ಕೆ ಸಾಲದ ಹಣಕ್ಕೆ ಬಡ್ಡಿ ಬರುವ ಸಂಗತಿಯು ಬಗೆಗೆ ಇನ್ನಷ್ಟು ಕಡಿಮೆ ಮಾಹಿತಿಯಿರುತ್ತದೆ. ತನ್ನ ಯಜಮಾನನ ಹಣವನ್ನು ಹೂತಿಟ್ಟ ದುಷ್ಟಕಾರಬಾರಿ ಹಾಗೂ ಆ ಹಣ ಮತ್ತೆ ದೊರಕುವಂತೆ ಮಾಡಿದ ಒಳ್ಳೆಯ ಕಾರಬಾರಿಯ ನೀತಿಕಥೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಕಮ್ಯುನಿಸ್ಟ್ ಸದಸ್ಯರಿಗೆ ಕಷ್ಟವಾಗುತ್ತದೆ. ಹಣಕಾಸಿನ ನೋಟುಗಳ ಬಗ್ಗೆ ಸಂಬಂಧಿಸಿದಂತೆ ಮೊದಲು ಮಾಹಿತಿಯನ್ನು ಅನುಮಾನಾಡಿಕೊಳ್ಳಬೇಕು, ಹಾಗೂ ಬ್ಯಾಂಕ್ ಲೆಕ್ಕಗಳು ಮತ್ತು ಹಣದ ಆಧಾರದ ಮೇಲಣ ವ್ಯವಹಾರ ವಿಷಯಗಳನ್ನು ಅನುಮಾನಾಡಿಕೊಳ್ಳಬೇಕು. ಸೇವಕ ಹಣವನ್ನು ಬ್ಯಾಂಕಿಗೆ ತೆಗೆದುಕೊಂಡು ಹೋಗಿ ಕಟ್ಟದೇ ಇದ್ದುದರಿಂದ ಆ ಸೇವಕನನ್ನು ದುಷ್ಟನೆಂದು ವರ್ಣಿಸುವುದಾದರೂ ಹೇಗೆ ? ಅದೇ ರೀತಿ ಪ್ರತಿನಿತ್ಯವೂ ನೀರೆರೆದು ಗಾಳಿಯಿಂದ ರಕ್ಷಿಸಿ ಅತ್ಯಂತ ಎಚ್ಚರಿಕೆ ವಹಿಸಿ ಬೆಳೆಸಿದ ಒಂದು ಸಣ್ಣ ಗಿಡವೂ ಪವಿತ್ರವಾಗಿರುವಂಥ ಅರಿಜೋನ ಮರುಭೂಮಿಯಲ್ಲಿ ವಾಸವಾಗಿರುವ ಇಂಡಿಯನ್ನರಿಗೆ ಗೋಧಿ ಹಾಗೂ ಕಳೆಗಳ ನೀತಿಕಥೆ ಅವರ ಗೌರವಕ್ಕೆ ಹಾನಿಕಾರಿಯಾಗಿ ಪರಿಣಮಿಸುತ್ತದೆ. ಗಿಡಗಳನ್ನು ಬುಡಮೇಲು ಮಾಡಬೇಕೆಂದು ದೇವರು ಜನರಿಗೆ ಆಜ್ಞೆಯಿತ್ತಂಥ ಧರ್ಮದ ಬಗ್ಗೆ ಈ ಜನರಿಗೆ ಕೋಪ ತಂದಿತು. ಅಂಥ ದೇವರ ಬಗ್ಗೆ ಅವರು ಎಂದೂ ಗೌರವ ತೋರಿಸಲಾರರು. ಅದಕ್ಕೆ ಸಂವಾದಿಯಾದ ನೀತಿಕಥೆಯನ್ನು ಸೃಷ್ಟಿಸಬೇಕಾಗುತ್ತದೆ.

* * *

ಪ್ರತಿಯೊಂದು ರಾಜ್ಯದಲ್ಲೂ ಇಂಥ ಬಿಕ್ಕಟ್ಟು ಕಂಡುಬರುತ್ತದೆ. ಜಪಾನ್ ದೇಶದಲ್ಲಿ ಶ್ವೇತವರ್ಣ ಶೋಕ ಸೂಚಕ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅದು ಪರಿಶುದ್ಧತೆಯ ಚಿಹ್ನೆ. ಮೆಡಿಟ

ರೇನಿಯನ್ ಭಾಷಾಂತರಕಾರನಿಗೆ ಒಂದು ಜಪಾನೀ ಕಾದಂಬರಿಯಲ್ಲಿ ಈ ಕೆಳಕಂಡ ಭಾಗ ಕಂಡುಬರುತ್ತದೆ. "ಸಂಪೂರ್ಣವಾಗಿ ಶ್ವೇತ ಉಡುಪನ್ನು ಧರಿಸಿದ ಒಬ್ಬ ತರುಣಿ ಒಳಬಂದಳು." ಆತ ಇದನ್ನು ಪದಶಃ ಭಾಷಾಂತರಿಸಿದರೆ ಮೂಲ ಲೇಖಕ ಹೇಳಬೇಕೆಂದಿರುವ ಶವ ಸಂಸ್ಕಾರದ ಆಶಯವನ್ನು ಅನುವಾದಕಾರ ಯಾವ ವಿಧದಿಂದಲೂ ತಿಳಿಸಿಕೊಡಲಾರದೆ ಹೋಗುತ್ತಾನೆ. "ಸಂಪೂರ್ಣವಾಗಿ ಕರಿಯ ಉಡುಪನ್ನು ಧರಿಸಿದ" ಎಂದು ಭಾಷಾಂತರಿಸಿದರೆ ಉತ್ತಮವೆಂದು ತೋರುತ್ತದೆ. ಪರ್ಯಾಯವಾಗಿ ವಿಕ್ಟರ್ ಹ್ಯೂಗೋನ "Vetu de Probite candide de te lin blanc" ಸಾಲುಗಳನ್ನು ಜಪಾನೀ ಭಾಷೆಗೆ ಪದಶಃ ಭಾಷಾಂತರಿಸಿದಾಗ ಯಾವುದೋ ವ್ಯಕ್ತಿ ತನ್ನ ಆತ್ಮೀಯರನ್ನು ಕಳೆದುಕೊಂಡ ಅಭಿಪ್ರಾಯ ಬರುತ್ತದೆ. ಪುಟದ ಕೊನೆಯಲ್ಲಿ ಹೊರಳು ಮಾತಿನಿಂದ ಕೂಡಿದ ಅಡಿಟಿಪ್ಪಣಿ ಇರುವುದು ನಿಜವಾದರೂ, ಇದರಿಂದ ಕಥೆಯ ಓಟಕ್ಕೆ ಭಂಗ ಬರುತ್ತದೆ; ಇಂಥ ತಂತ್ರವನ್ನು ಅಡಿಗಡಿಗೆ ಬಳಸಕೂಡದು.

ಕೃತಿ ಹೆಚ್ಚುಹೆಚ್ಚಿಗೆ ಸಾಹಿತ್ಯಕ್ಕೆ ಸಂಬಂಧಿಸಿದಂತೆಲ್ಲ ಇಂಥ ಬಗೆಯ ಸಂದಿಗ್ಧತೆಗಳು ಉದ್ಭವಿಸುತ್ತವೆ. "ದಿ ಸಾಂಗ್ ಆಫ್ ಸಾಂಗ್ಸ್" ಕೃತಿಯಲ್ಲಿ ಪತ್ನಿಯನ್ನು 'ಚಂದ್ರನಷ್ಟು ಸುಂದರಿ' ಎಂದು ಪ್ರಶಂಶಿಸಲಾಗಿದೆ. ಪೌರಸ್ತ್ಯ ದೇಶಗಳಲ್ಲಿ ಇದು ಅತ್ಯಂತ ಮೆಚ್ಚುಕೆಯ ಮಾತುಗಳು. ಆದರೆ ಇದೇ ಮಾತುಗಳನ್ನು ಪಾಶ್ಚಾತ್ಯ ಮಹಿಳೆಗೆ ಅನ್ವಯಿಸುವುದಾದರೆ ಬಹುಶಃ ಈ ಮಾತುಗಳನ್ನು ಒಪ್ಪಲಾರಳೆಂದು ತೋರುತ್ತದೆ. ಓಸುನಾ ಡ್ಯೂಕನ ನೆನಪಿಗಾಗಿ ಕ್ವೇವೇಡೋ ರಚಿಸಿರುವ ಸುನೀತ ಈ ಸಾಲುಗಳಿಂದ ಮುಕ್ತಾಯಗೊಳ್ಳುತ್ತದೆ. "y su epitafio la Sangrienta Luna". ಯುದ್ಧದಲ್ಲಿ ತುರ್ಕಿ ಜನರು ಸೋತು ತೀವ್ರ ಹಾನಿಗೊಳಗಾದರೆಂಬ ಪೂರ್ವ ಸೂಚನೆ ಈ ಸಾಲಿನಿಂದ ಗೊತ್ತಾಗುತ್ತದೆ. ಹಾಗಾಗಿ 'ರಕ್ತಸಿಕ್ತ ಚಂದ್ರ' ಎಂದು ಇದನ್ನು ಭಾಷಾಂತರಿಸಿದರೆ ಇಡೀ ಸಾಲಿನ ಅರ್ಥವೇ ಕೆಟ್ಟುಹೋಗುತ್ತದೆ. 'ಚೌತಿ ಚಂದ್ರ' ಎಂದು ಅನುವಾದಿಸಬೇಕಾಗುತ್ತದೆ. ಸ್ಪ್ಯಾನಿಷ್ ಭಾಷೆಯಲ್ಲಿ ಈ ಅರ್ಥದಲ್ಲಿ ಈ ಪದವನ್ನು ಬಳಸುವುದಿಲ್ಲ. ಈ ಪದದ ಪ್ರಯೋಗದಿಂದ ಸುಲ್ತಾನನ ಸೈನ್ಯಗಳ ಬಗ್ಗೆ ಸ್ಪಷ್ಟ ಉಲ್ಲೇಖ ದೊರಕಿದಂತಾಗುತ್ತದೆ. ಕೊನೆಯದಾಗಿ ಪ್ರಸಿದ್ಧ ಕವಿಯ ಸುಪ್ರಸಿದ್ಧ ಪ್ರತಿಮಾ ವಿಧಾನವನ್ನು ಕುರಿತಂತೆ ಸೂಕ್ಷ್ಮಾತಿಸೂಕ್ಷ್ಮ ಉಲ್ಲೇಖವಿರುವ ಚೀನೀ ಕಾವ್ಯದ ಪ್ರತಿಯೊಂದು ಸಾಲಿನ ಬಗೆಗೂ ಯಾರಾದರೂ ಹೇಳುವುದಾದರೂ ಏನಿದೆ?

ಹಾಗಾಗಿ ಪ್ರತಿಯೊಂದು ಸಂಕೇತಗಳಲ್ಲಿ (ಪ್ರತಿಯೊಂದು ಭಾಷೆಯಲ್ಲಿ) ಯಾವೊಂದು ಪದವೇ ಆಗಲಿ–ಅತ್ಯಂತ ಸಾಮಾನ್ಯ ಪದವೂ ಸಹ–ಅದಕ್ಕೆ ಸಂವಾದಿಯಾದ ವಿದೇಶೀ ಪದಕ್ಕೆ ನಿಷ್ಕೃಷ್ಟ ಸಮಾನಾರ್ಥಕ ಪದವಾಗಲಾರದು. ಅದು ಬೇರೆ ಬೇರೆ ಅರ್ಥಗಳಿಂದ ಕೂಡಿರುತ್ತದೆ. ಜರ್ಮನ್ ಕವಿ ಹಾಗೂ ಫ್ರೆಂಚ್ ಸೈನಿಕ–ಇವರಿಬ್ಬರಿಗೂ ರೈನ್‌ನದಿ ಒಂದೇ ಅರ್ಥವನ್ನು ನೀಡುವುದಿಲ್ಲ. ಈ ಸಂಗತಿಯನ್ನು ಹೆಚ್ಚು ಸ್ಪಷ್ಟವಾಗಿ ಅಭಿವ್ಯಕ್ತಪಡಿಸುವುದೆಂದರೆ ಬಹುಶಃ ಬೀದಿಯ ಹೆಸರುಗಳೆಂದು ತೋರುತ್ತದೆ. Rue de La Paix ಅಥವಾ Place de j'Etoile ಪದಗಳನ್ನು ಇಂಗ್ಲಿಷಿಗೂ ಹಾಗೂ ಸ್ಕಾಟ್‌ಲೆಂಡ್‌ಯಾರ್ಡ್ ಪದವನ್ನು ಫ್ರೆಂಚಿಗೂ ಭಾಷಾಂತರಿಸುವಷ್ಟು ಸುಲಭವಾದದ್ದು ಬೇರೊಂದು ಇರಲಾರದು. ಆದಾಗ್ಯೂ 'ವೇಸ್ಟ್‌ಸ್ಟ್ರೀಟ್' 'ಸ್ಟಾರ್‌ಪ್ಲೇಸ್' ಅಥವಾ 'Cour d' Ecosse' ಎಂದು ಅವುಗಳನ್ನು ಭಾಷಾಂತರಿಸಬೇಕೆಂಬ ಬಗ್ಗೆ ಯಾವನೂ ಕನಸು ಕಂಡಿಲ್ಲ. ಈ ಮೂರೂ ಸ್ಥಳಗಳಿಗೆ ಒಂದು ಐತಿಹ್ಯವಿದೆ, ಇವುಗಳ ಉಗಮದ ಬಗ್ಗೆ ನೈಜತೆಯಿದೆ ಹಾಗೂ ಪ್ರಸಿದ್ಧಿಯಿದೆ. ಹಾಗಾಗಿ ತಮಗೆ ನೀಡಿರುವ ಹೆಸರಿನ ಬಲದ ಮೇಲೆಯೇ ಅವು ಸ್ವತಂತ್ರವಾಗಿ ನಿಂತಿರಬಲ್ಲವು. ಹಾಗಾಗಿ ಅವುಗಳನ್ನು ಭಾಷಾಂತರಿಸುವುದರಿಂದಲೇ ಅವುಗಳ ವ್ಯಕ್ತಿತ್ವ ಹೋಗಿಬಿಡುವ ಸಂಭವವುಂಟು. ಆದರೆ ಬ್ಯೂನಸ್‌ಐರ್ಸ್

ನಲ್ಲಿರುವ Paseo de Julio ಅವೆನ್ಯೂವನ್ನಾಗಲಿ–ಇಲ್ಲಿ ಒಂದಾದ ಮೇಲೊಂದರಂತೆ ನಾವಿಕರ ರಾತ್ರಿಕ್ಲಬ್ಬುಗಳಿವೆ–ಅಥವಾ ಹಿಡಿಮಂದಿ ದೇಶಭಕ್ತರು ಕೈಗೊಂಡ ವೀರೋಚಿತ ದಂಡಯಾತ್ರೆಯ ನೆನಪಿಗಾಗಿ ಹೆಸರಿಸಲಾದ Calle Treinta y Tres ಅವೆನ್ಯೂವನ್ನಾಗಲೀ ಫ್ರೆಂಚ್‌ಭಾಷೆಗೆ Promenade de Juillet ಹಾಗೂ Rue des Trente-Trois ಎಂದು ಭಾಷಾಂತರಿಸಕೂಡದೆಂಬ ಅಭಿಪ್ರಾಯದ ಬಗೆಗೆ ನಾನು ಏನೂ ಹೇಳಲಾರೆ. ಏಕೆಂದರೆ ಬಹುಸಂಖ್ಯಾತ ಯೂರೋಪಿಯನ್ ಓದುಗರಿಗೆ ಅವರ ನಗರಗಳಲ್ಲಾಗಲೀ ಅಥವಾ ಅವರ ಸಾಹಿತ್ಯದಲ್ಲಾಗಲೀ ಈ ರಸ್ತೆಗಳ ಹೆಸರು ಕಾಣಸುವುದಿಲ್ಲ. ಅಲ್ಲದೆ ಯಾವ ಐತಿಹಾಸಿಕ ಜುಲೈ ತಿಂಗಳು ಅಥವಾ ಯಾವ ಮೂವತ್ತುಮೂರು ಮಂದಿ ದೇಶಭಕ್ತರನ್ನು ಕುರಿತದ್ದು ಎಂಬಿವೇ ಮೊದಲಾದ ಸಂಗತಿಗಳು ಬಹುಶಃ ಓದುಗರಿಗೆ ತಿಳಿದಿರಲಾರದು.

ಸೆಯಿಂಟ್ ಪೀಟರ್ಸ್‌ಬರ್ಗ್‌ನಲ್ಲಿರುವ (ಲೆನಿನ್‌ಗ್ರಾಡ್) "ನೇವ್ಸ್ಕಿ ಪ್ರಾಸ್ಪೆಕ್ಟ್" ಅವೆನ್ಯೂದ ಫ್ರೆಂಚ್ ಸಂಪ್ರದಾಯ ಭಾಷಾಂತರ 'ಪರ್ಸ್ಪೆಕ್ಟಿವ್ ನೇವ್ಸ್ಕಿ' ಎಂದಾಗುತ್ತದೆ. ಉದಾಹರಿಸಬಹುದಾದ ವಿಶಿಷ್ಟ ಉದಾಹರಣೆಯಿದು. ಇದು ತಪ್ಪು ಭಾಷಾಂತರವಲ್ಲದಿದ್ದರೂ ಭಯಂಕರ ಅನುವಾದವೆನ್ನಬಹುದು. ಏಕೆಂದರೆ ಸಾಮಾನ್ಯವಾಗಿ ಓದುಗ ತಾನು ಕೇಳಿ ತಿಳಿದಿದ್ದ ರಾಷ್ಟ್ರೀಯ ವೀರ ರಾಜಕುಮಾರ ಅಲೆಕ್ಸಾಂಡರ್ ನೇವ್‌ಸ್ಕಿಯ ನೆನಪಿಗಾಗಿ ಈ ಹೆಸರು ಈ ಅವೆನ್ಯೂಗೆ ಬಂದಿರಬಹುದೆಂದು ಭಾವಿಸುತ್ತಾನೆ. ಆತನಿಗೆ ರಷ್ಯನ್ ಭಾಷೆ ತಿಳಿಯದ ಹೊರತು ನೇವಾ ನದಿಯ ತೀರದವರೆಗೂ ಮುಂದುವರಿದ ಆ ರಸ್ತೆ ಕೇವಲ Avenue de La Neva ಎಂಬುದನ್ನು ಪತ್ತೆಹಚ್ಚಲಾರ. ಆದರೆ ಅಂಥ ವಿವಾದಾತ್ಮಕ (ಇಲ್ಲವೆ ಭಾಷಾಂತರದ ನ್ಯೂನತೆಯಿಂದ ಕೂಡಿದ) ಅನುವಾದವನ್ನು ತಿದ್ದುವುದು ಉಚಿತವೆ? ವೈಯಕ್ತಿಕವಾಗಿ ನಾನು ಅದನ್ನು ಸಂದೇಹಿಸುತ್ತೇನೆ. ಸುಪ್ರಸಿದ್ಧ ರಷ್ಯನ್ ಕೃತಿಗಳ ಅನೇಕ ಫ್ರೆಂಚ್ ಅನುವಾದಗಳಲ್ಲಿ ಓದುಗನಿಗೆ 'ಪರ್ಸ್ಪೆಕ್ಟಿವ್ ನೇವ್ಸ್ಕಿ' ಎಂಬ ನುಡಿಗಟ್ಟು ಪರಿಚಿತವಾಗಿದ್ದು ಅನಿರೀಕ್ಷಿತವಾಗಿ ಆತನ ಎದುರಿಗೆ Avenue de La Neva ಎಂಬ ಮಾತು ಯಾವುದೋ ಒಂದು ಸಂದರ್ಭದಲ್ಲಿ ಬಂದರೆ, ಕತೆಗಾರ ಬೇರಾವುದೋ ಅವೆನ್ಯೂವನ್ನು ವರ್ಣಿಸುತ್ತಿದ್ದಾನೆ ಎಂದು ಓದುಗ ಊಹಿಸಿಕೊಳ್ಳುತ್ತಾನೆ. ಸಂಪ್ರದಾಯವೆಂಬುದು ಒಂಬತ್ತು ಅಂಶಗಳ ನಿಯಮವಾದ್ದರಿಂದ ಭಾಷಾಂತರದಲ್ಲಿ ದೋಷಗಳೂ ಕೂಡ ಅಂತಿಮವಾಗಿ ಪರಿಣಮಿಸುತ್ತವೆ.

* * *

ಈಗಿನ ಪರಿಸ್ಥಿತಿಗಳಲ್ಲಿ ಎಲ್ಲವೂ ಒಂದು ಸಂಕೇತಗಳ ವ್ಯವಸ್ಥೆಯಾಗಿದ್ದು ಸಂಕೇತಗಳು ಆಗಾಗ್ಗೆ ಮರೆತುಹೋಗುವ ಸಂಭವವುಂಟು. ಆದರೆ ಇವುಗಳ ಗುರುತು ನಮ್ಮ ಭಾಷೆಗಳಲ್ಲಿ ಇಂದಿಗೂ ಇದೆ. ಇವುಗಳ ಪ್ರಭಾವ ಮುಂದಿನ ಅನುವಾದಗಳಲ್ಲೂ ಕಾಣಿಸಿಕೊಳ್ಳುವುದುಂಟು. ಇವಕ್ಕೆ ಕಾರಣ ಸ್ಪಷ್ಟ. ಇವು ವಾಸ್ತವ ಪದಗಳಂತೂ ಅಲ್ಲ. ವಾಸ್ತವ ಪದಗಳಾಗಿದ್ದರೆ ಅವುಗಳ ಬದಲು ಬೇರೆ ಪದಗಳನ್ನು ಬಳಸಬಹುದಾಗಿತ್ತು, ಇಲ್ಲವೆ ಬದಲಾವಣೆಗೊಳಿಸಬಹುದಾಗಿತ್ತು. ಅಗತ್ಯಬಿದ್ದರೆ ವಿವರಿಸಬಹುದಾಗಿತ್ತು. ಈ ವಾಸ್ತವ ಪದಗಳನ್ನು ಭಾಷಾಂತರಿಸುವುದು ಕಷ್ಟದ ಸಂಗತಿಯಲ್ಲ. ಆದರೆ ಅವುಗಳ ಹಿಂದೆ ಅಡಗಿರುವ ಮೂಲಭೂತ ಭಾವನೆಗಳು ಹಾಗೂ ಅನುಭವಗಳನ್ನು ಅನುವಾದಿಸುವುದು ಕಷ್ಟವಾಗುತ್ತದೆ. ಅಲ್ಲದೆ ಅವು ಎಂದಿಗೂ ಸಂಪೂರ್ಣವಾಗಿ ಪರಿವರ್ತನೀಯವಾಗಲಾರವು.

ಈ ಘಟ್ಟದಲ್ಲಿ ಸಮಾನತ್ವಗಳ ತಂತ್ರ ಚೀಟಿಗಳಂತೆ ಅದಲು ಬದಲುಗೊಳ್ಳುವ ಸರಳ ಸಂಗತಿಯಲ್ಲ ಎಂಬುವನ್ನು ಯಾರೇ ಆಗಲಿ ಮನಗಾಣುತ್ತಾರೆ. ಲೇಖಕನ ಯಾವುದೇ ಒಂದು

ನಿರ್ದಿಷ್ಟ ಸಂವೇದನಾ ಶೀಲತೆಯನ್ನು ಕುರಿತು ನೂತನಾವದೆ ಇಡೀ ನಾಗರಿಕತೆಯನ್ನೇ ಪರಿಗಣಿಸ ಬೇಕಾಗುತ್ತದೆ. ಬೀದಿಯ ಹೆಸರುಗಳು ಇದಕ್ಕೆ ಉತ್ತಮ ಉದಾಹರಣೆ. ಅತ್ಯಂತ ಸುಲಭ ಭಾಷಾಂತರ ಸದಾ ಅಪೇಕ್ಷಣೀಯವಲ್ಲ. ಯಾರೇ ಆಗಲಿ ಪ್ರಾಮಾಣಿಕತೆ ಹಾಗೂ ನಿರ್ದುಷ್ಟತೆ ಯನ್ನೇ ಗುರಿಯಾಗಿಟ್ಟುಕೊಂಡು ಅನುವಾದಕ್ಕೆ ತೊಡಗಿದ್ದರೆ ಅಂಥದನ್ನು ಕೈಬಿಡಬೇಕಾಗುವುದು ಅನಿವಾರ್ಯವಾಗುತ್ತದೆ. 'Wilhelm strasse' ಎಂದರೆ 'rue Guillaume'. ಚಕ್ರವರ್ತಿ ಗಳ ಹೆಸರನ್ನು ಅನುವಾದಿಸುವುದು ಫ್ರೆಂಚ್ ಭಾಷೆಯಲ್ಲಿ ಸಂಪ್ರದಾಯ. ಆದರೆ ಈ ನಿರ್ದಿಷ್ಟ ಚಕ್ರವರ್ತಿಯ ಹೆಸರನ್ನು ನೆನಪಿಗೆ ತರುವಂಥ ರಸ್ತೆಯ ಹೆಸರನ್ನು ಅನುವಾದಿಸುವ ಸಾಹಸಕ್ಕೆ ನಾನು ತೊಡಗಿದರೆ ರೈಖ್ (ಜರ್ಮನ್) ಆಡಳಿತದ ಸ್ಥಾನವೆಂಬ ಸಂಗತಿಯನ್ನು ಮುಚ್ಚಿಟ್ಟಂತಾ ಗುತ್ತದೆ. ಈ ಅಂಶವನ್ನೇ ನಾವು ನಿರ್ದುಷ್ಟವಾಗಿ ಅರ್ಥಮಾಡಿಕೊಳ್ಳಬೇಕೆಂಬುದು ಮೂಲ ಲೇಖಕನ ಆಶಯವಾಗಿದೆ.

* * *

ಅಸಾಮಾನ್ಯ ವಿವರಗಳನ್ನೆಲ್ಲ ನಾನು ಕೈಬಿಟ್ಟು ಸಂಸ್ಕೃತಿ ಮತ್ತು ಯುಗಧರ್ಮದ ಸಾಮಾನ್ಯ ಸಂವೇದನ ಶಕ್ತಿಗಳನ್ನು ಕುರಿತು ತಿಳಿಸುತ್ತೇನೆ. ಇಲ್ಲಿ ಅಳವಡಿಸಿಕೊಂಡಿರುವ ಮಾರ್ಗಗಳು ಅನಿರೀಕ್ಷಿತವಾದ ಅನ್ಯ ಮಹತ್ವವನ್ನು ಹೊಂದಿವೆ ; ಇಲ್ಲವೆ ವೈದೃಶ ಸಂಕೇತಗಳಿಂದ ಮುಚ್ಚಿಹೋಗಿವೆ ; ಇಲ್ಲಿ ಅಧ್ಯಾಹಾರಗಳನ್ನು ಮೆಚ್ಚಿಕೊಂಡರೆ ಅಲ್ಲಿ ಅವುಗಳಿಗಾಗಿ ಒತ್ತಾಯ ಇಲ್ಲಿ ವ್ಯಂಗ್ಯಾರ್ಥ ಸೂಚಕ, ಅಲ್ಲಿ ಅವುಗಳಿಗೆ ಮಹತ್ವ; ಅನುದ್ವೇಗ ಅಥವಾ ತೀಕ್ಷ್ಣತೆ; ಪುನರುಕ್ತತೆ ಅಥವಾ ಸೂಚನೆ; ಅತ್ಯುಕ್ತಿ ಅಥವಾ ಉಪೇಕ್ಷೆ. ಪ್ರತಿಯೊಂದು ರೂಪಕವೂ ಸಾಹಿತ್ತಿಕ "ಕಾವಿ"ನಿಂದ ಕೂಡಿರುತ್ತದೆ. ಸ್ವಲ್ಪ ಎಚ್ಚರಿಕೆ ವಹಿಸದಿದ್ದರೆ ಅದನ್ನು ಸ್ಥಳಾಂತರಿ ಸುವುದು ಕಷ್ಟವಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ" ಒಂದೇ ಭಾಷೆಯಲ್ಲಿಯೇ ಅದು ನಿರಂತರ ಬದಲಾಗುತ್ತಿರುತ್ತದೆ. ಈಲಿಯಡ್, ಏನಿಯಡ್, ಅರೇಬಿಯನ್ ನೈಟ್ಸ್ ಕೃತಿಗಳನ್ನು ಜನರು ಭಾಷಾಂತರಿಸತೊಡಗಿದಂದಿನಿಂದಲೂ ಪ್ರತಿಯೊಂದು ಯುಗವೂ ಈ ಕೃತಿಗಳ ತನ್ನದೇ ಆದ ಭಾಷಾಂತರಗಳನ್ನು ಹೊಂದಿದೆ. ಜನರಿಂದ ಮೆಚ್ಚುಕೆ ಪಡೆದು ಭಾಷಾಂತರಕಾರನ ಕಾಲ ದಲ್ಲಿಯೇ ಆತನ ಶೈಲಿಯಲ್ಲಿಯೇ ರಚಿತವಾದ ಕೃತಿಗಳಿಗೂ, ಹೋಮರ್, ವರ್ಜಿಲ್ ಮತ್ತು ಅರೇಬಿಯನ್ ಕಥನಕಾರರು ರಚಿಸಿರುವ ಮೂಲ ಕೃತಿಗಳಿಗೂ ಹೆಚ್ಚು ಸಮಾನ ಅಂಶಗಳು ಕಂಡುಬರುವುದಿಲ್ಲ.

ವಿಶೇಷವಾಗಿ ರಂಗಮಂದಿರದಲ್ಲಿ ರಂಗ ಸಂಪ್ರದಾಯ ಹಾಗೂ ಪ್ರೇಕ್ಷಕರ ಮೇಲೆ "ಪರಿ ಣಾಮ ಬೀರುವ" ಅಗತ್ಯತೆ ತುಂಬ ಇರುವುದರಿಂದ ಭಾಷಾಂತರ ಹಾಗೂ ರೂಪಾಂತರಗಳ ನಡುವೆ ಭೇದಕಲ್ಪಿಸುವುದು ಒಮ್ಮೊಮ್ಮೆ ಕಷ್ಟವಾಗುತ್ತದೆ. ಸಾಮಾನ್ಯವಾಗಿ ರೂಪಾಂತರವನ್ನೇ ಭಾಷಾಂ ತರವೆಂದು ಪರಿಗಣಿಸುವುದುಂಟು. ಷೇಕ್ಸ್‌ಪಿಯರನ ನಾಟಕಗಳ ಮೊದಲ ಫ್ರೆಂಚ್ "ಅನು ವಾದ" ಗಳು ಅವುಗಳನ್ನು ಕ್ಲಾಸಿಕಲ್ ಫ್ರೆಂಚ್ ರುದ್ರನಾಟಕಗಳಾಗಿ ಪರಿವರ್ತಿಸಲು ಸಾಧನ ವಾದವು ; ಅವು ಮೂರು ಐಕ್ಯಗಳಲ್ಲಿ (ಕಾಲೈಕ್ಯ, ಸ್ಥಳೈಕ್ಯ, ಕ್ರಿಯೈಕ್ಯ) ಬಲಾತ್ಕಾರವಾಗಿ ವಿಲೀನಗೊಂಡವು. ಇದಕ್ಕೆ ವಿರುದ್ಧವಾಗಿ ಇಂಗ್ಲೆಂಡಿನಲ್ಲಿ ರಾಸ್ಯೆನನನ್ನು ಭಾಷಾಂತರಿಸಿದಾಗ ಆ ಭಾಷಾಂತರ ಒಂದು ರೀತಿ ಎಲಿಜಬೆತನ್ ಶೈಲಿಗೆ ಸಮೀಪವೆಂದು ತೋರಿತು. ಉದಾಹರಣೆಗೆ ರಂಗಮಂಟಪದ ಮೇಲೆ ಔತಣಕೂಟದಲ್ಲಿ ನೀರೋ ಚಕ್ರವರ್ತಿ ಬ್ರಿಟಿಷ್ ಅಧಿಕಾರಿಗೆ ವಿಷಪ್ರಾಶನ ಮಾಡಿಸಿದುದನ್ನು ತೋರಿಸುವುದು.

ಒಂದು ವೈಪರೀತ್ಯ ಸಂದರ್ಭವನ್ನು ತೆಗೆದುಕೊಳ್ಳೋಣ: ಹ್ಯಾಮ್ಲೆಟ್ ಅಥವಾ ಕಿಂಗ್

ಲಿಯರ್ ನಾಟಕಗಳನ್ನು ಇಂಡೋನೇಶಿಯದ ಜನರು ತಮ್ಮ ಛಾಯಾರಂಗಮಂದಿರದಲ್ಲಿ ಅಭಿನಯಿಸ ಬಯಸುತ್ತಾರೆ. ಅವರ ಸಂಪ್ರದಾಯದಂತೆ ಈ ನಾಟಕಾಭಿನಯ ಕೇವಲ ಮುಕ್ಕಾಲುಗಂಟೆಯ ಅವಧಿಯಲ್ಲಿ ಮುಗಿದುಹೋಗುತ್ತದೆ. ಸಾಕಷ್ಟು ಕಡೆ ಕತ್ತರಿಪ್ರಯೋಗ ಹಾಗೂ ಯಾದೃಚ್ಛಿಕ ಸರಳೀಕರಣದ ಮಾರ್ಗವನ್ನು ಅವರು ಅನುಸರಿಸದೆ ವಿಧಿಯಿಲ್ಲ. ಇಲ್ಲಿ ಇತರ ಬಗೆಯ ಆವಿಷ್ಕಾರಗಳು ಲಾಭದಾಯಕವಾಗಿ ಪರಿಣಮಿಸುತ್ತವೆ. ಸೆನೆಗಲ್ ಗಣರಾಜ್ಯದ ನಾಟಕಮಂಡಳಿ ಸಾಧಿಸಿದ ವಿಜಯಗಳ ಪೈಕಿ ಫ್ರಾಂಕೊಯಿಸ್ ವಿಕ್ಟರ್ ಹ್ಯೂಗೊ ಫ್ರೆಂಚ್ ಭಾಷೆಯಲ್ಲಿ ಅನುವಾದಿಸಿರುವ ಮ್ಯಾಕ್‌ಬೆತ್ ನಾಟಕವೂ ಒಂದು. ಅಪರಿಹಾರ್ಯವಾದ ಕನಿಷ್ಠ ಬದಲಾವಣೆಗಳಿಂದ ಈ ಅನುವಾದ ಕೂಡಿದೆ. ಉದಾಹರಣೆಗೆ ಅಪ್ರಧಾನ ವ್ಯಕ್ತಿಗಳ ಹೆಸರನ್ನು ಬದಲಾಯಿಸಿದೆ. ಹಾಗಾಗಿ ಇದು ಆಫ್ರಿಕನ್ ಗೊಂಡಾರಣ್ಯದ ನಾಟಕವಾಗಿ ಪರಿಣಮಿಸಿದೆ. ನಾಟಕದ ಭಾಗಗಳಾಗಿರದ, ಆದರೆ ಇಲ್ಲಿ ತುಂಬ ಒಗ್ಗಿಹೋಗಿರುವ ಶೃಂಗಾರ ಸಾಧನಗಳ ಬಗ್ಗೆಯಾಗಲಿ ಅಥವಾ ವಸ್ತ್ರಾಲಂಕಾರಗಳ ಬಗ್ಗೆಯಾಗಲೀ ನಾನು ಹೇಳುತ್ತಿಲ್ಲ. ಈ ಒಂದು ಮಿತವ್ಯಯವಾದ ವೆಚ್ಚದಿಂದ ಹಳೆಯ ಕೃತಿ ತನ್ನ ಒರಟು ಶಕ್ತಿಯನ್ನು ಮರಳಿಪಡೆದಿದೆ. ಮಾಟಗಾತಿಯರು ಇನ್ನು ಮುಂದೆ ಗೂಢಾರ್ಥ ಪ್ರತಿಪಾದಕರೆಂದು ತೋರುವುದಿಲ್ಲ. ಮಂತ್ರತಂತ್ರ ಮತ್ತೊಮ್ಮೆ ಪರಿಣಾಮಕಾರಿಯಾಗುತ್ತದೆ, ಭಯ ಹುಟ್ಟಿಸುತ್ತದೆ ಹಾಗೂ ಸರ್ವವ್ಯಾಪಿ ಶಕ್ತಿಯಾಗಿ ಪರಿಣಮಿಸುತ್ತದೆ. ಭ್ರಮೆಗಳು ಸ್ವಾಭಾವಿಕವೆಂದೇ ಭಾಸವಾಗುತ್ತವೆ; ಅಲ್ಲದೆ ಅವು ಇನ್ನು ಹೆಚ್ಚುಕಾಲ ಭಯಹುಟ್ಟಿಸಲಾರವು. ಕಾಲ್ಪನಿಕ ಹಾಗೂ ವಾಸ್ತವಿಕತೆಗಳು ಬಿಡಿಸಲು ಬಾರದಂಥವು. ಇಂಥ ಸಂದರ್ಭದಲ್ಲಿ ರೂಪಾಂತರ ಕಾರ್ಯ ಏಕಕಾಲದಲ್ಲಿ ಪುನರುತ್ಥಾನ ಹಾಗೂ ಪುನರುಜ್ಜೀವನ ಕ್ರಿಯೆಯಾಗಿ ಪರಿಣಮಿಸುತ್ತದೆ. ಅಂಥ ಒಂದು ರೂಪಾಂತರಣಕ್ಕೆ ಈ ನಾಟಕ ವಿಶೇಷವಾಗಿ ಹೊಂದಿಕೊಂಡಿದೆ ಎಂಬುದು ಸತ್ಯಸಂಗತಿಯಾಗಿದೆ.

ಆದರೂ ನಾವು ತಪ್ಪು ಎಸಗುವುದು ಬೇಡ. ಪ್ರಾಮಾಣಿಕ ಭಾಷಾಂತರವನ್ನು ಕುರಿತಂತೆ ಇರುವ ಭಾವನೆ ಈಚಿನದು. ಪವಿತ್ರ ಗ್ರಂಥಗಳಲ್ಲಿ ದೈವಿಕ ಪದಕ್ಕೆ ಗೌರವನೀಡುವ ಸಂಗತಿ, ಹೆಚ್ಚಿನ ಭಕ್ತಿಗೌರವಗಳಿಗೆ ಎಡೆಮಾಡಿಕೊಟ್ಟಂತಹ ಪವಿತ್ರ ಗ್ರಂಥಗಳ ವಿಷಯವನ್ನು ನಾವು ಕೈಬಿಟ್ಟಲ್ಲಿ ಅದು ಬಹುಶಃ 18ನೆಯ ಶತಮಾನದ ಕೊನೆಯಲ್ಲಿ ಇಲ್ಲವೆ 19ನೆಯ ಶತಮಾನದ ಆರಂಭದಷ್ಟು ಹಿಂದಕ್ಕೆ ಹೋಗುವಂತೆ ಕಂಡುಬರುತ್ತದೆ. ಹೆಚ್ಚಿಗೆ ವಿಷಯಗಳನ್ನು ಸೇರಿಸದೆ, ಇರುವ ವಿಷಯವನ್ನು ಕೈಬಿಡದೆ, ಉದ್ದೇಶಪೂರ್ವಕ ಬದಲಾವಣೆಗಳನ್ನು ಮಾಡದೆ ಯಾವುದೇ ಗ್ರಂಥವನ್ನು ಯಥಾವತ್ತಾಗಿ ಅನುವಾದಿಸುವ ಪದಶಃ ಭಾಷಾಂತರದ ಕಲ್ಪನೆ ಕೇವಲ ಶೈಕ್ಷಣಿಕ ವಲಯಗಳಿಗಷ್ಟೇ ಸೀಮಿತವಾಗಿರದೆ ಇಂದಿಗೂ ಹಲವು ರಾಷ್ಟ್ರಗಳಿಗೆ ಒಳಪಟ್ಟಿದೆ. ಇವೂ ಸಂಪೂರ್ಣವಾಗಿ ಈ ಅಭಿಪ್ರಾಯಗಳಿಗೆ ಬದ್ಧವಾಗಿಲ್ಲ. ಅರಿಸ್ಟಾಟಲನ ಕೃತಿಗಳಲ್ಲಿ ಒಂದನ್ನು ಅರ್ಯಾಬಿಕ್ ಭಾಷೆಗೆ ಅನುವಾದಿಸುವಂತೆ ಒಬ್ಬ ಲೆಬನೀಸ್ ಕ್ರಿಶ್ಚಿಯನ್ ಸನ್ಯಾಸಿಯನ್ನು ಕೇಳಿದಾಗ, ಆತನೊಡನೆ ನಡೆಸಿದ ಪತ್ರವ್ಯವಹಾರದಲ್ಲಿ ನನಗೆ ಪ್ರತ್ಯಕ್ಷ ಸಂಗತಿ ಗೋಚರಕ್ಕೆ ಬಂತು. ಭಾಷಾಂತರಕಾರನಿಗೆ ನನ್ನ ವಿಸ್ಮಯವನ್ನು ವ್ಯಕ್ತಪಡಿಸಿದೆ. ನನ್ನ ವಿಸ್ಮಯದ ಬಗ್ಗೆ ತಾನು ಪ್ರತಿಯಾಗಿ ತನ್ನ ವಿಸ್ಮಯವನ್ನು ವ್ಯಕ್ತಪಡಿಸುತ್ತಿರುವುದಾಗಿ ಆತ ತಿಳಿಸಿದನು. ಅರಿಸ್ಟಾಟಲ್ ಪ್ರಸಿದ್ಧ ದಾರ್ಶನಿಕ. ಆದರೆ ವಿಜ್ಞಾನ ಮತ್ತು ತತ್ತ್ವಶಾಸ್ತ್ರಗಳು ಹಿಂದಿನಿಂದಲೂ ಗಣನೀಯವಾಗಿ ಮುನ್ನಡೆದಿವೆ. ಹಾಗಾಗಿ ತನ್ನ ಕೃತಿಯಲ್ಲಿ ಕಾಣುವ ದೋಷಗಳನ್ನು ಯಾವುದೇ ಶಾಲಾಬಾಲಕ ತೋರಿಸಿಕೊಟ್ಟಿದ್ದರೂ ಅರಿಸ್ಟಾಟಲ್ ಸ್ವತಃ ಅವುಗಳನ್ನು ತಿದ್ದಿಕೊಳ್ಳುತ್ತಿದ್ದ. ಸಮಕಾಲೀನ ಜ್ಞಾನಕ್ಕೆ ಸಂವಾದಿಯಾಗಿ ಅವನು ಅವುಗಳನ್ನು ಸರಿಪಡಿಸುತ್ತಿದ್ದನು. ಹಾಗಾಗಿ ಸೂಕ್ತ ಕಂಡ ಬದಲಾವಣೆಯನ್ನು ಕೈಗೊಳ್ಳುವುದರಿಂದ ಆತನಿಗೆ ನಿಷ್ಠೆಯಿಂದಿದ್ದೇವೆ ಎಂಬ ಅರ್ಥವನ್ನೇ

ಕೊಡುತ್ತದೆ. ಇದರಿಂದ ತನ್ನ ಸ್ಮರಣೆಗೆ ಕುಂದುಂಟಾಯಿತೆಂಬುದು ಇದರ ಅರ್ಥವಲ್ಲ. ಭಾಷಾ ವಿಜ್ಞಾನದ ಯುಗ ಎಂದು ನಾನು ಯಾವುದನ್ನು ಕರೆಯುತ್ತೇನೆಯೋ ಆ ಯುಗದವರೆಗೂ ಒಂದಲ್ಲ ಒಂದು ರೂಪದಲ್ಲಿ ಭಾಷಾಂತರವನ್ನು ಕುರಿತ ಇಂಥದೇ ಶ್ರದ್ಧಾ ಕಲ್ಪನೆ ಪ್ರಚಾರದಲ್ಲಿತ್ತು ಎಂಬ ಸಂಗತಿಯನ್ನು ಆಗ ನಾನು ಮನಗಂಡೆ. ತತ್ತ್ವಶಾಸ್ತ್ರವನ್ನು ಬಿಟ್ಟು ಹೊರರಾಜ್ಯದಲ್ಲಿ ಭಾಷಾಂತರಕಾರರು ಲೇಖಕನ ಆಲೋಚನಾ ಸರಣಿಯನ್ನು ಬಹುಶಃ ತಿದ್ದಿರಲಾರರು. ಆದರೆ ಆತನ ಅಭಿರುಚಿಯನ್ನು ತಿದ್ದಿರಲೇಬೇಕು.

* * *

ಒಂದು ಉತ್ತಮ ಭಾಷಾಂತರದಿಂದ ಈಗಿನ ನಾವು ನಿರೀಕ್ಷಿಸುವ ಮೊದಲ ಗುಣವೆಂದರೆ ಅದು ಯಥಾರ್ಥತೆಯಿಂದ ಕೂಡಿರಬೇಕು. ಇದೇ ಭಾಷಾ ವಿಜ್ಞಾನದ ಕಲ್ಪನೆಯ ಸಾಧನೆಯೂ ಆಗಿದೆ. ಯಾವುದಾದರೂ ಗ್ರಂಥದಲ್ಲಿ ಅರ್ಥವೇ ಪ್ರಧಾನವಾಗಿದ್ದಂಥ ಸಂದರ್ಭದಲ್ಲಿ ಅರ್ಥದ ಬಗ್ಗೆ ಪ್ರಾಮಾಣಿಕವಾಗಿರಬೇಕು ಎಂಬ ವಿಷಯದಲ್ಲಿ ಯಾವ ಚರ್ಚೆಯೂ ಉದ್ಭವಿಸುವುದಿಲ್ಲ. ಬರೆವಣಿಗೆಗೆ ಜೀವ, ಉಸಿರು ಹಾಗೂ ಶೈಲಿಯ ಸ್ವಂತಿಕೆ ಆಗಿರುವಂಥ ಲಯ, ಶೈಲಿ, ಪ್ರತಿಮೆಗಳ ವಿಷಯವಾಗಿ ಯಥಾರ್ಥತೆ ಬರುತ್ತದೆ. ಪದಶಃ ಅರ್ಥ ಗೌಣವಾಗಿದ್ದರೂ ಅದು ಸಂಭವಿಸ ಬಹುದು.

ಪದ್ಯವನ್ನು ಗದ್ಯರೂಪದಲ್ಲಿ ಭಾಷಾಂತರಿಸುತ್ತಿರುವ ಇತ್ತೀಚಿನ ಪಾಶ್ಚಾತ್ಯ ಯೂರೋಪಿಯನ್ ಮಾದರಿಯ ಬಗ್ಗೆ ನನಗೆ ಎಳ್ಳಷ್ಟೂ ಸಮಾಧಾನವಿಲ್ಲ. ಅದರಿಂದ ನ್ಯೂನತೆಯಿಲ್ಲದಿಲ್ಲ. ಪದ್ಯದ ಅರ್ಥವನ್ನು ಈ ರೀತಿ ಅನುವಾದಿಸಲಾಗಿದೆ; ಆದರೆ ಪದ್ಯದ ವಿಷಯದಲ್ಲಿ ಅರ್ಥವೇ ಅವರ ತಿರುಳಲ್ಲ. ತನ್ನದೇ ಆದ ಭಾಷೆಯಲ್ಲಿ ದೋಷರಹಿತ ಕಾವ್ಯರಚನೆಯನ್ನು ಸಾಧಿಸಬೇಕಾದಲ್ಲಿ ಭಾಷಾಂತರಕಾರ ಒಪ್ಪಿಕೊಳ್ಳಬೇಕಾದಂಥ ಹೊಂದಾಣಿಕೆಗಳು ಮೂಲಕವಿತೆಯ ಧ್ವನಿಯನ್ನಾಗಲೀ ಅಥವಾ ಸಾಂದ್ರತೆಯನ್ನಾಗಲೀ ತರಲು ಸಾಧ್ಯವಿಲ್ಲದಂತಹ ಪರಿಸ್ಥಿತಿಗೆ ಕೊಂಡೊಯ್ಯುತ್ತವೆ, ಇಲ್ಲವೆ ಅವು ಬೇರೊಂದು ಕವನದ ರಚನೆಗೆ ಅವನನ್ನು ಕೊಂಡೊಯ್ಯುತ್ತವೆ. ಆಗ ಅಂಥ ಕವನ ತಾನು ಭಾಷಾಂತರಿಸುತ್ತಿರುವ ಲೇಖಕನ ಕೃತಿಯಾಗದೆ ತನ್ನದೇ ಆದ ಕೃತಿಯಾಗಿಬಿಡುವ ಸಂಭವವುಂಟು. ಆಗ ಇದನ್ನು ಪುನರ್‌ಸೃಷ್ಟನೆ ಎಂದು ಹೇಳಲಾಗುತ್ತದೆ. ಇದಕ್ಕೆ ನನ್ನ ಆಕ್ಷೇಪಣೆಯೇನೂ ಇಲ್ಲ. ಆದರೆ ಅಂಥ ಸಂದರ್ಭದಲ್ಲಿ ವಾಸ್ತವ ಸೃಷ್ಟಿಗಿಂತಲೂ ಪುನರ್‌ಸೃಷ್ಟಿಯ ಕಾರ್ಯ ಮತ್ತಷ್ಟು ಜಟಿಲವಾದದ್ದು ಎಂಬ ಸಂಗತಿಯ ಬಗ್ಗೆ ಜನರಿಗೆ ಅರಿವುಂಟಾಗುತ್ತದೆಯೆ? ಯಥೋಚಿತ ರೂಪ ಮತ್ತು ವಿಷಯ, ಪದಕೋಶ, ಅರ್ಥ ಸಂಬಂಧಗಳು, ಹೊಂದಾಣಿಕೆ, ಛಂದೋರಚನೆ, ಲಯ, ತಾಳಗತಿಗಳು ಇತ್ಯಾದಿಗಳಲ್ಲಿ ಮೂಲಕೃತಿಯಲ್ಲಿ ಲೇಖಕ ಪರಿಹರಿಸಿಕೊಳ್ಳಬೇಕಾಗಿರುವಂತೆಯೇ ಭಾಷಾಂತರಕಾರನೂ ತನ್ನ ಭಾಷೆಯಲ್ಲಿ ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಆತನು ನಿಷ್ಠಾವಂತನಾಗಬೇಕಾಗುತ್ತದೆ. ಎಂದರೆ ತಾನಾಗಿಯೇ ಒಂದು ಮೂಲಭೂತ ಪರಿಹಾರವನ್ನು ಕಂಡುಕೊಳ್ಳುವಂತಿಲ್ಲ. ಏಕೆಂದರೆ ಮೂಲಲೇಖಕ ವಿಭಿನ್ನ ನಿಘಂಟಿನ, ಅರ್ಥದ- ಶಬ್ದಾಡಂಬರದ ಹಾಗೂ ಛಂದೋವ್ಯವಸ್ಥೆಗಳಲ್ಲಿಯೇ ಅಂಟಿಕೆ ಮಾಡುವ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಭಾಷಾಂತರ–ಅದರಲ್ಲೂ ವಿಶೇಷವಾಗಿ ಸಾಹಿತ್ತಿಕ ಭಾಷಾಂತರ–ತಂದೊಡ್ಡಿರುವ ಸಮಸ್ಯೆಗಳನ್ನು ಕುರಿತಂತೆ ನಾನು ಬೇಗನೆ ಹಾಗೂ ಆತುರದಲ್ಲಿ ಕೈಗೊಂಡಿರುವ ಸರ್ವೇಕ್ಷಣೆಯನ್ನು ಈ ಕೊನೆಯ ಸಮಸ್ಯೆಯೊಂದಿಗೆ ಮುಗಿಸುತ್ತೇನೆ. ಈ ಸಮಸ್ಯೆಗಳ ವೈಚಿತ್ರ್ಯಗಳನ್ನು ಹಾಗೂ ಮುಖ್ಯವಾಗಿ ಪದಗಳಿಂದ ಹಾಗೂ ಭಾಷೆಯಿಂದ ಮೂಲಭೂತ ಸಮಸ್ಯೆ ಉದ್ಭವಿಸುವುದಿಲ್ಲ ಎನ್ನುವುದನ್ನು, ಆದರೆ ಪ್ರತಿ

ಯೊಂದು ಭಾಷೆಯನ್ನೂ ಆಚ್ಛಾದಿಸಿರುವ ಮೂಲಭೂತ ಆಲೋಚನೆಗಳ ಅಸಾಂಗತ್ಯತೆಗಳಿಂದ ಹಾಗೂ ಅಶಾಮ್ಯ ಅನುಭವಗಳಿಂದ ಉದ್ಭವಿಸುತ್ತವೆ ಎನ್ನುವುದನ್ನು ನಾನು ತೋರಿಸಲು ಪ್ರಯತ್ನಿಸಿದ್ದೇನೆ. ಭಾಷಾಂತರಕಾರರು ಹಿಂದೆ ಅನುಸರಿಸಿದ ಮಾರ್ಗಗಳು ಹಾಗೂ ಈಗ ಅನುಸರಿಸುತ್ತಿರುವ ಮಾರ್ಗಗಳು ಅಚಲವೆಂದಾಗಲಿ, ವಿಶ್ವ ಸಾಮಾನ್ಯವೆಂದಾಗಲಿ ಅಲ್ಲವೆಂಬ ಸಂಗತಿಯನ್ನು ಒತ್ತಿ ಹೇಳುವುದು ಅಗತ್ಯ ಎಂಬ ಬಗೆಗೂ ನಾನೂ ಯೋಚಿಸಿದ್ದೇನೆ.

ಕಾವ್ಯದ ಅನುವಾದದಲ್ಲಿ ಅಂತರ್ಗತವಾಗಿರುವ ಅಲಂಕಾರಗಳೊಂದಿಗೆ ನಾನು ಮುಕ್ತಾಯಗೊಳಿಸಿದ್ದರೆ ಅದು ಆದರ್ಶ ಭಾಷಾಂತರ ಹೇಗಿರಬೇಕು ಎಂಬ ಬಗ್ಗೆ ಹೆಚ್ಚು ನಿಸ್ಪೃಷ್ಟವಾಗಿ ಸೂತ್ರೀಕರಿಸಲು ಅವು ನಮಗೆ ಎಡೆಮಾಡಿಕೊಡಬಹುದಾಗಿತ್ತು ಎಂಬ ಸಲುವಾಗಿ ಅಷ್ಟೆ. ನನ್ನ ಅಭಿಪ್ರಾಯದಲ್ಲಿ ಪದಶಃ ಭಾಷಾಂತರಕ್ಕೆ ಹಳೆಯ ಪ್ರತಿರೋಧ ಹಾಗೂ *belle infidele* ಸಮಸ್ಯೆಯನ್ನು ನಿಕೃಷ್ಟಗೊಳಿಸುತ್ತವೆ. ಭಾಷಾಶಾಸ್ತ್ರೀಯವಾದ ನಿಷ್ಕೃಷ್ಟ ಭಾಷಾಂತರ ಮೂಲದ ಅರ್ಥವನ್ನು ಕೊಡುತ್ತದೆ, ಅಷ್ಟೆ. ಅದಕ್ಕಿಂತ ಹೆಚ್ಚಿನದೇನನ್ನೂ ನೀಡಲಾರದು. ಲೇಖಕನ ಕಲಾತ್ಮಕ ಅಭೀಪ್ಸೆಯನ್ನು ಕಳೆದುಕೊಳ್ಳುವ ಭೀತಿ ಉಂಟಾಗುತ್ತದೆ. ಅಲ್ಲದೆ ಸಾಮಾನ್ಯವಾಗಿ ಗ್ರಂಥದ ತಿರುಳೆಂದು ನಾವು ಯಾವುದನ್ನು ಭಾವಿಸುತ್ತೇವೆಯೋ ಆ ಅಲಂಕಾರಿಕ ಗುಣವನ್ನು ಕಳೆದುಕೊಳ್ಳುವ ಭೀತಿ ತಲೆದೋರಬಹುದು. ಅತ್ಯಂತ ಗೋಪ್ಯವಾದ ಸಂಗೀತಾತ್ಮಕ ಕವನದಂತೆಯೇ ಒಂದು ಸಾಮಾನ್ಯ ಗಾದೆಯ ಬಗ್ಗೆಯೂ ಇದು ನಿಜವಾಗಬಹುದು. ಇಲ್ಲಿ ನಿಷ್ಠೆ ಕೇವಲ ಗೌಣ ಪಾತ್ರವನ್ನು ನಿರ್ವಹಿಸಬೇಕು. ಪರ್ಯಾಯವಾಗಿ ಆಕರ್ಷಕವಾಗುವಂತೆ ರೂಪಿಸಿದ ಭಾಷಾಂತರ ಬಾಹ್ಯ ಸೌಂದರ್ಯಕ್ಕೆ ಮರುಳಾಗಿ ತನ್ನ ಸಂದೇಶವನ್ನು ಮರೆತು ಬಿಡುತ್ತದೆ. ಈ ಸೌಂದರ್ಯ ಬಹುಪಾಲು ಕ್ಷಣಿಕವಾಗಿರುವುದಲ್ಲದೆ ಫ್ಯಾಷನ್ ಮೇಲೆ ಅವಲಂಬಿತವಾಗಿರುತ್ತದೆ.

ಇದಕ್ಕೆ ವಿರುದ್ಧವಾಗಿ ನಿಜವಾದ ನಿಷ್ಠೆಯೆನ್ನುವುದು ಲೇಖಕನ ಮೂಲೋದ್ದೇಶಗಳ ತೀರ್ಪಿನಲ್ಲಿ ಅಡಗಿರುತ್ತದೆ ಎಂದು ನನಗನ್ನಿಸುತ್ತದೆ. ಇಲ್ಲವೆ ಕೊನೆಯಪಕ್ಷ ಲೇಖಕನು ಸಾಧಿಸಿರುವ ಸಾಧನೆಗಳನ್ನು ನಿಷ್ಕೃಷ್ಟವಾಗಿ ಪ್ರಶಂಸಿಸುವುದರಿಂದ, ಎಂದರೆ ಆತನ ಕೃತಿಯನ್ನು ಎಚ್ಚರಿಕೆಯಿಂದ ಸೂಕ್ಷ್ಮತೆಯಿಂದ ಓದುವುದರಿಂದ ಹೊರಹೀಳುವ ಸಂಗತಿಗಳಿಂದ ಎಂದು ನನಗನ್ನಿಸುತ್ತದೆ. ಉಳಿದೆಲ್ಲ ಸಂಗತಿಗಳು ಕಾರ್ಯನಿರ್ವಹಣೆಯನ್ನು–ಎಂದರೆ ಕೌಶಲ, ಅನುಭವ ಮತ್ತು ಜ್ಞಾನವನ್ನು–ಅವಲಂಬಿಸುತ್ತವೆ. ಅತ್ಯುತ್ತಮ ಅನುವಾದದ ಸ್ವರೂಪವನ್ನು ಕುರಿತಂತೆ ವ್ಯಾಖ್ಯೆಯನ್ನು ನೀಡಬೇಕೆಂದು ಹಲವು ವರ್ಷಗಳ ಕೆಳಗೆ ಇದೇ ಬಗ್ಗೆ ನನ್ನನ್ನು ಕೇಳಿಕೊಂಡ ವೃತ್ತಿನಿರತ ಪತ್ರಿಕೆಯೊಂದರ ಪ್ರಶ್ನಾವಳಿಗೆ ನೀಡಿದ ಉತ್ತರವನ್ನೇ, ಅದೇ ಮಾತುಗಳಲ್ಲೇ, ಮತ್ತೆ ಇಲ್ಲಿ ಹೇಳುವ ಮೂಲಕ ನನ್ನ ಸಂತೃಪ್ತಿಯನ್ನು ವ್ಯಕ್ತಪಡಿಸುತ್ತೇನೆ. ನಾನು ಆ ಪತ್ರಿಕೆಗೆ ಹೀಗೆ ಉತ್ತರಿಸಿದ್ದೆ :

> ಉದಾಹರಣೆಗೆ : ಪಿಂಡಾರ್, ಡಾಂಟೆ ಅಥವಾ ಪುಷ್ಕಿನ್ನರನ್ನು ಉತ್ತಮವಾಗಿ ಇಂಗ್ಲಿಷಿಗೆ
> ಭಾಷಾಂತರಿಸುವುದೆಂದರೆ ಪಿಂಡಾರ್, ಡಾಂಟೆ ಅಥವಾ ಪುಷ್ಕಿನ್ನರು
> ತಾವು ಅಭಿವ್ಯಕ್ತಗೊಳಿಸಿರುವ ಭಾಷೆ ಗ್ರೀಕ್, ಇಟಾಲಿಯನ್
> ಅಥವಾ ರಷ್ಯನ್ ಭಾಷೆಗಳಲ್ಲಿ ಕೃತಿರಚಿಸದೆ ಸ್ವತಃ ತಾವೇ ಇಂಗ್ಲಿಷಿನಲ್ಲಿ ರಚಿಸಿದ್ದಿ
> ದ್ದರೆ ಹೇಗಿರುತ್ತಿತ್ತೋ ಹಾಗೆ ಅವರ ಕೃತಿಗಳನ್ನು ಅನುವಾದಿಸಬೇಕು,
> ಇತ್ಯಾದಿ. ಮೂಲಲೇಖಕ ತನ್ನ ಮಾತೃಭಾಷೆಯಲ್ಲಲ್ಲದೆ ಅನುವಾದಕನ
> ಭಾಷೆಯಲ್ಲಿ ಕೃತಿ ರಚಿಸಿದ್ದರೆ ಹೇಗಿರುತ್ತಿತ್ತೋ ಅಂಥ ಕೃತಿಯ (ಪದಕೋಶ,

ವಾಕ್ಯರಚನೆ, ಶೈಲಿ) "ಆವಿಷ್ಕರಣ"ವೇ ಉತ್ತಮ ಅನುವಾದವೆನಿಸುತ್ತದೆ. ಅಂಥ ಒಂದು ಬದಲಾವಣೆಯಾಗಬೇಕಾದರೆ ಅದಕ್ಕೆ ಬಹುಮುಖಜ್ಞಾನ, ಬುದ್ಧಿಶಕ್ತಿ ಹಾಗೂ ಕಲ್ಪನೆ ಇರಬೇಕು. ನನ್ನ ಮಟ್ಟಿಗೆ ಹೇಳುವುದಾದರೆ ಇದೇ ಆದರ್ಶ ಭಾಷಾಂತರದ ವ್ಯಾಖ್ಯೆ. ಇದು ಸಾಧ್ಯವೆಂದು ನಾನು ಹೇಳುತ್ತಿಲ್ಲ. ಆದರೆ ಇದನ್ನೇ ಗುರಿಯಾಗಿಟ್ಟುಕೊಂಡವನು ಉತ್ತಮ ಭಾಷಾಂತರಕಾರನೆಂದು ನಾನು ಹೇಳುತ್ತೇನೆ.

ಭಾಷಾವಿಜ್ಞಾನವನ್ನು ಕುರಿತಂತೆ ಸಮೃದ್ಧವಾಗಿ ಪುಸ್ತಕಗಳನ್ನು ಹೊರತರುತ್ತಿರುವ ದಿ ಹೇಗ್ ಪಟ್ಟಣದ ಮೂಟನ್ ಪ್ರಕಾಶನ ಸಂಸ್ಥೆ 'Approaches to Translation Studies' ಎಂಬ ಹೊಸ ಮಾಲಿಕೆಗಳನ್ನು ಆರಂಭಿಸಲಿದೆ. ಭಾಷಾಂತರ ಸಿದ್ಧಾಂತ ಹಾಗೂ ಇತಿಹಾಸ ಮತ್ತು ಭಾಷಾಂತರಗಳ ಮೌಲೀಕರಣ ಅಥವಾ ವಿಶ್ಲೇಷಣಾ ವಿಧಾನಗಳನ್ನು ಅದು ಒಳಗೊಂಡಿರುತ್ತದೆ. ಈ ಮಾಲಿಕೆಯಲ್ಲಿ ಹೊರಬಂದ ಮೊದಲ ಗ್ರಂಥ *The Nature of Translation* ಎಂಬುದು. ಸಾಹಿತ್ಯಕ ಭಾಷಾಂತರ ಸಿದ್ಧಾಂತವನ್ನು ಕುರಿತು 1968ರಲ್ಲಿ ಬ್ರಟಿಸ್ಲಾವಿಯಾದಲ್ಲಿ ನಡೆದ ಸಮ್ಮೇಳನದಲ್ಲಿ ಓದಿದ ಲೇಖನಗಳನ್ನು ಈ ಮಾಲಿಕೆಯಲ್ಲಿ ಪುನರ್ಮುದ್ರಿಸಲಾಗುತ್ತದೆ. ಆಮ್‌ಸ್ಟರ್‌ಡಾಂ ವಿಶ್ವವಿದ್ಯಾನಿಲಯದ ಸಾಮಾನ್ಯ ಹಾಗೂ ತೌಲನಿಕ ಸಾಹಿತ್ಯಕ ಅಧ್ಯಯನಗಳ ವಿಭಾಗದ ಜೇಮ್ಸ್ ಎಸ್. ಹೋಮ್ಸ್‌ರು ಈ ಮಾಲಿಕೆಯ ಪ್ರಧಾನ ಸಂಪಾದಕರು. ಮೂಟನ್ ಸಂಸ್ಥೆ Journal of Literary Semantics ಎಂಬ ಪತ್ರಿಕೆಯನ್ನು ಪ್ರಕಟಿಸಲೂ ಇಚ್ಛಿಸಿದೆ. ಇದಕ್ಕೆ ಬೇಕಾದ ಲೇಖನ ಸಾಮಗ್ರಿಯನ್ನು *The Semantics of Literature* (ಮೂಟನ್, 1966) ಎಂಬ ಗ್ರಂಥದಲ್ಲಿ ವಿವರಿಸಲಾಗಿರುವ ತತ್ತ್ವಗಳ ಆಧಾರದ ಮೇಲೆ ಸಿದ್ಧಪಡಿಸಿಕೊಳ್ಳಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಸಂಪಾದಕರು, ಟ್ರೆವರ್ ಈಟನ್, 18 ಹೈಫೀಲ್ಡ್ ರೋಡ್, ವಿಲ್ಲಿಸ್ ಬರೊ, ಆ್ಯಷ್‌ಫರ್ಡ್, ಕೆಂಟ್ ಇವರಲ್ಲಿ ಬರೆದುಕೊಳ್ಳಬಹುದು.

ಈ ಲೇಖನವನ್ನು The Times Literary Supplement ನಿಂದ ಅನುವಾದಿಸಲಾಗಿದೆ.

ಭಾಷಾಂತರ ಒಂದು ಅಪರೂಪದ ಕ್ರಿಯೆಯೇನಲ್ಲ. ನಮಗೆ ತಿಳಿದೋ ತಿಳಿಯದೆಯೋ ನಾವು ಸದಾ ಅದರಲ್ಲಿ ತೊಡಗಿದ್ದೇವೆ. ಏಕೆಂದರೆ ಭಾಷೆಯೇ ಒಂದು ಭಾಷಾಂತರ. ಅಭಾಷಿಕವಾದ ಇಂದ್ರಿಯ ಸಂವೇದನಾ ಸರಣಿರೂಪದ ನಮ್ಮ ಅನುಭವಗಳನ್ನು ವಾಗಿಂದ್ರಿಯ ಜನ್ಯ ಸಾರ್ಥಕ ಧ್ವನಿವ್ಯವಸ್ಥೆಯ ಮೂಲಕ ಅಭಿವ್ಯಕ್ತಿಗೊಳಿಸುವ, ಇತರರಿಗೆ ತಿಳಿಸುವ ಭಾಷಾ ರೂಪದ ಕ್ರಿಯೆಯು ಭಾಷಾಂತರವೇ. ನಾವು ಮಾತನಾಡುವಾಗ ಇನ್ನೊಬ್ಬರು ಹೇಳಿದ್ದು ನಮಗೆ ಅರ್ಥವಾಗದೆ ಹಾಗೆಂದರೆ ಏನು ಎಂದು ನಾವು ಕೇಳುವಾಗ ನಾವು ಬೇಡುವುದೂ ಭಾಷಾಂತರ ವನ್ನೇ. ಬೇರೆ ಶಬ್ದಗಳಲ್ಲಿ ಅವರು ಅದನ್ನು ತಿಳಿಸುವಾಗ ಅವರು ಮಾಡುತ್ತಿರುವುದೂ ಭಾಷಾಂತರವೇ. ಆದರೂ ವ್ಯವಹಾರದಲ್ಲಿ ಭಾಷಾಂತರ ಎಂದರೆ ಭಾಷೆಯಲ್ಲಿರುವ ಅರ್ಥ ಸಾಮಗ್ರಿಯನ್ನು ಮತ್ತೊಂದು ಭಾಷೆಗೆ ವರ್ಗಾಯಿಸುವುದು ಎಂದಾಗಿದೆ.

—ಎನ್. ಬಾಲಸುಬ್ರಹ್ಮಣ್ಯ : 'ಶಾಸ್ತ್ರ ಸಾಹಿತ್ಯ ನಿರ್ಮಾಣ'. ಪುಟಗಳು ೪೬–೫೨

ಕೆ. ಜಿ. ವಸಂತಮಾಧವ

ಕೊಚ್ಚಿ ಪತ್ರಾಗಾರದಲ್ಲಿರುವ ಕನ್ನಡ ಐತಿಹಾಸಿಕ ದಾಖಲೆಗಳು

ಆಧುನಿಕ ಇತಿಹಾಸದ ರಚನೆಗೆ ಕಾಗದದಲ್ಲಿ ಬರೆದ ಬರಹಗಳೂ ಸಹಾಯವಾಗುತ್ತವೆ. ಈ ಪತ್ರಗಳು ಹೆಚ್ಚಾಗಿ ಆಗಿನ ಕಾಲದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಧ್ಯಯನಕ್ಕೆ ಸಹಾಯಕವಾಗಿವೆ. ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ಈ ರೀತಿಯ ಕಾಗದ ಪತ್ರಗಳು ಬಹಳ ಮುಖ್ಯ ಪಾತ್ರವನ್ನು ವಹಿಸಿವೆ. ಆದರೆ ಅವುಗಳ ಸರಿಯಾದ ಪತ್ತೆ ಮತ್ತು ವಿಮರ್ಶೆ ನಡೆಸುವಲ್ಲಿ ಇತಿಹಾಸಜ್ಞರ ಪ್ರಯತ್ನ ತೃಪ್ತಿಕರವಾಗಿಲ್ಲ. ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳು ಬೆಂಗಳೂರಿನಲ್ಲಿರುವ ಪತ್ರಾಗಾರದಲ್ಲಿರುವುದಲ್ಲದೆ ಕರ್ನಾಟಕದ ಹೊರಗಿರುವ ಗೋವಾ, ಮದ್ರಾಸು ಮತ್ತು ಬೊಂಬಾಯಿಗಳಲ್ಲೂ ಇವೆ. ಅಂತೆಯೇ ಕೇರಳ ರಾಜ್ಯದ ಪತ್ರಾಗಾರದ ಶಾಖೆಯಾದ ಕೊಚ್ಚಿಯಲ್ಲಿ ಹಲವಾರು ಪತ್ರಗಳಿದ್ದು ಅವುಗಳಲ್ಲಿ ಕೆಲವು ಕನ್ನಡದಲ್ಲಿವೆ. ಆದರೆ ಇವುಗಳ ಸರಿಯಾದ ವಿಮರ್ಶೆ ಇನ್ನೂ ನಡೆಯಬೇಕು. ಕೇರಳ ಸರಕಾರ ಪತ್ರಾಗಾರ ನಿರ್ದೇಶಕರ ಆಮಂತ್ರಣದಂತೆ ಹೋದ ಈ ಲೇಖಕನಿಗೆ ಅಲ್ಲಿನ ಕೆಲವು ಪತ್ರಗಳನ್ನು ನೋಡುವ ಸುಯೋಗ ಒದಗಿಬಂತು. ಅಲ್ಲಿ ನೋಡಿದ ಕೆಲವು ಪತ್ರಗಳ ಸೂಕ್ಷ್ಮ ವಿವರವನ್ನು ಈ ಲೇಖನದಲ್ಲಿ ನೀಡಲಾಗಿದೆ.

ಕೇರಳದ ಪ್ರಮುಖ ವಾಣಿಜ್ಯ ಕೇಂದ್ರ ಕೊಚ್ಚಿ (ಎರ್ನಾಕುಲಂ). ಇದು ಕೇರಳ ಸಂಸ್ಕೃತಿಯ ಕೇಂದ್ರ ಬಿಂದು. ಇಲ್ಲಿ ಕನ್ನಡ ಇತಿಹಾಸಕ್ಕೆ ಸಂಬಂಧಿಸಿದ ಕನ್ನಡ ಪತ್ರಗಳಿರುವುದು ಆಶ್ಚರ್ಯವಾಗಿ ತೋರಬಹುದು. ಕೊಚ್ಚಿ ಪತ್ರಾಗಾರ ಇರುವುದು ಎರ್ನಾಕುಲಂನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಕೇರಳ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳು ಬಿದಿರಿನಲ್ಲಿ ಬರೆದ ಬರಹ, ಇನ್ನಿತರ ಪತ್ರಗಳಲ್ಲದೆ ಕನ್ನಡ ಭಾಷೆಯಲ್ಲಿ ಬರೆದ ಕಾಗದ ಪತ್ರಗಳನ್ನು ಇಲ್ಲಿ ಒಳ್ಳೆಯ ಸ್ಥಿತಿಯಲ್ಲಿ ಕ್ರೋಢೀಕರಿಸಿರುವುದನ್ನು ನಾವು ಮೆಚ್ಚಬೇಕು. ಈ ಪತ್ರಾಗಾರದಲ್ಲಿ ಕನ್ನಡ ಭಾಷೆಯ 14 ಬಂಡಲ್‌ಗಳ (ಪಿಂಡಿ) ದಾಖಲೆಗಳಿವೆ. ಈ ಪಿಂಡಿಗಳಲ್ಲಿ ಕೆಲವು ಪತ್ರಗಳು ದೇವನಾಗರಿ ಲಿಪಿ ಮತ್ತು ಕನ್ನಡ ಭಾಷೆಯಲ್ಲಿ ಬರೆದವುಗಳು. ಇನ್ನುಳಿದ ಪತ್ರಗಳು ಕನ್ನಡ ಲಿಪಿ ಮತ್ತು ಅದೇ ಭಾಷೆಯಲ್ಲಿವೆ. ಈ ಪತ್ರಗಳಲ್ಲಿ ಸಂವತ್ಸರಗಳ ಹೆಸರಿರುವುದರಿಂದ ಇವುಗಳನ್ನು ಬರೆದ ಕಾಲವನ್ನು ತಿಳಿಯಬಹುದು. ಉದಾಹರಣೆಗಾಗಿ ಒಂದನೆಯ ಪಿಂಡಿಯ 5ನೆಯ ಕಾಗದವು ಕೀಲಕ ಸಂವತ್ಸರದ ಫಾಲ್ಗುಣ 2ರವರೆಗೆ ಕೊಚ್ಚಿರಾಜ ರಾಮವರ್ಮನು ಕ್ಷೇಮದಲ್ಲಿರುವನೆಂದು ಚೆರಕಲ್ಲು ರಾಜ ಸುಬ್ರಾಯನಿಗೆ ತಿಳಿಸುತ್ತದೆ. ಈ ಪತ್ರಾಗಾರದ ಹೆಚ್ಚಿನ ಪತ್ರಗಳು ಹದಿನೆಂಟನೆಯ ಶತಮಾನದಿಂದ ಹತ್ತೊಂಭತ್ತನೆಯ ಶತಮಾನದ ಕಾಲದಲ್ಲಿ ಬರೆಯಲ್ಪಟ್ಟವು. ಕೆಲವು ಪತ್ರಗಳನ್ನು ಮಲಬಾರು ರಾಜರುಗಳು ತಮ್ಮ ಭಾಷೆಗೆ ಭಾಷಾಂತರ ಮಾಡಿಸಿದ್ದಾರೆ. ಅಂದಿನ

ಕೊಚ್ಚಿ, ಮಲಬಾರು, ಮೈಸೂರು ರಾಜ್ಯಗಳ ರಾಜಕೀಯ ಸ್ಥಿತಿ, ಆ ರಾಜರುಗಳ ವಾಣಿಜ್ಯ ವ್ಯವಹಾರಗಳು, ಕೊಚ್ಚಿ, ಮಲಬಾರು ರಾಜರುಗಳ ಮೇಲೆ ಕರ್ನಾಟಕದ ಪ್ರಮುಖ ದೇವಾಲಯ ಮತ್ತು ಮಠಗಳ ಧಾರ್ಮಿಕ ಪ್ರಭಾವಗಳನ್ನೆಲ್ಲಾ ಈ ಕಾಗದಗಳಿಂದ ನಾವು ತಿಳಿಯಬಹುದು.

ರಾಜಕೀಯ ವಿಚಾರ

ಈ ಪತ್ರಾಗಾರದಲ್ಲಿ ಹೆಚ್ಚಿನಪತ್ರಗಳು ಮಲಬಾರು, ಕೊಚ್ಚಿ ಮತ್ತು ಕರ್ನಾಟಕದ ಆಗಿನ ರಾಜಕೀಯ ಸ್ಥಿತಿಯನ್ನು ತಿಳಿಸುತ್ತವೆ. ಮಲಬಾರಿನ ನೀಲೇಶ್ವರ, ಚರಕಲ, ಕೊಲೆಸ್ವರಿ ಕಣ್ಣಾನೂರು, ಬಡಾಗಾರ, ಕಲ್ಲಿಕೋಟೆ, ಕೊಚ್ಚಿ ರಾಜ್ಯಗಳ ಅಂದಿನ ರಾಜಕೀಯ ಸ್ಥಿತಿ ಮತ್ತು ಆ ರಾಜರುಗಳು ಮೈಸೂರಿನ ನವಾಬ ಹೈದರಅಲಿಯೊಡನೆ ನಡೆಸಿದ ರಾಜಕೀಯ ವ್ಯವಹಾರಗಳನ್ನು ಕೆಲವು ಪತ್ರಗಳು ತಿಳಿಸುತ್ತವೆ. ಒಂದನೆಯ ಹಿಂಡಿಯ 5ನೆಯ ಪತ್ರವು ಚರಕಲ್ ರಾಜ್ಯದ ಆಗಿನ ವಿದ್ಯಮಾನವನ್ನು, ಮುಖ್ಯವಾಗಿ ಮಾಪಿಳ್ಳೆಯವರ ರಾಜಕೀಯ ಪಾತ್ರವನ್ನು ಉಲ್ಲೇಖಿಸುತ್ತದೆ. ಅದೇ ಹಿಂಡಿಯ 331ನೆಯ ಕಾಗದವು ಹೈದರ್‌ಅಲಿಯು ಚರಕಲ್ಲಿನ ರಾಜ್ಯದ ಮೇಲೆ ನಡೆಸಿದ ಆಕ್ರಮಣವನ್ನು ಹೇಳಿದೆ. ಹೇವಿಳಂಬಿ ಸಂವತ್ಸರದಲ್ಲಿ ಹೈದರನ ಆಕ್ರಮಣದಿಂದಾಗಿ ಕೊಚ್ಚಿ ಮತ್ತು ಮಲಬಾರು ರಾಜ್ಯಗಳ ನಡುವೆ ನಡೆಯುತ್ತಿದ್ದ ವ್ಯಾಪಾರ ಸ್ಥಗಿತವಾದ ವಿಚಾರವನ್ನು 6ನೆಯ ಹಿಂಡಿಯ 76ನೆಯ ಕಾಗದದಿಂದ ನಾವು ಅರಿಯಬಹುದು. ಇನ್ನುಳಿದ ಕೆಲವು ಪತ್ರಗಳು ಹೈದರ್‌ಅಲಿ ಮತ್ತು ಕೊಚ್ಚಿ ರಾಜರುಗಳ ರಾಜಕೀಯ ಮತ್ತು ಆರ್ಥಿಕ ಸಂಬಂಧವನ್ನು ಕುರಿತದ್ದಾಗಿವೆ. ಉದಾಹರಣೆಗಾಗಿ ಶುಭಕೃತು ಸಂವತ್ಸರದಲ್ಲಿ ಹೈದರ್ ಅಲಿಯು ಕೊಚ್ಚಿ ರಾಜನಿಗೆ ಬರೆದ ಪತ್ರದಲ್ಲಿ ಮೈಸೂರು ಕೊಚ್ಚಿ ರಾಜ್ಯಗಳ ನಡುವೆ ವ್ಯಾಪಾರ ವಾಣಿಜ್ಯವನ್ನು ಬಲಪಡಿಸಿಕೊಳ್ಳುವ ಹೈದರನ ಇಚ್ಛೆಯು ವ್ಯಕ್ತವಾಗುತ್ತದೆ. ಇದಕ್ಕೆ ಉತ್ತರವಾಗಿ ಕೊಚ್ಚಿಯ ರಾಮವರ್ಮನು ಇಂತಹ ಒಪ್ಪಂದಕ್ಕೆ ಬರಲು ಹಾರೈಸಿದ್ದನೆಂದು ಈ ಅರಸನು ವಿಶ್ವಾವಸು ಸಂವತ್ಸರದ ಅಧಿಕ ಜೇಷ್ಠದಲ್ಲಿ ಬರೆದ ಪತ್ರದಿಂದ ತಿಳಿದುಬರುತ್ತದೆ. ಇದೇ ಪತ್ರದಲ್ಲಿ ಕೊಚ್ಚಿರಾಜನು 1500 ವರಹಗಳನ್ನು ಹೈದರ್‌ಅಲಿಗೆ ಕಾಣಿಕೆಯಾಗಿ ಕೊಡಲು ಒಪ್ಪಿದ್ದನೆಂದು ತಿಳಿದುಬರುತ್ತದೆ. ಇದಕ್ಕೆ ಹೈದರನು ಸಮ್ಮತಿಸಿದ ವಿಚಾರ ಇವನು ಕೊಚ್ಚಿ ದಳವಾಯಿ ರಾಮುಮೆನನ್‌ರಿಗೆ ಬರೆದ ಪತ್ರದಿಂದ ತಿಳಿದುಬರುತ್ತದೆ. ಕೊಚ್ಚಿ ರಾಜನಿಂದ ಹತ್ತುಸಾವಿರ ವರಹಗಳನ್ನು ಕಪ್ಪ ಕಾಣಿಕೆಯಾಗಿ ತೆಗೆದುಕೊಂಡ ರಸೀದಿ ಚೀಟಿ ಕೊಚ್ಚಿ ಪತ್ರಾಗಾರದಲ್ಲಿ ಇದೆ.

ಕಣ್ಣಾನೂರು ಅಲಿ ರಾಜನ ಪ್ರತಿನಿಧಿಯಾಗಿದ್ದ ಹುಸೇನ್ ಅಲಿಯು ಕೊಚ್ಚಿ ರಾಜನಿಗೆ ಬರೆದ ಪತ್ರದಲ್ಲಿ ಇವೆರಡೂ ರಾಜ್ಯಗಳೊಳಗೆ ಮೈತ್ರಿ ಮುಂದುವರಿಸುವಿಕೆಯ ಪ್ರಾಮುಖ್ಯತೆಯನ್ನು ಹೇಳಿದೆ. ನಾಲ್ಕನೆಯ ಹಿಂಡಿಯ 19ನೆಯ ಕಾಗದ ಕೇರಳ ಇತಿಹಾಸದ ಒಂದು ಹೊಸ ವಿಷಯವನ್ನು ಬೆಳಕಿಗೆ ತರುತ್ತದೆ. ಅದೇನೆಂದರೆ ಮರಾಠರ ಆಕ್ರಮಣದ ಭೀತಿ. ವಿಜಾರ್ ಮಹಾಧಿ ಸಾಹೇಬ (ಅಲಿರಾಜನ ಮಂತ್ರಿ)ನು ಕೊಚ್ಚಿ ರಾಜ್ಯದ ದಳವಾಯಿ ರಾಮುಮೆನನ್‌ರಿಗೆ ಬರೆದ ಪತ್ರದಲ್ಲಿ ರಾಜ್ಯದ ಕೋಟೆಗಳನ್ನು ಮರಾಠರ ಆಕ್ರಮಣದ ವಿರುದ್ಧ ಭದ್ರಪಡಿಸುವ ಅವಶ್ಯಕತೆಯನ್ನು ತಿಳಿಸುತ್ತಾನೆ.

ಧಾರ್ಮಿಕ ಸ್ಥಿತಿ

ಈ ಪತ್ರಾಗಾರದಲ್ಲಿರುವ ಕೆಲವು ಪತ್ರಗಳು ಕೊಚ್ಚಿ ರಾಜರ ಮತ್ತು ಕರ್ನಾಟಕದ ಪ್ರಮುಖ ದೇವಾಲಯಗಳ ಧಾರ್ಮಿಕ ವ್ಯವಹಾರಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಅರ

ನೆಯ ಪಿಂಡಿಯ ಮೂರನೆಯ ಕಾಗದವು ಸುಬ್ರಾಯನು ಚಿತ್ತಾರಿಯಲ್ಲಿ ಅಗ್ರಹಾರವನ್ನು ಕಟ್ಟಿಸಿದ್ದನ್ನು, ಅದಕ್ಕೆ ಕೊಚ್ಚಿ ರಾಜನು ಉಂಬಳಿ ಬಿಟ್ಟದ್ದನ್ನು ತಿಳಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೊಲ್ಲೂರು ಮೂಕಾಂಬಿಕಾ ದೇವಾಲಯಕ್ಕೆ ಕೊಚ್ಚಿ, ಚಿರಕಲ, ಕೊಲೆಸ್ವರಿ ರಾಜರುಗಳು ಭಕ್ತಿಪೂರ್ವಕವಾಗಿ ಉಂಬಳಿ ಬಿಟ್ಟದ್ದಕ್ಕೆ ಕೃತಜ್ಞತೆ ತೋರಿ ಮೂಕಾಂಬಿಕಾ ದೇವಾಲಯದ ಧರ್ಮದರ್ಶಿಗಳು ಈ ಅರಸುಗಳಿಗೆ ಪತ್ರ ಬರೆದ ವಿಷಯ ಹದಿನಾಲ್ಕನೆಯ ಪಿಂಡಿಯ ಕೆಲವು ಪತ್ರಗಳಿಂದ ತಿಳಿಯ ಬರುತ್ತದೆ. ಈ ವ್ಯವಹಾರಗಳು ಹದಿನೇಳನೆಯ ಶತಮಾನದಲ್ಲಿ ನಡೆದಿದ್ದವೆಂದು ಪತ್ರದ ಬರಹ ಮತ್ತು ಕನ್ನಡ ವಾಕ್ಯರಚನೆಯಿಂದ ಅಭಿಪ್ರಾಯ ಪಡಬಹುದು. ಅದೇ ರೀತಿ ಉಡುಪಿ ಅಷ್ಟಮಠ ಮತ್ತು ಕೊಚ್ಚಿ ಅರಸರುಗಳೊಳಗೆ ನಡೆದ ಪತ್ರವ್ಯವಹಾರವನ್ನು ಆರನೆಯ ಪಿಂಡಿಯ ಕೆಲವು ಪತ್ರಗಳು ತಿಳಿಸುತ್ತವೆ. ಅದೇ ಪಿಂಡಿಯ 4ನೆಯ ಪತ್ರವು ವಿಭುದೀಂದ್ರತೀರ್ಥ ಶ್ರೀಪಾದಂಗಳು ಕೊಚ್ಚಿ ರಾಜನಿಗೆ ವಿಷು ಸಂವತ್ಸರದಲ್ಲಿ ಬರೆದ ಪತ್ರವಾಗಿದೆ. ಈ ಕಾಗದದಲ್ಲಿ ಈ ಸ್ವಾಮಿಜಿಗಳು ಕೊಚ್ಚಿರಾಜನ ಶ್ರೇಯೋಭಿವೃದ್ಧಿಯಾಗಲೆಂದು ಹರಸುತ್ತಾರೆ. ನಂತರ ಕೊಚ್ಚಿ ರಾಜನು ಭಾವ ಸಂವತ್ಸರದಲ್ಲಿ ಸ್ವಾಮಿಯವರಿಂದ ತೆಗೆದುಕೊಂಡ ೧೦೫ ಗದ್ಯಾಣಗಳನ್ನು ಹಿಂದಿರುಗಿಸುವಂತೆ ಸ್ವಾಮಿಗಳು ಕೇಳಿಕೊಳ್ಳುತ್ತಾರೆ. ಹದಿನೆಂಟನೆಯ ಕಾಗದವು ವಿಷು ಸಂವತ್ಸರದಲ್ಲಿ ವಿಶ್ವಪ್ರಿಯತೀರ್ಥಶ್ರೀಪಾದಂಗಳು ಕೊಚ್ಚಿ ರಾಜ್ಯದ ದಳವಾಯಿ ಚಿಪ್ಪಯ್ಯನಿಗೆ ಆಶೀರ್ವಾದ ಮತ್ತು ಮಂತ್ರಾಕ್ಷತೆ ಕಳುಹಿಸಿದ ವಿಚಾರವನ್ನು ಹೇಳುತ್ತದೆ. ಈ ಪ್ರಸಾದ ಮತ್ತು ಮಂತ್ರಾಕ್ಷತೆಯನ್ನು ಶ್ರೀಪಾದಂಗಳು ಮುಟ್ಟಿ ನರಸಿಂಹಾಚಾರ್ಯರ ಮುಖಾಂತರ ಕಳುಹಿಸುತ್ತಾರೆ. ಇದೇ ಪತ್ರವು ಮುಂದುವರಿಯುತ್ತಾ ಈ ವಿಚಾರವನ್ನು ತಿಳಿಸುವುದನ್ನು ಗಮನಿಸಬೇಕು: "ಈಗ ಅರಸುಗಳು ನಮ್ಮ ಸಂಸ್ಥಾನದಲಿ ದೇವಶ್ರೀ ಪೂಜಾದಂರ್ಮದ ಬಗ್ಗೆ ......ಶ್ರೀ ದೇವರು ಋಷಿಧರ್ಮ ದ್ರವ್ಯವಂನು ಸಂಕಲ್ಪ ಮಾಡಿದ ಪ್ರಕ್ಕಾರ ಯುವ ಸಂವತ್ಸರಕ್ಕೆ ಬರುತ್ತಾ ಕಾರ್‍ತ್ಯಗ. ೧೫ ಪ್ರಾಕು ಸಂವತ್ಸರ ಕಾರ್ಯಕ್ಕೆ ದೇವಕಾರ್‍ಯಗಳಿಗೆ ೪೫ ಉಭಯ ೬೦ ವರಹಾಂನು ಕೂಡ್ಸಿಕೊಡುವ ಹಾಗೆ–ಪ್ರತ್ಯೇಕ ರಾಯಸ ಬರೆಸಿದ ಪತ್ರ." ಇದೇ ಪತ್ರವು ಶ್ರೀಕೃಷ್ಣದಿವ್ಯಶ್ರೀಪಾದಪದ್ಮಕರು ಸ್ವಾಮಿಗಳೆಂದು ಹೇಳಿ ಲಕ್ಷೀನಾರಾಯಣನೆಂದು ಅಂತ್ಯ ಮಾಡಿದೆ. ಕೊಚ್ಚಿ ರಾಜ್ಯದ ದಿವಾನ ನಂಜಪ್ಪಯ್ಯನಿಗೆ ವಿಶು ಸಂವತ್ಸರದ ಆಶಾಢರಂದು ಆಶೀರ್ವಾದ ಮಾಡಿದ ಡಶುಲಿಮಾರುಮಠದ ಶ್ರೀಮದ್ ವಿಶ್ವಶ್ರೀಪಾದಂಗಳ ಪತ್ರವು ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ಶ್ರೀಮದ್ ಪಾದಂಗಳು ಶ್ರೀರಾಮನ ಉಪಾಸಕರು ಮತ್ತು ಶ್ರೀ ವಲ್ಲಭತೀರ್ಥ ಶ್ರೀಪಾದಂಗಳ ಶಿಷ್ಯರು. ಶ್ರೀ ದಿವಾನರು ಶ್ರೀಮದ್ ಶ್ರೀಪಾದಂಗಳ ಶಿಷ್ಯರು. ತಿರುಪತಿ, ಶ್ರೀರಂಗ ಸ್ಥಳಗಳಿಗೆ ರಾಜರೊಂದಿಗೆ ಯಾತ್ರೆ ಮಾಡಿದ ದಿವಾನರು ಉಡುಪಿಗೆ ಬಂದು ಶ್ರೀ ಗೋಪಾಲಕೃಷ್ಣನ ಪೂಜೆ ಮಾಡಿಸಿ ಆ ದೇವರ ವಿಶೇಷ ಪೂಜೆಗೆ ಅರಸರು ಕಾಣಿಕೆಯನ್ನು ಕೊಟ್ಟ ವಿಚಾರವೆಲ್ಲಾ ಈ ಪತ್ರಗಳಿಂದ ನಮಗೆ ತಿಳಿಯುತ್ತದೆ. ಅದೇ ಪಿಂಡಿಯ 25ನೆಯ ಕಾಗದವು ಶೃಂಗೇರಿ ಸ್ವಾಮಿಗಳಾದ ನರಸಿಂಹ ಭಾರತಿಯವರು ಕೊಚ್ಚಿಯ ದಿವಾನರಿಗೆ ಕಳುಹಿಸಿದ ಆಶೀರ್ವಾದ ಪತ್ರವಾಗಿದೆ. ಆದರೆ ಆ ಪತ್ರವು ಜೀರ್ಣಾವಸ್ಥೆಯಲ್ಲಿ ಇದ್ದುದರಿಂದ ಹೆಚ್ಚಿನ ವಿವರ ತಿಳಿಯಲು ಅಸಾಧ್ಯವಾಗಿದೆ.

ವಾಣಿಜ್ಯ ವ್ಯಾಪಾರ

ಕೊಚ್ಚಿ, ಮತ್ತು ಕರ್ನಾಟಕಗಳೊಳಗೆ ಹದಿನೆಂಟನೆಯ ಶತಮಾನದಲ್ಲಿ ನಡೆಯುತ್ತಿದ್ದ ವಾಣಿಜ್ಯ ಮತ್ತು ವ್ಯಾಪಾರಗಳ ವಿವರ ಇನ್ನುಳಿದ ಪತ್ರಗಳಿಂದ ತಿಳಿಯಬಹುದು. ಕ್ರೋಧಿ ಸಂವತ್ಸರದಲ್ಲಿ ಕೊಚ್ಚಿ ರಾಜ ರಾಮವರ್ಮನು ಹಜರತ ಬಾಬುಸಾಹೇಬರಿಗೆ ಬರೆದ ಪತ್ರದಲ್ಲಿ

ಮಲಬಾರಿನ ಮಾಪಿಳ್ಳೆಯವರಿಗೆ ವ್ಯಾಪಾರ ನಡೆಸಿಕೊಂಡು ಹೋಗಲು ಹಲವಾರು ಸವಲತ್ತುಗಳನ್ನು ಕೊಟ್ಟ ವಿಷಯವನ್ನು ತಿಳಿಸುತ್ತದೆ. ಅದೇ ಪತ್ರದಲ್ಲಿ ರಾಜನು ಹಜರತ್ ಬಾಬು ಸಾಹೇಬನಿಗೆ ಕರಿಮೆಣಸು, ಏಲಕ್ಕಿ ಮತ್ತು ಇನ್ನಿತರ ವಸ್ತುಗಳ ಖರೀದಿ ಮಾಡಲು ಹಣ ಸಹಾಯ ಮಾಡಿದ ವಿಚಾರವನ್ನು ಓದಬಹುದು. ಚರಕಲ್ ಹುಸೇನ್‌ಖಾನರು ಕೊಚ್ಚಿ ಸರ್ವಾಧಿಕಾರಿ ಗೋವಿಂದ ಮೆನನ್‌ರಿಗೆ ಬರೆದ ಪತ್ರವು ಕೊಚ್ಚಿ ಮತ್ತು ಚರಕಲ್ ರಾಜ್ಯಗಳೊಳಗೆ ನಡೆಯುತ್ತಿದ್ದ ವ್ಯಾಪಾರ ಸ್ಥಿತಿಯನ್ನು ವಿವರಿಸುತ್ತದೆ. ಇದೇ ಹುಸೇನಖಾನನು ಕೊಚ್ಚಿ ರಾಜ್ಯದ ಸರ್ವಾಧಿಕಾರಿ ರಾಮಮೆನನ್‌ರಿಗೆ ಬರೆದ ಪತ್ರದಲ್ಲಿ ದೋಣಿ ಮತ್ತು ಮಚಿವೆಗಳನ್ನು ಕಟ್ಟಲು ಕೊಚ್ಚಿಯಿಂದ ನುರಿತ ಮೇಸ್ತ್ರಿಗಳನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾನೆ. (ವಿಶ್ವಾವಸು ಸಂವತ್ಸರ ಕಾರ್ತಿಕ 13ರಲ್ಲಿ ಬರೆದ ಪತ್ರ). ಈ ಹಿಂದೆ ವಿವರಿಸಿದಂತೆ ಹೈದರ್‌ಅಲಿ ಕೊಚ್ಚಿ ರಾಜನಿಗೆ ಬರೆದ ಪತ್ರದಲ್ಲಿ ಮೈಸೂರು ಮತ್ತು ಕೊಚ್ಚಿಗಳೊಳಗೆ ವ್ಯಾಪಾರವನ್ನು ಮುಂದುವರಿಸುವ ಆಸೆಯನ್ನು ವ್ಯಕ್ತಪಡಿಸಿದ್ದನ್ನು ನೋಡಿದಾಗ ಹೈದರನಿಗೆ ಈ ಪ್ರದೇಶದಲ್ಲೂ ವ್ಯಾಪಾರವನ್ನು ವಿಸ್ತರಿಸಬೇಕೆಂಬ ಲವಲವಿಕೆ ಇತ್ತೆಂದು ನಮಗೆ ತಿಳಿಯುವುದು. ಕೊಚ್ಚಿಯ ರಾಮಮೆನನು ಚೈತ್ರ ಶು ೧೨ರಲ್ಲಿ ಹೈದರ್‌ಅಲಿಗೆ ಬರೆದ ಪತ್ರದಲ್ಲಿ ಮೈಸೂರು ಮತ್ತು ಕೊಚ್ಚಿ ರಾಜ್ಯಗಳೊಳಗೆ ಭೂ ಮತ್ತು ಜಲವ್ಯವಹಾರ ನಡೆಯುತ್ತಿದ್ದ ವಿಷಯವು ಬೆಳಕಿಗೆ ಬರುತ್ತದೆ.

ಮೇಲ್ಕಂಡ ಪತ್ರಗಳ ಅಧ್ಯಯನದಿಂದ ಈ ಕೆಳಗಿನ ಐತಿಹಾಸಿಕ ಸಂಗತಿಗಳು ಬೆಳಕಿಗೆ ಬರುತ್ತವೆ. ಮೈಸೂರು ಮತ್ತು ಕೇರಳ ರಾಜ್ಯಗಳಲ್ಲಿ ಬೇರೆ ಬೇರೆ ಭಾಷೆಗಳು ಇದ್ದಾಗಲೂ ಈ ರಾಜ್ಯಗಳೊಳಗೆ ಸಂಪರ್ಕ ನಡೆಸಲು ಈ ಭಾಷಾ ವೈವಿಧ್ಯತೆ ಅಡ್ಡಿಯನ್ನುಂಟುಮಾಡಲಿಲ್ಲ. ಕರ್ನಾಟಕದ ಅರಸರಿಂದ ಬಂದ ಪತ್ರವನ್ನು ಅನುವಾದಿಸಲು ಮತ್ತು ಕನ್ನಡ ಭಾಷೆಯಲ್ಲಿಯೇ ಉತ್ತರ ಕೊಡಲು ಕೇರಳದ ಅರಸರುಗಳು ಕನ್ನಡ ತಿಳಿದವರನ್ನು ನೇಮಿಸಿಕೊಂಡಿದ್ದರು. ನಾಲ್ಕನೆಯ ಪಿಂಡಿಯ 93ನೆಯ ಪತ್ರ ಮೇಲೆ ತಿಳಿಸಿದ ವಾದವನ್ನು ಪುಷ್ಟೀಕರಿಸುತ್ತದೆ. ಈ ಪತ್ರವು ಕೊಚ್ಚಿ ರಾಜರು ವಿಶ್ವಾವಸು ಸಂವತ್ಸರ ಅಧಿಕ ಜ್ಯೇಷ್ಠದಲ್ಲಿ ಹೈದರ್‌ಅಲಿಗೆ ಬರೆಸಿದುದಾಗಿದೆ. ಈ ಪತ್ರವನ್ನು ಬರೆದವನು ಅಣ್ಣಧಾರಶೆಟ್ಟಿ. ಕರ್ನಾಟಕ ಮತ್ತು ಕೇರಳ ರಾಜ್ಯಗಳೊಳಗೆ ವಾಣಿಜ್ಯ ಮತ್ತು ರಾಜಕೀಯ ವ್ಯವಹಾರಗಳು ಯಾವ ಅಡ್ಡಿ ಆತಂಕಗಳಿಲ್ಲದೇ ನಡೆಯುತ್ತಿತ್ತೆಂದು ಈ ಪತ್ರಾಗಾರದ ಕೆಲವು ಪತ್ರಗಳು ತಿಳಿಸುತ್ತವೆ. ಈ ಹಿಂದೆ ತಿಳಿಸಿದ ಪತ್ರದಂತೆ ಕೊಚ್ಚಿ ರಾಮವರ್ಮನು ಮಲಬಾರಿನ ಮಾಪಿಳ್ಳೆಯವರಿಗೆ ಪ್ರೋತ್ಸಾಹ ನೀಡಿದ ವಿಷಯವನ್ನು ವೀಕ್ಷಿಸುವಾಗ ಆ ಕಾಲದಲ್ಲಿ ಉತ್ತರ ಕೇರಳದಲ್ಲಿ ಹಿಂದು ಮುಸ್ಲಿಂರೊಳಗೆ ಸೌಹಾರ್ದ ಸ್ನೇಹಗಳಿದ್ದುವೆಂದು ತಿಳಿಯಬಹುದು. ಕರ್ನಾಟಕದ ಪ್ರಮುಖ ದೇವಾಲಯ ಮತ್ತು ಮಠಗಳ ಬಗೆಗೆ ಕೊಚ್ಚಿ ಮಲಬಾರು ರಾಜರುಗಳಿಗೆ ಭಕ್ತಿ ಇದ್ದಿತೆಂದು ಕೆಲವು ಪತ್ರಗಳಲ್ಲಿ ಬರೆದ ಬರಹಗಳಿಂದ ವ್ಯಕ್ತವಾಗುತ್ತದೆ. ಒಟ್ಟಿನಲ್ಲಿ ಕರ್ನಾಟಕ–ಉತ್ತರ ಕೇರಳಗಳೊಳಗಿನ ಸಂಪರ್ಕ ಮತ್ತು ಹೊಂದಾಣಿಕೆಯ ವಿಷಯ ತಿಳಿಯಲು ಈ ಕಾಗದ ಪತ್ರಗಳು ಮೂಲಾಧಾರವಾಗಿವೆ. ಇನ್ನುಳಿದ ಹಲವಾರು ಪತ್ರಗಳ ಅಭ್ಯಾಸ ಮತ್ತು ವಿಮರ್ಶೆ ನಡೆಸಿದಲ್ಲಿ ಕರ್ನಾಟಕ–ಕೇರಳ ಸಂಪರ್ಕಗಳ ವಿಚಾರ ಇನ್ನೂ ಹೆಚ್ಚು ತಿಳಿಯಬಹುದು. ಈ ರೀತಿಯ ಅಭ್ಯಾಸ ಈ ಎರಡು ರಾಜ್ಯಗಳ ಸಾಂಸ್ಕೃತಿಕ ಇತಿಹಾಸವನ್ನು ತಿಳಿಸಿ ಭಾಷಾದ್ವೇಷ ಅಳಿಸಿ ದಕ್ಷಿಣ ಭಾರತದಲ್ಲಿ ಹೊಸ ಅಧ್ಯಾಯವನ್ನೇ ಮೂಡಿಸಬಹುದು.

ಚೆ. ನಾ. ಸೋಮೇಗೌಡ

ಆದಿವಾಸಿಗಳ ಕಲ್ಯಾಣ

1901ರ ಜನಗಣತಿಯ ವರದಿಯು ಗಿರಿಜನರು ಅಥವಾ ಆದಿವಾಸಿಗಳು ಯಾರು ಎಂಬುದನ್ನು ಹೇಳಿದೆ. "ಅಲೆಮಾರಿ ಜೀವನವನ್ನು ನಡೆಸುವ ಮತ್ತು ಕ್ರಮಬದ್ಧ ಜೀವನವಿಲ್ಲದವರಾದ ಆದಿಮಾನವರು, ಆದಿವಾಸಿ ಪಂಗಡಗಳು, ಕಾಡು ಕುರುಬರು ಇತ್ಯಾದಿ ವರ್ಗದವರಾಗಿದ್ದಾರೆ." ಇವರು ದೇಶದ ಹಲವು ರಾಜ್ಯಗಳಾದ ಅಸ್ಸಾಂ, ಒರಿಸ್ಸಾ, ಮಧ್ಯಪ್ರದೇಶ ಮತ್ತು ಬಿಹಾರಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ. ತಮ್ಮದೇ ಆದ ಸಂಸ್ಕೃತಿ ಮತ್ತು ಜೀವನ ಇವರಲ್ಲಿ ಕಂಡುಬರುತ್ತವೆ.

ಆದಿವಾಸಿಗಳ ಸಂಸ್ಕೃತಿ ಮತ್ತು ಜೀವನ ನಾಗರಿಕ ಸಮಾಜದ ಸಂಸ್ಕೃತಿ ಮತ್ತು ಜೀವನದಿಂದ ಬೇರೆಯಾಗಿದೆ. ಭಾರತದ ಜನಸಂಖ್ಯೆಯ ಸುಮಾರು ಶೇ 5.5ರಷ್ಟು ಇರುವ ಗಿರಿಜನರಲ್ಲಿ 304 ಸಮುದಾಯಗಳಿವೆ. ಸಮುದಾಯಗಳವರಿಗೆಲ್ಲರಿಗೂ ಅವರದೇ ಆದ ವಿಶೇಷ ಸಮಸ್ಯೆಗಳಿವೆ. ಶತಮಾನಗಳಿಂದಲೂ ಹಿಂದೂ ಸಮಾಜದ ಹೊರಗಡೆ ಇದ್ದು ಹಿಂದೂ ಜನಾಂಗಗಳ ಶೋಷಣೆ ಮತ್ತು ಔದಾಸೀನ್ಯಕ್ಕೆ ತುತ್ತಾಗಿ. ಗುಡ್ಡಗಾಡುಗಳಲ್ಲಿ ಆಹಾರ ಸಂಗ್ರಹಣೆ ಮತ್ತು ಬೇಟೆಗಳಿಂದ ಜೀವನ ನಡೆಸುತ್ತಿರುವ ಅವರ ಸಂಸ್ಕೃತಿ, ಧಾರ್ಮಿಕಪದ್ಧತಿಗಳು ಶಿಥಿಲವಾಗುತ್ತಿವೆ.

ಆದಿವಾಸಿಗಳ ವಿವಿಧ ಸಮಸ್ಯೆಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಬಹುದು. ಸಾಮಾನ್ಯವಾಗಿ ತಿಳಿದಿರುವಂತೆ ಆದಿವಾಸಿಗಳ ಸಮಸ್ಯೆಗಳು (೧) ದೀರ್ಘಕಾಲದ ಪ್ರತ್ಯೇಕತೆ (೨) ಶೋಷಣೆ (೩) ಸಂಸ್ಕೃತಿಯ ಸಂಪರ್ಕ ಎಂಬ ಮೂರು ಕಾರಣಗಳಿಂದ ಸಂಭವಿಸಿವೆ ಎಂದು ಹೇಳಬಹುದು.

(೧) ದೀರ್ಘಕಾಲದ ಪ್ರತ್ಯೇಕತೆ : ಹಿಂದುಳಿದ ಒಂದು ಸಮಾಜ ಮುಂದುವರಿಯುವುದು ಮುಂದುವರಿದ ಸಮಾಜದ ಸಂಪರ್ಕದಿಂದ, ಮುಂದುವರಿದ ಸಮಾಜಗಳ ತಾಂತ್ರಿಕ ಸಾಧನೆಗಳನ್ನು ಜೀವನ ರೀತಿಯನ್ನು ಅನುಕರಣೆ ಮಾಡುವುದರಿಂದ. ಆದಿವಾಸಿಗಳು ಭೌಗೋಳಿಕವಾಗಿಯೂ ಸಾಂಸ್ಕೃತಿಕವಾಗಿಯೂ ಪ್ರತ್ಯೇಕಿಸಲ್ಪಟ್ಟಿದ್ದಾರೆ. ಗುಡ್ಡಗಾಡುಗಳಲ್ಲಿ ಬಂಧಿಸಲ್ಪಟ್ಟು ತಮ್ಮದೇ ಆದ ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನವನ್ನು ನಡೆಸುತ್ತಾ ಬಂದಿದ್ದಾರೆ. ಮುಂದುವರಿದ ಹಿಂದೂಗಳ ತಾಂತ್ರಿಕ ಸಾಧನೆಗಳು ಆದಿವಾಸಿಗಳನ್ನು ಮುಟ್ಟಲಿಲ್ಲ. ಅನೇಕ ಆದಿವಾಸಿಗಳು ಸಾಂಪ್ರದಾಯಿಕ ಉತ್ಪಾದನಾ ವಿಧಾನಗಳನ್ನು ಇನ್ನೂ ರೂಢಿಯಲ್ಲಿಟ್ಟುಕೊಂಡಿದ್ದಾರೆ. ವ್ಯರ್ಥವಾದ ಅನೇಕ ವಿಧಾನಗಳು ಇನ್ನೂ ಬಳಕೆಯಲ್ಲಿವೆ. ಈಗಲೂ ಸಹ ಅನೇಕ ಆದಿವಾಸಿಗಳು ಅರಣ್ಯವನ್ನು ಸುಟ್ಟು ಒಂದೆರಡು ವರ್ಷ ವ್ಯವಸಾಯ ಮಾಡುತ್ತಾರೆ. ಈ ಭೂಮಿ ನಿಸ್ಸಾರವಾದ ಮೇಲೆ ಇನ್ನೊಂದು ಕಡೆ ಅರಣ್ಯವನ್ನು ಸುಟ್ಟು ವ್ಯವಸಾಯ ಮಾಡುತ್ತಾರೆ. ಕಾಲಕ್ರಮೇಣ ತಮ್ಮ ಸುತ್ತಮುತ್ತಲಿರುವ ಭೂಮಿಯೆಲ್ಲಾ ನಿಸ್ಸಾರವಾಗುತ್ತದೆ. ಆಗ

ಯಾವ ಬೆಳೆಯನ್ನೂ ಬೆಳೆಯಲಾಗುವುದಿಲ್ಲ. ಹೀಗೆ ದೀರ್ಘಕಾಲದ ಪ್ರತ್ಯೇಕತೆಯಿಂದ ಸಾಂಪ್ರದಾಯಿಕ ವಿಧಾನಗಳಿಗೆ ಅಂಟಿಕೊಂಡಿರುವ ಆದಿವಾಸಿಗಳಲ್ಲಿ ವ್ಯಾಪಕ ದಾರಿದ್ರ್ಯ, ನಿರುದ್ಯೋಗ, ಹಸಿವು, ಸಾವು-ನೋವುಗಳು ಸಂಭವಿಸುತ್ತವೆ.

(೨) **ಶೋಷಣೆ:** ಸರಳ ಜೀವಿಗಳಾದ ಆದಿವಾಸಿಗಳು ಹೆಚ್ಚು ಮುಂದುವರಿದ ಹಿಂದೂಗಳ ಸುಲಿಗೆಗೆ ತುತ್ತಾಗಿದ್ದಾರೆ. ಕೆಲವಾರು ಪೈಸೆಗಳಿಗೆ, ಒಂದೆರಡು ಸೇರು ದವಸಕ್ಕೆ, ದಿನವೆಲ್ಲಾ ದುಡಿಯುತ್ತಿದ್ದಾರೆ. ಮದ್ಯಪಾನದ ವ್ಯಾಪಾರಿಗಳು, ಅರಣ್ಯಾಧಿಕಾರಿಗಳು, ಇತರ ಅಧಿಕಾರಿಗಳು ಆದಿವಾಸಿಗಳನ್ನು ಸುಲಿಗೆ ಮಾಡುತ್ತಿದ್ದಾರೆ.

(೩) **ಸಂಸ್ಕೃತಿಯ ಸಂಪರ್ಕ:** ಸಾಂಪ್ರದಾಯಿಕ ಜೀವನದಿಂದ ನೆಮ್ಮದಿಯಾಗಿದ್ದ ಆದಿವಾಸಿಗಳು ನಾಗರಿಕತೆಯ ಅಲೆಗೆ ಸಿಕ್ಕಿ ದಿವಾಳಿಯಾಗುತ್ತಿದ್ದಾರೆ. ಅವರಲ್ಲಿ ಆಸೆಗಳು ಹೆಚ್ಚುತ್ತಿವೆ. ನಾಗರಿಕತೆಯ ಸಾಧನ ಸಲಕರಣೆಗಳನ್ನು ಪಡೆಯಲು ಕಾತುರರಾಗಿದ್ದಾರೆ. ಆದರೆ ಅವರ ದುಡಿಮೆ ಹಿಂದಿನಂತೆಯೇ ಇದೆ. ಬ್ರಿಟಿಷ್ ಸರ್ಕಾರವು ಅನುಸರಿಸಿದ ಅರಣ್ಯನೀತಿಯಿಂದ ಆದಿವಾಸಿಗಳ ಆರ್ಥಿಕ ಸ್ಥಿತಿ ದುಸ್ತರವಾಯಿತು. ಇವರು ವಾಸಿಸುತ್ತಿದ್ದ ಪ್ರದೇಶಗಳಲ್ಲಿ ಜಲಾಶಯಗಳು ನಿರ್ಮಾಣವಾಗಿವೆ. ಗಣಿಗಳು, ಕಾರ್ಖಾನೆಗಳು ಸ್ಥಾಪನೆಯಾಗಿವೆ. ಆದಿವಾಸಿಗಳನ್ನು ಈ ಸ್ಥಳಗಳಿಂದ ಹೊಡೆದಟ್ಟಲಾಗಿದೆ. ಆದಿವಾಸಿಗಳ ಸಾಂಪ್ರದಾಯಿಕ ಮತ್ತು ಗೃಹ ಕೈಗಾರಿಕೆ ವೃತ್ತಿಗಳು ನಾಶವಾಗಿ ಅವರ ಆರ್ಥಿಕ ಜೀವನ ಅಲ್ಲೋಲಕಲ್ಲೋಲವಾಗಿದೆ.

ಕ್ರೈಸ್ತಪಾದ್ರಿಗಳು ಆದಿವಾಸಿಗಳ ಸಾಂಪ್ರದಾಯಿಕ ಸಂಸ್ಕೃತಿಯಲ್ಲಿ ಬಂಧನವನ್ನುಂಟು ಮಾಡಿದ್ದಾರೆ. ಅವರು ವಾಸಿಸುವ ತಾಣಗಳಲ್ಲಿ ಚರ್ಚುಗಳನ್ನು ಸ್ಥಾಪಿಸಿ ಕ್ರೈಸ್ತಮತಕ್ಕೆ ಮತಾಂತರ ಮಾಡಿಕೊಂಡಿದ್ದಾರೆ. ಆದಿವಾಸಿಗಳ ಧಾರ್ಮಿಕ ನಂಬಿಕೆ ಮತ್ತು ಪದ್ಧತಿಗಳಿಗೆ ವಿರುದ್ಧವಾದ ಧಾರ್ಮಿಕ ನಂಬಿಕೆ ಮತ್ತು ಪದ್ಧತಿಗಳನ್ನು ಅವರ ಮೇಲೆ ಹೇರಿದ್ದಾರೆ. ಅಲ್ಲದೆ ನಾಗರಿಕ ಸಮಾಜಕ್ಕಾಗಿ ಮಾಡಿರುವ ಕಾನೂನುಗಳು ಸಹ ಆದಿವಾಸಿಗಳ ಸಾಂಪ್ರದಾಯಿಕ ಪದ್ಧತಿಗೆ ವಿರುದ್ಧವಾಗಿವೆ. ವಿವಾಹ ಸಂಬಂಧಗಳಿಗೆ ಮಾಡಿರುವ ಕಾನೂನುಗಳು ಅವರ ಬಹುಪತ್ನಿತ್ವದ ಪದ್ಧತಿಗೆ ವಿರುದ್ಧವಾಗಿವೆ. ಇದರಿಂದ ಆದಿವಾಸಿಗಳು ತಮ್ಮ ಹಳೆಯ ಧರ್ಮವನ್ನು ಸಂಪೂರ್ಣವಾಗಿ ಮರೆತಿಲ್ಲ. ಹೊಸದನ್ನು ಅರಿತಿಲ್ಲ. ಹೀಗೆ ಆದಿವಾಸಿಗಳು ಮಾನಸಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಹಿಂದುಳಿದಿದ್ದಾರೆ.

ಆದಿವಾಸಿಗಳ ಸಮಸ್ಯೆಗಳನ್ನು ಬಗೆಹರಿಸಿ ಅವರ ಪುನರುಜ್ಜೀವನಕ್ಕಾಗಿ ಅನೇಕ ನೀತಿ ಧೋರಣೆಗಳನ್ನು ಅಳವಡಿಸಲಾಗಿದೆ. ಈ ನೀತಿಧೋರಣೆಗಳು ಎಷ್ಟರ ಮಟ್ಟಿಗೆ ಆದಿವಾಸಿಗಳ ಕಲ್ಯಾಣವನ್ನು ಸಾಧಿಸಬಲ್ಲವು ಎಂಬುವನ್ನು ನೋಡೋಣ.

ಸುಧಾರಣೆ

(೧) **ಆದಿವಾಸಿಗಳ ಸಮೀಕರಣ:** ಆದಿವಾಸಿಗಳನ್ನು ಸಂಪೂರ್ಣವಾಗಿ ಹಿಂದೂಗಳೊಂದಿಗೆ ಸೇರಿಸಿಕೊಳ್ಳುವುದು ಅನುಷ್ಠಾನಕ್ಕೆ ತರಲಾಗದ ನೀತಿ. ಏಕೆಂದರೆ ಆದಿವಾಸಿಗಳ ಸಂಸ್ಕೃತಿ ನಾಗರಿಕ ಹಿಂದೂಗಳ ಸಂಸ್ಕೃತಿಯಿಂದ ಭಿನ್ನವಾಗಿದೆ. ಸಮೀಕರಣಕ್ಕೆ ಹಿಂದೂಗಳು ಒಪ್ಪುವುದಿಲ್ಲ ಅಲ್ಲದೆ ಆದಿವಾಸಿಗಳು ಅದಕ್ಕೆ ಸಿದ್ಧವಾಗಿಲ್ಲ. ವಿಭಿನ್ನವಾದ ಎರಡು ಸಮಾಜಗಳನ್ನು ಒಟ್ಟುಗೂಡಿಸುವುದು ಕಷ್ಟವಾದ ಕೆಲಸ.

(೨) **ಪ್ರತ್ಯೇಕವಾಗಿ ಉಳಿಸಿಕೊಳ್ಳುವುದು:** ಅಪರೂಪವಾದ ವಿಶಿಷ್ಟವಾದ ಆದಿವಾಸಿಗಳ ಸಂಸ್ಕೃತಿಯನ್ನು ಹಾಗೆಯೇ ಉಳಿಸಿಕೊಳ್ಳುವುದು ಮಾನವ ನೀತಿಗೆ ವಿರುದ್ಧವಾದುದು. ಉಳಿಸಿಕೊಂಡರೆ ವಸ್ತು ಸಂಗ್ರಹಾಲಯಗಳ ವಸ್ತುಗಳಾಗಿ ಬಿಡುತ್ತಾರೆ. ಆದ್ದರಿಂದ ನಾಗರಿಕತೆಯ

ಮಡಿಲಿನಲ್ಲಿ ಸೇರಿಸಿಕೊಳ್ಳಬೇಕು. ರಾಷ್ಟ್ರದ ಅಭಿವೃದ್ಧಿಯಲ್ಲಿ ಸಹಭಾಗಿಗಳನ್ನಾಗಿ ಮಾಡದೆ ಪ್ರತ್ಯೇಕವಾಗಿಡುವುದರಿಂದ ಕಾಲಕ್ರಮೇಣ ಇಡೀ ಆದಿವಾಸಿ ಜನಾಂಗವೇ ನಶಿಸಿಹೋಗಬಹುದು.

(೩) **ಹಂತಹಂತವಾಗಿ ಅಭಿವೃದ್ಧಿ ಪಡಿಸುವುದು:** ಈ ನೀತಿ ಹೆಚ್ಚು ಸಮಂಜಸವಾಗಿದೆ. ಹಠಾತ್ತನೆ ಅವರನ್ನು ಆಧುನಿಕ ನಾಗರಿಕತೆಯ ಮಟ್ಟಕ್ಕೆ ತರಲು ಸಾಧ್ಯವಿಲ್ಲ. ನಿಧಾನವಾಗಿ ಹಂತ ಹಂತವಾಗಿ ಅವರ ಅಭಿವೃದ್ಧಿಯಾಗಬೇಕು. ಮೊದಲನೇ ಹಂತದಲ್ಲಿ ಪುನರ್ವಸತಿಯಾಗಬೇಕು, ಅನಂತರ ಅವರ ಅಭಿವೃದ್ಧಿಯಾಗಬೇಕು.

ಮೇಲೆ ವಿವರಿಸಿದ ನೀತಿ ಧೋರಣೆಗಳು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಸರ್ಕಾರವು ಅವುಗಳ ಬಗ್ಗೆ ನಿರ್ದಿಷ್ಟ ನೀತಿಯನ್ನು ತಾಳಿಲ್ಲ. ಯಾವ ನೀತಿಯನ್ನು ಅನುಸರಿಸಬೇಕೆಂಬ ನಿರ್ಧಾರಕ್ಕೂ ಬಂದಿಲ್ಲ.

ಆದಿವಾಸಿಗಳ ಕಲ್ಯಾಣ ಸಾಧನೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಆದಿವಾಸಿಗಳ ಕಲ್ಯಾಣಕ್ಕಾಗಿ ಭಾರತ ಸಂವಿಧಾನವು ಅನೇಕ ಕ್ರಮಗಳನ್ನು ಕೈಗೊಂಡಿದೆ. ಆದಿವಾಸಿಗಳು ಇತರ ಭಾರತೀಯರಂತೆ ಸಮಾನ ಹಕ್ಕು ಬಾಧ್ಯತೆಯನ್ನು ಹೊಂದಿರುವ ಪ್ರಜೆಗಳು. ಆದರೆ ರಾಜ್ಯಾಂಗವು ನೀಡಿರುವ ಹಕ್ಕು ಬಾಧ್ಯತೆಗಳನ್ನು ಅನುಭವಿಸುವ ಅವಕಾಶಗಳು ಅವರಿಗೆ ಇಲ್ಲ. ಈ ಅವಕಾಶಗಳನ್ನು ಕಲ್ಪಿಸಿಕೊಡುವುದಕ್ಕಾಗಿಯೇ ಅವರಿಗೆ ಅನೇಕ ರಕ್ಷಣೆಗಳನ್ನು ನೀಡಲಾಗಿದೆ,

ಭಾರತದ **ಸರ್ಕಾರವು ಗಿರಿಜನರ ಸುಧಾರಣೆಗಾಗಿ ಕೈಗೊಂಡ ಕಾರ್ಯಕ್ರಮಗಳು:** ರಾಜ್ಯಾಂಗದ 341, 342ನೇ ಕಲಮಿನ ಪ್ರಕಾರ ಜನಗಣತಿಯ ಪಟ್ಟಿಯಿಂದ ಬಿಟ್ಟುಹೋಗಿರುವ ಗಿರಿಜನರನ್ನು ಪುನಃ ಗಿರಿಜನರ ಪಟ್ಟಿಯಲ್ಲಿ ಸೇರಿಸುವ ಅಧಿಕಾರವನ್ನು ರಾಷ್ಟ್ರಪತಿಯವರು ಹೊಂದಿದ್ದಾರೆ.

ಈ ಕೆಳಕಂಡ ರೀತಿಯಲ್ಲಿ ರಾಜ್ಯ ಸರ್ಕಾರಗಳು ರಾಷ್ಟ್ರಪತಿಯವರ ಅಪ್ಪಣೆ ಮೇರೆಗೆ ತಮ್ಮದೇ ಆದ ಕಾನೂನುಗಳನ್ನು ಹೊಂದಿವೆ

೧. ಸಂವಿಧಾನದಲ್ಲಿರುವ ಗಿರಿಜನರ ಆಜ್ಞೆ (1950) ೨ ಸಂವಿಧಾನದ ಗಿರಿಜನರ ಆಜ್ಞೆ ಭಾಗ೩, ರಾಜ್ಯಗಳಿಗೆ ಸಂಬಂಧಿಸಿದಂತೆ (1951) ೩. ಅಂಡಮಾನ್ ನಿಕೋಬಾರ್ ದ್ವೀಪಗಳ ಗಿರಿಜನರ ಆಜ್ಞೆ (1959) ೪. ದಾದ್ರ, ನಗರ ಹವೇಲಿ ಗಿರಿಜನರ ಆಜ್ಞೆ (1962) ೫. ಉತ್ತರ ಪ್ರದೇಶ ಗಿರಿಜನರ ಆಜ್ಞೆ (1967) ೬. ಗೋವಾ, ಡಯು, ಡಾಮನ್ ಗಿರಿಜನರ ಆಜ್ಞೆ (1968) ಹೀಗೆ ಸಂವಿಧಾನ ಬದ್ಧವಾಗಿ ಎಲ್ಲಾ ರಾಜ್ಯ ಸರ್ಕಾರಗಳು ಗಿರಿಜನರಿಗೆ ರಕ್ಷಣೆ ಕೊಡುವ ಉದ್ದೇಶದಿಂದ ಹಲವು ಆಜ್ಞೆಗಳನ್ನು ಜಾರಿಗೆ ತಂದಿವೆ. ರಾಜ್ಯಗಳ ಪುನರ್ವಿಂಗಡಣೆಯ ನಂತರ 1956ರಲ್ಲಿ ಹಲವು ಬದಲಾವಣೆಗಳನ್ನು ಈ ಪಟ್ಟಿಯಲ್ಲಿ ಮಾಡಲಾಯಿತು.

ಗಿರಿಜನರ ವರ್ಗೀಕರಣ

೧. ಯಾರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೋ ಅವರು ಇತರ ಪಂಗಡಗಳಿಂದ ಭಿನ್ನವಾಗಿ ವರ್ಗೀಕರಿಸಲ್ಪಡುತ್ತಾರೆ. ಯಾವುದೇ ಒಂದು ಪಂಗಡ ಇತರ ಪಂಗಡಗಳಿಂದ ಭಿನ್ನವಾಗಿ ವರ್ಗೀಕರಿಸಲ್ಪಡುತ್ತಾರೆ. ಯಾವುದೇ ಒಂದು ಪಂಗಡವನ್ನು ಅಥವಾ ಜಾತಿಯನ್ನು ನಿರ್ಧರಿಸಬೇಕಾದರೆ ಹಿಂದೂ ಸಮಾಜ ರಚನೆಯಲ್ಲಿರುವ ವರ್ಣಾಶ್ರಮ ಧರ್ಮದ ಮೂಲಭೂತ ಲಕ್ಷಣಗಳನ್ನು ತಿಳಿಯಬೇಕಾಗುತ್ತದೆ. ಕ್ರಮವಾಗಿ ತಿಳಿಯಲು ಹೊರಟಾಗ ಗಿರಿಜನರು ಪ್ರತ್ಯೇಕ ವರ್ಗವಾಗಿ ಪರಿಗಣಿಸಲ್ಪಡುತ್ತಾರೆ.

೨. ಗಿರಿಜನರಿಗೆ ಶಿಕ್ಷಣದ ಕೊರತೆ ಸಾಕಷ್ಟು ಇರುವುದರಿಂದ ಯಾವ ರಂಗದಲ್ಲೂ ಪ್ರಗತಿಯನ್ನು ಪಡೆಯಲು ಸಾಧ್ಯವಾಗದೆ ಅವರು ಪ್ರತ್ಯೇಕ ವರ್ಗದವರಾಗಿದ್ದಾರೆ.

೩. ಅವರು ಸರ್ಕಾರಿ ನೌಕರಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರತಿನಿಧಿಸುತ್ತಿಲ್ಲ.

೪. ಸಾಮಾಜಿಕವಾಗಿ ಮತ್ತು ಭೌತಿಕವಾಗಿ ಅವರನ್ನು ಸಮುದಾಯದಿಂದ ಬೇರ್ಪಡಿಸಿ ಗಿರಿಜನರ ಪಂಗಡವೆಂದು ಪರಿಗಣಿಸಲಾಗಿದೆ. ಇದು ಶೋಚನೀಯ ವಿಷಯವಾಗಿದೆ.

೫. ಇವರು ವ್ಯಾಪಾರ, ವಾಣಿಜ್ಯೋದ್ಯಮ, ಕೈಗಾರಿಕೋದ್ಯಮ ಕ್ಷೇತ್ರಗಳಲ್ಲಿ ಪ್ರತಿನಿಧಿಸದೆ ಇರುವುದರಿಂದ, ಒಟ್ಟಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ವಂಚಿತರಾಗಿರುವುದರಿಂದ, . ಇವರನ್ನು ನಾವು ಹಿಂದೂ ಸಮಾಜದಿಂದ ಪ್ರತ್ಯೇಕವಾಗಿ ವರ್ಗೀಕರಿಸಿದ್ದೇವೆ.

ಸಂವಿಧಾನವು ಗಿರಿಜನರಿಗೆ ರಕ್ಷಣೆ ನೀಡಲು ಒದಗಿಸಿರುವ ಸಮಂಜಸವಾದ ಸೌಲಭ್ಯಗಳು

ಸಂವಿಧಾನದ ಈ ಕೆಳಕಂಡ ನಿಬಂಧನೆಗಳು ಗಿರಿಜನರಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ತುಂಬಾ ಯಶಸ್ವಿಯಾಗಿವೆ. ಅವುಗಳನ್ನು ಒಂದೊಂದಾಗಿ ತಿಳಿಯೋಣ.

(೧) ನಿಬಂಧನೆ ೧೫ : ಇದರ ಪ್ರಕಾರ ವ್ಯಕ್ತಿಯ ಧರ್ಮ, ಜನಾಂಗ, ಜಾತಿ, ಹುಟ್ಟಿದ ಸ್ಥಳ ಮತ್ತು ಅವನ ವೈಯಕ್ತಿಕ ಜೀವನದ ಬಗ್ಗೆ ಪ್ರಶ್ನಿಸುವಂತಿಲ್ಲ.

(ಅ) ರಾಜ್ಯವು ವ್ಯಕ್ತಿಗೆ ನೀಡಿರುವ ಈ ಮೇಲಿನ ಅಜ್ಞೆಗಳ ಬಗ್ಗೆ ಯಾರೂ ವಿರೋಧಿಸುವಂತಿಲ್ಲ. ಮತ್ತು ಇವುಗಳ ಬಗ್ಗೆ ಜವಾಬ್ದಾರಿ ಅಸಮಾನತೆ ಅಡೆತಡೆಗಳನ್ನು ಹೊರಿಸುವಂತಿಲ್ಲ.

(ಆ) ಸಾರ್ವಜನಿಕ ಸ್ಥಳಗಳಾದ ಅಂಗಡಿ, ವಿಶ್ರಾಮಧಾಮ, ಮನೋರಂಜನಾಸ್ಥಳ, ಭಾವಿ, ಕೆರೆ, ರಸ್ತೆಗಳು ಮುಂತಾದ ಎಡೆಗಳಲ್ಲಿ ಮುಕ್ತದ್ವಾರವಿರುವುದು.

(೨) ನಿಬಂಧನೆ ೧೬ : ಸಾರ್ವಜನಿಕ ಕ್ಷೇತ್ರದಲ್ಲಿ ಸಮಾನ ಅವಕಾಶಗಳನ್ನು ಕೊಡಲಾಗಿದೆ. ಸಾರ್ವಜನಿಕ ಸ್ಥಾನಗಳಿಗೆ ನೌಕರರನ್ನು ನೇಮಿಸುವಾಗ ಮತ್ತು ಪ್ರಾತಿನಿಧ್ಯ ಕೊಡುವಾಗ ಎಲ್ಲಾ ನಾಗರಿಕರಿಗೂ ಕೊಡುವಂತೆ ಉದ್ಯೋಗವನ್ನು ಕೊಡಬೇಕು ಮತ್ತು ನೇಮಿಸಬೇಕು. ದೇಶದ ಯಾವುದೇ ಭಾಗದಲ್ಲಿದ್ದರೂ ಈ ಸೌಲಭ್ಯ ದೊರೆಯುತ್ತದೆ.

(೩) ನಿಬಂಧನೆ ೧೯ : ಪ್ರತಿಯೊಬ್ಬರು ಸ್ವಾತಂತ್ರ್ಯದ ಹಕ್ಕು ಮತ್ತು ರಕ್ಷಣೆಯನ್ನು ಪಡೆಯುತ್ತಾರೆ. (ಅ) ಘೋಷಣೆ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ (ಆ) ಶಾಂತಿಯುತ ಬಾಳ್ವೆಯನ್ನು ಕಾಪಾಡುವುದು (ಇ) ಸಂಘ–ಸಂಸ್ಥೆಗಳಿಗೆ ಸೇರಿಕೊಳ್ಳುವುದು (ಈ) ರಾಷ್ಟ್ರದ ಎಲ್ಲಾ ಭಾಗಗಳಲ್ಲೂ ಸಂಚರಿಸುವುದು (ಉ) ರಾಷ್ಟ್ರದ ಯಾವುದೇ ಭಾಗದಲ್ಲಾದರೂ ನೆಲೆಸುವುದು (ಊ) ಆಸ್ತಿ ಮತ್ತು ಸಂಪತ್ತನ್ನು ಹೊಂದುವುದು (ಋ) ವ್ಯಾಪಾರ ವಾಣಿಜ್ಯೋದ್ಯಮ ಮತ್ತು ಉದ್ಯೋಗದಲ್ಲಿ ತೊಡಗುವುದು–ಇವು ಇವರಿಗೆ ಲಭಿಸಿದ ಹಕ್ಕುಗಳು.

(೪) ನಿಬಂಧನೆ ೨೩ : ಸರಳ ಜೀವಿಗಳಾದ, ಅನಕ್ಷರಸ್ಥರಾದ ಆದಿವಾಸಿಗಳನ್ನು ಗುಲಾಮತನ, ಜೀತಗಾರಿಕೆ ಇವೇ ಮೊದಲಾದ ಅನೈತಿಕವಾದ ಮತ್ತು ಅಮಾನುಷವಾದ ಕೃತ್ಯಗಳಿಗೆ ನೇಮಿಸಿಕೊಳ್ಳುವ ಪದ್ಧತಿಗಳು ರಾಜ್ಯಾಂಗ ಬಾಹಿರವಾಗಿರುವುದಲ್ಲದೆ ಶಿಕ್ಷಾರ್ಹವೂ ಆಗಿವೆ.

(೫) ನಿಬಂಧನೆ ೨೫ : ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ.

(೬) ನಿಬಂಧನೆ ೨೯ : ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಮತ್ತು ಭಾಷೆಯನ್ನುಳ್ಳ ಜನಾಂಗ ಅವುಗಳನ್ನು ಸಂರಕ್ಷಿಸಿಕೊಳ್ಳುವ ಹಕ್ಕನ್ನು ಪಡೆದಿದೆ. ಆದಿವಾಸಿಗಳು ಮುಂದುವರಿದ

ಹಿಂದೂಗಳ ಸಂಸ್ಕೃತಿ ಮತ್ತು ಭಾಷೆಯಿಂದ ಭಿನ್ನವಾಗಿರುವ ಸಂಸ್ಕೃತಿ ಮತ್ತು ಭಾವನೆಯನ್ನು ಹೊಂದಿದ್ದಾರೆ. ಅವುಗಳನ್ನು ರಕ್ಷಿಸಿಕೊಳ್ಳುವ ಹಕ್ಕನ್ನು ಪಡೆದಿದ್ದಾರೆ.

(೭) ನಿಬಂಧನೆ ೪೬: ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಗಳನ್ನು ಸಾಧಿಸಬೇಕೆಂದು ಹೇಳುತ್ತದೆ. ದುರ್ಬಲ ವರ್ಗಗಳಿಗೆ ಆಗುತ್ತಿರುವ ಸಾಮಾಜಿಕ ಅನ್ಯಾಯ ಮತ್ತು ಎಲ್ಲಾ ರೀತಿಯ ಸುಲಿಗೆಗಳನ್ನು ನಿಲ್ಲಿಸಬೇಕೆಂದು ಹೇಳುತ್ತದೆ. ಈ ನಿಯಮದ ಉದ್ದೇಶಗಳನ್ನು ಅನುಷ್ಠಾನಕ್ಕೆ ತರಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅನೇಕ ಕ್ರಮಗಳನ್ನು ತೆಗೆದುಕೊಂಡಿವೆ. ಆದಿವಾಸಿಗಳ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ಅವರಿಗೆ ಉಚಿತವಾಗಿ ಜಮೀನುಗಳನ್ನು ಹಂಚಲಾಗಿದೆ. ವಸತಿ ಸೌಕರ್ಯ ಒದಗಿಸಲಾಗಿದೆ. ಅವರ ಸಾಂಪ್ರದಾಯಿಕ ಗೃಹಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲು ಧನಸಹಾಯ ನೀಡಲಾಗುತ್ತದೆ. ಶುಲ್ಕದ ರಿಯಾಯಿತಿ ನೀಡಲಾಗಿದೆ. ಉಚಿತ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗಿದೆ. ಆದಿವಾಸಿಗಳ ಕ್ಷೇಮಪಾಲನೆಗಾಗಿ ಸಮಾಜ ಕಲ್ಯಾಣ ಮಂಡಲಿಗಳು ಸ್ಥಾಪಿತವಾಗಿವೆ. ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಆದಿವಾಸಿ ವಿದ್ಯಾರ್ಥಿಗಳಿಗೆಂದೇ ಸ್ಥಾನಗಳನ್ನು ಮೀಸಲಾಗಿಸಿದೆ. ಸರ್ಕಾರಿ ಉದ್ಯೋಗಗಳಲ್ಲಿಯೂ ಕೆಲವು ಹುದ್ದೆಗಳನ್ನು ಕಾದಿರಿಸಲಾಗಿದೆ.

(೮) ನಿಬಂಧನೆ ೨೭೫: ಆದಿವಾಸಿಗಳ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಧನಸಹಾಯವನ್ನು ಕೊಡುಗೆ ರೂಪದಲ್ಲಿ ಕೊಡುತ್ತದೆ. ದಕ್ಷ ಆಡಳಿತದಿಂದಾಗಿ ಅವರ ಏಳಿಗೆ ಸಾಧಿಸುತ್ತಿದೆ.

(೯) ನಿಬಂಧನೆ ೩೩೦ : ಲೋಕಸಭೆಯಲ್ಲಿ ಆದಿವಾಸಿಗಳಿಗೆ ಕೆಲವು ಸ್ಥಾನಗಳನ್ನು ಕಾದಿರಿಸಲಾಗಿದೆ.

(೧೦) ನಿಬಂಧನೆ ೩೩೨ : ರಾಜ್ಯಗಳ ವಿಧಾನಸಭೆಗಳಲ್ಲಿ ಕೆಲವು ಸ್ಥಾನಗಳನ್ನು ಕಾದಿರಿಸಲಾಗಿದೆ.

(೧೧) ನಿಬಂಧನೆ ೩೩೫ : ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆರಿಸಿಕೊಳ್ಳುವಾಗ ಸರ್ಕಾರದ ಆಡಳಿತಕ್ಕೆ ಕುಂದುಂಟಾಗದಂತೆ ಆದಿವಾಸಿಗಳಿಗೆ ಹೆಚ್ಚಿನ ಗಮನ ನೀಡಬೇಕೆಂದು ವಿಧಿಸಲಾಗಿದೆ.

(೧೨) ನಿಬಂಧನೆ ೩೩೮ : ರಾಷ್ಟ್ರಪತಿಯವರಿಂದ ನೇಮಕವಾದ ಒಬ್ಬ ವಿಶೇಷ ಅಧಿಕಾರಿ ಇರಬೇಕು. ಈ ಅಧಿಕಾರಿಯು ಗಿರಿಜನರ ಉದ್ಧಾರಕ್ಕಾಗಿ ಜಾರಿಗೆ ತಂದಿರುವ ಕಾರ್ಯಕ್ರಮಗಳ ಉಸ್ತುವಾರಿಯನ್ನು ನೋಡಿಕೊಳ್ಳಬೇಕಾಗಿದೆ. ಗಿರಿಜನರಿಗೆ ನೀಡಿರುವ ರಾಜ್ಯಾಂಗದ ರಕ್ಷಣೆಗಳು ಎಷ್ಟರಮಟ್ಟಿಗೆ ಕಾರ್ಯಗತವಾಗಿವೆ ಎಂಬುದನ್ನು ಈತ ಪರಿಶೀಲಿಸಿ ರಾಷ್ಟ್ರಪತಿಗೆ ವರದಿ ಸಲ್ಲಿಸಬೇಕು.

(೧೩) ನಿಬಂಧನೆ ೩೩೯ : ಆದಿವಾಸಿಗಳ ಆಡಳಿತ ಮತ್ತು ಕಲ್ಯಾಣಗಳ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸುವ ಒಂದು ಮಂಡಲಿಯನ್ನು ನೇಮಿಸುವ ಅಧಿಕಾರವನ್ನು ರಾಷ್ಟ್ರಪತಿಯವರು ಹೊಂದಿದ್ದಾರೆ. ಈ ವಿಧಿಯ ಪ್ರಕಾರ ರಾಜ್ಯ ಸರ್ಕಾರಗಳು ಅನೇಕ ಮಂಡಲಿಗಳನ್ನು ನೇಮುಕ ಮಾಡಿ ವರದಿ ಸಲ್ಲಿಸುತ್ತವೆ.

(೧೪) ನಿಬಂಧನೆ ೩೪೨ : ರಾಷ್ಟ್ರಪತಿಯವರು ರಾಜ್ಯಗಳ ರಾಜ್ಯಪಾಲರುಗಳ ಸಲಹೆ ಮೇರೆಗೆ ಪಟ್ಟಿಯಿಂದ ಬಿಟ್ಟು ಹೋಗಿರುವ ಗಿರಿಜನರನ್ನು ಆದಿವಾಸಿ ಪಟ್ಟಿಯಲ್ಲಿ ಸೇರಿಸುವ ಅಧಿಕಾರವನ್ನು ಹೊಂದಿದ್ದಾರೆ.

(೧೫) ನಿಬಂಧನೆ ೩೭೧ : ಗಿರಿಜನರಿಗಾಗಿ [ಮೇಘಾಲಯವು ಸೇರಿದಂತೆ] ನಾಗಲ್ಯಾಂಡನ್ನು

ಪ್ರತ್ಯೇಕ ರಾಜ್ಯವನ್ನಾಗಿ ಮಾಡಲಾಗಿದೆ. ತನಿಖಾ ಸಮಿತಿಯನ್ನು ನೇಮಿಸಿ ಅವರ ಕಲ್ಯಾಣವನ್ನು ಸಾಧಿಸಲಾಗಿದೆ.

(೧೬) ರಾಜ್ಯಾಂಗದ ೫ನೇ ಅನುಸೂಚಿಯಲ್ಲಿ ಆದಿವಾಸಿಗಳ ಪ್ರದೇಶದ ಆಡಳಿತವನ್ನು ಕುರಿತಂತೆ ಅನೇಕ ನಿಯಮಗಳನ್ನು ನಮೂದಿಸಲಾಗಿದೆ. ರಾಜ್ಯಪಾಲರುಗಳು ಆದಿವಾಸಿ ಪ್ರದೇಶಗಳ ಆಡಳಿತದ ಬಗ್ಗೆ ಪ್ರತಿವರ್ಷವೂ ವರದಿ ಮಾಡುತ್ತಿರಬೇಕು. ಕೇಂದ್ರ ಸರ್ಕಾರವು ಆದಿವಾಸಿ ಆಡಳಿತದ ಬಗ್ಗೆ ಸೂಕ್ತ ನಿರ್ದೇಶನವನ್ನೀಯುವ ಅಧಿಕಾರವನ್ನು ಹೊಂದಿದೆ.

ಸಂವಿಧಾನ ನೀಡಿರುವ ರಕ್ಷಣೆಗಳಿಗಿಂತ ಮುಖ್ಯವಾಗಿ ಗಾಂಧೀಜಿಯವರ ಹೋರಾಟದ ಶ್ರಮ ಬಹಳ ಮುಖ್ಯವಾದುದು. ಅವರು ಅನೇಕ ಸಂಘ ಸಂಸ್ಥೆಗಳನ್ನು ಕಟ್ಟಿ ದುರ್ಬಲ ವರ್ಗದವರ ಏಳಿಗೆಗಾಗಿ ಸತತವಾಗಿ ಹೋರಾಡಿದರು. ಥಕ್ಕರ್ ಬಾಪಾರವರೂ ಆಜೀವ ಪರ್ಯಂತ ಇವರ ಕಲ್ಯಾಣಕ್ಕಾಗಿ ದುಡಿದರು. ಹಿಂದೂ ಸೇವಕ ಸಮಾಜ (Servant of Indian Society) ಎಂಬ ಸಂಸ್ಥೆಯನ್ನು ಕಟ್ಟಿ ಆದಿವಾಸಿಗಳ ಏಳಿಗೆಗಾಗಿ ಶ್ರಮಿಸಿದರು. "ಬಿಲ್ ಸೇವಾ ಮಂಡಲ" ಎಂಬ ಸಂಘವೂ ಒಂದು ದೊಡ್ಡ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ.

ಗಿರಿಜನರ ಕಲ್ಯಾಣದ ಅಭಿವೃದ್ಧಿ ಕಾರ್ಯಕ್ರಮಗಳು

ಗಿರಿಜನರ ಕಲ್ಯಾಣವನ್ನು ಸಾಧಿಸಲು ನಿರಂತರವಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ನಾಲ್ಕು ಮುಖ್ಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅದರ ಪ್ರಕಾರ ಸೇವೆ ಸಲ್ಲಿಸುತ್ತಿವೆ.

(೧) ಸಂಪರ್ಕ ಸಾಧನ (೨) ಶಿಕ್ಷಣ ಮತ್ತು ಸಂಸ್ಕೃತಿ (೩) ಆರೋಗ್ಯ, ವಸತಿ ಮತ್ತು ನೀರು ಸರಬರಾಜು (೪) ಗಿರಿಜನರ ಆರ್ಥಿಕ ಅಭಿವೃದ್ಧಿ ಇವುಗಳೊಂದಿಗೆ ಅಧಿಕಾರೇತರ ಸ್ವಯಂಪ್ರೇರಿತ ಸಂಸ್ಥೆ [Non-official Voluntary Organization] ಯು ಗಿರಿಜನರ ಪ್ರದೇಶದಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿದೆ.

(೧) **ಸಂಪರ್ಕ:** ಸಂಪರ್ಕ ಸಾಧನಕ್ಕಾಗಿ ಮೊದಲನೆಯ ಯೋಜನೆಯಲ್ಲಿ ಆರುಕೋಟಿ ರೂ.ಗಳನ್ನು ವೆಚ್ಚ ಮಾಡಿ ಅವರು ವಾಸಿಸುವ ಪ್ರದೇಶಗಳಲ್ಲೆಲ್ಲಾ ರಸ್ತೆಗಳನ್ನು ನಿರ್ಮಿಸಲಾಯಿತು. ಅಸ್ಸಾಂ ಮತ್ತು ಇತರ ಬೆಟ್ಟಗುಡ್ಡಗಳ ರಾಜ್ಯಗಳ ನಡುವೆ ೨,೩೪೦ ಮೈಲು ಉದ್ದದ ರಸ್ತೆಗಳನ್ನು ನಿರ್ಮಾಣ ಮಾಡಲಾಯಿತು. ದ್ವಿತೀಯ ಯೋಜನೆಯಲ್ಲಿ ೧,೨೦,೦೦೦ ಮೈಲು ರಸ್ತೆ ಹಾಗೂ ೪೫೦ ಮಾರ್ಗಗಳ ಸೇತುವೆಗಳ ನಿರ್ಮಾಣ ಮಾಡಲಾಯಿತು. ಹೀಗೆ ಹಂತ ಹಂತವಾಗಿ ಯೋಜನೆಗಳ ಮೂಲಕ ಗಿರಿಜನರಿಗೂ ಸಂಪರ್ಕ–ಸಾಧನಗಳ ಸೌಲಭ್ಯವನ್ನು ಒದಗಿಸಲಾಗಿದೆ. ಪಂಚವಾರ್ಷಿಕ ಯೋಜನೆಯಲ್ಲಿ ತ್ವರಿತ ಗತಿಯಲ್ಲಿ ಈ ಜನಾಂಗದ ಕಲ್ಯಾಣವನ್ನು ಸಾಧಿಸಲಾಯಿತು.

(೨) **ಶಿಕ್ಷಣ ಮತ್ತು ಸಂಸ್ಕೃತಿ:** ಇದೊಂದು ಮಹತ್ವದ ಪ್ರಗತಿ ಎನ್ನಬಹುದು. ಉತ್ತಮ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಹೈದರಾಬಾದಿನಲ್ಲಿ ಗಿರಿಜನ ಉಪಾಧ್ಯಾಯರಿಗೆ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ ಮತ್ತು ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಪುಸ್ತಕ ಹಾಗೂ ಇತರ ವೆಚ್ಚಕ್ಕಾಗಿ ಅವರಿಗೆ ಧನ ಸಹಾಯ ನೀಡಲಾಗುತ್ತಿದೆ. ವಿದ್ಯಾರ್ಥಿ ವೇತನ, ಶುಲ್ಕ ರಿಯಾಯಿತಿ, ಉಚಿತ ಪುಸ್ತಕಗಳನ್ನು ಕೊಡುವುದಲ್ಲದೆ ಶಾಲಾ ಕಾಲೇಜುಗಳಲ್ಲಿ ಹಾಗೂ ಸರ್ಕಾರಿ ನೌಕರಿಗಳಲ್ಲಿ ಶೇ ೩ ರಷ್ಟು ಸ್ಥಾನಗಳನ್ನು ಅವರಿಗೆಂದೇ ಮೀಸಲಾಗಿರಿಸಲಾಗಿದೆ. ಮೊದಲನೇ ಯೋಜನೆಯ ಕೊನೆಯ ವೇಳೆಗೆ ೪,೦೦೦ ಶಾಲೆಗಳನ್ನು, ೧,೦೦೦ ಆಶ್ರಮಗಳನ್ನು ಮತ್ತು ಸೇವಾಶ್ರಮಗಳನ್ನು, ೬೫೦ ಸಂಸ್ಕೃತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. 1976ರ

ಹೊತ್ತಿಗೆ ಶೇ ೧೧ರಷ್ಟು ನಿರಕ್ಷರತೆಯನ್ನು ಹೋಗಲಾಡಿಸಲಾಯಿತು. ೩೦ ವರ್ಷಗಳ ಹಿಂದೆ ಅಕ್ಷರಸ್ಥನೇ ಇರಲಿಲ್ಲ. ಇತ್ತೀಚಿಗೆ ಹಲವು ಗಿರಿಜನ ಜನಾಂಗಗಳಲ್ಲಿ ಆದರಲ್ಲೂ ಖಾರಿಯಾಸ್ ಬುಡಕಟ್ಟಿನಲ್ಲಿ ಶೇ ೩೦ರಷ್ಟು ಜನ ಅಕ್ಷರಸ್ಥರಿದ್ದಾರೆ. ಈಗ ೩೦ ಲಕ್ಷ ಮಕ್ಕಳು ಪ್ರಾಥಮಿಕ ಶಾಲೆಗಳಿಗೂ ೪ ಲಕ್ಷ ಮಕ್ಕಳು ಮಾಧ್ಯಮಿಕ ಶಾಲೆಗಳಿಗೂ ೨ ಲಕ್ಷಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪ್ರೌಢಶಾಲೆಗಳಿಗೂ ಹೋಗುತ್ತಿದ್ದಾರೆ. ಹಲವು ಯುವಕ ಯುವತಿಯರು ವೈದ್ಯಕೀಯ, ತಾಂತ್ರಿಕ ವಿಭಾಗ, ಆಡಳಿತ ವಿಭಾಗ ಮತ್ತು ಉನ್ನತ ಸೇವಾ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಪುರಾತನ ಸಂಸ್ಕೃತಿಗೆ ಧಕ್ಕೆ ಬರದಂತೆ ಎಚ್ಚರಿಕೆ ವಹಿಸಲಾಗುತ್ತಿದೆ.

(೩) ಆರೋಗ್ಯ, ವಸತಿ ಮತ್ತು ನೀರು ಸರಬರಾಜು: ಅವರ ಅನಾರೋಗ್ಯಕ್ಕೆ ಹಾಗೂ ರೋಗರುಜಿನಗಳಿಗೆ ಕಾರಣವಾಗಿರುವ ಅಂಶಗಳನ್ನು ಕಂಡು ಹಿಡಿದು ಅವುಗಳ ನಿವಾರಣಾ ಕ್ರಮ ಕೈಗೊಳ್ಳಲಾಗಿದೆ. ವಾಸಿಸಲು ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ನೀರು ಮತ್ತು ಆಹಾರಕ್ಕೆ ತಕ್ಕ ವ್ಯವಸ್ಥೆ ಮಾಡಿರುವುದಲ್ಲದೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಮೊದಲನೇ ಯೋಜನೆಯಲ್ಲಿ ಗಿರಿಜನ ಸಮುದಾಯಗಳಲ್ಲಿ ೩,೧೪೪ ಪ್ರಾಥಮಿಕ ಕೇಂದ್ರಗಳನ್ನು ತೆರೆಯಲಾಯಿತು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಯಿತು.

(೪) ಆರ್ಥಿಕ ಅಭಿವೃದ್ಧಿ: ಸಾಮಾಜಿಕ, ಶೈಕ್ಷಣಿಕ, ಯಾಂತ್ರಿಕ ಅಂಶಗಳನ್ನು ಆಧರಿಸಿ ಆರ್ಥಿಕ ಪರಿಸ್ಥಿತಿಯ ಪುನರ್ನಿರ್ಮಾಣಕಾರ್ಯ ಕೈಗೊಂಡಿದೆ. ಈ ಯೋಜನೆಯಲ್ಲಿ ವ್ಯವಸಾಯದ ಪ್ರಗತಿ ಸಾಧಿಸುವುದೇ ಅಲ್ಲದೆ ಗೃಹಕೈಗಾರಿಕೆ, ಕಾರ್ಮಿಕ ಸಹಕಾರಸಂಘಗಳನ್ನು ಸ್ಥಾಪಿಸಲಾಗಿದೆ. ಅವರು ಯಾವ ಪ್ರದೇಶದಲ್ಲಿ ನೆಲೆಸುತ್ತಾರೋ ಆ ಸ್ಥಳದಲ್ಲೇ ವ್ಯವಸಾಯ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಇದರಿಂದ ಅಧಿಕ ಉತ್ಪಾದನೆಗೆ ಅವಕಾಶವಾಗಿದೆ. ಮತ್ತು ಇವರು ವಾಸಿಸುವ ಪ್ರದೇಶದಲ್ಲಿ ಲೇವಾದೇವಿ ವ್ಯವಹಾರವನ್ನು ನಿಷೇಧಿಸಲಾಗಿದೆ. ಸಾಲದ ರೂಪದಲ್ಲಿ ಹಣವನ್ನು ಕೊಟ್ಟು ಮಾರುಕಟ್ಟೆಗಳ ಮುಖಾಂತರ ದವಸ ಧಾನ್ಯಗಳನ್ನು ನಿಗದಿಯಾದ ಬೆಲೆಗೆ ಕೊಳ್ಳಲಾಗುತ್ತಿದೆ. ವಿವಿಧೋದ್ದೇಶ ಉಳ್ಳ ಸಂಘಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ವ್ಯವಸಾಯದ ಕಾಲೋನಿಗಳನ್ನು ಸ್ಥಾಪಿಸಲಾಗಿದೆ. ಈ ವ್ಯವಸಾಯದ ಸಂಸ್ಥೆಗಳಲ್ಲಿ ವ್ಯವಸಾಯಕ್ಕೆ ಅವಶ್ಯಕವಾದ ಎತ್ತುಗಳು, ಸುಧಾರಿತ ಬೀಜಗಳು, ರಸಗೊಬ್ಬರಗಳು, ಸಾಧನಸಲಕರಣೆಗಳು ನಿಗದಿಯಾದ ಬೆಲೆಗೆ ದೊರೆಯುತ್ತವೆ. ಮತ್ತು ಇವುಗಳನ್ನು ಸಾಲವಾಗಿ ಕೊಡುತ್ತಾರೆ. ಋಣ ಬಾಧೆಯಿಂದ ಮುಕ್ತಗೊಳಿಸಲು ಆಂಧ್ರಪ್ರದೇಶದಲ್ಲಿ "ಆಂಧ್ರಪ್ರದೇಶ ಗಿರಿಜನರ ಸಹಕಾರ ಸಂಘ ಮತ್ತು ಆರ್ಥಿಕ ಅಭಿವೃದ್ಧಿಸಂಸ್ಥೆ" ಸ್ಥಾಪನೆಯಾಗಿದೆ.

ಮೊದಲನೇ ಯೋಜನೆಯಲ್ಲಿ (೬೫೩) ಅರಣ್ಯ ಕಾರ್ಮಿಕರ ಸಹಕಾರಸಂಘವನ್ನು [Forest Labour Co-operative Society] ಸ್ಥಾಪಿಸಲಾಯಿತು. ಅಲ್ಲದೆ ೧೧೧ ಕೈಗಾರಿಕಾ ಕೇಂದ್ರಗಳನ್ನು ತೆರೆಯಲಾಯಿತು. ಇದರಿಂದ ಗ್ರಾಮೀಣ ಕೈಗಾರಿಕೆ ಮತ್ತು ಕುಶಲ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ತೃತೀಯ ಯೋಜನೆಯಲ್ಲಿ ಯೋಜನಾ ಆಯೋಗ [Planning Commission] ವನ್ನು ನೇಮಿಸಿ ಇವರ ಆರ್ಥಿಕ ಮಟ್ಟವನ್ನು ಅಭಿವೃದ್ಧಿಪಡಿಸಲಾಯಿತು.

ಗಿರಿಜನರ ಸ್ಥಳಗಳಲ್ಲಿ ಅಭಿವೃದ್ಧಿಕ್ಷೇತ್ರಗಳನ್ನು ತೆರೆಯಲಾಯಿತು. ಇವರು ವಾಸಿಸುವ ಪ್ರದೇಶದಲ್ಲಿ ೨೫,೦೦೦ದಿಂದ ೬೬,೦೦೦ ಜನರಿದ್ದಾರೆ. ಇಂತಹ ಪ್ರದೇಶಗಳಲ್ಲಿ ವಿವಿಧೋದ್ದೇಶ ಯೋಜನೆಗಳ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ದ್ವಿತೀಯ ಯೋಜನೆ ಮುಗಿಯುವ ಹೊತ್ತಿಗೆ ೪೩ ಅಭಿವೃದ್ಧಿ ಬ್ಲಾಕುಗಳನ್ನು ತೆರೆಯಲಾಯಿತು. ಪ್ರತಿಯೊಂದು ಕ್ಷೇತ್ರಕ್ಕೂ ೨೭ ಲಕ್ಷ ರೂ.ಗಳನ್ನು ಖರ್ಚುಮಾಡಲಾಗಿದೆ. ಆದಲ್ಲದೆ "ವಿಶೇಷ ವಿವಿಧೋದ್ದೇಶ ಯೋಜನೆಗಳ

ಗಿರಿಜನರ ಕ್ಷೇತ್ರ " [Spacial Multipurpose Tribal Block] ತೆರೆಯಲಾಯಿತು. ಮೂರನೆ ಯೋಜನೆಯ ಹೊತ್ತಿಗೆ ೪೧೫ ಅಭಿವೃದ್ಧಿ ಕ್ಷೇತ್ರಗಳನ್ನು ತೆರೆಯಲಾಯಿತು. ನಾಲ್ಕನೆಯ ಯೋಜನೆ ಮುಗಿಯುವ ವೇಳೆಗೆ ೫೦೪ ಗಿರಿಜನರ ಏಳಿಗೆಯ ಕ್ಷೇತ್ರಗಳನ್ನು ತೆರೆಯಲಾಯಿತು. ಇದರಿಂದ ಶೇ. ೪೦ ಜನ ಲಾಭ ಪಡೆದರು. ಕೆಲವು ಗಿರಿಜನ ಪ್ರದೇಶಗಳಲ್ಲಿ ಕೈಗಾರಿಕೆ ಮತ್ತು ಅದುರು ಉದ್ಯಮ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಬಿಹಾರದ ರಾಂಚಿ, ಒರಿಸ್ಸಾದ ಕಿರುಬುರು, ಮತ್ತು ಮಧ್ಯಪ್ರದೇಶದ ಬೈಲದಿಲ ಪ್ರದೇಶಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ ಇವರ ಬಗ್ಗೆ ಅಧ್ಯಯನ ನಡೆಸಲು ಹಲವು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಸಂಶೋಧನಾ ಕೇಂದ್ರಗಳು

ಈ ಕೇಂದ್ರಗಳಲ್ಲಿ ಸಮಾಜ ವಿಜ್ಞಾನಿಗಳು, ಸಮಾಜಸೇವಕರು, ಸಾರ್ವಜನಿಕ ಸೇವಕರು ತ್ವರಿತಗತಿಯಲ್ಲಿ ದುಡಿಯುತ್ತಿದ್ದಾರೆ.

ಮಧ್ಯಪ್ರದೇಶದ ಚಿಂದ್‌ವಾರ್ ಜಿಲ್ಲೆಯ ಟಮಿಯಾ ಎಂಬಲ್ಲಿ ಒಂದು ಸಂಶೋಧನಾ ಕೇಂದ್ರವನ್ನು ತೆರೆಯಲಾಗಿದೆ. ಟಾಟಾರವರ ಸಾಮಾಜಿಕ ವಿಜ್ಞಾನ ಸಂಸ್ಥೆಯು ಸಹ ಇವರ ಏಳಿಗೆಗಾಗಿ ಶ್ರಮಿಸುತ್ತಿದೆ. ಇಲ್ಲಿ ೫ ತಿಂಗಳ ಕಾಲ ಗಿರಿಜನ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ೧೮೭ ಹಳ್ಳಿಗಳಲ್ಲಿ ತನ್ನದೇ ಆದ ಕಾರ್ಯಕ್ರಮಗಳನ್ನು ಹಾಕಿಕೊಂಡು ದುಡಿಯುತ್ತಿದೆ. ೨೦೦೦ ಕುಟುಂಬಗಳ ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆಸಿ ಅವರ ಸಮಸ್ಯೆಗಳನ್ನು ನಿವಾರಿಸಲು ಕ್ಷೇಮಾಭಿವೃದ್ಧಿ ಯೋಜನೆಗಳನ್ನು ಸ್ಥಾಪಿಸಲಾಗಿದೆ. ಕ್ಷೇಮಾಭಿವೃದ್ಧಿ ಯೋಜನೆಗಳಂತೂ ತ್ವರಿತಗತಿಯಲ್ಲಿ ಕಾರ್ಯಪ್ರವೃತ್ತವಾಗಿವೆ. ೧೯೬೯ರಲ್ಲಿ ಯೋಜನಾ ಆಯೋಗವು ಸಹ ಗಿರಿಜನರ ಬಗ್ಗೆ ಅಧ್ಯಯನ ನಡೆಸಲು ಒಂದು ಸಂಶೋಧನಾ ಸಂಸ್ಥೆಯನ್ನು ದೆಹಲಿಯಲ್ಲಿ ತೆರೆಯಿತು. ರಾಜ್ಯದ ಎಲ್ಲಾ ಕಡೆಗಳಲ್ಲೂ ಇಂತಹ ಸಂಸ್ಥೆಯೊಂದನ್ನು ತೆರೆಯುವ ಪ್ರಯತ್ನ ನಡೆಯುತ್ತಿದೆ.

ಆಂಧ್ರಪ್ರದೇಶವು ಗಿರಿಜನರ ಏಳಿಗೆಯನ್ನು ಸಾಧಿಸುವುದರಲ್ಲಿ ಉಳಿದೆಲ್ಲ ದೇಶಗಳಿಗಿಂತಲೂ ಯಶಸ್ವಿಯಾಗಿದೆ. ಈಗ ಮಹಾರಾಷ್ಟ್ರ ಸರ್ಕಾರವು ಸಹ ಸ್ವಲ್ಪ ಮಟ್ಟಿಗೆ ಯಶಸ್ಸನ್ನು ಸಾಧಿಸಿದೆ. ಕರ್ನಾಟಕ ಸರ್ಕಾರವು ಸಮಗ್ರ ಗಿರಿಜನರ ಅಭಿವೃದ್ಧಿ ಯೋಜನೆಗೋಸ್ಕರ ಪ್ರಸ್ತುತ ವರ್ಷದಲ್ಲಿ ೧೦೫ ಲಕ್ಷ ರೂ.ಗಳನ್ನು ಮಂಜೂರು ಮಾಡಿದೆ.

ಭಾರತ ಸರ್ಕಾರವು ಗಿರಿಜನರಿಗಾಗಿ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ೧೯.೮೩ ಕೋಟಿ ರೂ.ಗಳನ್ನು, ದ್ವಿತೀಯ ಯೋಜನೆಯಲ್ಲಿ ೪೩ ಕೋಟಿ ರೂ.ಗಳನ್ನು, ತೃತೀಯ ಯೋಜನೆಯಲ್ಲಿ ೬೦.೪೩ ಕೋಟಿ ರೂ.ಗಳನ್ನು, ನಾಲ್ಕನೇ ಯೋಜನೆಯಲ್ಲಿ ೯೫ ಕೋಟಿ ರೂ.ಗಳನ್ನು ಖರ್ಚು ಮಾಡಿದೆ.

ಒಟ್ಟಾರೆ ಪರಿಶೀಲಿಸಿದಾಗ ನಾವು ಆದಿವಾಸಿಗಳ ಕಲ್ಯಾಣವನ್ನು ಸಾಧಿಸಿದ್ದೇವೆ ಎಂದುಕೊಳ್ಳುತ್ತೇವೆ. ಆದರೆ ಇದರಿಂದ ಪ್ರಯೋಜನ ಹೊಂದಿರುವವರ ಸಂಖ್ಯೆ ಕಡಿಮೆಯೆಂದು ಹೇಳಬಹುದು. ಯಾವುದೋ ಒಂದು ಭಾಗದ ಜನರಿಗೆ ಮಾತ್ರ ಸಂಪೂರ್ಣ ಉಪಯೋಗವಾಗಿದೆ. ಮತ್ತೊಂದು ಭಾಗದಲ್ಲಿರುವವರು ಸರ್ಕಾರದ ಸವಲತ್ತುಗಳನ್ನು ಪಡೆಯದೆ ವಂಚಿತರಾಗಿದ್ದಾರೆ. ಗಾಂಧೀಜಿಯವರ ಮಾತಿನಂತೆ ದೇಶದಲ್ಲಿ ಮೊದಲು ಹರಿಜನ ಗಿರಿಜನರ ಉದ್ಧಾರವಾಗಬೇಕು. ಗಿರಿಜನರಿಗೆ ಈಗ ನೀಡಿರುವ ಸೌಲಭ್ಯಗಳಿಗಿಂತಲೂ ಇನ್ನು ಜಾಸ್ತಿ ಸೌಲಭ್ಯಗಳನ್ನು ಒದಗಿಸಬೇಕು. ದೇಶದ ಯಾವ ಯಾವ ಭಾಗಗಳಲ್ಲಿ ಅವರು ನೆಲೆಸಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ

ಆ ಮೂಲಕ ಅವರಿಗೆ ಸರ್ಕಾರದ ಸವಲತ್ತುಗಳು ದೊರೆಯುವಂತಾಗಬೇಕು. ಅವರ ಪುರಾತನ ಅಥವಾ ಸಾಂಪ್ರದಾಯಿಕ ಸಂಸ್ಕೃತಿಯನ್ನು ತಕ್ಷಣ ಬದಲಾಯಿಸದೆ ಕ್ರಮೇಣವಾಗಿ ಬದಲಾಯಿಸಬೇಕು. ನಾಗರಿಕತೆಯ ಸೋಪಾನಗಳನ್ನು ಅವರೂ ಏರುವಂತಾಗಬೇಕು. ಅವರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟಂತೆಲ್ಲಾ ನಮ್ಮ ದೇಶದಲ್ಲಿ ಬಡತನ ಕಡಿಮೆಯಾಗುತ್ತದೆ. ಆದಿವಾಸಿಗಳು ತುಂಬಾ ಶ್ರಮ ಜೀವಿಗಳು ಹಾಗೂ ಸರಳಜೀವಿಗಳು. ಇಂತಹವರನ್ನು ನಾವು ಬುದ್ಧಿವಂತಿಕೆಯಿಂದ ಉಪಯೋಗಿಸಿಕೊಂಡರೆ ಅಧಿಕ ಲಾಭ ಪಡೆಯಬಹುದು. ಇವರಿಗೆ ಕುಡಿತದ ಚಟವು ಇರುವುದರಿಂದ ಮೊದಲು ಇದನ್ನು ನಿಷೇಧಿಸಬೇಕು. ಈಗಾಗಲೇ ಸರ್ಕಾರವು ಪಾನ ನಿರೋಧವನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತಿದೆ. ಗಿರಿಜನರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಯನ್ನು ನಾವು ಸುಧಾರಿಸಿದಂದು ಮಾತ್ರ ನಮ್ಮ ದೇಶದಲ್ಲಿ ಬಡತನ ನಾಶವಾಯಿತು ಎಂದು ಹೇಳಬಹುದು. ಇದಕ್ಕಾಗಿ ದೇಶದ ಎಲ್ಲ ಪ್ರಜೆಗಳೂ ದುಡಿಯಬೇಕು.

ಗ್ರಂಥ ಸೂಚಿ

1) Madan : *Indian Social Problem* Vol. I & II

2) ಎಂ. ನಂಜಮ್ಮಣ್ಣಿ : "ಭಾರತೀಯ ಸಾಮಾಜಿಕ ಸಂಸ್ಥೆಗಳು"

3) 1971 Census Report

4) M. V. Pylee : *Indian Constitution*

1961ರ ಜನಗಣತಿಯ ಪ್ರಕಾರ ಭಾರತದಲ್ಲಿ ಸುಮಾರು ಮೂರು ಕೋಟಿಯಷ್ಟು ಆದಿವಾಸಿ ಜನರಿದ್ದಾರೆ. ಈ ಮೂಲ ಜನಾಂಗಗಳನ್ನು ಆದಿವಾಸಿಗಳು, ಗಿರಿಜನರು, ವನ್ಯಜಾತಿ (ಕಾಡುಗಳಲ್ಲಿರುವ ಬುಡಕಟ್ಟುಗಳು) ಎಂದು ಕರೆಯುತ್ತಾರೆ. ಅವರೇ ಭಾರತ ಉಪಖಂಡದಲ್ಲಿ ಮೊಟ್ಟಮೊದಲು ವಾಸವಾಗಿದ್ದ ಜನರೆಂದು ಪರಿಗಣಿಸಲಾಗಿದೆ...............ಆದಿವಾಸಿ ಜನತೆಯ ಆರ್ಥಿಕ ಪರಿಸ್ಥಿತಿ ಅವರ ಸಂಸ್ಕೃತಿಯಷ್ಟೇ ವೈವಿಧ್ಯಯುತ. ಅತ್ಯಂತ ಪ್ರಾಚೀನತೆಯ ಮಟ್ಟದಲ್ಲಿ ಅಂಡಮಾನ್ ಮತ್ತು ಅರಸದಾನ್ ಮುಂತಾದವರು ವ್ಯವಸಾಯ ಕಾಣರು. ಬೇರುಗಳು, ಹಣ್ಣುಗಳು, ಕಾಡಿನಲ್ಲಿ ದೊರಕುವ ಸಣ್ಣಪುಟ್ಟ ಬೇಟೆಗಳಿಂದ ಅವರ ಜೀವನ ಸಾಗುತ್ತದೆ. ಮುಂದಿನ ಘಟ್ಟದಲ್ಲಿ ಸರದಿ (ಶಿಫ್ಟಿಂಗ್) ಬೇಸಾಯ ಮಾಡುವ ಜನಾಂಗಗಳಿವೆ. ಇವರು ಕಾಡನ್ನು ಸುಟ್ಟು ಬೆಳೆಗಳನ್ನು ಬೆಳೆಯುತ್ತಾರೆ............ಸ್ವಲ್ಪಮಟ್ಟಿಗೆ ಬಯಲು ಪ್ರದೇಶದ ಜನರ ಸುಲಿಗೆಯಿಂದಲೂ ಸ್ವಲ್ಪಮಟ್ಟಿಗೆ ಭೂಮಿಯ ಅಭಾವದಿಂದಲೂ ಬಹುಸಂಖ್ಯೆಯ ಆದಿವಾಸಿ ಜನಾಂಗಗಳು ತೀವ್ರ ಬಡತನದಿಂದ ಬಳಲುತ್ತಿವೆ.

(ಕನ್ನಡ ವಿಶ್ವಕೋಶ, ಸಂಪುಟ ಒಂದು, ಪು. ೭೫೪)

ಒ. ಡಿ. ಹೆಗ್ಗಡೆ

ಭಾರತದ ಅರ್ಥವ್ಯವಸ್ಥೆಯಲ್ಲಿ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು*

ಬಹು ರಾಷ್ಟ್ರೀಯ ಉತ್ಪಾದನಾ ನಿಗಮಗಳು ಭಾರತದ ಆರ್ಥಿಕತೆಯಲ್ಲೂ ಕಾರ್ಯ ನಿರ್ವಹಿಸುತ್ತಿವೆ. ಭಾರತದ ಅರ್ಥವ್ಯವಸ್ಥೆಯಲ್ಲಿ ಬಹುರಾಷ್ಟ್ರೀಯ ನಿಗಮಗಳು ವಹಿಸುತ್ತಿರುವ ಪಾತ್ರ, ಅವುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಕುರಿತು ವಿವೇಚಿಸುವುದೇ ಈ ಲೇಖನದ ಪ್ರಮುಖ ಉದ್ದೇಶವಾಗಿದೆ.

ಭಾರತೀಯ ಆರ್ಥಿಕತೆಯು ಬಹುರಾಷ್ಟ್ರೀಯ ನಿಗಮಗಳ ಕಾರ್ಯ ಚಟುವಟಿಕೆಗಳ ಅತ್ಯಂತ ಪ್ರಮುಖ ಕೇಂದ್ರವಾಗಿದೆ. ಹಾಗೂ ನಮ್ಮ ದೇಶವು ಬಹುರಾಷ್ಟ್ರೀಯ ನಿಗಮಗಳ ಶೋಷಣೆಗೀಡಾದ ಮುಖ್ಯ ರಾಷ್ಟ್ರವಾಗಿದೆ. ರಾಜಕೀಯ ಮತ್ತು ಐತಿಹಾಸಿಕ ದೃಷ್ಟಿಯಿಂದ ಹೇಳುವುದಾದರೆ ನಮ್ಮ ದೇಶವನ್ನು ಅಂದಿನ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ವಶಪಡಿಸಿಕೊಂಡು ನಂತರ ವಸಾಹತುವಾಗಿ ಪರಿವರ್ತಿಸಿ ಬ್ರಿಟಿಷ್ ಸರ್ಕಾರಕ್ಕೆ ಕ್ರಮೇಣ ವಹಿಸಿಕೊಟ್ಟಿತು. ಭಾರತ ಬ್ರಿಟನ್ನಿನ ವಸಾಹತುವಾಗಿದ್ದಾಗ ಸಹ ಭಾರತೀಯ ಸಂಘಟನಾಕಾರರು ದೇಶೀಯ ಕೈಗಾರಿಕೆಗಳ ಸಂಪೂರ್ಣ ಹತೋಟಿ ಮತ್ತು ಸ್ವಾಮ್ಯ ಪಡೆಯಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದರು ಎಂಬುದನ್ನು ಇಲ್ಲಿ ಗಮನಿಸಬೇಕು. "ಸ್ವಾತಂತ್ರ್ಯ ಪೂರ್ವಕಾಲದಲ್ಲಿ ವಿದೇಶೀಯ ಕೈಗಾರಿಕಾ ನಿಗಮಗಳ ಪ್ರಾಬಲ್ಯವಿದ್ದಾಗ್ಯೂ ನಮ್ಮ ದೇಶದ ಆರ್ಥಿಕತೆಯು ಸ್ಥಳೀಯ ಸಂಘಟನೆಯ ಭದ್ರ ಬುನಾದಿಯನ್ನು ಕೈಗಾರಿಕಾ ಕ್ಷೇತ್ರದಲ್ಲಿ ಹೊಂದಿದ್ದಿತು. ಆದರೆ ನವೀನ ತಂತ್ರಜ್ಞಾನವು ಅಭಿವೃದ್ಧ ದೇಶಗಳ ಸ್ವತ್ತಾಗಿ ಉಳಿದಿದ್ದರಿಂದ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಗಗನಾಂತರ ಸ್ಥಿತಿಗತಿಗಳನ್ನು (Take-off Stage) ಪೂರೈಸಿಕೊಳ್ಳುವುದಕ್ಕಾಗಿ ಭಾರತವೂ ಬಂಡವಾಳ ಮತ್ತು ಆಧುನಿಕ ತಂತ್ರಜ್ಞಾನಗಳ ಆಮದನ್ನು ಅನಿವಾರ್ಯವಾಗಿ ಕೈಗೊಳ್ಳಬೇಕಾಯಿತು. ಇದರಿಂದ ಹೆಚ್ಚು ಹೆಚ್ಚು ಬಹುರಾಷ್ಟ್ರೀಯ ಉತ್ಪಾದನಾ ನಿಯಮಗಳು ಭಾರತೀಯ ಆರ್ಥಿಕತೆಯನ್ನು ಪ್ರವೇಶಿಸುವಂತಾಯಿತು. ಭಾರತವು ಗಳಿಸಿದ ರಾಜಕೀಯ ಸ್ವಾತಂತ್ರ್ಯದಿಂದ ಅದು ಅಭಿವೃದ್ಧ ದೇಶವಾದ ಬ್ರಿಟನ್ನಿನ ಸಾಮ್ರಾಜ್ಯಶಾಹಿ ನೀತಿಯಿಂದ ಮುಕ್ತಗೊಂಡು ಹಲವಾರು

---

* ಈ ಲೇಖನದ ರಚನೆಗೆ ಅನೇಕ ಉಪಯುಕ್ತ ಸಲಹೆಗಳನ್ನಿತ್ತು ಪ್ರೋತ್ಸಾಹಿಸಿದ ಪ್ರೊಫೆಸರ್ ಎಂ. ಮಾದಯ್ಯ ಎಂ. ಎ., ಪಿ.ಎಚ್‌ಡಿ. (ಸ. ಇಲಿನಾಯ್ಸ್) ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ ಮೈಸೂರು ಹಾಗೂ ಶ್ರೀ ಬಿ. ಎಸ್. ಶ್ರೀಕಂಠಾರಾಧ್ಯ ಎಂ. ಎ., ಪಿ.ಎಚ್‌ಡಿ. ಉಪನ್ಯಾಸಕರು, ಅರ್ಥಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ಇವರುಗಳಿಗೆ ಲೇಖಕನು ಚಿರಋಣಿಯಾಗಿದ್ದಾನೆ.

ಸಾಂಪ್ರದಾಯಿಕ ವಿವಿಧ ಶೋಷಣೆಗಳಿಂದ ತಪ್ಪಿಸಿಕೊಂಡಿತು. ಆದರೆ ಸ್ವಾತಂತ್ರ್ಯೋತ್ತರದಲ್ಲಿ ಬಹುರಾಷ್ಟ್ರೀಯ ಉತ್ಪಾದನಾ ನಿಯಮಗಳ ಸ್ಥಾಪನೆಯಿಂದ ಆರ್ಥಿಕ ಸಾಮ್ರಾಜ್ಯಶಾಹಿ ನೀತಿಗೆ ಗುರಿಯಾಗಿ ಅನೇಕ ಅಭಿವೃದ್ಧ ದೇಶಗಳಿಂದ ಶೋಷಿಸಲ್ಪಡುತ್ತಿದೆ ಎಂಬುದನ್ನು ಮುಖ್ಯವಾಗಿ ಇಂದು ಗಮನಿಸಬೇಕಾಗಿದೆ."[1]

ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಸಂಖ್ಯೆಯು ನಮ್ಮ ಅರ್ಥವ್ಯವಸ್ಥೆಯಲ್ಲಿ ಇಳಿಮುಖವಾಗುತ್ತಿದ್ದರೂ ಅವುಗಳ ಕಾರ್ಯಚಟುವಟಿಕೆಗಳ ಸ್ವರೂಪ ಮತ್ತು ಅನುಕೂಲತೆ ಹಾಗೂ ಅನಾನುಕೂಲತೆಗಳನ್ನು ಕುರಿತು ತಿಳಿದುಕೊಳ್ಳುವುದು ಇಂದು ಅವಶ್ಯವಾಗಿದೆ.

ವಿದೇಶಿ ಉದ್ಯಮಗಳ ಸ್ವರೂಪ ಮತ್ತು ವ್ಯಾಪ್ತಿ :

ವಿದೇಶಿ ಸಂಸ್ಥೆಗಳಿಗೆ ಸೇರಿದ 1972–73ರಲ್ಲಿ ನಮ್ಮ ದೇಶದಲ್ಲಿ 740 ವಾಣಿಜ್ಯಸಂಸ್ಥೆಗಳು ಕಾರ್ಯಾಚರಣೆಯಲ್ಲಿದ್ದವು ಎಂಬುದಾಗಿ ಕಂಪೆನಿ ಕಾನೂನು ಬೋರ್ಡ್ ತನ್ನ ವರದಿಯಲ್ಲಿ ತಿಳಿಸಿದೆ.[2] ಇವುಗಳಲ್ಲಿ ಸುಮಾರು 538 ಸಂಸ್ಥೆಗಳು ಶಾಖೆಗಳಾಗಿದ್ದು ಉಳಿದ 202 ವಿದೇಶಿ ಸಂಸ್ಥೆಗಳ ಉಪಘಟಕಗಳಾಗಿದ್ದವು. 1972–73ರ ಸಮಯಕ್ಕೆ ಇವೆಲ್ಲವುಗಳ ಒಟ್ಟು ಆಸ್ತಿಯ ಪ್ರಮಾಣವು ಸುಮಾರು 2535 ಕೋಟಿ ರೂಪಾಯಿಗಳಾಗಿದ್ದಿತು. ಆದರೆ ಈ ಎಲ್ಲಾ ಸಂಸ್ಥೆಗಳನ್ನು ನಾವು ಬಹು ರಾಷ್ಟ್ರೀಯ ಉತ್ಪಾದನಾ ನಿಗಮಗಳು ಎಂದು ಕರೆಯಲು ಸಾಧ್ಯವಿಲ್ಲ. ಏಕೆಂದರೆ ಇವುಗಳಲ್ಲಿ ಬಹುತೇಕ ಸಂಸ್ಥೆಗಳು ಸಣ್ಣ ಸಣ್ಣ ವಾಣಿಜ್ಯ ಮತ್ತು ಹಣಕಾಸು ಸಂಸ್ಥೆಗಳು ಹಾಗೂ ಟೀ ಕಂಪೆನಿಗಳು ಆಗಿವೆ. ಅಲ್ಲದೆ ಮತ್ತೆ ಹಲವು ಸಂಸ್ಥೆಗಳು ಅತ್ಯಂತ ಸಣ್ಣ ಪ್ರಮಾಣದವುಗಳಾಗಿದ್ದು ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ವ್ಯಾಪ್ತಿಯಲ್ಲಿ ಸೇರುವುದೇ ಇಲ್ಲ. ಬ್ರಿಟನ್ ದೇಶವು ಸುಮಾರು 460 ಉಪ ಸಂಸ್ಥೆಗಳನ್ನು ಹೊಂದಿದ್ದು, ಇವುಗಳಲ್ಲಿ 320 ಉಪಶಾಖೆಗಳು ಹಾಗೂ 140 ಉಪಘಟಕಗಳು ಆಗಿವೆ. ಅಮೆರಿಕ ಸಂಯುಕ್ತ ಸಂಸ್ಥಾನವು ಒಟ್ಟು 116 ಉಪಸಂಸ್ಥೆಗಳನ್ನು ಹೊಂದಿದ್ದು ಇವುಗಳಲ್ಲಿ ಸುಮಾರು 88 ಉಪಶಾಖೆಗಳೂ ಮತ್ತು 28 ಉಪಘಟಕಗಳೂ ಆಗಿವೆ. ಸ್ವಿಟ್ಜರ್ಲೆಂಡ್, ಜಪಾನ್, ಪಶ್ಚಿಮ ಜರ್ಮನಿ, ಮತ್ತು ಸ್ವೀಡನ್ ದೇಶಗಳು ಕ್ರಮವಾಗಿ 21, 18, 17 ಮತ್ತು 14 ಉಪಸಂಸ್ಥೆಗಳನ್ನು ಪಡೆದಿವೆ. ಇತ್ತೀಚಿನ ವರ್ಷಗಳಲ್ಲಿ ವಿದೇಶಗಳಿಗೆ ಸೇರಿದ ವಾಣಿಜ್ಯ ಕಂಪೆನಿಗಳ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿರುವುದು ಕಂಡುಬರುತ್ತದೆ. 1969–70ರಲ್ಲಿ ಸುಮಾರು 538 ವಿದೇಶೀ ವಾಣಿಜ್ಯ ಶಾಖೆಗಳಿದ್ದದು 1972–73ಕ್ಕೆ ಇವುಗಳ ಸಂಖ್ಯೆ ಇಳಿಮುಖವಾಯಿತು ಹಾಗೂ 1968 69ರಲ್ಲಿ 223 ವಿದೇಶಿ ಉಪಘಟಕಗಳಿದ್ದು ಅವುಗಳ ಸಂಖ್ಯೆಯು 1972–73ರ ಸಮಯಕ್ಕೆ 202ಕ್ಕೆ ಇಳಿಯಿತು.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ತಾಂತ್ರಿಕ ನಿಗಮಗಳು ವಹಿಸುತ್ತಿರುವ ಪಾತ್ರವನ್ನು ಕುರಿತು ಎರಡು ಪ್ರಮುಖವಾದ ಸಮೀಕ್ಷೆಗಳನ್ನು ನಡೆಸಿದೆ. ಮೊದಲನೆಯ ಸಮೀಕ್ಷೆಯು 1960 64ರ ಅವಧಿಗೆ ಸಂಬಂಧಿಸಿದುದಾಗಿದೆ. ಎರಡನೆಯ ಸಮೀಕ್ಷೆಯು 1964–70ರ ಅವಧಿಗೆ ಸಂಬಂಧಿಸಿದುದಾಗಿದೆ. ಈ ಎರಡನೆಯ ಸಮೀಕ್ಷೆಗೆ ಸಂಬಂಧಿಸಿದ ಅಂಶಗಳು ಜೂನ್ 1974ರ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ತ್ರೈಮಾಸಿಕದಲ್ಲಿ ಪ್ರಕಟವಾಗಿದೆ.

1964–70ರ ಸಮೀಕ್ಷೆಯ ವರದಿ ಪ್ರಕಾರವಾಗಿ ನಮ್ಮ ದೇಶದ ಖಾಸಗಿ ವಲಯದಲ್ಲಿ 877 ವಿದೇಶಿ ಕಂಪೆನಿಗಳಿವೆ. ಇವುಗಳಲ್ಲಿ 197 ಉಪಘಟಕಗಳೂ, 433 ಸಹಭಾಗಿತ್ವ ಪಡೆದ ಒಪ್ಪಂದಗಳೂ ಮತ್ತು 247 ಸಂಪೂರ್ಣ ತಾಂತ್ರಿಕ ಸಹಭಾಗಿತ್ವವಿರುವ ನಿಗಮಗಳೂ ಆಗಿವೆ.

ಒಟ್ಟಾರೆ 620 ಕಂಪೆನಿಗಳು ತಾಂತ್ರಿಕ ಸಹಭಾಗಿತ್ವ ವ್ಯವಸ್ಥೆಯನ್ನು ಹೊಂದಿವೆ. ಪರಿಣಾಮವಾಗಿ ಇವುಗಳು ನಮ್ಮ ದೇಶದ ಖಾಸಗಿ ಕೈಗಾರಿಕಾ ರಂಗದಲ್ಲಿ ಸುಮಾರು 1098 ತಾಂತ್ರಿಕ ಒಪ್ಪಂದಗಳನ್ನೂ ಪಡೆದಿವೆ. ಇವುಗಳಲ್ಲಿ 167 ಉಪಘಟಕಗಳಾಗಿದ್ದು ಸುಮಾರು 489ರಷ್ಟು ಸಂಸ್ಥೆಗಳು ತಾಂತ್ರಿಕ ಸಹಭಾಗಿತ್ವವಿರುವ ಕಂಪೆನಿಗಳಾಗಿವೆ. ಒಟ್ಟು ತಾಂತ್ರಿಕ ಒಪ್ಪಂದಗಳಿಗೆ ಸಂಬಂಧಿಸಿದಂತೆ ಶೇಕಡವಾರು ಪ್ರಮಾಣದಲ್ಲಿ ವಿವಿಧ ರೀತಿಯ ವಿದೇಶಿ ಸಹಭಾಗಿತ್ವವು ಈ ಕೆಳ ಕಂಡಂತಿದೆ.

ಉಪಘಟಕಗಳು–15.2%
ವಿದೇಶೀ ಸಹಭಾಗಿತ್ವವಿರುವ ಕಂಪೆನಿಗಳು–44.5%
ಪೂರ್ಣತಾಂತ್ರಿಕ ಸಹಭಾಗಿತ್ವ ಕಂಪನಿಗಳು–40.3%

ನಮ್ಮ ದೇಶದ ಖಾಸಗಿ ಕೈಗಾರಿಕಾ ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿರುವ ವಿದೇಶೀ ಸಂಸ್ಥೆಗಳ ಪಿತೃರಾಷ್ಟ್ರಗಳ ಪಾಲು ಈ ಕೆಳಕಂಡಂತಿದೆ.

ಇಂಗ್ಲೆಂಡ್—ಶೇಕಡ 35
ಅಮೆರಿಕ ಸಂಯುಕ್ತ ಸಂಸ್ಥಾನ—ಶೇಕಡ 19
ಪಶ್ಚಿಮ ಜರ್ಮನಿ—ಶೇಕಡ 15

ನೆದರ್‌ಲೆಂಡ್ಸ್, ಸ್ವೀಡನ್, ಕೆನಡ ಮತ್ತು ಪೂರ್ವ ಐರೋಪ್ಯ ರಾಷ್ಟ್ರಗಳು ಸಹ ಭಾರತದೊಂದಿಗೆ ಸಂಪೂರ್ಣವಾಗಿ ತಾಂತ್ರಿಕ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಂಡಿವೆ.

ಒಟ್ಟಿನಲ್ಲಿ ನಮ್ಮ ರಾಷ್ಟ್ರದಲ್ಲಿಂದು ಮೂರು ತೆರನಾದ ವಿದೇಶಿ ಕಂಪನಿಗಳನ್ನು ಕಾಣಬಹುದು. ಅವುಗಳು ಯಾವುವೆಂದರೆ :

(1) ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು.
(2) ಸಹಭಾಗಿತ್ವದ ಕಂಪೆನಿಗಳು.
(3) ಪೂರ್ಣ ತಾಂತ್ರಿಕ ಒಪ್ಪಂದಗಳು.[3]

ಎಲ್ಲಾ ಅಭಿವೃದ್ಧ ರಾಷ್ಟ್ರಗಳು ಸಹ ನಮ್ಮ ದೇಶದಲ್ಲಿ ತಮ್ಮ ತಮ್ಮ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಉಪಘಟಕಗಳನ್ನು ಸ್ಥಾಪಿಸುವತ್ತ ತಮ್ಮ ಒಲವನ್ನು ವ್ಯಕ್ತಪಡಿಸುತ್ತಿವೆ. ಏಕೆಂದರೆ ಈ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಪೂರ್ಣ ತಾಂತ್ರಿಕ ಒಪ್ಪಂದಗಳ ಮೂಲಕ ತಾಂತ್ರಿಕ ಜ್ಞಾನವನ್ನು ವರ್ಗಾವಣೆ ಮಾಡಲು ಹೆಚ್ಚು ಉತ್ಸಾಹ ವ್ಯಕ್ತಪಡಿಸುವುದಿಲ್ಲ. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ತಾಂತ್ರಿಕ ಜ್ಞಾನದ ವರ್ಗಾವಣೆಗೆ ಕೈಗಾರಿಕಾ ಉದ್ಯಮಗಳಲ್ಲಿ ತಮ್ಮ ಬಂಡವಾಳದ ಪಾಲು ಮತ್ತು ಸಂಘಟನಾ ವ್ಯವಸ್ಥೆಯ ಮೇಲೆ ನಿಯಂತ್ರಣವಿದ್ದಾಗ ಮಾತ್ರ ಆಸಕ್ತಿ ತೋರುವುವು.

1961ರಲ್ಲಿ, ಒಟ್ಟು ವಿದೇಶಿ ಹೂಡಿಕೆಯಲ್ಲಿ ಶೇಕಡ 79.2ಷ್ಟು ನೇರ ಖಾಸಗಿ ವಿದೇಶಿ ಹೂಡಿಕೆಯಾಗಿದ್ದಿತು. 1965ರಲ್ಲಿ ಖಾಸಗಿ ನೇರ ವಿದೇಶಿ ಹೂಡಿಕೆಯು ಶೇಕಡ 61ಕ್ಕೆ ಇಳಿಮುಖವಾಯಿತು. ಪುನಃ ಖಾಸಗಿ ನೇರ ವಿದೇಶಿ ಹೂಡಿಕೆಯ ಪ್ರಮಾಣವು 1968ರಲ್ಲಿ ಶೇಕಡ 45.4 ರಷ್ಟಕ್ಕೆ ಇಳಿಮುಖವಾಯಿತು. 1960ರ ದಶಕದಲ್ಲಿ ನೇರ ಖಾಸಗಿ ವಿದೇಶಿ ಹೂಡಿಕೆಯಲ್ಲಿನ ಇಳಿತಾಯಕ್ಕೆ ಪ್ರಮುಖ ಕಾರಣವೆಂದರೆ, ಕ್ರಮೇಣವಾಗಿ ಸ್ಥಳೀಯ ಬಂಡವಾಳವನ್ನು ಕೈಗಾರಿಕೋದ್ಯಮಗಳಲ್ಲಿ ತೊಡಗಿಸುವಿಕೆಗೆ ಅವಕಾಶ ಕಲ್ಪಿಸುವುದರ ಮೂಲಕ ದೇಶೀಯ ಸ್ವಾಮ್ಯ ಪಡೆಯುವ ನೀತಿಯೇ ಆಗಿದ್ದಿತು. ಸರ್ಕಾರದ ಅಧಿಕೃತ ವಕ್ತಾರರೊಬ್ಬರು ಪಾರ್ಲಿಮೆಂಟಿನಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯದಂತೆ (1975) ಭಾರತದ ಕೈಗಾರಿಕಾಕ್ಷೇತ್ರದಲ್ಲಿ ಇಂದು 20,000

ಕೋಟಿ ರೂಪಾಯಿಗಳ ಬಂಡವಾಳ ತೊಡಗಿಸಲಾಗಿವೆ. ಇದರಲ್ಲಿ ವಿದೇಶಿ ಬಂಡವಾಳದ ಪಾಲು ಶೇಕಡ 9ರಷ್ಟಿದೆ. ಅಂದರೆ ಒಟ್ಟು 1800 ಕೋಟಿ ರೂಪಾಯಿಗಳ ವಿದೇಶಿ ಬಂಡವಾಳ ಭಾರತೀಯ ಕೈಗಾರಿಕಾ ಕ್ಷೇತ್ರದಲ್ಲಿ ತೊಡಗಿಸಲ್ಪಟ್ಟಿದೆ.

ನಮ್ಮ ದೇಶದ ಕೈಗಾರಿಕಾ ಚಟುವಟಿಕೆಗಳ ಗಣನೀಯ ಪ್ರಮಾಣವು ವಿದೇಶಿ ನಿಯಂತ್ರಣದಲ್ಲಿದ್ದಿತು. ಕೈಗಾರಿಕಾ ವಾಣಿಜ್ಯದಲ್ಲಿ ವಿದೇಶಿ ಕಂಪೆನಿಗಳು ತೊಡಗಿಸಿದ್ದ ಬಂಡವಾಳದ ಪ್ರಮಾಣವು ಒಟ್ಟು ಬಂಡವಾಳದ ಶೇಕಡ 16ರಷ್ಟಿದ್ದಿತು. ನಮ್ಮ ದೇಶದ ಕೈಗಾರಿಕೆಯ ಉತ್ಪಾದನಾ ಸಾಮರ್ಥ್ಯವನ್ನು ಅಳತೆಗೋಲಾಗಿಟ್ಟುಕೊಂಡು ಹೇಳುವುದಾದರೆ ಈ ವಿದೇಶಿ ಸಂಸ್ಥೆಗಳು ಕೈಗಾರಿಕಾಕ್ಷೇತ್ರದ ಒಟ್ಟು ಆಸ್ತಿಯಲ್ಲಿ ಶೇಕಡ 15ರಷ್ಟರ ಮೇಲೆ ತಮ್ಮ ಸ್ವಾಮ್ಯ ಪಡೆದಿದ್ದವು. ಈ ವಿದೇಶಿ ಕಂಪನಿಗಳ ಒಟ್ಟು ಉತ್ಪಾದನೆ ಮತ್ತು ಮಾರಾಟದ ಮೌಲ್ಯವು ಸಮಗ್ರ ಕೈಗಾರಿಕಾ ಉತ್ಪಾದನೆ ಮತ್ತು ಮಾರಾಟದ ಶೇಕಡ 21ಕ್ಕೂ ಹೆಚ್ಚಿದ್ದಿತು. ಈ ಅಂಶವು ಭಾರತೀಯ ಕಂಪನಿಗಳಿಗೆ ಹೋಲಿಸಿದರೆ ವಿದೇಶಿ ಕಂಪೆನಿಗಳು ಕಡಿಮೆ ಹೂಟಿಯ ಆಧಾರದ ಮೇಲೆ ಹೆಚ್ಚು ಸರಕು ಮಾರಾಟ ಸಾಮರ್ಥ್ಯ ಪಡೆದಿದ್ದವು ಎಂಬ ವಿಚಾರವನ್ನು ಬೆಳಕಿಗೆ ತರುತ್ತದೆ. ಹಾಗೂ ರಿಸರ್ವ್ ಬ್ಯಾಂಕ್‌ನ ಅಧ್ಯಯನವು (1974) ವಿದೇಶಿ ಕಂಪೆನಿಗಳು ಭಾರತೀಯ ಕೈಗಾರಿಕಾ ಕ್ಷೇತ್ರದಲ್ಲಿ ಕೇಂದ್ರೀಕೃತವಾಗಿರುವ ಬಗೆಯನ್ನು ಕುರಿತು ಹಲವು ಉಪಯುಕ್ತ ಮಾಹಿತಿಗಳನ್ನು ನೀಡುತ್ತದೆ. ಈ ಅಧ್ಯಯನದ ಪ್ರಕಾರ ಸುಮಾರು 516 ವಿದೇಶಿ ನಿಯಂತ್ರಿತ ರೂಪಾಯಿ ಕಂಪೆನಿಗಳು ತಯಾರಿಕಾಕ್ಷೇತ್ರದಲ್ಲಿ ನಿರತವಾಗಿವೆ. ಅಧ್ಯಯನದಲ್ಲಿ ಸೇರಿಸಲ್ಪಟ್ಟ ಕಂಪೆನಿಗಳ ಶೇಕಡ 82ರಷ್ಟು ತಯಾರಿಕಾಕ್ಷೇತ್ರದಲ್ಲಿವೆ ಎಂದರ್ಥವಾಗುತ್ತದೆ. ತಯಾರಿಕಾ ಕ್ಷೇತ್ರದಲ್ಲಿ ಹೂಡಲಾಗಿರುವ ಒಟ್ಟು ಬಂಡವಾಳವು ಶೇಕಡ 82 ರಷ್ಟೂ, ಒಟ್ಟು ಸ್ಥಿರ ಆಸ್ತಿಯು ಶೇಕಡ 89 ರಷ್ಟೂ ಮತ್ತು ಮಾರಾಟ ಪ್ರಮಾಣವು ಶೇಕಡ 87 ರಷ್ಟೂ ಆಗುವುದು. ಪ್ರತಿಯೊಂದು ಉದ್ದಿಮೆಯನ್ನೂ ಕುರಿತು ಹೇಳುವುದಾದರೆ, ಒಟ್ಟು ವಿದೇಶಿ ಹೂಟಿಯ ಹೆಚ್ಚು ಪಾಲು ಕೈಗಾರಿಕಾ ರಾಸಾಯನಿಕ ಉದ್ದಿಮೆ (14%) ಗಳಿಗೂ, ಶೇಕಡ 12ರಷ್ಟು ವಿದ್ಯುತ್ ಉಪಕರಣ ಉದ್ದಿಮೆಗೂ, ಶೇಕಡ 8 ರಷ್ಟು ವಿದ್ಯುದೇತರ ಹಾಗೂ ಸಾಗಣೇತರ ಉದ್ದಿಮೆಗಳಿಗೂ, ಶೇಕಡ 7 ರಷ್ಟು ಅಲ್ಯುಮಿನಿಯಂ, ಶೇಕಡ 7 ರಷ್ಟು ಔಷಧಿ ತಯಾರಿಕಾ ಕ್ಷೇತ್ರಕ್ಕೂ, ಶೇಕಡ 5 ರಷ್ಟು ರಬ್ಬರ್ ಸರಕುಗಳಿಗೂ, ಶೇಕಡ 5 ರಷ್ಟು ಸಾಗಣೆ ಸಲಕರಣೆ ಉದ್ದಿಮೆಗಳಲ್ಲಿ ತೊಡಗಿಸಲ್ಪಟ್ಟಿದೆ. ಸರಕು ಮಾರಾಟ ಮತ್ತು ಒಟ್ಟು ಸ್ಥಿರ ಆಸ್ತಿಗಳ ವಿತರಣೆ ಸ್ವರೂಪವು ಈ ಉದ್ದಿಮೆಗಳಲ್ಲಿ ಹೆಚ್ಚು ಕಡಿಮೆ ಒಂದೇ ತೆರನಾಗಿದೆ. ಆದರೆ ವಿದೇಶಿ ಸಂಸ್ಥೆಗಳ ಶಾಖೆಗಳು ಮತ್ತು ವಿದೇಶಿ ನಿಯಂತ್ರಿತ ರೂಪಾಯಿಗಳ ಕಂಪೆನಿಗಳ ವ್ಯವಹಾರದ ಸಮಗ್ರ ಸ್ವರೂಪವು ನಮಗೆ ರಿಸರ್ವ್‌ಬ್ಯಾಂಕ್‌ನ 1974ರ ಅಧ್ಯಯನದಿಂದ ಲಭಿಸುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸಮಗ್ರ ಚಿತ್ರವು ನಮಗೆ ಕಂಪೆನಿ ಕಾನೂನು ಬೋರ್ಡ್‌ನ ಅಧ್ಯಯನದ ಮೂಲಕ ದೊರಕುವುದು. ಈ ಅಧ್ಯಯನದ ವಿವರಗಳು ಈ ಕೆಳಕಂಡಂತಿವೆ.[4]

1972–73ರಲ್ಲಿ 452 ವಿದೇಶಿ ಸಂಸ್ಥೆಗಳ ಶಾಖೆಗಳ ಒಟ್ಟು ಆಸ್ತಿಯು ಸುಮಾರು 1673 ಕೋಟಿ ರೂಪಾಯಿಗಳಿದ್ದಿತು. ಇದರಲ್ಲಿ ಸುಮಾರು 1128 ಕೋಟಿ ರೂಪಾಯಿಗಳಷ್ಟು ಆಸ್ತಿಯು ವಾಣಿಜ್ಯ ಮತ್ತು ಹಣಕಾಸು ಕ್ಷೇತ್ರಗಳಿಂದ ಬಂದದ್ದಾಗಿದೆ. ಕೃಷಿ ಮತ್ತು ತತ್ಸಂಬಂಧ ಚಟುವಟಿಕೆಗಳಿಂದ ಸುಮಾರು 212 ಕೋಟಿ ರೂ.ಗಳ, ಸಂಸ್ಕರಣ ಮತ್ತು ತಯಾರಿಕಾ ಕ್ಷೇತ್ರಗಳಿಂದ ಸುಮಾರು 202 ಕೋಟಿ ರೂ.ಗಳ ಆಸ್ತಿ ಕಂಡು ಬಂದಿದೆ. ಆದರೆ ವಿದೇಶಿ ನಿಗಮಗಳ ಉಪಸಂಸ್ಥೆಗಳು ಸಂಸ್ಕರಣ ಮತ್ತು ತಯಾರಿಕಾಕ್ಷೇತ್ರದಲ್ಲಿ ಹೆಚ್ಚು ಆಸ್ತಿಯನ್ನು ಹೊಂದಿವೆ. 1972–73 ಕೊನೆಯ ಭಾಗಕ್ಕೆ ವಿದೇಶಿ ನಿಗಮಗಳ ಉಪಸಂಸ್ಥೆಗಳು ಸಂಸ್ಕರಣ ಮತ್ತು

ತಯಾರಿಕಾ ಕ್ಷೇತ್ರದಲ್ಲಿ ಹೊಂದಿದ್ದ ಆಸ್ತಿಯ ಸಮಗ್ರಪ್ರಮಾಣವು ಸುಮಾರು 1147 ಕೋಟಿ ರೂಪಾಯಿಗಳಾಗಿದ್ದಿತು. ಅಂತೆಯೇ ವಾಣಿಜ್ಯ ಮತ್ತು ಹಣಕಾಸು ಕ್ಷೇತ್ರಗಳ ಸಮಗ್ರ ಆಸ್ತಿಯಲ್ಲಿ ಶೇಕಡ 2.3 ರಷ್ಟು ಹಾಗೂ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ಶೇಕಡ 2.9 ರಷ್ಟು ಆಸ್ತಿಯೂ ಈ ವಿದೇಶಿ ಸಂಸ್ಥೆಗಳ ಉಪಘಟಕಗಳದಾಗಿವೆ.

1972-73ರ ಕೊನೆಯ ಭಾಗಕ್ಕೆ ಭಾರತೀಯ ಉಪಘಟಕಗಳ ಒಟ್ಟು ಸಂದಾಯ ಬಂಡವಾಳವು (Paid-up Capital) ಸುಮಾರು 280.6 ಕೋಟಿ ರೂ. ಗಳಾಗಿದ್ದು ಇದು 4.8 ಕೋಟಿ ರೂ. ಗಳಷ್ಟು ಒಲವೀಕೃತ ಬಂಡವಾಳವನ್ನು (Preference Capital) ಒಳಗೊಂಡಿದೆ. ಕಂಪೆನಿ ಕಾನೂನು ಬೋರ್ಡ್‌ನ ಅಧ್ಯಯನವು ಉಪಶಾಖೆ ಮತ್ತು ಘಟಕಗಳ ಪ್ರಮಾಣಾನುಗುಣ ವಿತರಣೆ (size distribution pattern) ಸ್ವರೂಪವನ್ನು ಕುರಿತು ತಿಳಿಸುತ್ತದೆ. ಎಲ್ಲಾ ಬಗೆಯ ವಿದೇಶಿ ಕಂಪೆನಿಗಳ ಉಪಘಟಕ ಮತ್ತು ಶಾಖೆಗಳೂ ಸಣ್ಣ ಪ್ರಮಾಣದ್ದಾಗಿವೆ. ವಿದೇಶಿ ಕಂಪೆನಿಗಳ ಶೇಕಡ 60ರಷ್ಟು ಉಪಶಾಖೆಗಳು ಮತ್ತು ವಿದೇಶಿ ನಿಗಮಗಳ ಶೇಕಡ 40ರಷ್ಟು ಉಪಘಟಕಗಳೂ ಕೇವಲ ಒಂದು ಕೋಟಿ ರೂಪಾಯಿಗಳಿಗೂ ಕಡಿಮೆ ಮೊತ್ತದ ಆಸ್ತಿಯನ್ನು ಹೊಂದಿವೆ. ಇದಕ್ಕೆ ಪ್ರಮುಖ ಕಾರಣವೆಂದರೆ ಬಹುತೇಕ ಶಾಖೆಗಳೂ ಮತ್ತು ಉಪಘಟಕಗಳೂ ಸಣ್ಣ ಸಣ್ಣ ಪ್ರಮಾಣದ ವಾಣಿಜ್ಯ ಮತ್ತು ಹಣಕಾಸು ಸಂಸ್ಥೆಗಳೂ ಹಾಗೂ ಪ್ಲಾಂಟೇಷನ್ ಸಂಸ್ಥೆಗಳೂ ಆಗಿವೆ. ಆದರೆ ತಯಾರಿಕಾ ಕ್ಷೇತ್ರದಲ್ಲಿ ತೊಡಗಿರುವ ಬಹುತೇಕ ವಿದೇಶಿ ಸಂಸ್ಥೆಗಳು ಬೃಹತ್ ಪ್ರಮಾಣದ್ದಾಗಿವೆ. ಆದರೆ ಅವುಗಳ ಖಚಿತ ಆಸ್ತಿ ಪ್ರಮಾಣದ ಬಗ್ಗೆ ಯಾವ ಪುರಾವೆಯನ್ನೂ ಕಂಪೆನಿ ಕಾನೂನು ಬೋರ್ಡ್‌ನ ಅಧ್ಯಯನವು ನೀಡದಿರುವುದು ದುರದೃಷ್ಟಕರವಾದ ವಿಚಾರ. ಆದರೆ ಈಗಾಗಲೇ ತಿಳಿಸಿದಂತೆ ಭಾರತೀಯ ಕೈಗಾರಿಕಾ ಕ್ಷೇತ್ರದಲ್ಲಿ ವಿದೇಶಿ ಕಂಪೆನಿಗಳ ಪ್ರಾಬಲ್ಯವು ಕುಗ್ಗುತ್ತಾ ಬಂದಿದೆ ಎಂಬ ವಿಚಾರವನ್ನು ಮಾತ್ರ ಅಲ್ಲಗಳೆಯಲಾಗುವುದಿಲ್ಲ. ಇತ್ತೀಚೆಗೆ ಭಾರತೀಯ ಕೈಗಾರಿಕೆಯ ಪ್ರಮುಖ ಉದ್ದಿಮೆ ರಂಗಗಳನ್ನು ವಿದೇಶಿ ಹಿಡಿತದಿಂದ ಮುಕ್ತಗೊಳಿಸಲಾಗಿದ್ದರೂ ಅದನ್ನೂ ಸಂಪೂರ್ಣವಾಗಿ ಸಾಧಿಸಲಾಗಿಲ್ಲ. ಇದರಿಂದ ಭಾರತೀಯ ಆರ್ಥಿಕತೆಯಲ್ಲಿ ವಿದೇಶಿ ಬಂಡವಾಳದ ಪಾಲು ಕ್ರಮೇಣವಾಗಿ ಇಳಿಮುಖವಾಗುತ್ತಿದ್ದು ವಿದೇಶಿ ಕಂಪೆನಿಗಳು ಹೆಚ್ಚು ಹೆಚ್ಚು ಲಾಭವನ್ನು ತಮ್ಮ ಪಿತೃಸಂಸ್ಥೆಗೆ ಹಿಂತಿರುಗಿಸುವುದು ಸಾಧ್ಯವಿಲ್ಲವಾಗಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ 1964–70ರ ಅವಧಿಯ ಸಮೀಕ್ಷೆ ವರದಿ ಪ್ರಕಾರ ಬಹುದೇಶಿ ಉತ್ಪಾದನಾ ನಿಗಮಗಳು ವರ್ಷಂಪ್ರತಿ ಶೇಕಡ 6.3ರಷ್ಟು ಮತ್ತು ಸಹಭಾಗಿತ್ವದ ಕಂಪೆನಿಗಳು ವರ್ಷಂಪ್ರತಿ ಶೇಕಡ 3.7ರಷ್ಟು ಲಾಭವನ್ನು ತಮ್ಮ ಪಿತೃಸಂಸ್ಥೆಗಳಿಗೆ ಕಳುಹಿಸಿವೆ ಎಂಬುದು ಕಂಡುಬರುತ್ತದೆ. 1960–64ರ ಅವಧಿಯಲ್ಲಿ ತಾಂತ್ರಿಕ ಶುಲ್ಕ ಸಂದಾಯವು ಲಾಭಸಂದಾಯ ಪ್ರಮಾಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಶೇಕಡ 77ರಷ್ಟಿದ್ದದ್ದು, 1964–70ರ ಅವಧಿಯಲ್ಲಿ ಶೇಕಡ 66.5ರಷ್ಟಕ್ಕೆ ಇಳಿಮುಖವಾಯಿತು. ಆದರೂ ವಿದೇಶಿ ಸಂಸ್ಥೆಗಳ ಉಪಘಟಕಗಳು ಮತ್ತು ಇತರೇ ಬಗೆಯ ವಿದೇಶಿ ಕಂಪೆನಿಗಳು ತಮ್ಮ ಪಿತೃ ದೇಶಗಳಿಗೆ ಹಿಂತಿರುಗಿಸಿದ ಲಾಭ ಪ್ರಮಾಣವು 1964–65ರಿಂದ 1969–70ರ ಅವಧಿಯಲ್ಲಿ ಗಣನೀಯವಾಗಿದ್ದು ನಮ್ಮ ದೇಶದ ಸಂದಾಯ ಸಲಿಕೆಯ ಮೇಲೆ ಗಣನೀಯವಾದ ದುಷ್ಪರಿಣಾಮವನ್ನುಂಟುಮಾಡಿತು. ಈ ಅವಧಿಯಲ್ಲಿ ವಿದೇಶಿ ಸಂಸ್ಥೆಗಳು ತಮ್ಮ ಪಿತೃರಾಷ್ಟ್ರಗಳಿಗೆ ಹಿಂತಿರುಗಿಸಲ್ಪಟ್ಟ ಲಾಭವು ಸುಮಾರು 684 ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯವಾಗಿದ್ದಿತು.[5]

ಮೇಲೆ ಹೇಳಲಾದ ಕಾರಣದಿಂದಾಗಿ ಅತ್ಯಂತ ಪ್ರಮುಖವೂ ಹಾಗೂ ಹೆಚ್ಚು ಲಾಭತೆ ನೀಡಬಲ್ಲ ತಯಾರಿಕಾ ಕ್ಷೇತ್ರಗಳನ್ನು ವಿದೇಶಿ ಕಂಪೆನಿಗಳ ಸ್ವಾಮ್ಯ ಮತ್ತು ಪ್ರಭಾವದಿಂದ

ಮುಕ್ತವಾಗಿಸಲು 1970ರ ದಶಕದಿಂದ ಕೆಲವು ಕ್ರಮಗಳನ್ನು ತೆಗೆದುಕೊಳ್ಳಲಾರಂಭಿಸಿದೆ. 1970ರಿಂದೀಚೆಗೆ ನಾಲ್ಕು ಬೃಹತ್ ಪ್ರಮಾಣದ ಬಹುದೇಶಿ ಪೆಟ್ರೋಲಿಯಂ ಹಾಗೂ ತತ್ಸಂಬಂಧ ಉದ್ದಿಮೆಗಳನ್ನು ಕೇಂದ್ರ ಸರ್ಕಾರವು ರಾಷ್ಟ್ರೀಕರಿಸಿತು ಹಾಗೂ ದೇಶೀಯ ಬಂಡವಾಳ ಮತ್ತು ತಂತ್ರಜ್ಞಾನದ ಬಳಕೆ ಮೂಲಕ ಅನೇಕ ಪೆಟ್ರೋಲಿಯಂ ಸಂಸ್ಕರಣ ಕೇಂದ್ರಗಳನ್ನೂ ಮತ್ತು ಎಣ್ಣೆ ಬಾವಿಗಳನ್ನು ಹೊರತೆಗೆಯುವ ಕಾರ್ಯವನ್ನೂ ತ್ವರಿತಗೊಳಿಸಲಾಯಿತು. ಇನ್ನೂ ಸಹ ಸೌಂದರ್ಯ ಪ್ರಸಾಧನ ಮತ್ತು ಔಷಧಿ ತಯಾರಿಕೆ ಕೈಗಾರಿಕೋದ್ಯಮಗಳು ವಿದೇಶಿ ಕಂಪೆನಿಗಳ ಸ್ವಾಮ್ಯ ಮತ್ತು ಹಿಡಿತದಲ್ಲಿವೆ. ಈ ಕೈಗಾರಿಕೆಗಳಲ್ಲಿ ಹಲವಾರು ಬಗೆಯ ಸೌಂದರ್ಯ ಪ್ರಸಾಧನ ಮತ್ತು ಔಷಧಿಗಳ ತಯಾರಿಕೆಯಲ್ಲದೆ ಇವಕ್ಕೆ ಸಂಬಂಧಿಸಿದ ಕಚ್ಚಾ ಸರಕುಗಳ ಪೂರೈಕೆ ಮೂಲಗಳೂ ಸಹ ವಿದೇಶಿ ಕಂಪೆನಿಗಳ ಹಿಡಿತದಲ್ಲಿವೆ. ಸಿಗರೇಟ್, ಬಣ್ಣಗಳು, ರಬ್ಬರ್ ಸರಕು, ಹಲವು ಬಗೆಯ ಎಂಜಿನಿಯರಿಂಗ್ ಸಲಕರಣೆ, ಸಂಸ್ಕರಣಗೊಂಡ ಆಹಾರ ಪದಾರ್ಥ ಮುಂತಾದ ಹಲವು ಉದ್ಯಮಗಳಲ್ಲಿ ಈ ವಿದೇಶಿ ಕಂಪೆನಿಗಳು ಇನ್ನೂ ಅಗಾಧ ಪ್ರಭಾವ ಮತ್ತು ಹಿಡಿತವನ್ನು ಹೊಂದಿವೆ.

ವಿದೇಶಿ ಸಂಸ್ಥೆಗಳು ಹೊಂದಿರುವ ಆಸ್ತಿ ಪ್ರಮಾಣ ಮತ್ತು ಅವುಗಳು ತಮ್ಮ ಪಿತೃದೇಶಗಳಿಗೆ ಹಿಂತಿರುಗಿಸುತ್ತಿರುವ (Repatriation) ಲಾಭತೆ ಪ್ರಮಾಣವನ್ನು ಗಮನಿಸಿದಾಗ ಭಾರತೀಯ ಅರ್ಥವ್ಯವಸ್ಥೆಯು ಶೋಷಿಸಲ್ಪಡುತ್ತಿರುವ ಸ್ವರೂಪ ಮತ್ತು ಪ್ರಮಾಣದ ಅರಿವಾಗುತ್ತದೆ. ಅಂತೆಯೇ ಇವುಗಳ ಕಾರ್ಯಾಚರಣೆಯಿಂದ ಭಾರತದ ನಿವ್ವಳ ವಾಣಿಜ್ಯ ಉಳಿಕೆ (Net Trade Balance) ಮೇಲೆ ಉಂಟಾಗಿರುವ ದುಷ್ಪರಿಣಾಮ ಹಾಗೂ ಭಾರತದ ರಫ್ತಿನಲ್ಲಿ ಈ ಸಂಸ್ಥೆಗಳ ಪಾಲನ್ನು ಗಮನಿಸಿದಾಗ ಇವುಗಳು ಆತಿಥೇಯ ದೇಶಗಳ ರಫ್ತು ವೃದ್ಧಿಗಾಗಲಿ ಅಥವ ಕಾಲಾನುಕ್ರಮದಲ್ಲಿ ಆಗಬೇಕಾದ ಆಮದು-ಬದಲಿ(Import Substitution) ವ್ಯವಸ್ಥೆಯಾಗಲಿ ರೂಪುಗೊಳ್ಳಲು ಸಾಧ್ಯವಿಲ್ಲ ಎಂಬುದು ಕಂಡುಬರುತ್ತದೆ. ಇದರಿಂದ ಬಹುದೇಶಿ ನಿಗಮಗಳು ತಮ್ಮ ಆರ್ಥಿಕ ಸಾಮ್ರಾಜ್ಯಶಾಹಿ ನೀತಿಯನ್ವಯ ಆತಿಥೇಯ ವಿಕಾಸಶೀಲ ದೇಶಗಳನ್ನು ಅಭಿವೃದ್ಧ ದೇಶಗಳ ಆರ್ಥಿಕ ಸಂಕೋಲೆಗೆ ಒಳಪಡಿಸುವ ಸಾಧನಗಳಾಗಿವೆ ಎನ್ನದೆ ವಿಧಿಯಿಲ್ಲ.

ಮೇಲೆ ಹೇಳಲಾದ ಎರಡು ಮುಖ್ಯ ಅಂಶಗಳ ಅಂಕಿ–ಅಂಶ ಪುರಾವೆಯನ್ನು ಹೀಗೆ ವಿವರಿಸಬಹುದು : ಬಹು ರಾಷ್ಟ್ರೀಯ ನಿಗಮಗಳ ಕಾರ್ಯಾಚರಣೆಯಿಂದಾಗಿ ನಿವ್ವಳ ವಾಣಿಜ್ಯ ಉಳಿಕೆಯು ಭಾರತಕ್ಕೆ ಪ್ರತಿಕೂಲಕರವಾಗಿ ಪರಿಣಮಿಸಿತು. 1964–65ರಿಂದ 1969-70ರ ಅವಧಿಯಲ್ಲಿ ವಿದೇಶಿ ಸಂಸ್ಥೆಗಳ ಉಪಘಟಕಗಳ ಆಮದು 749 ಕೋಟಿ ರೂಪಾಯಿಗಳೂ ಹಾಗೂ ಅವುಗಳ ರಫ್ತು 248 ಕೋಟಿ ರೂಪಾಯಿಗಳೂ ಆಗಿದ್ದಿತು. ಅಂದರೆ ಅವುಗಳು ಸುಮಾರು 501 ಕೋಟಿ ರೂಪಾಯಿಗಳ ನಿವ್ವಳ ಬಾಹ್ಯ ಹರಿವಿಗೆ (outflow) ಅವಕಾಶ ಮಾಡಿಕೊಟ್ಟವು. ಅಂತೆಯೇ ಅಲ್ಪಸಂಖ್ಯಾತ ಕಂಪೆನಿಗಳು (Minority Companies) ಕೈಗೊಂಡ ಆಮದು 503 ಕೋಟಿ ರೂಪಾಯಿಗಳೂ ಮತ್ತು ರಫ್ತು 332 ಕೋಟಿ ರೂಪಾಯಿಗಳೂ ಆಗಿದ್ದು ಇವುಗಳು ಒಟ್ಟು 171 ಕೋಟಿ ರೂಪಾಯಿಗಳ ವಿದೇಶಿ ವಿನಿಮಯದ ನಿವ್ವಳ ಬಾಹ್ಯ ಹರಿವಿಗೆ ಅವಕಾಶ ಮಾಡಿಕೊಟ್ಟವು. ತಾಂತ್ರಿಕ ಮತ್ತು/ಅಥವಾ ಹಣಕಾಸು ಸಹಭಾಗಿತ್ವ ಕಂಪೆನಿಗಳನ್ನು ಬಿಟ್ಟು ಆಮದು (ರೂ.1,441 ಕೋಟಿ) ಮತ್ತು ರಫ್ತು (ರೂ.901 ಕೋಟಿ) ಗಳನ್ವಯ ಹೇಳುವುದಾದರೆ ಈ ಬಗೆಯ ಸಂಸ್ಥೆಗಳು ಸುಮಾರು 540 ಕೋಟಿ ರೂಪಾಯಿಗಳ ನಿವ್ವಳ ಬಾಹ್ಯ ಹರಿವಿಗೆ ದಾರಿಮಾಡಿಕೊಟ್ಟವು. ಈ ಕಾರಣದಿಂದಾಗಿ ಭಾರತದ ನಿವ್ವಳ ವಾಣಿಜ್ಯ ಉಳಿಕೆಯ ಮೇಲೆ ಗಣನೀಯವಾದ ದುಷ್ಪರಿಣಾಮವು ಉಂಟಾಯಿತು.

ಬಹುದೇಶಿ ಉತ್ಪಾದನಾ ನಿಗಮಗಳ ಆಮದು ಭಾರತದ ಒಟ್ಟು ಆಮದುವಿನ $1/5$ ರಷ್ಟಿದ್ದು ಅವುಗಳ ರಫ್ತು ಭಾರತದ ರಫ್ತುವಿನ ಕೇವಲ $1/8$ ರಷ್ಟಿದೆ. ಅಗಾಧ ಲಾಭ ಮತ್ತು ಡಿವಿಡೆಂಡ್ ಹಿಂತಿರುಗಿಸುವಿಕೆ, ನಿವ್ವಳ ವಾಣಿಜ್ಯ ಉಳಿಕೆ ಮೇಲಿನ ದುಷ್ಪರಿಣಾಮ ಮುಂತಾದ ಅಂಶಗಳ ಜೊತೆಗೆ ಬಹುರಾಷ್ಟ್ರೀಯ ನಿಗಮಗಳ ಆಮದು-ರಫ್ತು ಅಸಮತೆಯನ್ನು ಗಣನೆಗೆ ತೆಗೆದುಕೊಂಡಾಗ ಈ ಸಂಸ್ಥೆಗಳು ಅತಿಥೇಯ ದೇಶಗಳ ರಫ್ತುವೃದ್ಧಿ ಮತ್ತು ಆಮದು-ಬದಲಿ ವ್ಯವಸ್ಥೆ ಮುಂತಾದುವನ್ನು ಕಾಲಾನುಕ್ರಮದಲ್ಲಿ ಪ್ರೋತ್ಸಾಹಿಸುವುವು ಎಂಬ ವಿಚಾರದಲ್ಲಿ ಸ್ವಲ್ಪವೂ ಸತ್ಯಾಂಶವಿಲ್ಲ ಎಂದು ಹೇಳಬೇಕಾಗುತ್ತದೆ.

ಬಹುರಾಷ್ಟ್ರೀಯ ನಿಗಮಗಳು ಅತಿಥೇಯ ಹಾಗೂ ವಿಕಾಸಶೀಲ ದೇಶಗಳ ರಫ್ತಿಗೆ ಪ್ರೋತ್ಸಾಹ ನೀಡುವುದಿಲ್ಲ ಅಲ್ಲದೆ ರಫ್ತು ಮೌಲ್ಯವನ್ನು ಅಪಮೌಲ್ಯಗೊಳಿಸುವುದಕ್ಕೆ ಮುಂಜಾಗರೂಕತೆ ವಹಿಸಿರುತ್ತವೆ ಎಂಬ ವಿಚಾರವನ್ನು ಈಗಾಗಲೇ ಸಾಕಷ್ಟು ಕೂಲಂಕಷವಾಗಿ ಈ ಲೇಖನದ ಭಾಗ–೧ರಲ್ಲಿ ವಿವೇಚಿಸಲಾಗಿದೆ.[6] ಅಂತೆಯೇ ಈ ಸಂಸ್ಥೆಗಳು ತಮ್ಮ ಅತಿಥೇಯ ದೇಶಗಳಿಗೆ ಆಮದು ಮಾಡಿಕೊಳ್ಳುವ ಬಂಡವಾಳ ಸರಕುಗಳಿಗೆ ಮುಕ್ತ ಮಾರುಕಟ್ಟೆ ಬೆಲೆಗಿಂತ ಹೆಚ್ಚು ಬೆಲೆನೀಡುವುವು ಎಂಬುದೂ ಕಂಡುಬಂದಿದೆ. ಈ ಅಂಶವು ಈ ಸಂಸ್ಥೆಗಳ ಅತಿಥೇಯ ವಿಕಾಸಶೀಲ ದೇಶಗಳ ಆರ್ಥಿಕ ಶೋಷಣೆಯ ಸತ್ಕಾರ್ಯಕ್ಕೆ ಮತ್ತೊಂದು ಹಂತವಾಗಿದೆ ಎನ್ನಬಹುದು. ಈ ಅಂಶವು ರಿಸರ್ವ್ ಬ್ಯಾಂಕ್‌ನ ಅಧ್ಯಯನದಿಂದ ವ್ಯಕ್ತಪಟ್ಟಿದೆ. "ವಿದೇಶಿ ಕಂಪೆನಿಗಳು ಅತಿಥೇಯ ರಾಷ್ಟ್ರಗಳಿಗೆ ಆಮದು ಮಾಡಿಕೊಳ್ಳುವ ಸರಕು ಮತ್ತು ಯಂತ್ರ ಸಲಕರಣೆಗಳಿಗೆ ಅತಿ ಹೆಚ್ಚು ಬೆಲೆ ನೀಡುತ್ತವೆ ಅಥವ ಈ ಕಂಪೆನಿಗಳು ಆಮದು ಮಾಡಿಕೊಳ್ಳುವ ಸರಕು ಮತ್ತು ಯಂತ್ರಸಲಕರಣೆಗಳ ಕಂಪೆನಿಗಳು ಅತಿ ಹೆಚ್ಚು ಬೆಲೆ ವಿಧಿಸುತ್ತವೆ........ವಿದೇಶಿ ಕಂಪೆನಿಗಳು ಹಲವಾರು ಸಂದರ್ಭಗಳಲ್ಲಿ ತಮ್ಮ ಸರಕು ಮತ್ತು ಇತರೇ ಸಾಮಗ್ರಿಗಳಿಗೆ ಶೇಕಡ 10ರಿಂದ 15ಕ್ಕೂ (ಇನ್ನೂ ಕೆಲವು ಸಂದರ್ಭಗಳಲ್ಲಿ ಶೇಕಡ 30 ಕ್ಕಿಂತಲೂ ಮಿಗಿಲಾಗಿ) ಹೆಚ್ಚು ಬೆಲೆಯನ್ನು ಆ ಸರಕುಗಳ ಬದಲಿ ಮಾರುಕಟ್ಟೆ ಬೆಲೆಯೊಡನೆ ಹೋಲಿಸಿದಂತೆ ವಿಧಿಸುವುವು. ಸಹಭಾಗಿತ್ವ ಹೊಂದಿರುವ ಕಂಪೆನಿಯು ಭಾರತೀಯ ವಿದೇಶಿ ನಿಗಮ ಆಮದು ಮಾಡಿಕೊಳ್ಳುವ ಸರಕು ಮತ್ತು ಇತರೇ ಸಾಮಗ್ರಿಗಳ ಪೂರೈಕೆ ಮೂಲದ ಮೇಲೆ ವಿಧಿಸಿರುವ ಹಲವು ನಿರ್ಬಂಧಗಳಿಂದಾಗಿ ಸಹಭಾಗಿತ್ವದ ಕಂಪೆನಿಯು ಏಕ ಸ್ವಾಮ್ಯತ್ವ (monopolistic)ವನ್ನು ಈ ಬಗೆಯ ಸರಕು ಮತ್ತು ಸಾಮಗ್ರಿ ಮಾರುಕಟ್ಟೆಯಲ್ಲಿ ಪಡೆದು ಅತಿಹೆಚ್ಚು ಬೆಲೆಯನ್ನು ವಿಧಿಸಲು ಅವಕಾಶವಾಗುವುದು."

ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ತಮ್ಮ ಬೃಹತ್ ಬಂಡವಾಳದ ಜೊತೆಗೆ ನವೀನ ತಂತ್ರಜ್ಞಾನದ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು ಎಂಬುದಾಗಿ ಪದೇ ಪದೇ ಹೇಳಲಾಗುತ್ತದೆ. ಆದರೆ ಭಾರತೀಯ ಅರ್ಥವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದೇಶಿ ನಿಗಮಗಳು ಇದಕ್ಕೆ ಸಮಂಜಸವಾದ ಪುರಾವೆ ನೀಡುವುದಿಲ್ಲ. 1969–70ರಲ್ಲಿ ಸುಮಾರು 197 ಉಪಘಟಕಗಳ ಪೈಕಿ ಕೇವಲ 80 ಉಪಘಟಕಗಳು ಮಾತ್ರ ಸ್ವತಂತ್ರವಾದ ಸಂಶೋಧನೆ ಮತ್ತು ಬೆಳವಣಿಗೆ ವಿಭಾಗಗಳನ್ನು ಹೊಂದಿದ್ದವು. ಹಾಗೂ 1969–70ರಲ್ಲಿ ಸುಮಾರು 433 ವಿದೇಶಿ ನಿಯಂತ್ರಿತ ರೂಪಾಯಿ ಕಂಪೆನಿಗಳ ಪೈಕಿ ಕೇವಲ 144 ಘಟಕಗಳು ಮಾತ್ರ ತಮ್ಮದೇ ಆದ ಸಂಶೋಧನೆ ಮತ್ತು ಬೆಳವಣಿಗೆ ಘಟಕಗಳನ್ನು ಹೊಂದಿದ್ದವು. ಈ ಹಲವು ವಿದೇಶಿ ಕಂಪೆನಿಗಳು ಸಂಶೋಧನೆ ಮತ್ತು ಬೆಳವಣಿಗೆ ಘಟಕಗಳ ಕಾರ್ಯಾಚರಣೆಯನ್ನು ಕೇವಲ ವಾಣಿಜ್ಯ ಲಾಭತೆಯನ್ನು (Commercial Profit) ವೃದ್ಧಿಸಿಕೊಳ್ಳುವುದಾಗಿಯೇ ಹೊರತು ತಂತ್ರಜ್ಞಾನ ಅಭಿವೃದ್ಧಿಗಾಗಿ ಅಲ್ಲ. ಉದಾಹರಣೆಗೆ ಅನುಭೋಗಿ ಸರಕು ಕೈಗಾರಿಕೆಯಲ್ಲಿ ಹೆಚ್ಚು

ಹೆಚ್ಚು ಲಾಭಕರವಿದೆ. ಇದನ್ನು ಪಡೆಯಲು ವಿದೇಶಿ ಕಂಪೆನಿಗಳು ಆಕರ್ಷಣೀಯವೂ ಹಾಗೂ ಅಭಿವೃದ್ಧ ದೇಶಗಳಲ್ಲಿ ಪ್ರಚಲಿತವೂ ಆದ ಹೆಸರುಗಳನ್ನು ಇಡುವುದರ ಮೂಲಕ ತಮ್ಮ ತಮ್ಮ ಸರಕುಗಳಿಗೆ ಮಾರುಕಟ್ಟೆಯನ್ನು ಕಾಯ್ದುಕೊಳ್ಳುವುದಲ್ಲದೆ ಅದನ್ನು ವಿಸ್ತರಿಸಲೂ ಪ್ರಯತ್ನಿಸುವುವು. ಅಲ್ಲದೆ ಯಾವುದೇ ಸರಕು ವಿದೇಶೀಯ ಹಾಗೂ/ಅಥವ ಅದೇ ಬಗೆಯ ವಿದೇಶಿ ಹೆಸರನ್ನು ಹೊಂದಿದ್ದ ಪಕ್ಷದಲ್ಲಿ ಭಾರತೀಯ ಅನುಭೋಗಿಗಳು ಅದಕ್ಕೆ ಅತ್ಯಂತ ಹೆಚ್ಚು ಬೆಲೆ ನೀಡಿ ಕೊಳ್ಳಲೂ ಸಿದ್ಧರಿರುತ್ತಾರೆ. ಇಂತಹ ಅವಕಾಶವನ್ನು ಈ ವಿದೇಶಿ ಕಂಪೆನಿಗಳು ತಮ್ಮ ಸ್ವ-ಹಿತ ಸಾಧನೆಗೆ ಬಳಸಿಕೊಳ್ಳುತ್ತಿವೆ. ಟೂತ್‌ಪೇಸ್ಟ್, ಸೌಂದರ್ಯ ಪ್ರಸಾಧನಗಳು, ವಿವಿಧ ಬಗೆಯ ಪಾದರಕ್ಷೆಗಳು, ತಂಪು ಪಾನೀಯಗಳು, ಬಗೆಬಗೆಯ ಮೈಸಾಬೂನುಗಳು, ಬ್ಲೇಡುಗಳು, ಸಿಗರೇಟ್‌ಗಳು, ಸಂಸ್ಕರಣಗೊಂಡ ಟೀ ಮತ್ತು ಕಾಫಿ, ಮುಂತಾದ ಸರಕುಗಳನ್ನು ಉತ್ಪಾದಿಸುತ್ತಿರುವ ವಿದೇಶಿ ಕಂಪೆನಿಗಳನ್ನು ಮುಂದಿನ ಹಲವು ವರ್ಷಗಳಲ್ಲಿ ಉತ್ಪಾದನೆ ಸ್ಥಗಿತಗೊಳಿಸಿ ಭಾರತದಿಂದ ಕಾಲ್ತೆಗೆಯುವಂತೆ ಮಾಡಬೇಕಾಗಿದೆ. ಏಕೆಂದರೆ ಈ ಎಲ್ಲಾ ಬಗೆಯ ಉದ್ಯಮಗಳು ಗಣನೀಯ ಪ್ರಮಾಣದಲ್ಲಿ ಲಾಭ ನೀಡುವುದೂ ಅಲ್ಲದೆ ಇವುಗಳನ್ನು ಸಣ್ಣ ಸಣ್ಣ ಪ್ರಮಾಣದ ದೇಶೀಯ ಉದ್ಯಮಗಳನ್ನಾಗಿ ಸೂಕ್ತ ಪ್ರಾದೇಶಿಕ ಯೋಜನೆಯನ್ವಯ ಪರಿವರ್ತಿಸಿದರೆ ಆಗ ಭಾರತದ ಸಹಸ್ರಾರು ಮಂದಿ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುತ್ತದೆ. ಮತ್ತು ಇದು ಆರ್ಥಿಕ ಚಟುವಟಿಕೆಗಳ ವಿಕೇಂದ್ರೀಕರಣ ಮತ್ತು ಮರೆಮಾಚಿದ ಹಾಗೂ ಅರೆ ನಿರುದ್ಯೋಗಗಳನ್ನು ನಿವಾರಿಸಲು ಸಹಕಾರಿಯಾಗುತ್ತದೆ. ಈ ದಿಸೆಯಲ್ಲಿ ತೀರಾ ಇತ್ತೀಚೆಗೆ ಕೋಕಾಕೋಲಾ ಘಟಕವನ್ನು ಮುಚ್ಚಿ ದೇಶೀಯವಾದ '77 ಹಾಗೂ ಇತರೇ ಬಗೆಯ ಪಾನೀಯಗಳ ಬೆಳವಣಿಗೆಗೆ ಹಾದಿ ಮಾಡಿಕೊಟ್ಟಿರುವುದು ಸ್ವಾಗತಾರ್ಹ. ಹಾಗೂ ಕೇಂದ್ರ ಸರ್ಕಾರದ ಕೈಗಾರಿಕೆ ಸಚಿವಾಲಯವು ಹಲವು ಬಗೆಯ ಉತ್ಕೃಷ್ಟವೆಂದು ಹೇಳಲಾದ ಮೈಸಾಬೂನು ಉತ್ಪಾದಿಸುವ ವಿದೇಶಿ ಕಂಪೆನಿಗಳಿಗೆ ತಮ್ಮ ತಮ್ಮ ಉತ್ಪಾದನೆಯನ್ನು ಇನ್ನು ಮೂರು ವರ್ಷಗಳೊಳಗೆ ನಿಲ್ಲಿಸುವಂತೆ ಆಜ್ಞಾಪಿಸಿ, ಮೈಸಾಬೂನು ತಯಾರಿಕಾ ಕ್ಷೇತ್ರವನ್ನು ದೇಶೀಯ ಸಣ್ಣ ಸಣ್ಣ ಉದ್ದಿಮೆದಾರರು ಪ್ರವೇಶಿಸುವಂತೆ ಮಾಡಲು ಸಂಕಲ್ಪಿಸಿರುವುದು ಅತ್ಯಂತ ಶ್ಲಾಘನೀಯವಾದುದಾಗಿದೆ. ಇದೇ ತೆರನಾದ ಕ್ರಮವನ್ನು ಪಾದರಕ್ಷೆ, ಸೌಂದರ್ಯ ಪ್ರಸಾಧನ, ಸಿಗರೇಟ್, ಟೂತ್‌ಪೇಸ್ಟ್ ಮುಂತಾದ ಉದ್ಯಮಗಳಲ್ಲೂ ತರಲೇಬೇಕು; ಇಲ್ಲದಿದ್ದರೆ ವಿದೇಶಿ ಕಂಪೆನಿಗಳ ಅನೂಚಾನವಾದ ಆರ್ಥಿಕ ಶೋಷಣೆ ಸಾಗುತ್ತಿರುತ್ತದೆ ಹಾಗೂ ದೇಶದಲ್ಲಿ ಶ್ರಮ-ಪ್ರಧಾನ ತಂತ್ರಜ್ಞಾನದ ಆಧಾರದ ಮೂಲಕ ಉದ್ಯೋಗ ಸೃಷ್ಟಿ ಕಾರ್ಯಕ್ಕೆ ಧಕ್ಕೆಯೊದಗುವುದು. ಅಂದರೆ ಈ ವಿದೇಶಿ ಕಂಪೆನಿಗಳ ಕಾರ್ಯ ಚಟುವಟಿಕೆಯಿಂದಾಗಿ ಅರ್ಬುದವ್ಯಾಧಿಯಂತೆ ಭಾರತೀಯ ಮಧ್ಯಮ ಹಾಗೂ ಶ್ರೀಮಂತವರ್ಗದಲ್ಲಿ ಹರಡುತ್ತಿರುವ "ಕೋಕಾಕೋಲ ಸಂಸ್ಕೃತಿ"ಯನ್ನು ತಡೆಗಟ್ಟಲೇಬೇಕು.

ನಮ್ಮ ದೇಶದಲ್ಲಿ ಬಹುದೇಶಿ ನಿಗಮಗಳು ಮತ್ತು ಇತರೇ ಬಗೆಯ ವಿದೇಶಿ ಕಂಪೆನಿಗಳು ಇದುವರೆಗೆ ಉಂಟುಮಾಡಿದ ಆರ್ಥಿಕ ಶೋಷಣೆಯನ್ನು ಗಮನಿಸಿ ಈ ಸಂಸ್ಥೆಗಳಲ್ಲಿ ಭಾರತೀಯ ಈಕ್ವಿಟಿ ಷೇರು ಪತ್ರಗಳ ಪ್ರಮಾಣವು ಅಧಿಕಗೊಳ್ಳುವಂತೆ ಮಾಡುವುದರ ಮೂಲಕ ಅವುಗಳ ಕಾರ್ಯಾಚರಣೆಯ ಮೇಲೆ ನೇರ ನಿಯಂತ್ರಣ ಮತ್ತು ಪ್ರಭಾವವನ್ನು ಹೊಂದಲು ಭಾರತ ಸರ್ಕಾರ ಅತ್ಯಂತ ತೀವ್ರವಾಗಿ ಶ್ರಮಿಸುತ್ತಿದೆ. ಆದರೆ ಈ ದಿಸೆಯಲ್ಲಿ ಭಾರತ ಸರ್ಕಾರ ನಿರೀಕ್ಷಿಸಿದಷ್ಟು ಯಶಸ್ಸನ್ನು ಪಡೆಯಲು ಇನ್ನೂ ಶಕ್ತವಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವು ಬಹುದೇಶಿ ಕಂಪೆನಿಗಳ ಸ್ಥಾಪನೆ, ವಿಸ್ತರಣೆ ಮತ್ತು ಕಾರ್ಯಾಚರಣೆಯ ಬಗ್ಗೆ ಬಹು ಎಚ್ಚರಿಕೆಯಿಂದಿರಬೇಕಾಗುತ್ತದೆ. ಈ ದಿಸೆಯಲ್ಲಿ ಜನತಾ ಸರ್ಕಾರದ ಬಿಗಿಯಾದ ಹಾಗೂ ಮುಂಜಾಗರೂಕತಾ

ಧೋರಣೆ ಮತ್ತು ನೀತಿಯಿಂದ ಇತ್ತೀಚೆಗೆ ಅಮೆರಿಕದ ಬಹುದೇಶಿ ಉತ್ಪಾದನಾ ನಿಗಮಗಳ ಮಾಲೀಕರು ಬರಿಗೈಲಿ ವಾಪಸಾದುದನ್ನು ಗಮನದಲ್ಲಿಡಬೇಕು.

ಆದರೆ ಇಂದಿನ ನಮ್ಮ ದೇಶದ ಕೈಗಾರಿಕೋದ್ಯಮಗಳ ಬೆಳವಣಿಗೆಯ ಅಗತ್ಯತೆ, ಸ್ವರೂಪ ಮತ್ತು ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಭಾರತವು ಇನ್ನು ಮುಂದೆಯೂ ಕೂಡ ವಿದೇಶಿ ತಂತ್ರಜ್ಞಾನದ ಬಳಕೆಯ ಮೇಲೆ ಅವಲಂಬಿತವಾಗಬೇಕಾಗುವುದು ಎನ್ನದೆ ವಿಧಿಯಿಲ್ಲ. ಏಕೆಂದರೆ ಯಾವುದೆ ವಿಕಾಸಶೀಲ ದೇಶವು ತಾಂತ್ರಿಕ ನವೀನೀಕರಣದ ನಿರಂತರ ಕ್ರಿಯೆಯಿಂದ ತನ್ನನ್ನೇ ಪ್ರತ್ಯೇಕಿಸಿಕೊಳ್ಳುವುದು ಸಾಧ್ಯವೂ ಇಲ್ಲ ಹಾಗೂ ಸೂಕ್ತವೂ ಅಲ್ಲ. ಈ ಸೂಕ್ಷ್ಮ ವಿಚಾರವನ್ನು ಮನಗಂಡ ಭಾರತ ಸರ್ಕಾರವು ವಿದೇಶಿ ತಂತ್ರಜ್ಞಾನ ಬಹುರಾಷ್ಟ್ರೀಯ ನಿಗಮಗಳನ್ನು ಕೆಲವು ಆಯ್ಕೆಯಾದ ಕೈಗಾರಿಕೋದ್ಯಮಗಳಲ್ಲಿ ಬಳಸುತ್ತಿದೆ. ಒಂದು ವೇಳೆ ವಿಕಾಸಶೀಲ ದೇಶಗಳು ಬಹುರಾಷ್ಟ್ರೀಯ ನಿಗಮಗಳು ಉಂಟುಮಾಡಬಹುದಾದ ರಾಜಕೀಯ ಮತ್ತು ಸಾಮಾಜಿಕ, ಹಾಗೂ ಸಾಂಸ್ಕೃತಿಕ ಸಮಸ್ಯೆಗಳ ಕಾರಣದಿಂದ ಇವುಗಳ ಸೇವಾ ಸೌಲಭ್ಯವನ್ನು ಬಳಸಿಕೊಳ್ಳದಿದ್ದರೆ ಅದು ವಿಶ್ವದ ದೀರ್ಘಾವಧಿಯ ಕೈಗಾರಿಕಾ ಸಾಮರ್ಥ್ಯ ವಿಸ್ತರಣೆಗೆ ತೊಡಕಾಗುತ್ತದೆ.

ದ್ವಿತೀಯ ವಿಶ್ವಸಮರದಿಂದೀಚೆಗೆ ಬಹುರಾಷ್ಟ್ರೀಯತೆಯು ಆರ್ಥಿಕ ಅಭ್ಯುದಯ ಮತ್ತು ಬದಲಾವಣೆಗೆ ಬಹಳ ಮುಖ್ಯವಾದ ಅಂಶವಾಗಿದೆ. ಬಹುರಾಷ್ಟ್ರೀಯತೆಯು ಸಂಪತ್ತಿನ ಪುನರ್‌ಹಂಚಿಕೆಯಲ್ಲಿ ವಿಶ್ವಾದ್ಯಂತ ಪ್ರಮುಖ ಪಾತ್ರವಹಿಸುತ್ತಿದೆ. ಇದರಿಂದ ಇಂದು ವಿಶ್ವಾದ್ಯಂತ ನೇರ ವಿದೇಶಿ ಹೂಟಿ ಹೆಚ್ಚುತ್ತಿದೆ. ಆದ್ದರಿಂದ ವಿಶ್ವದ ಉತ್ಪಾದನಾ ಸಾಮರ್ಥ್ಯ ಹೆಚ್ಚುವುದರ ಜೊತೆಗೇ ಎಲ್ಲ ದೇಶಗಳ ಅನುಭೋಗಿಗಳ ಹಿತ ಮತ್ತು ಸರಕು ವೈವಿಧ್ಯತೆ ಹಾಗೂ ಬೆಳವಣಿಗೆ ಸಾಧಿಸಲು ಈ ಸಂಸ್ಥೆಗಳು, ಸೂಕ್ತ ಹಾಗೂ ಪರಿಣಾಮಕಾರಿ ನಿಯಂತ್ರಣಗಳಿದ್ದಲ್ಲಿ ಮಾತ್ರ, (ಈ ಲೇಖನದ ಭಾಗ ೧ನ್ನು ನೋಡಿ) ಸಹಕಾರಿಯಾಗುವುವು. ಅಲ್ಲದೆ ಪರಸ್ಪರ ಹೆಚ್ಚು ಅವಲಂಬಿತವಾದ ಇಂದಿನ ವಿಶ್ವ ಆರ್ಥಿಕತೆಯಲ್ಲಿ ಪೂರ್ಣ ಸ್ವಾವಲಂಬನೆ ಸಾಧ್ಯವಿಲ್ಲ. ಆದ್ದರಿಂದ ಬಹುಮುಖ ವಾಣಿಜ್ಯಕ್ಕೆ ವಿಶ್ವದಲ್ಲಿ ಹೆಚ್ಚು ವ್ಯಾಪ್ತಿಯಿದೆ. ಈ ವಿಚಾರವನ್ನು ಇಂದಿನ ಹೆಚ್ಚು ಸಂಕೀರ್ಣವಾದ ಆರ್ಥಿಕ ಜಗತ್ತು ಮನಗಾಣಬೇಕಾಗಿದೆ.

ನಮ್ಮ ದೇಶದಲ್ಲಿ ಬಹುದೇಶಿ ನಿಗಮಗಳ ಕಾರ್ಯಾಚರಣೆಯನ್ನು ಹೆಚ್ಚು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಅಲ್ಲದೆ ಅವುಗಳ ಕಾರ್ಯಾಚರಣೆಯು ವಿದೇಶಿ ವಿನಿಮಯ ನಿಯಂತ್ರಣ ಕಾನೂನು, ಕಂಪೆನಿ ಕಾನೂನು, ಕೈಗಾರಿಕಾಭಿವೃದ್ಧಿ ಕಾನೂನುಗಳು ಮತ್ತು ಏಕಸ್ವಾಮ್ಯ ವಾಣಿಜ್ಯ ತಡೆಹಿಡಿಯುವಿಕೆ–ಮುಂತಾದ ಕಾನೂನುಗಳ ವ್ಯಾಪ್ತಿಗೆ ಒಳಪಟ್ಟಿವೆ. ಭಾರತ ಸರ್ಕಾರವು ವಿದೇಶಿ ವಿನಿಮಯವು ಪೋಲಾಗದಂತೆ ಎಚ್ಚರಿಕೆ ವಹಿಸುತ್ತಿದೆ. ಅಲ್ಲದೆ ದೇಶದಲ್ಲೇ ಉತ್ಪಾದಿತವಾಗುವ ತಾಂತ್ರಿಕಜ್ಞಾನ ವಿದೇಶಗಳಿಂದ ನಮ್ಮ ಆರ್ಥಿಕತೆಗೆ ಪ್ರವೇಶಿಸದಂತೆ ಎಚ್ಚರಿಕೆ ವಹಿಸಿದೆ. ಭಾರತ ಸರ್ಕಾರದ ಇಂತಹ ಪ್ರಗತಿಪರ ಧೋರಣೆಯಿಂದಾಗಿ ಇತ್ತೀಚಿನ ವರ್ಷಗಳಲ್ಲಿ ವಿದೇಶಿ ಹೂಟಿಯನ್ನು ಕೆಲವು ಆಯ್ದ ಕೈಗಾರಿಕಾಕ್ಷೇತ್ರಗಳಲ್ಲಿ ಮಾತ್ರ ಬಳಸಿಕೊಳ್ಳಲಾಗುತ್ತಿದೆ.

"ಒಟ್ಟಿನಲ್ಲಿ ಬಹುದೇಶಿ ನಿಗಮಗಳು ಹಲವು ಬಗೆಯ ಬಂಡವಾಳ ಸರಕು ತಯಾರಿಕಾ ಕ್ಷೇತ್ರದಲ್ಲಿ ಕಾರ್ಯೋನ್ಮುಖವಾಗುವುದಕ್ಕೆ ಅವಕಾಶಮಾಡಿಕೊಡುವುದು ಅಗತ್ಯ ಹಾಗೂ ಅನುಭೋಗಿ ಸರಕು ತಯಾರಿಕಾ ಕ್ಷೇತ್ರವು ಸಂಪೂರ್ಣವಾಗಿ ಸಣ್ಣ ಸಣ್ಣ ಪ್ರಮಾಣದ ದೇಶಿಯ ಘಟಕಗಳಿಗೇ ವಿಧಾನಿಸಲಾಗಿರಬೇಕು."[7] ಹಾಗೂ ಬಹುದೇಶಿ ನಿಗಮಗಳಲ್ಲಿ ಸರ್ಕಾರ ಮತ್ತು ಭಾರತೀಯರು ಹೆಚ್ಚು ಈಕ್ವಿಟಿ ಷೇರು ಪತ್ರ ಹೊಂದುವಂತೆ ಅವಕಾಶ ಕಲ್ಪಿಸಿಕೊಳ್ಳಬೇಕು. ಈ ಹಲವಾರು ಆರ್ಥಿಕ ವಿಚಾರಗಳನ್ನು ಯಶಸ್ವಿಯಾಗಿ ಅನುಸರಿಸಲು ಇಂದು ನಮ್ಮ ಕಂಪೆನಿ

ಕಾನೂನು, ಏಕಸ್ವಾಮ್ಯ ತಡೆಹಿಡಿಯುವಿಕೆ ಕಾನೂನು, ಕೈಗಾರಿಕಾ ನೀತಿಯಲ್ಲಿ ಸೂಕ್ತ ಹಾಗೂ ಕ್ರಮಬದ್ಧ ಬದಲಾವಣೆಗಳನ್ನು ದೇಶದ ಮುಂದಿನ ಅಭಿವೃದ್ಧಿಯೋಜನೆಯ ಸ್ವರೂಪ ಮತ್ತು ವ್ಯಾಪ್ತಿಗನುಗುಣವಾಗಿ ರೂಪಿಸುವುದು ಅಗತ್ಯ.

ಅಡಿಟಿಪ್ಪಣಿಗಳು

1. Vikraman Nair, S. R. Kasbekar : Multinationals ; *The Economic Times* ; Annual Number , 1975 ; Bombay : P. : 131.

2. D. K. Ghosh ; Multinational Corporations in the Indian Economy : *Company News & Notes* ; January 1975.

3. 'Survery of Foreign Financial and Technical Collaboration in Indian Industry. 1964-70-Main Findings' *R. B. I. Bulletin* June 1974.

4 D. K. Ghosh *op. cit.*

5. *R. B. I. Bulletin,* June 1974, *op. cit.*

6. ನೋಡಿ, ಮಾನವಿಕ ಕರ್ನಾಟಕ. ೧೯೭೪ ಫೆಬ್ರವರಿ ಸಂಚಿಕೆ,

7. Ruddar Dutt; Multinationals in India; *The Economic Times*, Bombay, April 25, 1975.

ಮೂಲ : ಗ್ರಹಾಂ ಷಾ.

ಅನು : ಯಸ್. ಬಿ. ಷಾಂಗಸ್ಣಾಯ ಮತ್ತು ಎ. ಜಾನಕಿ

ಮಂಗಳೂರು ಮತ್ತು ತಲೆಚೇರಿಯ ಬಾಸೆಲ್ ಮಿಷನ್ನಿನ ಮುದ್ರಣ ಚಟುವಟಿಕೆ

ಸುಮಾರು 16ನೇ ಶತಮಾನದ ಕೊನೆಯ ಭಾಗ. ನೈರುತ್ಯ ಭಾರತದ ಮಲಬಾರ್ ತೀರ ಪ್ರದೇಶದಲ್ಲಿ ಪೋರ್ಚುಗೀಸರ ಚಟುವಟಿಕೆ ಕೇಂದ್ರೀಕೃತವಾಗಿದ್ದ ಸಮಯ. ಈ ತೀರ ಪ್ರದೇಶದಲ್ಲಿ ಭಾರತದ ಮೊತ್ತ ಮೊದಲ ಮುದ್ರಣ ಕಾರ್ಯ ಪ್ರಾರಂಭವಾಗಿತ್ತು. 1815ರಲ್ಲಿ ಈ ಕರಾವಳಿ ಪ್ರದೇಶದಲ್ಲಿ ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಮಿಷನರಿಗಳನ್ನು ಬಾಸಲ್ ಮಿಷನರಿ ಸೊಸೈಟಿಯು ನಿಮಂತ್ರಿಸಿತು. ಸ್ವಿಸ್ ಮತ್ತು ಜರ್ಮನ್ ಚರ್ಚ್‌ಗಳ ಸಹಾಯದಿಂದ ಬಾಸಲ್ ಮಿಷನ್ ಸೊಸೈಟಿಯು ಪ್ರಾರಂಭವಾಯಿತು. ಬಾಸಲ್ ಮಿಷನ್ನಿನ ತ್ರಿವಳಿ ನೇತಾರರಾದ ಸ್ಯಾಮ್ಯುಯಲ್ ಹೆಬಿಚ್, (Samuel Hebich) ಕ್ರಿಶ್ಚಿಯನ್ ಗ್ರೈನರ್ (Christian Greiner) ಮತ್ತು ಜೋಹನ್ ಲೆನ್ನರ್ (Johann Lehner)ರು ಬೆಂಜಮಿನ್ ಬೈಲಿಯವರ ಜೊತೆಯಲ್ಲಿ ಇಂಗ್ಲೆಂಡಿನಿಂದ ಸಮುದ್ರಯಾನ ಮಾಡಿ ಮೂರು ತಿಂಗಳ ನಂತರ ಕಲ್ಲಿಕೋಟೆಯ ಬಂದರನ್ನು ತಲುಪಿದರು. ಚರ್ಚ್ ಮಿಷನರಿ ಸೊಸೈಟಿಗೆ ಸೇರಿದ ಬೈಲಿಯವರು (Bailey) ಇದಕ್ಕೆ ಮೊದಲು ತಿರುವಾಂಕೂರಿನ ಕೊಟ್ಟಾಯಂನಲ್ಲಿ ಮುದ್ರಣಾಲಯವೊಂದನ್ನು ಸ್ಥಾಪಿಸಿದ್ದರು. ಆ ಕಾಲದಲ್ಲಿ ಭಾರತದ ಪಶ್ಚಿಮ ತೀರಪ್ರದೇಶದ ಮುಂಬಯಿಯಿಂದ ಕೊಚ್ಚಿಯವರೆಗೆ ಯಾವ ಪ್ರಾಟೆಸ್ಟೆಂಟ್ ಸಂಸ್ಥೆಗಳೂ ಇರಲಿಲ್ಲ. ಮೈಸೂರು ದೊರೆ ಟಿಪ್ಪುಸುಲ್ತಾನನ ಕಾಲಾನಂತರ ಮಂಗಳೂರು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟು ಮದರಾಸು ಪ್ರಾಂತ್ಯಕ್ಕೆ ಸೇರ್ಪಡೆಯಾಗಿತ್ತು. ಸ್ಥಳೀಯ ಸಬ್–ಕಲೆಕ್ಟರ್ ಫಿಂಡ್ಲಿ ಅಂಡರ್‌ಸನ್ (Findlay Anderson) ಅವರ ಆಮಂತ್ರಣದ ಮೇರೆಗೆ ಮಂಗಳೂರಿನಲ್ಲಿ ಒಂದು ಪ್ರಾಟೆಸ್ಟೆಂಟ್ ಸಂಸ್ಥೆಯನ್ನು ಸ್ಥಾಪಿಸಲು ನಿರ್ಧರಿಸಲಾಯಿತು. 1834ನೇ ಅಕ್ಟೋಬರ್ 30ರಂದು ಬಾಸೆಲ್ ಮಿಷನರಿಗಳು ಮಂಗಳೂರನ್ನು ತಲುಪಿ ತಮ್ಮ ಸಂಸ್ಥೆಯನ್ನು ಸ್ಥಾಪಿಸಿದರು. ಮುಂದೆ 1836ರ ಡಿಸೆಂಬರ್‌ನಲ್ಲಿ ಹರ್ಮನ್ ಮಾಗ್ಲಿಂಗ್ (Hermann Mogling) ಅವರ ನಾಯಕತ್ವದಲ್ಲಿ ಇನ್ನು ನಾಲ್ವರು ಮಿಷನರಿಗಳು ಜೊತೆಗೂಡಿದರು.

ಸ್ಥಳೀಯ ಭಾಷೆಯಲ್ಲಿ ಪ್ರಾವೀಣ್ಯ ಪಡೆಯುವುದು ಮೊದಲಿಗೆ ಕಷ್ಟಸಾಧ್ಯವಾಗಿದ್ದಿತು. ಬಹಳಷ್ಟು ಜನ ಕನ್ನಡ ಭಾಷೆಯನ್ನು ಆಡುವವರಿದ್ದರೂ ಮತ್ತೊಂದು ದ್ರಾವಿಡ ಭಾಷೆಯಾದ ಮಲೆಯಾಳವನ್ನು ಆಡುವವರೂ ಇಲ್ಲಿ ನೆಲೆಸಿದ್ದರು. ಅಲ್ಲದೆ, ಮುಖ್ಯವಾಗಿ ತೆಂಗಿನ ಬೆಳೆಯನ್ನು

ಬೆಳೆಯುವ ಹಳ್ಳಿಗರು ಅವರದೇ ಆದ ತುಳು ಭಾಷೆಯನ್ನು ಆಡುತ್ತಿದ್ದರು. ಹೈಬಿಚ್ ಮತ್ತು ಅವನ ಸಂಗಡಿಗರು ಮಂಗಳೂರಿಗೆ ಆಗಮಿಸಿದ ವೇಳೆ ಕಲ್ಲಿಕೋಟೆಯ ನ್ಯಾಯಾಧೀಶರಾಗಿದ್ದ ಸೆಲ್ಸನ್ ಎಂಬುವನು ತಾನು ಮದರಾಸಿನಿಂದ ತಂದಿದ್ದ ಕನ್ನಡ ನಿಘಂಟುಗಳನ್ನು ಮತ್ತು ವ್ಯಾಕರಣ ಪುಸ್ತಕಗಳನ್ನು ಇವರಿಗೆ ಉಡುಗೊರೆಯಾಗಿ ಕೊಟ್ಟನು. 1836ರ ವೇಳೆಗೆ ಮಂಗಳೂರಿನ ಸರಹದ್ದಿನಲ್ಲಿ ಸ್ಥಳೀಯ ಭಾಷೆಗಳಲ್ಲಿ ಕೆಲವು ಶಾಲೆಗಳನ್ನು ತೆರೆದರು. ಸ್ಥಳೀಯ ಭಾಷೆಯಲ್ಲಿ ಓದುವ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಅನುಕೂಲವಾಗುವಂತೆ ಕನ್ನಡದಲ್ಲಿ ಬೈಬಲ್ಲಿನ ಭಾಗಗಳನ್ನು ಹಾಗೂ ಅನೇಕ ಕಿರುಹೊತ್ತಿಗೆಗಳನ್ನು ಬೆಂಗಳೂರು, ಬಳ್ಳಾರಿ, ಬೆಳಗಾಂಗಳಲ್ಲಿಯ ಪ್ರಾಟೆಸ್ಟೆಂಟ್ ಸಂಸ್ಥೆಗಳೊಡನೆ ವ್ಯವಹರಿಸಿ ಹಾಗೂ ಭೇಟಿನೀಡಿ ತರಿಸಿಕೊಟ್ಟರು. ಕ್ರೈಸ್ತಮತ ತತ್ವಗಳನ್ನು ತುಳು ಭಾಷೆಯಲ್ಲಿ ಭಾಷಾಂತರಿಸಿ ಸ್ಥಳೀಯರಿಗೆ ಒದಗಿಸುವ ಯೋಜನೆಗೆ ಹೆಚ್ಚಿನ ಮಹತ್ವವನ್ನು ನೀಡಲಾಯಿತು, ಮತ್ತು ಈ ಕೆಲಸದ ಹೊಣೆಯನ್ನು ಕ್ರಿಶ್ಚಿಯನ್ ಗ್ರೈನರ್‌ಗೆ ವಹಿಸಲಾಯಿತು.

ಬ್ರಿಟಿಷರ ಆಳ್ವಿಕೆಯ ವಿರುದ್ಧ ನಡೆಯುತ್ತಿದ್ದ ಗೊಂದಲ ಮಂಗಳೂರಿನಲ್ಲೂ ಪ್ರಾರಂಭವಾಯಿತು. ಇಲ್ಲಿಯ ಜನಸಂಖ್ಯೆಯ ಒಂದು ಭಾಗ 1837ರಲ್ಲಿ ನಡೆಸಿದ ದಂಗೆಯು 'ಕೊಡಗು ದಂಗೆ' ಎಂದು ಪ್ರಸಿದ್ಧವಾಯಿತು. ಇದರಿಂದಾಗಿ ಮಿಷನರಿಗಳ ಚಟುವಟಿಕೆಗಳು ಅಬಾಧಿತವಾಗಿ ನಡೆಯಲು ತೊಂದರೆಯಾದರೂ ಅವರ ಕಾರ್ಯಾಲಯಗಳಿಗೆ ಅಂತಹ ಹಾನಿ ಉಂಟಾಗಲಿಲ್ಲ. ಅಲ್ಲದೆ, ಮಂಗಳೂರಿನ ಬಾಸೆಲ್ ಮಿಷನರಿ ಕೇಂದ್ರದಿಂದ ಮಿಷನರಿಗಳನ್ನು ಮತಪ್ರಚಾರಕ್ಕಾಗಿ ಕಳುಹಿಸಲಾಯಿತು. ಹಾಗೆ ತೆರಳಿದ ಮಿಷನರಿಗಳು ಧಾರವಾಡ (1837) ಹುಬ್ಬಳ್ಳಿ ಮತ್ತು ತಲಚೇರಿ (1839) ಕಣ್ಣಾನೂರು (1861) ಮತ್ತು ಕಲ್ಲಿಕೋಟೆ (1842) ಗಳಲ್ಲಿ ಅನೇಕ ಉಪಕೇಂದ್ರಗಳನ್ನು ತೆರೆದರು.

1841ರ ವೇಳೆಗೆ ಮಿಷನರಿಯವರದೇ ಆದ 6 ಗ್ರಂಥಗಳು ಪ್ರಕಟಣೆಗೆ ಸಿದ್ಧವಾದವು. ಈ ಕಿರುಹೊತ್ತಿಗೆಗಳಲ್ಲಿ ಕೆಲವು ಜರ್ಮನ್ ಭಾಷೆಯಿಂದ ಭಾಷಾಂತರಪಟ್ಟವುಗಳೂ ಕೆಲವು ಸ್ಥಳೀಯ ಭಾಷೆಯಲ್ಲೇ ರಚಿಸಿದ ಮೂಲ ಕೃತಿಗಳಾಗಿದ್ದವು. ಬೈಬಲ್ ಹಳೆಯ ಒಡಂಬಡಿಕೆಯ ಪೂರ್ವಭಾಗದ ಮೊದಲ ಪರ್ವವನ್ನು ವಿವರಿಸುವ ಕಿರುಹೊತ್ತಿಗೆಯನ್ನು ಮತ್ತು ಬಿಷಪ್ಪರುಗಳ ಪೂರ್ವಜರ ಚರಿತ್ರೆಯನ್ನು ವಿವರಿಸುವ ಇನ್ನೊಂದು ಕಿರುಹೊತ್ತಿಗೆಯನ್ನು ಮಲೆಯಾಳ ಭಾಷೆಯಲ್ಲಿ ಪ್ರಕಟಿಸಲಾಯಿತು. 50 ಗೀತೆಗಳ ಒಂದು ಸಂಕಲನವೂ ಲೂಥರನ ಮೈನರ್ ಕ್ಯಾಟಿಕಿಸಮ್ ಮತ್ತು ಒಂದು ದೀರ್ಘವಾದ ಉರ್ಟೆಂಬರ್ಜರ್ ಕ್ಯಾಟಿಕಿಸಮ್ ಮತ್ತು ಡಾ. ಬಾರ್ತ್ ರವರ "One Hundred and Four Histories from the Bible"ಗಳು ಕನ್ನಡದಲ್ಲಿಯೂ ಸಿದ್ಧವಾಗಿದ್ದವು. ಆ ವೇಳೆಗೆ ಮಂಗಳೂರಿನಲ್ಲಿ ಮುದ್ರಣಾಲಯ ಇಲ್ಲದಿದ್ದ ಕಾರಣ ಈ ಗ್ರಂಥಗಳನ್ನು ಕಲ್ಲಚ್ಚು ಮಾಡಲು 400 ಮೈಲಿ ದೂರವಿರುವ ಮುಂಬಯಿಗೆ ಕೊಂಡೊಯ್ಯಬೇಕಾಯಿತು. ಇದಕ್ಕಾಗಿ (1840ರಲ್ಲಿ ಭಾರತಕ್ಕೆ ಕಳುಹಿಸಿದ್ದ) ಗಾಟ್‌ಫ್ರಾಯ್ಡ್ ವೈಗಲ್ (Gotfried Weigle) ಎಂಬ ಯುವಕ ಮತಪ್ರಚಾರಕನನ್ನು 1841ರ ಅಕ್ಟೋಬರ್ 14ರಂದು ಮಂಗಳೂರಿನಿಂದ ಕಳುಹಿಸಲಾಯಿತು.

ವೈಗಲ್‌ನು ಮುಂಬೈನಲ್ಲಿ ಅಸ್ವಸ್ಥತೆ ಮತ್ತು ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಹಾಗಿದ್ದಾಗ್ಯೂ ಲೂಥರ್‌ನ 'ಮೈನರ್ ಕ್ಯಾಟಿಕಿಸಮ್' ಮತ್ತು ಉಳಿದ 5 ಗ್ರಂಥಗಳನ್ನು ತೃಪ್ತಿಕರವಾಗಿ ಕಲ್ಲಚ್ಚು ಮಾಡಿಸಿದನು. ಅಲ್ಲದೆ ತನ್ನ ಮುಂಬೈ ಪ್ರವಾಸದ ಕೊನೆ ಅವಧಿಯಲ್ಲಿ ಅಲ್ಲೇ ತಯಾರಾದ ಕಲ್ಲಚ್ಚು ಮುದ್ರಣಯಂತ್ರವೊಂದನ್ನು ಕೊಂಡುಕೊಂಡನು. "ಅವನ ಅನೇಕ ಪ್ರಯತ್ನಗಳು ವಿಫಲವಾದಾಗ ಮುಂಬೈನಲ್ಲೇ ಸ್ಥಳೀಯ ಕಮ್ಮಾರರು ಮಾಡಿದ ಒಂದು ಸಣ್ಣ

ಕಲ್ಲಚ್ಚು ಯಂತ್ರವನ್ನು ಕ್ರಿಯಕ್ಕೆ ಪಡೆದನು." ಇದಕ್ಕೆ ಬೇಕಾದ ಧನಸಹಾಯವನ್ನು ಸಹ ಮುಂಬಯಿಯಲ್ಲಿ ಪರಿಚಿತರಾದ ಅವನ ಕ್ರೈಸ್ತ ಸ್ನೇಹಿತರು ಪೂರೈಸಿದರು. ತನ್ನ ವಾಸ್ತವ್ಯದ ಅವಧಿಯಲ್ಲಿ ವೈಗಲ್ ಅಮೇರಿಕನ್-ಮರಾಠಿ ಮಿಷನ್ನಿನ ಮುದ್ರಣಾಲಯಕ್ಕೂ ಸಹ ಭೇಟಿನೀಡಿ, ಖ್ಯಾತ ಮುದ್ರಣಕಾರನಾದ ಎಲಿಜಾ. ಎ. ವೆಬ್‌ಸ್ಟರ್‌ನಿಂದ (Mr. Elijah A Webster) ಮುದ್ರಣ ಕಲೆಯನ್ನು ಅರಿತುಕೊಂಡು ನಾಲ್ಕು ಅತ್ಯುತ್ತಮವಾದ ಜರ್ಮನ್ ಕಲ್ಲಚ್ಚುಗಳನ್ನು ಕೂಡ ಅವರ ಮೂಲ ಬೆಲೆಯಾದ 288ರೂಪಾಯಿಗಳಿಗೆ ಕೊಂಡುಕೊಂಡನು. 1842ರ ಫೆಬ್ರವರಿಯಲ್ಲಿ ಮಂಗಳೂರಿಗೆ ಹಿಂತಿರುಗುವಾಗ ಮುದ್ರಣ ಕಾರ್ಯದಲ್ಲಿ ಪರಿಣತಿಪಡೆದ ಇಬ್ಬರನ್ನು ಜೊತೆಗೆ ಕರೆದುಕೊಂಡು ಹೋದನು.

ಬಾಸೆಲ್ ಮಿಷನ್ನಿನ ಹೊಸ ಮುದ್ರಣ ಯಂತ್ರದ ಮೊದಲ ಪ್ರಯೋಗವು 1842ರ ಫೆಬ್ರವರಿ 18ರಂದು ಮಂಗಳೂರಿನಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ವೈಗಲ್‌ನ ಮೇಲ್ವಿಚಾರಣೆಯಲ್ಲಿ ದೈವಸ್ತುತಿಗಳನ್ನು ಜರ್ಮನ್, ಇಂಗ್ಲಿಷ್, ಕನ್ನಡ ಮತ್ತು ತುಳು ಭಾಷೆಗಳಲ್ಲಿ ಕಲ್ಲಚ್ಚು ಮಾಡಲಾಯಿತು. ಅದೇ ತಿಂಗಳು 20ರಂದು ಮೋಕ್ಷ ವಿಚಾರಣವನ್ನು ಕುರಿತು ಮಾಗ್ಲಿಂಗ್‌ನು ಸ್ಥಳೀಯ ಆಡುಭಾಷೆಯಲ್ಲಿ ರಚಿಸಿದ ಕಿರುಹೊತ್ತಿಗೆಯನ್ನು ಪ್ರಕಟಿಸುವ ಕಾರ್ಯವನ್ನು ಕೈಗೊಳ್ಳಲಾಯಿತು. ಮಾರ್ಚ್ ತಿಂಗಳ ವೇಳೆಗೆ ಇದರ 1500 ಪ್ರತಿಗಳ ಮುದ್ರಣ ಕಾರ್ಯ ಪೂರ್ಣವಾಯಿತು. ಪ್ರಕಟಣೆಯ ಕೆಲಸದಲ್ಲಿ ಅನೇಕ ಎಡರು ತೊಡರುಗಳನ್ನು ಅನುಭವಿಸಬೇಕಾಗಿ ಬಂದರೂ ಮುದ್ರಣದ ಗುಣಮಟ್ಟದ ಬಗ್ಗೆ ವೈಗಲ್ ಬಹಳ ಸಂತೋಷಗೊಂಡನು. "ನಮ್ಮ ಕೆಲಸ ನಿಯಮಿತವಾಗಿ ಮತ್ತು ಸಮಾಧಾನಕರವಾಗಿ ಸಾಗಿತು. ಗುಣಮಟ್ಟದಲ್ಲೂ ಮುದ್ರಣವು ಮುಂಬೈನಲ್ಲಿ ತಯಾರಾದುದಕ್ಕಿಂತ ಕಡಿಮೆಯಿರಲಿಲ್ಲ. ಮೇಲಾಗಿ ಈ ಕೆಲಸದಲ್ಲಿ ನಾವಿನ್ನೂ ಅಭ್ಯಾಸಿಗಳು. ಕಡಿಮೆ ವೆಚ್ಚದ ಮುದ್ರಣ ಯಂತ್ರದಿಂದ ಒಳ್ಳೆಯ ಗುಣಮಟ್ಟದ ಕೆಲಸ ತೆಗೆಯುವುದು ಸಾಮಾನ್ಯದ ವಿಷಯವಲ್ಲ". ಮಂಗಳೂರು ಹವಾಮಾನವು ಕಲ್ಲಚ್ಚು ಮುದ್ರಣ ಕೆಲಸಕ್ಕೆ ಮುಂಬೈ ಹವಾಮಾನಕ್ಕಿಂತ ಹಿತಕಾರಿಯಾಗಿತ್ತು. ಮಂಗಳೂರಿನ ಶಾಖಕ್ಕೆ ಕಲ್ಲಿನ ಮೇಲೆ ಎಳೆದಿದ್ದ ಅಕ್ಷರ ಮತ್ತು ಇತರ ವಿನ್ಯಾಸಗಳು ಸ್ಪಷ್ಟವಾಗಿ ಮೂಡಿದ್ದವು. ಬಾಸೆಲ್ ಮಿಷನ್ನಿನ ಅನೇಲಿನ ವರದಿಯೊಂದರಲ್ಲಿ ಮಂಗಳೂರಿನ ಮುದ್ರಣಾಲಯದೊಳಗೆ ಈ ಸಣ್ಣ ಕಲ್ಲಚ್ಚು ಯಂತ್ರದಿಂದ ಮುದ್ರಿಸುವ ಕ್ರಮದ ವಿವರಣೆ ಹೀಗಿದೆ: "ಕ್ರಿಶ್ಚಿಯನ್ನರಲ್ಲದ ಕೆಲವು ಲಿಪಿಕಾರರು (ಪ್ರಾಯಶಃ ಬ್ರಾಹ್ಮಣರು) ಬಹಳ ಕೌಶಲ್ಯದಿಂದ ಹಸ್ತಪ್ರತಿಯನ್ನು ಮೇಣಕಾಗದದ ಮೇಲೆ ಮೂಡಿಸುತ್ತಾರೆ. ಮುದ್ರಣಗಾರ (ಸ್ಥಳೀಯ ಕ್ರಿಶ್ಚಿಯನರು) ಮೇಣದ ಹಾಳೆಯನ್ನು ಕಲ್ಲಚ್ಚಿನ ಮೇಲೆ ಹರಿಸಿ, ಶಾಯಿಯನ್ನು ಹರವಿ ಮುದ್ರಣವನ್ನು ಪೂರ್ತಿಗೊಳಿಸುತ್ತಾರೆ. ಉಳಿದವರು ನೆಲದ ಮೇಲೆ ಕುಳಿತು ತಗ್ಗಾದ ಮೇಜಿನಮೇಲೆ ಕಾಗದದ ಹಾಳೆಗಳನ್ನು ಮಡಚುವುದರಲ್ಲಿ ಮಗ್ನರಾಗಿದ್ದಾರೆ."

ಮಾರ್ಚ್ ತಿಂಗಳ 31 ರಂದು ಪ್ರಾರಂಭವಾದ ಮುದ್ರಣ ಕೆಲಸ ಬಹಳ ಮುಖ್ಯವಾದುದು. ಕ್ರಿಶ್ಚಿಯನ್ ಗ್ರೈನರ್ ರಚಿಸಿದ ಸೈಂಟ್ ಮ್ಯಾತ್ಯುವಿನ (St. Mathew) ತತ್ವಗಳ ತುಳು ಭಾಷಾಂತರವದು. ಈ ಗ್ರಂಥವು ತುಳುವಿನಲ್ಲಿ ಮುದ್ರಣವಾದುದು ಮಾತ್ರವಲ್ಲ ಸಮಗ್ರ ಭಾಷಾಂತರವೇ ತುಳುಭಾಷೆಯಲ್ಲಿಯೇ ರಚಿಸಲ್ಪಟ್ಟಿರುವುದು ಅತಿ ಮಹತ್ವದ ವಿಷಯ ಮಾತ್ರವಲ್ಲದೆ ಇದು ಬಾಸೆಲ್ ಮಿಷನ್ನಿನ ಪ್ರಪ್ರಥಮ ದೊಡ್ಡ ಸಾಧನೆ. ಬರ್ನ್ (Berne) ಮತ್ತು ಜ್ಯೂರಿಚ್ (Zurich) ತುಳು ಚರ್ಚ್‌ಗಳಿಗೆ ಬೇಕಾದಂತಹ ಮತ್ತು ತುಳು ಭಾಷೆಗೆ ಭಾಷಾಂತರಿಸಬಹುದಾದ ಬೈಬಲ್‌ನ ವಿವಿಧ ಭಾಗಗಳ ಸಂಪೂರ್ಣ ಮುದ್ರಣ ವೆಚ್ಚವನ್ನು ವಹಿಸಿ

ಕೊಂಡರು. ಲಂಡನ್ನಿನ 'Religious Tract Society'ಯು ಮುದ್ರಣಕ್ಕೆ ಬೇಕಾದ 42 ರೀಮ್ ಕಾಗದವನ್ನು ಪೂರೈಸಿತು. ಬೈಬಲ್‌ನ ಹೊಸ ಒಡಂಬಡಿಕೆಯನ್ನು (New Testament) ಸಂಪೂರ್ಣವಾಗಿ ತುಳು ಭಾಷೆಗೆ ಭಾಷಾಂತರಿಸುವ ಕಾರ್ಯಕ್ರಮವನ್ನು ಹಂತ ಹಂತವಾಗಿ ಕೈಗೊಂಡು 1848ರ ವೇಳೆಗೆ ಪೂರ್ಣಮಾಡಲಾಯಿತು. 'ಮ್ಯಾತ್ಯುವಿನ ತತ್ವ'ಗಳ ಭಾಷಾಂತರದ ಮುದ್ರಣ ಕಾರ್ಯವಮುಗಿಯುವ ಮೊದಲೇ ಒಂದು ಸರ್ಕಾರಿ ಪ್ರಕಟಣೆಯ ಮುದ್ರಣಕಾರ್ಯವನ್ನು ಈ ಮುದ್ರಣಾಲಯವು ಕೈಗೊಂಡಿತು. ಮುಂದೆ ಏಪ್ರಿಲ್ ತಿಂಗಳ ವೇಳೆಗೆ ಹರ್ಮನ್ ಗುಂಡರ್ಟ್ (Hermann Gundert) ಎಂಬ ಯುವಕ ಮಿಷನರಿಯು ತಲಚೇರಿಯಿಂದ ಮಂಗಳೂರಿಗೆ ಬಂದು ತಾನು ಸಂಗ್ರಹಿಸಿದ್ದ ಮಲೆಯಾಳ ಭಾಷೆಯ 50 ಭಕ್ತಿ ಗೀತೆಗಳನ್ನು ಇದೇ ಮುದ್ರಣಾಲಯದಲ್ಲಿ ತನ್ನದೇ ಮೇಲ್ವಿಚಾರಣೆಯಲ್ಲಿ ಪ್ರಕಟಿಸಿದನು. ಇಷ್ಟೇ ಅಲ್ಲದೆ ಮಿಷನರಿಯವರ ಶಾಲೆಗಳಲ್ಲಿ ಬೋಧನೋಪಕರಣಕ್ಕಾಗಿ ತಯಾರಿಸಿದ್ದ ದಕ್ಷಿಣ ಭಾರತ ಮತ್ತು ಪ್ಯಾಲೆಸ್ಟೈನ್‌ಗಳ ಭೂಪಟದ 500 ಪ್ರತಿಗಳನ್ನು ಮುದ್ರಿಸಿದನು. ಡಾ. ಬರ್ತ್‌ರವರ ಹಳೆ ಒಡಂಬಡಿಕೆಯ ಕತೆಗಳು (Old Testament Stories) ಗ್ರಂಥವನ್ನು ಜರ್ಮನ್ ಭಾಷೆಯಿಂದ ಮೋಗ್ಲಿಂಗ್‌ನು ಭಾಷಾಂತರಿಸಿದನು. ಇದರ ಮುದ್ರಣ ಕಾರ್ಯವು ಕೂಡ 1842ರ ಮೇ 18ರಂದು ಆರಂಭವಾಯಿತು. ಮುಂಬಯಿಯಿಂದ ವೈಗಲ್ ಕರೆತಂದಿದ್ದ ಮರಾಠರು ಅದುವರೆಗೆ ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ದುಡಿಯುತ್ತಿದ್ದರು. ಆದರೆ ಕ್ರಮೇಣ ಅವರು ಪಾನಾಸಕ್ತರಾಗಿ ಕೆಟ್ಟ ಹಾದಿ ಹಿಡಿದುದರ ಕಾರಣ ಅವರನ್ನು ಹದ್ದು ಬಸ್ತಿಗೆ ತರುವುದು ಕಷ್ಟವಾಗಿ ಜೂನ್ 7 ರಂದು ಮುಂಬಯಿಗೆ ಕಳುಹಿಸುವ ಏರ್ಪಾಡು ಮಾಡಲಾಯಿತು ಆದರೆ ಮತ್ತೆ ಎರಡೇ ದಿನಗಳಲ್ಲಿ ಅವರು ಪಾನಾಸಕ್ತಿಯನ್ನು ತೊರೆದು ಪ್ರಜ್ಞಾವಂತರಾಗಿ ಬಂದಮೇಲೆ ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಲಾಯಿತು.

ಮ್ಯಾತ್ಯುವಿನ ತತ್ವಗಳ ತುಳು ಭಾಷಾಂತರದ ಪ್ರಕಟಣೆಗೂ ಮೊದಲು ಮತ್ತು ನಂತರ ಬಾಸೆಲ್ ಮಿಷನ್ನಿನ ಅನೇಕ ಗ್ರಂಥಗಳು ಪ್ರಕಟಣೆಗೆ ಸಿದ್ಧವಾಗಿದ್ದು ಕೇವಲ ಒಂದು ಕಲ್ಲಚ್ಚು ಯಂತ್ರದಿಂದ ಪೂರೈಸಲು ಸಾಧ್ಯವಾಗಲಿಲ್ಲ. ಈ ದೆಸೆಯಿಂದ ಇನ್ನೊಂದು ಕಲ್ಲಚ್ಚು ಯಂತ್ರವನ್ನು ಕೊಂಡುಕೊಳ್ಳಲು ನಿಶ್ಚಯಿಸಲಾಯಿತು. ಮುಂಬಯಿಯಿಂದ ತರಿಸಿದ ಕಲ್ಲಚ್ಚು ಯಂತ್ರಕ್ಕಿಂತ ಗುಣಮಟ್ಟದಲ್ಲಿ ವಿಶೇಷವಾಗಿದ್ದ ಕಲ್ಲಚ್ಚು ಯಂತ್ರವನ್ನು ಈ ಬಾರಿ ಮದರಾಸಿನಿಂದ ತರಿಸಿಕೊಳ್ಳಲಾಯಿತು. ಇದಕ್ಕೆ ಬೇಕಾದ ಖರ್ಚನ್ನು ಮಂಗಳೂರಿನ ಅನೇಕ ಕ್ರಿಶ್ಚಿಯನ್ ಮಿತ್ರರು ಮುಖ್ಯವಾಗಿ ಅಂದು ಸಬ್-ಕಲೆಕ್ಟರ್ ಆಗಿದ್ದ ಫಿಂಡ್ಲೆ ಆಂಡರ್‌ಸನ್ (Findlay Anderson)ರವರು ಭರಿಸಿದರು. ಈ ಯಂತ್ರ ಮಂಗಳೂರಿಗೆ ಯಾವಾಗ ಬಂದಿತೆಂಬುದನ್ನು ಖಚಿತವಾಗಿ ಹೇಳುವುದು ಸಾಧ್ಯವಿಲ್ಲವಾದರೂ ಈ ಯಂತ್ರದ ಕೆಲಸ 1842ರ ಬೇಸಿಗೆಯಲ್ಲಿ ಪ್ರಾರಂಭವಾಯಿತು. ಹರ್ಮನ್ ಮೋಗ್ಲಿಂಗ್‌ನ ಸಂಪಾದಕತ್ವದಲ್ಲಿ ಬಾಸೆಲ್ ಮಿಷನರಿಯ ವತಿಯಿಂದ 'ಮಂಗಳೂರು ಸಮಾಚಾರ' ಎಂಬ ಕನ್ನಡ ಪಕ್ಷ ಪತ್ರಿಕೆ 1843ರ ಜುಲೈ. 1ರಂದು ಪ್ರಕಟವಾಯಿತು. 1844ರ ಫೆಬ್ರವರಿ 15ನೇ ತಾರೀಖಿಗೆ ಒಟ್ಟು 16 ಸಂಚಿಕೆಗಳು ಪ್ರಕಟವಾಗಿ ಆಮೇಲೆ ಬಳ್ಳಾರಿಯಿಂದ ಪ್ರಕಟಗೊಳ್ಳಲು ಪ್ರಾರಂಭವಾಯಿತು ಮಂಗಳೂರಿನಿಂದ 200 ಮೈಲಿ ಉತ್ತರಕ್ಕಿರುವ ಬಳ್ಳಾರಿಯ 'ಲಂಡನ್ ಮಿಷನರಿ ಸೊಸೈಟಿ'ಯ ಮುದ್ರಣಾಲಯದಲ್ಲಿ ಮೋಗ್ಲಿಂಗ್‌ನ ಸಂಪಾದಕತ್ವದಲ್ಲೇ ಮುಂದುವರಿಸಲಾಯಿತು. ಮೋಗ್ಲಿಂಗ್‌ನು 1843ರ ಅಕ್ಟೋಬರ್‌ನಲ್ಲಿ ಬಳ್ಳಾರಿಗೆ ಭೇಟಿಕೊಟ್ಟಿದಾಗ ಈ ಹೊಸ ವ್ಯವಸ್ಥೆಯ ಬಗ್ಗೆ ಮಾತುಕತೆ ನಡೆಯಿತು. ಈ ಬದಲಾವಣೆಯ ಮುಖ್ಯ ವೈಶಿಷ್ಟ್ಯವೇನೆಂದರೆ ಈ ಪತ್ರಿಕೆಯ ಮುದ್ರಣ ಕಲ್ಲಚ್ಚು ಯಂತ್ರದ ಬದಲು ಅಕ್ಷರ ಯಂತ್ರದ ಮೂಲಕ (ಲೆಟರ್ ಪ್ರೆಸ್) ಮುದ್ರಿಸಲ್ಪಟ್ಟಿತು.

ಮುಂದಿನ ಹಲವು ವರ್ಷಗಳಲ್ಲಿ ಮಂಗಳೂರಿನ ಎರಡು ಮುದ್ರಣಾಲಯಗಳ ಬೆಳವಣಿಗೆಯು ಹೆಚ್ಚು ಕಡಿಮೆ ಸ್ಥಗಿತವಾಯಿತು. ಕನ್ನಡ ಹಾಗೂ ಮಳೆಯಾಳ ಭಾಷೆಗಳಲ್ಲಿ 5–6 ಕಿರುಹೊತ್ತಿಗೆಗಳು ಹಾಗೂ ಬೈಬಲ್‌ನ ಹೊಸ ಒಡಂಬಡಿಕೆಯ 2-3 ಭಾಗಗಳ ತುಳು ಭಾಷಾಂತರಗಳ ಪ್ರಕಟಣೆಯಲ್ಲಿ ಅನೇಕ ವರ್ಷಗಳು ಕಳೆದವು. ಸಾಮಾನ್ಯವಾಗಿ ಕನ್ನಡದ ಕೃತಿಗಳ ಒಂದೆರಡು ಸಾವಿರ ಪ್ರತಿಗಳು ಮುದ್ರಣವಾದರೆ ಮಲೆಯಾಳದ ಹೊತ್ತಿಗೆಗಳು ಕೇವಲ ಮುನ್ನೂರು–ಐನೂರು ಪ್ರತಿಗಳಷ್ಟು ತಯಾರಾಗುತ್ತಿತ್ತು. ಅಂದರೆ, ಮುದ್ರಣಕ್ಕೆ ವಿನಿಯೋಗಿಸಲ್ಪಡುವ ಹಣದಲ್ಲಿ ಹೆಚ್ಚಳವೇನೂ ಆಗಿಲ್ಲ. ಬಾಸೆಲ್ ಮಿಷನ್ನಿನ ಒಟ್ಟು ವೆಚ್ಚದ ಶೇ 5 ಅಂಶ ಮಾತ್ರ ಮುದ್ರಣಕ್ಕೆ ವಿನಿಯೋಗವಾಯಿತು. ಭಾಷಾಂತರ ಮತ್ತು ಮುದ್ರಣ ಕಾರುಭಾರವು ಮಿಷನ್ನಿನ ಎಲ್ಲ ಮಿಷನರಿಗಳ ಒಟ್ಟು ಜವಾಬ್ದಾರಿಯಾಗಿದ್ದರೂ ಮಾೂಗ್ಲಿಂಗ್ ಮತ್ತು ವೈಗಲ್‌ರವರ ಹೆಸರು ಬಾಸೆಲ್ ಮಿಷನ್ನಿನ ಚಟುವಟಿಕೆಗಳ ಮೊದಲ ಹಲವು ವರ್ಷಗಳಲ್ಲಿ ವಿಶೇಷವಾಗಿ ಕೇಳಿಬರುತ್ತಿತ್ತು. ಪ್ರಾರಂಭದ ದಿನಗಳಲ್ಲಿ ಇವರು ತೋರಿದ ಉತ್ಸಾಹ ಮತ್ತು ಕಾರ್ಯನಿಷ್ಠೆಯ ಫಲವಾಗಿ ಮಂಗಳೂರು ಬಾಸೆಲ್ ಮಿಷನರಿಯ ಮುದ್ರಣ ಕೆಲಸಗಳು ಹೆಸರುವಾಸಿಯಾಗುವಂತಾಯಿತು. ಶಾಲಾಪುಸ್ತಕಗಳು ಹಾಗೂ ಮತೀಯ ಕಿರುಹೊತ್ತಿಗೆಗಳನ್ನು ಪ್ರಕಟಿಸುವ ವಿಷಯದಲ್ಲಿ ವೈಗಲ್ ಸೂಕ್ತ ಸಲಹೆಗಳನ್ನು ನೀಡುತ್ತಿದ್ದನು. ಈ ಪುಸ್ತಕಗಳ ಪ್ರಕಟಣೆಯ ಪರಿಷ್ಕರಣ ಸಂಪಾದಕತ್ವದ ಜವಾಬ್ದಾರಿಯು ಮಾೂಗ್ಲಿಂಗ್ ಅವರದಾಗಿತ್ತು.

ಬಾಸೆಲ್ ಮಿಷನ್ನಿನ ಮುದ್ರಣ ಚಟುವಟಿಕೆಯ ಪ್ರಗತಿಯ ಇನ್ನೊಂದು ಹಂತವಾಗಿ ಮಂಗಳೂರಿನ ದಕ್ಷಿಣ ತೀರ ಪ್ರದೇಶದಲ್ಲಿ ಸುಮಾರು 90 ಮೈಲಿ ದೂರದಲ್ಲಿರುವ ತಲಚೇರಿ ಎಂಬಲ್ಲಿ ಎರಡನೆಯ ಮುದ್ರಣಾಲಯವನ್ನು ಸ್ಥಾಪಿಸಲಾಯಿತು. ಈ ಪ್ರದೇಶದಲ್ಲಿ ಮಳೆಯಾಳ ಮುಖ್ಯ ಭಾಷೆಯಾಗಿತ್ತು. ಮಂಗಳೂರಿನ ಮುದ್ರಣಾಲಯವು ಸ್ಥಾಪನೆಗೊಂಡ ಮೂರುವರೆ ವರ್ಷಗಳ ಬಳಿಕ ಈ ತಲಚೇರಿಯ ಮುದ್ರಣಾಲಯ ಪ್ರಾರಂಭವಾಯಿತು. ಕ್ರಿಶ್ಚಿಯನ್ ಇರಿಯನ್‌ನು (Christian Irion) 1845ರ ಜನವರಿಯಲ್ಲಿ ತನ್ನ ವಿವಾಹ ನಿಮಿತ್ತ ಮಂಗಳೂರಿಗೆ ಬಂದಿದ್ದಾಗ ಮಂಗಳೂರು ಕಾರ್ಯಾಲಯದಿಂದ ಪ್ರಕಟಗೊಂಡ ಮಲೆಯಾಳ ಪ್ರಕಟಣೆಗಳು ದೋಷಯುಕ್ತವೆಂದು ತನ್ನ ತಲಚೇರಿಯ ಸಹೋದ್ಯೋಗಿಗಳು ಹೇಳುತ್ತಿದ್ದುದನ್ನು ಮಾೂಗ್ಲಿಂಗನಿಗೆ ವಿವರಿಸಿದನು. 1845–46ರ ಮಿಷನರಿಯ ಸೊಸೈಟಿಯ ವರದಿಯಲ್ಲೂ ಸಹ ಈ ವಿಷಯ ಪ್ರಸ್ತಾಪವಾಗಿದೆ. "ಒಂದು ವರ್ಷದ ಹಿಂದೆ ತಲೆಚೇರಿಯಲ್ಲಿ ಕಲ್ಲಚ್ಚು ಮುದ್ರಣಾಲಯ ಸ್ಥಾಪಿಸುವ ಸಲಹೆ ಬಂದಿತ್ತು. ಮಳೆಯಾಳ ಭಾಷೆಯಲ್ಲಿ ಯೋಗ್ಯ ಬರಹಗಾರರೂ ದೊರಕದ ಕಾರಣ ಮತ್ತು ತಲಚೇರಿಗೆ ಮಂಗಳೂರು ಬಹಳ ದೂರವಿರುವುದರಿಂದಲೂ ಮಂಗಳೂರಿನಲ್ಲಿಯೇ ಮಲೆಯಾಳದಲ್ಲಿ ಪ್ರಕಟವಾಗುತ್ತಿದ್ದವು. ಪುಸ್ತಕಗಳ ದೋಷಗಳನ್ನು ಸರಿಪಡಿಸುವ ಕಾರ್ಯ ಬಹಳ ಕಷ್ಟವಾಗಿದ್ದಿತು. ವೈಗಲ್ ಮತ್ತು ಮಾೂಗ್ಲಿಂಗ್‌ರ ಅನುಪಸ್ಥಿತಿಯಿಂದಾಗಿ ತಡವಾಗಿಯಾದರೂ ತಲೆಚೇರಿಯಲ್ಲಿ ಮುದ್ರಣಾಲಯದ ಸ್ಥಾಪನೆಗೆ 1845ರ ಅಕ್ಟೋಬರ್ 20ರ ವೇಳೆಗೆ ಮಂಗಳೂರಿನಿಂದ ಕಲ್ಲಚ್ಚು ಮುದ್ರಣಾಲಯವು ತಲೆಚೇರಿಗೆ ದೊರಕುವಂತಾಯಿತು." ಮುದ್ರಣ ಯಂತ್ರದ ಜೊತೆಗೆ ಸಹಾಯಕ ಮುದ್ರಕರು, ಕಾಗದ ಮತ್ತು ಇತರ ಸಲಕರಣೆಗಳನ್ನು ಕ್ರಿಶ್ಚಿಯನ್ ಮುಲ್ಲರ್ (Christian Muller) ಎಂಬ ಮಿಷನರಿಯು ಮಂಗಳೂರಿನಿಂದ ತಲೆಚೇರಿಗೆ ತಂದನು ಈ ಮೊದಲು ತಲೆಚೇರಿಯ ಮಿಷನರಿಗಳು ಮಂಗಳೂರಿನಲ್ಲಿ ಅಸಮರ್ಪಕವಾಗಿ ತಯಾರಿಸಲ್ಪಟ್ಟ ಹೊತ್ತಿಗೆಗಳಿಂದ ತೃಪ್ತಿಪಡೆಯಬೇಕಾಯಿತು

–ಇಲ್ಲವೆ ಅದರ ಹಸ್ತಪ್ರತಿಗಳನ್ನು ತಲೆಚೇರಿಯಿಂದ ದಕ್ಷಿಣಕ್ಕೆ 150 ಮೈಲಿ ದೂರದಲ್ಲಿರುವ ಮಲೆಯಾಳಂ ಮುದ್ರಣಾಲಯಕ್ಕೆ ಪ್ರಕಟಣೆಗಾಗಿ ಕಳುಹಿಸಬೇಕಾಯಿತು. ತಲೆಚೇರಿಯಲ್ಲಿ ಮುದ್ರಣಾಲಯದ ಸ್ಥಾಪನೆಯಿಂದಾಗಿ ಮಲೆಯಾಳ ಭಾಷೆಯಲ್ಲಿ ಉತ್ತಮ ಹೊತ್ತಿಗೆಗಳನ್ನು ಹೊರತರಲು ಸಾಧ್ಯವಾಯಿತು. ಅವು ಮಂಗಳೂರಿನಲ್ಲಿ ಪ್ರಕಟವಾದ ಕನ್ನಡ ಭಾಷೆಯ ಹೊತ್ತಿಗೆಗಳ ಗುಣಮಟ್ಟಕ್ಕೆ ಕಡಿಮೆ ಇರಲಿಲ್ಲ. ಇಂಡಿಯಾದಲ್ಲಿ ಬಾಸೆಲ್ ಮಿಷನ್ನಿನ ಎರಡನೆ ಮುದ್ರಣಾಲಯದ ಪ್ರಥಮ ಪ್ರಕಟಣೆಯನ್ನು ಕುರಿತ ವರದಿಯನ್ನು ಕ್ರಿಶ್ಚಿಯನ್ ಇರಿಯನ್‌ನು ತಾನು ಬರೆದ ಬಾಸೆಲ್ ಮಿಷನ್ನಿನ ತಲಚೇರಿ ಕೇಂದ್ರದ ಚರಿತ್ರೆಯಲ್ಲಿ ವಿವರಿಸಿದ್ದಾನೆ "1845 ನೇ ನವೆಂಬರ್ 1 ರಂದು (ಅತೋಗ್ರಫಿ) ಕಲ್ಲಚ್ಚು ಯಂತ್ರದ ಮೂಲಕ ತಯಾರಿಸಿದ ಮಲೆಯಾಳ ಭಾಷೆಯ ಕಿರುಹೊತ್ತಿಗೆಯು ಪ್ರಕಟವಾಯಿತು. ಇದು ತ್ಸೆಲ್ಲರ್‌ನ (Zeller) 'ಗುಯಿಟ್ ಲಿಶ್ಚೆ ಎಂಟ್‌ವರ್ಟನ್ ಔಫ್ ಮೆನ್‌ಲಿಷ್ಚೆ ಫ್ರಾಗೆನ್ (Gottliche Antworten auf menschliche Fragen) (Divine Replies to Human Questions) ಎಂಬ ಕೃತಿಯಿಂದ ಉದ್ಧರಿಸಲ್ಪಟ್ಟ ವಾಕ್ಯಗಳ ಭಾಷಾಂತರ." ಕಲ್ಲಿಕೋಟೆಯ ಕೇಂದ್ರದ ಮಿಷನರಿಗಳು ತಯಾರಿಸಿದ 1846ನೇ ಇಸವಿಯ ಮಲೆಯಾಳಂ ಪಂಚಾಂಗವೂ ಕೂಡ ತಲೆಚೇರಿಯಲ್ಲಿ ಮುದ್ರಿಸಲ್ಪಟ್ಟಿರುವುದು ಗಮನಾರ್ಹವಾಗಿದೆ. ತಲೆಚೇರಿ ಮುದ್ರಣಾಲಯದಲ್ಲಿ ಮುದ್ರಣ ಕೆಲಸ ಭರದಿಂದ ಸಾಗುತ್ತಿರುವಾಗ ಕಣ್ಣಾನೂರು ಮತ್ತು ಕಲ್ಲಿಕೋಟೆಯ ಕೇಂದ್ರಗಳಿಗೂ ಇಲ್ಲಿಂದ ಪುಸ್ತಕಗಳನ್ನೂ, ಮತೀಯ ಕಿರುಹೊತ್ತಿಗೆಗಳನ್ನು ಪ್ರಕಟಿಸಿ ಕಳುಹಿಸಲಾಯಿತು.

ಮಂಗಳೂರಿನಂತೆ, ತಲೆಚೇರಿಯಲ್ಲೂ ಸಹ ಒಂದು ಯಂತ್ರವು ಸಾಲದಾದ ಕಾರಣ ಮುಂಬೈಯಿಂದ ಅದೇ ವರ್ಷದಲ್ಲಿ ಇನ್ನೊಂದು ಮುದ್ರಣ ಯಂತ್ರವನ್ನು ತರಿಸಲಾಯಿತು. ಶಾಲಾ ಪುಸ್ತಕಗಳು, ಪ್ರಾರ್ಥನಾಗೀತೆ ಹಾಗೂ ಸ್ತೋತ್ರಗ್ರಂಥಗಳಲ್ಲದೆ ಮಂಗಳೂರಿನಂತೆ ತಲೆಚೇರಿ ಸಂಸ್ಥೆ ಕೂಡ ನಿಯತಕಾಲಿಕೆಗಳ ಮುದ್ರಣವನ್ನೂ ಕೈಗೊಂಡಿತು. 1847ರಲ್ಲಿ (ಸರಿಯಾದ ದಿನ ದಾಖಲಾಗಿಲ್ಲ) ಮಿಷನ್ನಿನ ಒಂದು ಹೊಸ ಆರು ಪುಟಗಳ ಮಾಸಿಕ ವಾರ್ತಾಪತ್ರಿಕೆ (monatliches Missionsblatt)ಯು 150 ಪ್ರತಿಗಳಲ್ಲಿ ಪ್ರಕಟವಾಯಿತು. ಈ ಪತ್ರಿಕೆಯು ಜನಾಸಕ್ತಿಯನ್ನು ಗಳಿಸಿತು. ಆದರೆ ಸಂಪಾದಕರು ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಉತ್ತಮ ಬರಹಗಳ ಕೊರತೆಯ ಬಗ್ಗೆ ಆತಂಕಪಟ್ಟರು. ಮುಂದಿನ ವರ್ಷ 1848ರಲ್ಲಿ "ಪಶ್ಚಿಮೋದಯಮ್" (Paschimodayam) ಎಂಬ ಇನ್ನೊಂದು ನಿಯತಕಾಲಿಕ ಪ್ರಾರಂಭವಾಯಿತು. ಮೊದಮೊದಲು 8 ಪುಟಗಳಲ್ಲಿ ಹೊರಬರುತ್ತಿದ್ದ ಈ ಪತ್ರಿಕೆ ಬಹುಬೇಗ 6 ಪುಟಗಳಲ್ಲಿ ಪ್ರಕಟವಾಯಿತು. ಅಂತೆಯೇ ಅಚ್ಚಾದ ಪ್ರತಿಗಳ ಸಂಖ್ಯೆಯೂ ಕೂಡ 300 ರಿಂದ 200 ನಂತರ 130ಕ್ಕೂ ಇಳಿಯಿತು. 1850ರ ಜರ್ಮನ್ ವರದಿಯ ಪ್ರಕಾರ "Radschja Samatscharam" ಎಂಬ ಇನ್ನೊಂದು ನಿಯತಕಾಲಿಕೆಯು ತಲೆಚೇರಿಯಿಂದ ಹೊರಬರುತ್ತಿತ್ತು. ಬಹುಶಃ ಇದು ಹಿಂದಿನ ವರದಿಗಳಲ್ಲಿ ಹೆಸರಿಸದ ಮಿಷನ್ನಿನ ಮಾಸಿಕ ವಾರ್ತಾಪತ್ರಿಕೆಯಾಗಿದ್ದಿರಬೇಕು. ಪ್ರಾಯಶಃ ತಲೆಚೇರಿ ಮಿಷನ್ನಿನ ಅತಿಮುಖ್ಯ ಹೊತ್ತಿಗೆಯೆಂದರೆ ಹರ್ಮನ್ ಗುಂಡರ್ಟ್ ರವರ 'New Testament'ನ ಮಲೆಯಾಳ ಭಾಷಾಂತರ. ಇದು 1829ರಲ್ಲಿ ಕೊಟ್ಟಾಯಂ ಎಂಬಲ್ಲಿ ಬೈಲಿಯವರು ಸಂಪಾದಿಸಿದ ಗ್ರಂಥದ ಪರಿಷ್ಕರಣೆಯಾಗಿತ್ತು. ಆದರೆ ಅಚ್ಚಾದಾಗ ಇದು ಹೊಸ ಭಾಷಾಂತರವೋ ಎಂಬಂತೆ ಇತ್ತು.

1846ರಲ್ಲಿ ಮೋಗ್ಲಿಂಗ್‌ನು ಬಾಸೆಲ್‌ಗೆ ಹಿಂತಿರುಗಿದಾಗ ಮಂಗಳೂರಿನಲ್ಲಿ ಕಲ್ಲಚ್ಚು ಯಂತ್ರದ ಬದಲು ಅಕ್ಷರ ಯಂತ್ರವನ್ನು (ಲೆಟರ್ ಪ್ರೆಸ್) ಸ್ಥಾಪಿಸುವ ಯೋಜನೆ ಬಂತೆಂದು ಕಾಣುತ್ತದೆ. ಮೋಗ್ಲಿಂಗ್‌ನ ಜೀವನ ಚರಿತ್ರೆಕಾರನ ಪ್ರಕಾರ ಕನ್ನಡದ ಅಚ್ಚುಮೊಳೆಗಳನ್ನು ಹೊಸ

ದಾಗಿ ತಯಾರಿಸಲು ಮತ್ತು ಅಕ್ಷರ ಯಂತ್ರವನ್ನು ಪಡೆಯಲು ಬಾಸೆಲ್ ಮಿಷನ್ ಸೊಸೈಟಿಯ ಹೋರಿ ಕಮಿಟಿಯವರು ಮೊಗ್ಲಿಂಗ್‌ನಿಗೆ ಅಧಿಕಾರವಿತ್ತರು. ಇದೇ ಉದ್ದೇಶಕ್ಕಾಗಿ ಅವರು ಲೆಬ್ಸಿಗ್ ಹಾಗೂ ಪ್ಯಾರಿಸ್‌ಗಳಿಗೆ ಭೇಟಿ ನೀಡಿದರು. ಅಲ್ಲಿ ಜೂಲಿಯಸ್ ಮೋಲ್ (Julius Mohl) ಮತ್ತು ಬರ್ನಾಫ್ (Burnouf) ಎಂಬ ಮುದ್ರಣಕಾರರನ್ನು ಸಂದರ್ಶಿಸಿದರು. ಆದರೆ ಈ ಉದ್ದೇಶದ ಅನುಷ್ಠಾನದಲ್ಲಿ ಹೇಳಿಕೊಳ್ಳುವಂತಹ ಪ್ರಗತಿಯಾಗಲಿಲ್ಲ. ಮುಂದೆ 5 ವರ್ಷಗಳವರೆಗೆ ಈ ಕುರಿತು ಯಾವ ವಿಷಯವೂ ಕೇಳಿ ಬರಲಿಲ್ಲ. ಬಾಸೆಲ್ ಮಿಷನರಿ ಸಂಸ್ಥೆಯ ಪ್ರಾಂಶುಪಾಲರಾಗಿದ್ದ ರೆ. ಜೆ. ಜೋಸನ್‌ಹಾನ್ಸ್ (Rev. J. Josenhans) ನಾಲ್ಕು ಮಂದಿ ಹೊಸ ಪ್ರಚಾರಕರೊಡನೆ ಭಾರತದ ಮಿಷನರಿ ಸಂಸ್ಥೆಗಳ ಕಾರ್ಯಭಾರವನ್ನು ಪರಿಶೀಲಿಸಲು (ಆರುತಿಂಗಳ ಅವಧಿಯಲ್ಲಿ) ಮಂಗಳೂರಿಗೆ ಬಂದರು. ಇವರುಗಳ ಪೈಕಿ ಒಬ್ಬನಾದ ಜಾರ್ಜ್ ಪ್ಲೆಬ್ಸ್ಟ (Georg Plebst)ನನ್ನು ಮಂಗಳೂರಿನ ಮುದ್ರಣಾಲಯದ ಹಾಗೂ ಅಲ್ಲಿ ಹೊಸ ಅಕ್ಷರ–ಯಂತ್ರದ ಪ್ರತಿಷ್ಠಾಪನೆಯ ಮೇಲ್ವಿಚಾರಣೆಗಾಗಿ ಕಳುಹಿಸಲಾಯಿತು. ಪ್ಲೆಬ್ಸ್ಟನು ಇಂಜಿನಿಯರಿಂಗ್ ಕಲಿತರೂ ನರದೌರ್ಬಲ್ಯತೆಯಿಂದಾಗಿ ಅದನ್ನು ಬಿಟ್ಟು ಮುದ್ರಣ ಕಾರ್ಯವನ್ನು ಕೈಗೊಂಡನು. ಸ್ಟಟ್‌ಗರ್ಟ್ ಮುದ್ರಣಾಲಯದಲ್ಲಿ ಉದ್ಯೋಗಾಭ್ಯಾಸಿಯಾಗಿ ಕೆಲಸಮಾಡಿದ ಮೇಲೆ ಬಾಸೆಲ್ ಮಿಷನ್ನಿನ ಮಿತ್ರರೊಬ್ಬರಾದ ಫ್ರೈಯರ್ ಫಾನ್ ಕೊಟ (Freiherr von Cotta)ರವರ ಮುದ್ರಣಾಲಯದಲ್ಲಿ ಸೇರಿಕೊಂಡನು. ಅಲ್ಲಿ ಸ್ಟೀರಿಯೋ ಟೈಪ್ ಮುದ್ರಣ ಕಲೆಯನ್ನು ಕಲಿತನು.

ಹೊಸ ಅಕ್ಷರ ಯಂತ್ರಕ್ಕೆ ಬೇಕಾಗುವ ಕನ್ನಡದ ವರ್ಣಮಾಲೆಯ ಅಕ್ಷರಗಳೂ ಹಾಗೂ ಇತರ ಚಿಹ್ನೆಗಳನ್ನು ಅವುಗಳ ಮೊಳೆಗಳನ್ನು ತಯಾರಿಸಲು ತಗಲುವ ವೆಚ್ಚವನ್ನು ಮಿಷನ್ನಿನ ಶ್ರೀಮಂತ ಮಿತ್ರನಾದ ಫ್ರಾಯರ್ ಫಾನ್ ಕೊಟ್ಟನೆಂದು ತೋರುತ್ತದೆ. ಮಿಷನ್ನಿನ ಮಂಗಳೂರು ಮುದ್ರಣಾಲಯಕ್ಕೆ ಉದಾರ ಧನಸಹಾಯ ಮಾಡಿದ. ಷ್ಕಾನ್‌ಬರ್ಗಿನ ಯುವರಾಜ ಕುಮಾರನು (Furst von Schonburg)ನು ತಲೆಚೇರಿಯ ಅಕ್ಷರ ಯಂತ್ರದ ಅಚ್ಚುಮೊಳೆಗಳಿಗೆ ಧನಸಹಾಯ ಮಾಡಿರುವ ಸಾಧ್ಯತೆಯನ್ನು ನಿರಾಕರಿಸುವಂತಿಲ್ಲ. ಇದಲ್ಲದೆ ಯಾವಾಗಲೂ ಕೊರತೆಯಿದ್ದ ರೋಮನ್ ಅಕ್ಷರ ಮಾಲಿಕೆಯ ಮೊಳೆಗಳನ್ನು ಸಹ ಮಿಷನ್ನಿನ ಮುದ್ರಣಾಲಯದಲ್ಲೇ ತಯಾರಿಸಲಾಯಿತು. ಈ ಕೆಲಸ ಬಹಳ ಸಮಯ ತೆಗೆದುಕೊಳ್ಳುವುದಲ್ಲದೆ ವಿಪರೀತ ವೆಚ್ಚವುಳ್ಳದ್ದು ಆಗಿತ್ತು. ಇಂಗ್ಲಿಷರಿಂದ ತಯಾರಿಸಲ್ಪಟ್ಟ ಹಿಂದಿನ ಟೈಪುಗಳನ್ನು ಈ ಹೊಸ ಟೈಪುಗಳೊಂದಿಗೆ ಹೋಲಿಸುವಂತಿರಲಿಲ್ಲ. ಪ್ಲೆಬ್ಸ್ಟನು 1851ನೇ ಅಕ್ಟೋಬರ್‌ನಲ್ಲಿ ಬಂದರೂ ಅಚ್ಚಿನ ಮೊಳೆಗಳು ಬರಲು ಸುಮಾರು ಏಳು ತಿಂಗಳು ಹಿಡಿಯಿತು. ಈ ಅವಧಿಯಲ್ಲಿ ಪ್ಲೆಬ್ಸ್ಟನು ಹೊಸ ಅಕ್ಷರಯಂತ್ರದ ಪ್ರತಿಷ್ಠಾಪನೆಗೆ ಬೇಕಾದ ಸಿದ್ಧತೆಯಲ್ಲಿ ನಿರತನಾದನು. ಮುದ್ರಣದ ಕಾರ್ಯಾಲಯವನ್ನು ಬಲ್ಮಠದಲ್ಲಿರುವ ಮಿಷನ್ನಿನ ಆವರಣದ ನೈಋತ್ಯ ಭಾಗದಲ್ಲಿ ಹೊಲಿಗೆ, ಮರಗೆಲಸ, ಗಡಿಯಾರದ ಕೆಲಸ, ನೆಯ್ಗೆ ಮತ್ತು ಪುಸ್ತಕಗಳಿಗೆ ರಟ್ಟು ಹಾಕುವ ಕಾರ್ಯಾಲಯಗಳ ಜೊತೆಗೆ ನಿರ್ಮಿಸಲಾಯಿತು. ಈ ಗುತ್ತುಜಾಗವು ಮೊದಲು ನ್ಯಾಯಾಲಯದ ಕಛೇರಿಯ ಆವರಣವಾಗಿತ್ತು. 1837ರಲ್ಲಿ ನಡೆದ ಗಲಭೆಯಲ್ಲಿ ಕಛೇರಿಯು ನಾಶವಾಯಿತು. ಅನಂತರ ಈ ಸ್ಥಳವನ್ನು H. M. Blair ರವರು ಬಾಸೆಲ್ ಮಿಷನ್ನಿಗೆ ದಾನ ಮಾಡಿದರು.

ಬಾಸೆಲ್ ಮಿಷನ್ನಿನ 1853ರ ವರದಿಯನ್ನು ರೋಮನ್ ಅಚ್ಚುಮೊಳೆಗಳಿಂದ ತಯಾರಿಸುವುದರ ಮೂಲಕ ಅಕ್ಷರ ಯಂತ್ರದ ಮುದ್ರಣ ಕಾರ್ಯವು ಪ್ರಾರಂಭವಾಯಿತು. ಕನ್ನಡದ

ಹೊಸ ಅಚ್ಚು ಮೊಳೆಗಳನ್ನು ಉಪಯೋಗಿಸಿಕೊಂಡು ಮುದ್ರಿಸಲ್ಪಟ್ಟ ಗ್ರಂಥದ ಬಗ್ಗೆ ಮಿಷನ್ನಿನ ಇಂಗ್ಲಿಷ್ ಮತ್ತು ಜರ್ಮನ್ ವರದಿಯಲ್ಲೂ ಕೂಡಾ ಮಾಹಿತಿ ದೊರೆಯುವುದಿಲ್ಲ. ಆದರೆ ಈಗಲೂ ಹಳೆಯ ಕಲ್ಲಚ್ಚು ಯಂತ್ರಗಳನ್ನು ಸಂಪೂರ್ಣವಾಗಿ ಕೈಬಿಟ್ಟಿರಲಿಲ್ಲ. ಅವುಗಳನ್ನು ಸರ್ಕಾರದ ಸುತ್ತೋಲೆಗಳನ್ನು ಮುದ್ರಿಸಲು ಹಾಗೂ ಕಡಿಮೆ ವೆಚ್ಚದಲ್ಲಿ ಹೆಚ್ಚು ಪ್ರತಿಗಳನ್ನು ಪಡೆಯಲು ಬಳಸಲಾಗುತ್ತಿತ್ತು. ಇಷ್ಟೇ ಅಲ್ಲದೆ ಅನ್ಯಮತಗಳಿಂದ ಮತಾಂತರ ಹೊಂದಿ ಕ್ರಿಶ್ಚಿಯನ್ನರಾದ ಸ್ಥಳೀಯರಿಗೆ ಉದ್ಯೋಗ ದೊರಕಿಸಿ ಕೊಡುವುದು ಬಾಸೆಲ್ ಮಿಷನ್ನನ್ನೂ ಬಾಧಿಸುತ್ತಿದ್ದ ದೊಡ್ಡ ಸಮಸ್ಯೆಯಾಗಿತ್ತು. ಅಂತಹವರಿಗೆ ಕಲ್ಲಚ್ಚು ಮೊಳೆಗಳ ಜೋಡಣೆಯ ಕೆಲಸವನ್ನು ಕೊಟ್ಟಿದ್ದರಿಂದ ಸಮಸ್ಯೆ ಸ್ವಲ್ಪಮಟ್ಟಿಗೆ ಪರಿಹಾರವಾದಂತಾಯಿತು. 1853ರ ಅಕ್ಷರ ಮತ್ತು ಕಲ್ಲಚ್ಚು ಯಂತ್ರಗಳು ಒಟ್ಟು ಹತ್ತು ಮಂದಿಗೆ ಉದ್ಯೋಗಾವಕಾಶ ದೊರಕಿಸಿತು.

ಮುದ್ರಣಕಾರನಾದ ಪ್ಲೆಬ್ಸ್ಟನು ಅತ್ಯಂತ ದಕ್ಷ ಹಾಗೂ ಭರವಸೆಯ ಕೆಲಸಗಾರ. ಮಾಗ್ಲಿಂಗ್‌ನ ಜೀವನ ಚರಿತ್ರೆಯಲ್ಲಿ ಅವನ ಕುರಿತು ಈ ರೀತಿ ವರ್ಣನೆಯಿದೆ – ವಿವೇಕಶಾಲಿ ನಿಷ್ಠಾವಂತ, ಸಂತುಷ್ಟ ಹಾಗೂ ಗುಣಾಢ್ಯ. ಅವನ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿ ಅವನು ಮೊದಲು ಮನೆ ಬಿಟ್ಟುಹೋದ ಮೇಲೆ ಕಲಿತದ್ದು ಹೆಂಚು ತಯಾರಿಸುವ ಕಲೆಯನ್ನು. 1865ರಲ್ಲಿ ಮಂಗಳೂರಿಗೆ ಬಂದ ಮೇಲೆ ಅಲ್ಲಿಯ ಜೇಡುಮಣ್ಣಿನಿಂದ ಉಬ್ಬು ತೋಡುಗಳುಳ್ಳ ವಿಶಿಷ್ಟವಾದ "ಮಂಗಳೂರು ಹೆಂಚು"ಗಳನ್ನು ತಯಾರಿಸಲು ಉಪಕ್ರಮಿಸಿದನು. ಪ್ಲೆಬ್ಸ್ಟನು "ಮಾಟವಲ್ಲದ, ಸರಿಯಾದ ಆಕಾರವಿಲ್ಲದ ಹಳೆಯ ಕನ್ನಡದ ಮೊಳೆಗಳ ಬದಲು ಹೊಸ ವಿನ್ಯಾಸದ ಅಚ್ಚು ಮೊಳೆಗಳನ್ನು ತಯಾರಿಸಲು ಅವಿರತ ಶ್ರಮಿಸಿದನೆಂದು" 1907ರ ಬಾಸೆಲ್ ಮಿಷನ್ನಿನ ವರದಿಯಲ್ಲಿರುವ ಸಿಂಹಾವಲೋಕನದಲ್ಲಿ ಪ್ಲೆಬ್ಸ್ಟನ ಪ್ರತಿಭೆಯ ಕುರಿತು ಮುಕ್ತಕಂಠದ ಪ್ರಶಂಸೆಗಳಿವೆ. ಈ ಉದ್ದೇಶಕ್ಕಾಗಿಯೇ 1850ರಲ್ಲಿ ಮಂಗಳೂರಿನಲ್ಲಿ ಪ್ರತ್ಯೇಕವಾದೊಂದು ಅಚ್ಚು ಮೊಳೆ ಕಾರ್ಖಾನೆಯೊಂದನ್ನು ತೆರೆದನು. ಮಿಷನ್ನಿನ ಮುದ್ರಣಾಲಯದ ಮೇಲ್ವಿಚಾರಣೆಯಲ್ಲದೆ ಮಂಗಳೂರು ಮತ್ತು ಹೊನ್ನಾವರಗಳಲ್ಲಿ Collectorate Press ನ್ನೂ ಪ್ರಾರಂಭಿಸುವುದಕ್ಕೂ ಪ್ಲೆಬ್ಸ್ಟನೇ ಕಾರಣ. ಅಷ್ಟು ಮಾತ್ರವಲ್ಲದೆ, ಈ ಮುದ್ರಣಾಲಯಗಳಲ್ಲಿ ಕೆಲಸ ಮಾಡುತ್ತಿದ್ದ ಮೊಳೆ ಜೋಡಣೆಗಾರರು ಹಾಗೂ ಮುದ್ರಕರೂ ಪ್ಲೆಬ್ಸ್ಟನ ಮೇಲ್ವಿಚಾರಣೆಯಲ್ಲೇ ತರಬೇತಿ ಪಡೆದವರಾಗಿದ್ದರು. ಮುಂದೆ ಅಬಾಧಿತವಾಗಿ 50 ವರ್ಷಗಳಿಗೂ ಮೇಲ್ಪಟ್ಟು ಬಾಸೆಲ್ ಮಿಷನ್ನಿನ ಮಂಗಳೂರು ಛಾಪಾಖಾನೆಯು ಪ್ರಕಟಣೆಯ ಕೆಲಸಗಳನ್ನು ನಿರ್ವಹಿಸುತ್ತಿತ್ತು. 1907ರ ವೇಳೆಗೆ ಸುಮಾರು ಎಂಟು ಮುದ್ರಣ ಯಂತ್ರಗಳಿದ್ದು 70ಕ್ಕೂ ಹೆಚ್ಚು ಕೆಲಸಗಾರರಿದ್ದರು ಇವರಿಗೆ ಮೇಲ್ವಿಚಾರಕನಾಗಿ ಒಬ್ಬ ಯೂರೋಪಿಯನ್ನನಿದ್ದನು. ಆರು ಬಗೆಯ ಅಕ್ಷರಗಳ ಅಚ್ಚು ಮೊಳೆಗಳು ಮತ್ತು ಹತ್ತು ವಿವಿಧ ಭಾಷೆಗಳಲ್ಲಿ ಪುಸ್ತಕಗಳನ್ನು ಮುದ್ರಿಸಲು ಈ ಮುದ್ರಣಾಲಯದಲ್ಲಿ ಸೌಕರ್ಯವಿತ್ತು. ಅಲ್ಲದೆ, ಸಂಗೀತ ಸ್ವರಚಿಹ್ನೆ (musical notes)ಗಳನ್ನೂ ಕೂಡ ಮುದ್ರಿಸಬಹುದಾಗಿತ್ತು. ಆ ಕಾಲದಲ್ಲಿ ಭಾರತದ ಕೆಲವೇ ಮುದ್ರಣಾಲಯಗಳಲ್ಲಿ ಇಂತಹ ಸೌಲಭ್ಯ ದೊರಕುತ್ತಿತ್ತು.

ಕ್ರೈಸ್ತಮತಕ್ಕೆ ಮತಾಂತರ ಪಡೆದ ಅನ್ಯಮತೀಯರು ತಮ್ಮ ಕುಲಕಸಬುಗಳನ್ನು ಮುಂದುವರಿಸುವುದು ಅಸಾಧ್ಯವಾಗಿತ್ತು. ಅಂತಹವರಿಗೆ ಪ್ರಾಥಮಿಕ ಶಿಕ್ಷಣದ ಒತ್ತೊತ್ತಿಗೆ ಉದ್ಯೋಗಪರ ಶಿಕ್ಷಣವಾಗಿ ರಟ್ಟುಹಾಕುವ ಕಲೆಯಲ್ಲಿ ತರಬೇತಿ ನೀಡುವ ಯೋಜನೆಯನ್ನು ಕೈಗೊಳ್ಳಲಾಯಿತು. ಅಂತಹವರಿಗೆ ಕೆಲಸ ದೊರಕಿಸಲು ಮಿಷನ್ನಿನ ಮುದ್ರಣಾಲಯದ ಜೊತೆ ರಟ್ಟುಕಟ್ಟುವ ಕಾರ್ಯಾಲಯಗಳನ್ನು ಸ್ಥಾಪಿಸಲಾಯಿತು. 1846ರಲ್ಲಿ ಈ ಉದ್ದೇಶಕ್ಕಾಗಿ ಕೈಗಾರಿಕಾ ತರಬೇತಿ ಶಾಲೆಯೊಂದನ್ನು ತೆರೆದು ರಟ್ಟುಕಟ್ಟುವ ಕಲೆಯನ್ನು

ಇನ್ನಿತರ ವಿಷಯಗಳೊಂದಿಗೆ ಕಲಿಸಿದನು. ಆದರೆ ಈ ಕಾರ್ಯ ನೇಯ್ಗೆ ಶಿಕ್ಷಣದಷ್ಟು ಯಶಸ್ವಿಯಾಗಲಿಲ್ಲ. ಈ ಕಲೆಯಲ್ಲಿ ತಜ್ಞನಾಗಿದ್ದ ಯೂರೋಪಿಯನ್ನನು ಬೇಗನೆ ತನ್ನ ದೇಶಕ್ಕೆ ಹಿಂತಿರುಗಿದನು. ಕ್ರಿಯಾಶೀಲನಾದ ಮೊಗ್ಲಿಂಗ್‌ನು ಧೃತಿಗೆಡದೆ ಕೆಲವರನ್ನು ಮಂಗಳೂರು, ಬೊಂಬಾಯಿಗಳಲ್ಲಿಯ ಖಾಸಗಿ ಕಾರ್ಯಾಗಾರಗಳಿಗೆ ತರಬೇತಿಗೆ ಕಳುಹಿಸಿದನು. ಮೊಗ್ಲಿಂಗ್‌ನ ಈ ಪ್ರಯೋಗ ಯಶಸ್ವಿಯಾಯಿತು. ಹೀಗೆ ಕಲಿತು ಬಂದವರನ್ನು ಮಿಷನ್ನಿನ ಬೈಂಡರಿಗಳಲ್ಲಿ ಬೋಧಕರನ್ನಾಗಿ ನೇಮಿಸಿದನು. ಮೆಸರ್ಸ್ ಜೋಷುವಾ ಅಂಡ್ ಸನ್ (Messrs Joshua & Sons) ಎಂಬ ಸಂಸ್ಥೆಯನ್ನು ಇಲ್ಲಿ ಹೆಸರಿಸಬಹುದು. 1907ರ ಹೊತ್ತಿಗೆ ಈ ಸಂಸ್ಥೆಯಲ್ಲಿ ಸುಮಾರು 35 ಮಂದಿ ರಟ್ಟು ಕಟ್ಟುವ ಕಲೆಯಲ್ಲಿ ನಿಪುಣರಾದ ಕೆಲಸಗಾರರಿದ್ದರು. ಈ ಸಂಸ್ಥೆಯ ಸ್ಥಾಪಕರು ಮಿಷನ್ನಿನ ವೆಚ್ಚದಲ್ಲಿ ಬೊಂಬಾಯಿ ಮತ್ತು ಬಳ್ಳಾರಿಗೆ ತೆರಳಿ ರಟ್ಟು ಕಟ್ಟುವ ಕಲೆಯನ್ನು ಕಲಿತು ಬಂದಿದ್ದರು. ಮಿಷನ್ನಿನ ಬೈಂಡರಿಯಲ್ಲಿ 1851ರಲ್ಲಿ ಮೂವರು ಹಾಗೂ 1852ರಲ್ಲಿ 5 ಜನ ಕೆಲಸಗಾರರಿದ್ದರು. ಈ ಪೈಕಿ ಚೀನಾದೇಶದವನಾದ ಒಬ್ಬನು ಯೂರೋಪಿಯನ್ ಅಧಿಕಾರಿಯ ಸೇವಕನಾಗಿದ್ದು ಅವನಿಂದ ತ್ಯಜಿಸಲ್ಪಟ್ಟವನಾಗಿದ್ದನು. ಲೂಕಸ್ (Lucas) ಎಂಬುವನು ಆಗ ಪ್ರಧಾನ ಬೈಂಡರನಾಗಿದ್ದನು. ಈತ ರಟ್ಟು ಕಟ್ಟುವ ಕಲೆಯನ್ನು ಯಾರಿಂದಲೂ ಕಲಿತು ಬಂದವನಲ್ಲ. ಸ್ವಪ್ರಯತ್ನದಿಂದಲೇ ಕಲಿತವನು. ಪುಸ್ತಕಗಳಿಗೆ ಚರ್ಮದ ರಟ್ಟು ಹಾಕುವುದರಲ್ಲಿ, ಸ್ವರ್ಣಲೇಪನ ಮಾಡುವುದರಲ್ಲೂ ನಿಸ್ಸೀಮನಾಗಿದ್ದನು. ಬಾಸೆಲ್ ಮಿಷನ್ನಿನವರೇ ಅಲ್ಲದೆ ಇತರ ಬ್ರಿಟಿಷ್ ಅಧಿಕಾರಿಗಳೂ ಸಹ ತಮ್ಮ ಸಂಗ್ರಹದ ಪುಸ್ತಕಗಳಿಗೆ ರಟ್ಟುಹಾಕಿಸಲು ಈತನನ್ನೇ ಮೊರೆಹೋಗುತ್ತಿದ್ದರು. ತಲೆಚೇರಿಯಲ್ಲಿ ಸಹ ಮುದ್ರಣ ಕೆಲಸ ಪ್ರಾರಂಭಗೊಂಡಂದಿನಿಂದಲೂ ರಟ್ಟು ಕಟ್ಟುವ ಕಾರ್ಯಾಲಯವನ್ನು ತೆರೆಯುವ ಅಗತ್ಯ ಕಂಡು ಬಂದಿತು. ವರಿದ್ (Warid) ಎಂಬ ತರುಣ ಮತಾಂತರಿಯನ್ನು ರಟ್ಟುಹಾಕುವ ಕಲೆಯಲ್ಲಿ ತರಪೇತಿ ಹೊಂದಲು ಮಂಗಳೂರು ಮಿಷನ್ನಿಗೆ ತಲೆಚೇರಿಯಿಂದ ಕಳುಹಿಸಲಾಯಿತು. ಅಲ್ಲಿಂದ ಹಿಂತಿರುಗಿದ ಮೇಲೆ ತಲೆಚೇರಿಮಿಷನ್ನಿನ ಪ್ರಧಾನ ಬೈಂಡರ್ ಆಗಿ ನೇಮಕ ಹೊಂದಿ ಇತರರಿಗೂ ತರಪೇತಿ ನೀಡಿದನು. ಕ್ರಮೇಣ ಈತನೂ ಸಹ ಲೂಕಸ್‌ನಂತೆಯೇ ಹೆಸರುವಾಸಿಯಾದನು. ಕರ್ಮಕುಶಲಿಯಾಗಿದ್ದ ಈತನಿಗೂ ಹೊರಗಿನಿಂದ ವಿಶೇಷ ಬೇಡಿಕೆಯಿದ್ದಿತು.

ವಿ. ಸೂ.

ಈ ಲೇಖನವನ್ನು ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಲು ಅನುಮತಿಯಿತ್ತ ಲಂಡನ್ನಿನ ಬ್ರಿಟಿಷ್ ಲೈಬ್ರರಿಯ ಗ್ರಹಾಂ ಷಾ ಅವರಿಗೆ ನಮ್ಮ ಕೃತಜ್ಞತೆಗಳು. ಮೂಲ ಲೇಖನವು "Libri' International Library Review," 27 (2), June 1977. p. 154-164ರಲ್ಲಿ ಪ್ರಕಟವಾಗಿದೆ.

“ಇದುವರೆಗೆ ನೀವು ಉಪದೇಶಮಾಡಿದ ವಿಷಯವನ್ನು ಎಲ್ಲಿಯಾದರೂ ಬರೆದದ್ದುಂಟೆ, ಎಂದು ಮಿಷನರಿಗಳಾದ ನಮ್ಮನ್ನು ಜನ ಕೇಳುತ್ತಾರೆ. ಪ್ರವಚನ ಮಾಡಿಯಾದಮೇಲೆ ಆ ಮಾತುಗಳನ್ನು ನಿಧಾನವಾಗಿ ಓದಿ ಮನನಮಾಡಿಕೊಳ್ಳುವುದಕ್ಕೊಂದು ಪುಸ್ತಕವನ್ನು ಕೊಡದೆ ಹೋದರೆ ಏನು ಪ್ರಯೋಜನ ? ಅಂಥ ಪುಸ್ತಕ ಅವನ ಕೈಯಲ್ಲಿದ್ದರೆ, ಅದನ್ನು ಇತರರನೇಕರು ಓದುವರು. ಅಲ್ಲಿಂದ ಅದೂ ಗ್ರಾಮಾಂತರವನ್ನೂ ಸೇರುವುದು. ಅಷ್ಟು ದೂರದಲ್ಲಿ ಮಿಷನರಿಗಳ ವಾಣಿಯು ಕೇಳಿಬರುವುದು ಸಾಧ್ಯವಿಲ್ಲವಾದರೂ ಪುಸ್ತಕವು ಆ ಕೆಲಸವನ್ನು ಮಾಡುತ್ತಲೇ ಇರುವುದು. ದೊಡ್ಡವರಿಗೂ ಎಳೆಯರಿಗೂ ಉಪಯೋಗ ಬೀಳಬಹುದಾದ ಇಂಥ ಪುಸ್ತಕಗಳ ಪ್ರಕಟನೆಗೆ ಮುದ್ರಣಾಲಯವು ಅತ್ಯಗತ್ಯ.” ಈ ಅರ್ಥದ ಮಾತುಗಳನ್ನು ಓರ್ವ ಮಿಷನರಿಯು ಬರೆದಿದ್ದಾನೆ. ಮಿಷನರಿ ಜನರಿಗೆ ಮುದ್ರಣವು ಒಂದು ಅನಿವಾರ್ಯದ ಸಾಧನವಾಗಿದ್ದಿತೆಂಬುದನ್ನು ಇದರಿಂದ ಕಂಡುಕೊಳ್ಳುತ್ತೇವೆ. ಅವರ ಕಾರ್ಯತತ್ಪರತೆಯಿಂದಾಗಿ ಮುದ್ರಣೋದ್ಯಮವು ಅವರ ಕೈಯಲ್ಲಿ ಪ್ರಗಲ್ಭ ಸ್ಥಿತಿಯನ್ನು ಹೊಂದಿತು. ಅವರಿಗೂ ಇತರರಿಗೂ ವರದಾನವಾಗಿ ಪರಿಣಮಿಸಿತು.

(ಡಾ. ಶ್ರೀನಿವಾಸ ಹಾವನೂರ: “ಹೊಸಗನ್ನಡದ ಅರುಣೋದಯ” ಪು. ೩೬)

ಡಿ. ಎಸ್. ಜಯಪ್ಪಗೌಡ

ಸಹಕಾರ ಚಳವಳಿ

'ಸಹಕಾರ' ಚಳವಳಿಯ ಮಾತು ಆಧುನಿಕ ಕಾಲದಲ್ಲಿ ಹೆಚ್ಚುಹೆಚ್ಚಾಗಿ ಕೇಳಿಬಂದರೂ ಅದರ ಹುಟ್ಟು ಮಾನವ ಸಂಸ್ಕೃತಿಯಷ್ಟೆ ಹಳೆಯದು. ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಸಹಕಾರ ಆಧುನಿಕ ಕಾಲದಲ್ಲಿ ಮಹತ್ವಪೂರ್ಣ ಸ್ಥಾನ ಪಡೆದಿದೆ. ವ್ಯಕ್ತಿ ಮತ್ತು ಸಮಾಜ ಜೀವನದಲ್ಲಿ ಹಾಸುಹೊಕ್ಕಾಗಿರುವ ಸಹಕಾರ ಪ್ರಜಾಪ್ರಭುತ್ವ ವ್ಯವಸ್ಥೆಯ ಅವಿಭಾಜ್ಯ ಅಂಗ. ಪ್ರಜಾಪ್ರಭುತ್ವ ಜೀವನ ವಿಧಾನದ ಯಶಸ್ಸು ಬಹಳಮಟ್ಟಿಗೆ ಸಹಕಾರಿ ಚಳವಳಿಯ ಯಶಸ್ಸನ್ನು ಅವಲಂಬಿಸಿದೆ. ಇಂದು ಜೀವನದ ಬಹುತೇಕ ಕ್ಷೇತ್ರಗಳಲ್ಲಿ ವ್ಯಾಪಿಸಿರುವ ಸಹಕಾರಿ ಚಟುವಟಿಕೆಯ ಮಹತ್ವ ದಿನೇ ದಿನೇ ಹೆಚ್ಚುತ್ತಿದೆ.

ಸಹಕಾರಿ ಚಟುವಟಿಕೆ ಆಧುನಿಕ ಕಾಲದ ಅನ್ವೇಷಣೆಯೇನಲ್ಲ. ವ್ಯಕ್ತಿಗಳು ಪರಸ್ಪರ ಸ್ವಇಚ್ಛೆಯಿಂದ ತಮ್ಮ ಅಭಿವೃದ್ಧಿಗೆ ನೆರವಾಗುವುದೇ ಸಹಕಾರ. ಕುಟುಂಬ ಜೀವನ ಪ್ರಾರಂಭವಾದಂದಿನಿಂದಲೇ ಸಹಕಾರಿ ಚಟುವಟಿಕೆ ಹುಟ್ಟಿಕೊಂಡಿತು. ನಮ್ಮ ಹಿರಿಯರು ಸಹಕಾರದ ಮಹತ್ವವನ್ನರಿತು ಅದನ್ನು ಜೀವನದ ವಿವಿಧ ಕ್ಷೇತ್ರಗಳಲ್ಲಿ ಅಳವಡಿಸಿದ್ದರು. ವೈಜ್ಞಾನಿಕ ಸೌಲಭ್ಯಗಳಿಲ್ಲದ ಮತ್ತು ಜನರ ನೆರವಿನಿಂದ ಮಾತ್ರ ಕಾರ್ಯಸಾಧಿಸಬಹುದಾಗಿದ್ದ ಹಿಂದಿನ ಕಾಲದಲ್ಲಿ ಸಹಕಾರ ಅತ್ಯಗತ್ಯ ಅಂಶವಾಗಿತ್ತು. ಹಣ, ವಸ್ತು ಇಲ್ಲವೆ ಜನಸಹಾಯದ ರೂಪದಲ್ಲಿ ಪರಸ್ಪರ ಸಹಕಾರ ರೂಢಿಗೆ ಬಂತು. ಮಗುವಿನ ಹುಟ್ಟಿನಿಂದಲೇ ಸಹಕಾರಿ ತತ್ವ ಕಾಣಬಹುದು. ಆಗ ನೆರೆಹೊರೆಯವರು, ಬಂಧುಮಿತ್ರರು ಸಹಾಯಕ್ಕೆ ಬರುವುದಲ್ಲದೆ ಮಗು ನೋಡಲು ಬಂದವರು ಬಾಣಂತಿ ಮತ್ತು ಮಗುವಿಗೆ ಒಳ್ಳೆಯ ಆಹಾರ ಪೋಷಣೆ ಒದಗಿಸಲು ಅನುಕೂಲವಾಗುವಂತೆ ಪದಾರ್ಥಗಳನ್ನು ಅಥವಾ ಹಣವನ್ನು ಕೊಡುತ್ತಿದ್ದರು. ಹಾಗೆಯೇ ಮದುವೆ, ಸಾವು, ಮುತ್ತಿತರ ಸಂದರ್ಭಗಳಲ್ಲಿ ಸಹಕಾರ ಅಗತ್ಯ ಅಂಶವಾಗಿತ್ತು. ಮದುವೆ ಸಂದರ್ಭದಲ್ಲಿ ಕೈಯಲ್ಲಿ ಹಣವಿಲ್ಲದಾಗ ಅಥವಾ ಇತರ ಖರ್ಚಿಗೆ ಸಹಾಯಕವಾಗಲೆಂಬ ಉದ್ದೇಶದಿಂದ 'ಮುಯ್ಯಿ' ಹಾಕುವ ಪದ್ಧತಿ ಬೆಳೆಯಿತು. ಇದರಿಂದ ಮದುವೆ ಮಾಡುವವರಿಗೆ ಒಟ್ಟಿಗೆ ಇಡಿ ಗಂಟು ಸಿಗುತ್ತಿದ್ದುದರಿಂದ ಅದೊಂದು ಭರವಸೆಯ ಮೂಲವಾಗಿತ್ತು. ಸಾವಿನ ಸಂದರ್ಭದಲ್ಲೂ ಸತ್ತವರ ಕುಟುಂಬಕ್ಕೆ ನೆರವಾಗಲೆಂಬ ಉದ್ದೇಶದಿಂದ ತಟ್ಟೆಗೆ ಹಣಹಾಕುವ ಪದ್ಧತಿ ಬೆಳೆಯಿತು, ಹೀಗೆ ಒಬ್ಬರಿಗೆ ಬಂದ ಹಣವನ್ನು ಕಡ್ಡಾಯವಾಗಿ ಮರುಪಾವತಿ ಮಾಡುವ ನಿರ್ಬಂಧವಿಲ್ಲದಿದ್ದರೂ ಸಾಮಾನ್ಯವಾಗಿ ಶಕ್ತಿಮೀರಿ ಹಿಂದಿರುಗಿಸಲು ಪ್ರಯತ್ನಿಸುತ್ತಿದ್ದರು. ಇದರಿಂದ ತಲೆ ತಲೆಮಾರುಗಳ ಕಾಲ ಸಹಕಾರಿ ಪ್ರವೃತ್ತಿ ಮುಂದುವರಿಯಿತು. ಇಂದು ಈ ಪದ್ಧತಿಯು ಬಹುಮಟ್ಟಿಗೆ ಮಾಯವಾಗುತ್ತಿದ್ದರೂ ಇನ್ನೂ ಅಲ್ಪಸ್ವಲ್ಪ ಉಳಿದು ಬಂದಿದೆ.

ಗ್ರಾಮೀಣ ನಾಗರಿಕತೆಯಲ್ಲಿ ಈ ಸಹಕಾರ ಸಾಮೂಹಿಕ ಕಾರ್ಯಗಳಿಗಷ್ಟೇ ಸೀಮಿತಗೊಳ್ಳದೆ ಆರ್ಥಿಕ ಕ್ಷೇತ್ರಕ್ಕೂ ವ್ಯಾಪಿಸಿತ್ತು. ಹೆಚ್ಚಿನ ಭೂಮಿಕಾಣಿ ಹೊಂದಿರದ ಸಣ್ಣ ರೈತರಿಗೆ ಆಳುಕಾಳುಗಳನ್ನು ಇಟ್ಟುಕೊಂಡು ಸಾಗುವಳಿ ಮಾಡುವುದು ಲಾಭದಾಯಕವೂ ಅಲ್ಲ ಮತ್ತು ಕಾರ್ಯತಃ ಸಾಧ್ಯವೂ ಇಲ್ಲ. ಈ ಸಮಸ್ಯೆ ಬಗೆಹರಿಸಲು 'ಮುಯ್ಯಾಳಿನ' ಪದ್ಧತಿ ರೂಢಿಗೆ ಬಂತು. ಬಿತ್ತನೆ, ನಾಟಿ ಮತ್ತು ಕುಯಿಲಿನ ಸಂದರ್ಭಗಳಲ್ಲಿ ರೈತರು ತಮ್ಮ ನೆರೆಯ ರೈತನಿಗೆ ನೆರವಾಗುತ್ತಿದ್ದರು. ಇದಕ್ಕೆ ಪ್ರತಿಯಾಗಿ ಆ ರೈತ ಅವರ ಕೆಲಸದ ಸಂದರ್ಭದಲ್ಲಿ ಬಂದು ನೆರವಾಗುತ್ತಿದ್ದ. ಇದರಿಂದ ಸಣ್ಣ ಒಡುವಳಿಗಾರರು ಹೆಚ್ಚಿನ ವೆಚ್ಚವಿಲ್ಲದೆ ಬೇಸಾಯ ಕುಯಿಲು ಮೊದಲಾದ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿತ್ತು. ಹುಲ್ಲಿನ ಮನೆಗಳನ್ನು ಹೊದಿಸಲು ಸಹ ಪರಸ್ಪರ ಸಹಕರಿಸುತ್ತಿದ್ದರು. ಇವಿಷ್ಟೇ ಅಲ್ಲದೆ ಇನ್ನೂ ಇತರ ಕ್ಷೇತ್ರಗಳಲ್ಲೂ ಸಹಕಾರ ಪ್ರಾಚೀನ ಕಾಲದಿಂದಲೂ ರೂಢಿಗೆ ಬಂದಿರುವುದಕ್ಕೆ ಹಲವಾರು ನಿದರ್ಶನಗಳು ದೊರೆಯುತ್ತವೆ.

ಆಧುನಿಕ ಸಹಕಾರ ಚಳವಳಿಯ ಮಹತ್ವ ಮತ್ತು ಉದ್ದೇಶಗಳನ್ನರಿಯಲು ಅದು ನಡೆದು ಬಂದ ಹೆಜ್ಜೆ ಗುರುತುಗಳನ್ನು ಅವಲೋಕಿಸುವುದು ಅತ್ಯಗತ್ಯ. ಸಹಕಾರದ ಬಗ್ಗೆ ಭಾರತೀಯ ಕಲ್ಪನೆ ಏನೇ ಇದ್ದಿರಬಹುದಾದರೂ ಆಧುನಿಕ ಕಾಲದಲ್ಲಿ ಅದರ ಕ್ರಮಬದ್ಧ ಸಂಘಟನೆಯಾದದ್ದು ಯೂರೋಪಿನಲ್ಲಿ. ವಾಣಿಜ್ಯ ವಿಸ್ತರಣೆ ಮತ್ತು ವೈಜ್ಞಾನಿಕ ಬೆಳವಣಿಗೆಗಳಿಂದಾಗಿ ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನಗಳಲ್ಲಿ ಯೂರೋಪಿನಲ್ಲಿ ಕೈಗಾರಿಕಾ ಕ್ರಾಂತಿಯುಂಟಾಯಿತು. ಇದು ಸ್ವಾಭಾವಿಕವಾಗಿಯೇ ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗಗಳ ಬೆಳವಣಿಗೆಗೆ ಅವಕಾಶ ನೀಡಿತು. ಆಗ ಲಾಭಕೋರತನವನ್ನೇ ಮುಖ್ಯ ಕಾರ್ಯನೀತಿಯಾಗಿ ಹೊಂದಿದ್ದ ಕೈಗಾರಿಕೆಗಳ ಒಡೆಯರು ಕಾರ್ಮಿಕರ ಕ್ಷೇಮಾಭಿವೃದ್ಧಿಯ ಬಗ್ಗೆ ಹೆಚ್ಚು ಗಮನ ನೀಡುತ್ತಿರಲಿಲ್ಲ. ದೊಡ್ಡ ಭೂಮಾಲೀಕರ ಧೋರಣೆಯೂ ಬದಲಾಗಲಿಲ್ಲ. ಇದರಿಂದಾಗಿ ಕಾರ್ಮಿಕರು ಮತ್ತು ಬಡರೈತರ ಜೀವನ ಸಮಸ್ಯೆಗಳು ಅಧಿಕಗೊಂಡವು. ಮಧ್ಯಮವರ್ಗದ ಮತ್ತು ಕಾರ್ಮಿಕವರ್ಗದ ಕೆಲವು ಬುದ್ಧಿಜೀವಿಗಳು ಮತ್ತು ವಿಚಾರವಂತರು ಬಡವರು ತಮ್ಮ ಸಮಸ್ಯೆಗಳನ್ನು ತಾವೇ ಪರಸ್ಪರ ಸಹಕಾರದಿಂದ ಬಗೆಹರಿಸಿಕೊಳ್ಳುವ ವಿಧಾನಗಳನ್ನು ರೂಪುಗೊಳಿಸಲು ಮುಂದಾದರು. ಇದೇ ಸಹಕಾರ ಚಳವಳಿಯ ಅಂಕುರಕ್ಕೆ ಕಾರಣವಾಯಿತು.

ಕಾರ್ಮಿಕರೇ ನಡೆಸುವ ಹಿಟ್ಟಿನ ಗಿರಣಿಗಳು, ರೊಟ್ಟಿ ಅಂಗಡಿಗಳು ಬ್ರಿಟನ್‌ನಲ್ಲಿ ಅಲ್ಲಲ್ಲೇ ಪ್ರಾರಂಭವಾದವು. ಸಹಕಾರದ ಆಧಾರದ ಮೇಲೆ ಉತ್ಪಾದನೆ ಮತ್ತು ವಿತರಣೆ ಎರಡೂ ಸಾಧ್ಯವೆಂದೂ ಇದರಿಂದ ಕಾರ್ಮಿಕರ ಮತ್ತು ಬಡವರ ಹಿತಸಾಧನೆ ಆಗುವುದೆಂದೂ ರಾಬರ್ಟ್ ಓವೆನ್ ಮೊದಲಾದವರು ವಾದಿಸಿದರು. 1844ರಲ್ಲಿ 28 ಮಂದಿ ಕಾರ್ಮಿಕರು ಸೇರಿ "ದಿ ರಾಚಡೇಲ್ ಸೊಸೈಟಿ ಆಫ್ ಈಕ್ವಿಟಬಲ್ ಪಯೋನಿಯರ್ಸ್" ಎಂಬ ಸಂಘವನ್ನು ಪ್ರಾರಂಭಮಾಡಿ ಒಂದು ಅಂಗಡಿ ತೆರೆದರು.[1] ತರುವಾಯ ಇಂಗ್ಲೆಂಡ್‌ನಲ್ಲಿ ಅನೇಕ ಸಹಕಾರ ಸಂಘಗಳು ಹುಟ್ಟಿಕೊಂಡವು. ಜರ್ಮನಿಯಲ್ಲಿ ರೈಫೆಸನ್ ಎಂಬವನು ಸಹಕಾರ ಪದ್ಧತಿಯ ಮೇಲೆ ರೈತರಿಗೆ ಸಾಲವಾಗಿ ಧನಗಳನ್ನು ಒದಗಿಸಲು ಸಹಕಾರ ಸಂಘವನ್ನು ಸ್ಥಾಪಿಸಿದನು. ಅವನು 1882ರಲ್ಲಿ ತನ್ನ ಪರಿಶ್ರಮದಿಂದ ಮೊದಲ ರೈತರ ಸಹಕಾರ ಬ್ಯಾಂಕನ್ನು ಸ್ಥಾಪಿಸಿದನು.[2] ಹೀಗೆ ಬ್ರಿಟನ್, ಜರ್ಮನಿ ಮತ್ತಿತರ ಐರೋಪ್ಯ ದೇಶಗಳಲ್ಲಿ ಕಾರ್ಮಿಕರ ಮತ್ತು ರೈತರ ಒಳಿತಿಗಾಗಿ ಬಂಡವಾಳಶಾಹಿಗಳ ಶೋಷಣೆಯ ವಿರುದ್ಧ ರಕ್ಷಣೆಗಾಗಿ ವ್ಯಾಪಾರ, ಶಿಕ್ಷಣ, ಬ್ಯಾಂಕಿಂಗ್ ವ್ಯವಸ್ಥೆ ಮೊದಲಾದ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳು ತಲೆಎತ್ತಿದವು. ಇಂಗ್ಲೆಂಡಿನಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಲು 1862ರಲ್ಲಿ ಶಾಸನದನ್ವಯ ಅವಕಾಶ ಕಲ್ಪಿಸಲಾಯಿತು

1867ರಲ್ಲಿ ಜರ್ಮನಿಯಲ್ಲಿ ಮೊಟ್ಟಮೊದಲನೆ ಸಹಕಾರಿ ಕಾನೂನು ಶುಲ್ತೆ ಎಂಬವನ ಪ್ರಯತ್ನ
ದಿಂದಾಗಿ ರಚಿತವಾಯಿತು. 1875ರಿಂದ ಡೆನ್ಮಾರ್ಕ್‌ನಲ್ಲಿ ಪಶುಸಂಗೋಪನೆಗೆ ಸಂಬಂಧಿಸಿ ಸಹ
ಕಾರ ಸಂಘಗಳು ಆರಂಭವಾದವು. ಈ ರೀತಿ ಯೂರೋಪಿನಲ್ಲಿ ಹತ್ತೊಂಬತ್ತನೆ ಶತಮಾನದ
ಅಂತ್ಯದ ಹೊತ್ತಿಗೆ ಸಹಕಾರಿ ಚಳವಳಿ ಭದ್ರಬುನಾದಿಯ ಮೇಲೆ ನಿಂತಿತು.

ಕಳೆದ ಶತಮಾನದಲ್ಲಿ ಭಾರತದ ಬಹುತೇಕ ಜನಸಂಖ್ಯೆ ಗ್ರಾಮಾಂತರ ಪ್ರದೇಶಗಳಲ್ಲಿ
ದ್ದಿತು. ಅಲ್ಲಿನ ಬಹುಸಂಖ್ಯೆಯ ಜನರು ರೈತರು ಮತ್ತು ಭೂಹೀನರು. ರೈತರು ಸದಾ
ಸಾಲದ ಹೊರೆಯಲ್ಲಿ ತೊಳಲಾಡುತ್ತಿದ್ದರು. ಅವರು ಕೆಲವೇ ಜನ ಲೇವಾದೇವಿಗಾರರ ಮತ್ತು
ಭೂಒಡೆಯರ ಹಿಡಿತಕ್ಕೆ ಸಿಕ್ಕಿದ್ದರು. ಅವರ ವ್ಯವಸಾಯವೂ ಕೃಶವಾಗಿಯೇ ನಡೆದಿತ್ತು.
ಆಗ ಬ್ರಿಟಿಷರ ನೇರ ಆಳ್ವಿಕೆಯಲ್ಲಿದ್ದ ಮದ್ರಾಸ್ ಸರ್ಕಾರ ಸಹಕಾರ ವಿಧಾನ ರೈತರ ಸಮಸ್ಯೆ
ಗಳಿಗೆ ದಾರಿಯಾದೀತೆ ಎಂದು ಮೊಟ್ಟಮೊದಲು ಯೋಚಿಸಿತು. ಅದು ಈ ಬಗ್ಗೆ ವರದಿ
ಮಾಡಲು ಸರ್ ಫ್ರೆಡರಿಕ್ ನಿಕಲ್‌ಸನ್‌ರನ್ನು ನೇಮಿಸಿತು. ನಿಕಲ್‌ಸನ್‌ರು 1885ರಲ್ಲಿ ವರದಿ
ಸಲ್ಲಿಸಿದರು. ತರುವಾಯ ಮದರಾಸ್ ಪ್ರಾಂತದ ವಿವಿಧ ಕಡೆಗಳಲ್ಲಿ ಸಹಕಾರ ಸಂಘ
ಗಳು ಸ್ಥಾಪನೆಯಾದವು. ಅವುಗಳನ್ನು 1882ರ 'ಇಂಡಿಯನ್ ಕಂಪನೀಸ್ ಆ್ಯಕ್ಟ್' ಪ್ರಕಾರ
ರಿಜಿಸ್ಟರ್ ಮಾಡಿಕೊಳ್ಳಲಾಗುತ್ತಿತ್ತು. 1904ರಲ್ಲಿ ಇಂಡಿಯಾ ಸರ್ಕಾರ ಮೊಟ್ಟಮೊದಲ
ಸಹಕಾರ ಸಂಘಗಳ ಕಾನೂನನ್ನು ಜಾರಿಗೆ ತಂದಿತು. ರೈತರಿಗೆ ಸುಲಭ ಬಡ್ಡಿದರದಲ್ಲಿ ಸಾಲ
ಒದಗಿಸುವುದು ಹೀಗೆ ಸ್ಥಾಪಿತವಾದ ಸಹಕಾರ ಸಂಘಗಳ ಮುಖ್ಯ ಉದ್ದೇಶವಾಗಿತ್ತು. 1912ರಲ್ಲಿ
ಜಾರಿಗೆ ತಂದ ಸಹಕಾರಿ ಸಂಘಗಳ ಇನ್ನೊಂದು ಕಾಯಿದೆ ಮೂಲಕ ವ್ಯವಸಾಯೇತರ ಆರ್ಥಿಕ
ಕ್ಷೇತ್ರಗಳಿಗೂ ಸರ್ಕಾರ ಶಾಸನಬದ್ಧ ಸಹಕಾರಿ ಚಟುವಟಿಕೆಯನ್ನು ವಿಸ್ತರಿಸಿತು. ಕೇಂದ್ರ
ಸಹಕಾರ ಸಂಘಗಳ ಸ್ಥಾಪನೆಗೂ ಸಹ ಕಾನೂನು ಅವಕಾಶ ಮಾಡಿಕೊಟ್ಟಿತು. ಬ್ರಿಟಿಷ್
ಭಾರತದ ವಿವಿಧ ಪ್ರಾಂತಗಳು 1925ರಿಂದ ಸ್ವತಂತ್ರವಾಗಿ ಸಹಕಾರಕ್ಕೆ ಸಂಬಂಧಿಸಿದ ಕಾನೂನು
ಗಳನ್ನು ಜಾರಿಗೆ ತಂದವು. ಈ ದೃಷ್ಟಿಯಿಂದ ಭಾರತದಲ್ಲಿ ಸರ್ಕಾರವೇ ಸಹಕಾರ ಚಳವಳಿ
ಯನ್ನು ಕೈಹಿಡಿದು ನಡೆಸಿದಂತಾಯಿತು.

ದೇಶೀಯ ಸಂಸ್ಥಾನಗಳೂ ಈ ದಿಸೆಯಲ್ಲಿ ಹಿಂದೆ ಬೀಳಲಿಲ್ಲ. ಸ್ಥಳೀಯ ಸಂಸ್ಥೆಗಳ ಚರ
ನೆಗೆ ಪ್ರೋತ್ಸಾಹಕೊಟ್ಟಿದ್ದ ಮತ್ತು 'ಪ್ರಜಾಪ್ರತಿನಿಧಿ ಸಭೆ'ಯ ಮೂಲಕ ಪ್ರಜಾಪ್ರಭುತ್ವ ವಿಧಾನ
ವನ್ನು ಗಮನಾರ್ಹವಾಗಿ ಜಾರಿಗೆ ತಂದಿದ್ದ ಮೈಸೂರು ಸಂಸ್ಥಾನದಲ್ಲಿ 1905ರಲ್ಲಿ
"ಮೈಸೂರು ಕೋಆಪರೇಟಿವ್ ಸೊಸೈಟೀಸ್ ರೆಗ್ಯುಲೇಷನ್" ಎಂಬ ಕಾನೂನು ರಚಿತವಾಯಿತು.
1905–6ನೇ ವರ್ಷದ ಅಂತ್ಯದಲ್ಲಿ 5 ಸಹಕಾರ ಸಂಘಗಳು ರಿಜಿಸ್ಟರಾಗಿದ್ದವು.[3] "ಬೆಂಗ
ಳೂರು ಸೆಂಟ್ರಲ್ ಕೊ–ಆಪರೇಟಿವ್ ಬ್ಯಾಂಕ್" 1909–10ರಲ್ಲಿ ರಿಜಿಸ್ಟರಾಯಿತು. ಇದೇ
ಮೊದಲ ಕೇಂದ್ರ ಸಹಕಾರ ಬ್ಯಾಂಕ್, 1915ರಲ್ಲಿ "ಮೈಸೂರು ಪ್ರಾವಿನ್ಸಿಯಲ್ ಕೋ–
ಆಪರೇಟಿವ್ ಬ್ಯಾಂಕು" ಎಂಬ ಕೇಂದ್ರ ಸಹಕಾರ ಬ್ಯಾಂಕ್ ಸ್ಥಾಪನೆಯಾಯಿತು.
1921–22ನೇ ವರ್ಷದಲ್ಲಿ ಒಟ್ಟು 1522 ಸಹಕಾರ ಸಂಘಗಳು ಸಂಸ್ಥಾನದಲ್ಲಿದ್ದವು. ಇವುಗಳಲ್ಲಿ
1170 ಸಂಘಗಳು ಗ್ರಾಮಾಂತರ ವ್ಯವಸಾಯ ಸಹಕಾರ ಸಂಘಗಳು. ಇದರಿಂದ ಮೈಸೂರು
ಸಂಸ್ಥಾನದಲ್ಲಿ ಎಷ್ಟು ವ್ಯಾಪಕವಾಗಿ ಸಹಕಾರ ಚಳವಳಿ ಹರಡಿತೆಂಬುದನ್ನು ಗಮನಿಸಬಹುದು.
1929ರಲ್ಲಿ ಮೈಸೂರು ಜಮೀನು ಅಡಮಾನ ಬ್ಯಾಂಕ್ ಸ್ಥಾಪನೆಯಾಗಿದ್ದು ಇನ್ನೊಂದು
ಪ್ರಮುಖ ಹೆಜ್ಜೆಯಾಯಿತು. ಪ್ರೊವಿನ್ಸಿಯಲ್ ಬ್ಯಾಂಕನ್ನು ಮೈಸೂರು ಸಂಸ್ಥಾನದ ಅಪೆಕ್ಸ್
ಬ್ಯಾಂಕ್ ಆಗಿ ಪರಿವರ್ತಿಸಿದ್ದಲ್ಲದೆ ಸಹಕಾರ ಪ್ರಚಾರಕ್ಕಾಗಿ ಸಹಕಾರಿ ಸಂಸ್ಥೆಯನ್ನು ಸ್ಥಾಪಿಸ
ಲಾಯಿತು. ಸರ್ಕಾರ ಅಪೆಕ್ಸ್ ಬ್ಯಾಂಕಿಗೆ ಹಣಕೊಡಲು ಪ್ರಾರಂಭಿಸಿತು;. ಸರ್ಕಾರದ ಸಕ್ರಿಯ

ಬೆಂಬಲ ಪಡೆದ ಸಹಕಾರ ಚಳವಳಿ 1930-40ರ ದಶಕಗಳಲ್ಲಿ ಪ್ರತಿ ತಾಲ್ಲೂಕು ಮಟ್ಟದಲ್ಲೂ ವಿವಿಧೋದ್ದೇಶ ಸಹಕಾರ ಸಂಸ್ಥೆಗಳನ್ನು, ಬ್ಯಾಂಕುಗಳನ್ನು ಹೊಂದುವಂತಾಯಿತು.

ಸ್ವಾತಂತ್ರ್ಯಾನಂತರ ಅಖಿಲ ಭಾರತ ಮಟ್ಟದಲ್ಲಿ ಮತ್ತು ರಾಜ್ಯಗಳಮಟ್ಟದಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಆದ್ಯತೆ ದೊರೆಯಿತು. ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಕ್ಷೇತ್ರದ ಪ್ರಗತಿಯೂ ಸೇರಿಕೊಂಡಿತು. 1952ರ ತರುವಾಯ ಪ್ರತಿ ಜಿಲ್ಲೆಯಲ್ಲೂ ಒಂದು ಕೇಂದ್ರ ಸಹಕಾರ ಬ್ಯಾಂಕನ್ನು ಸ್ಥಾಪಿಸಲು ಯೋಜಿಸಲಾಯಿತು. ಹಳ್ಳಿಗಳ ಅಭಿವೃದ್ಧಿಗಾಗಿ ಪ್ರಾರಂಭಿಸಿದ ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮದಲ್ಲೂ ಸಹಕಾರಕ್ಕೆ ಪ್ರಾಮುಖ್ಯ ಸ್ಥಾನ ದೊರೆಯಿತು. ಗೋರೆವಾಲ ಸಮಿತಿ (1954); ಸಹಕಾರಿ ಬೇಸಾಯ ಕುರಿತು ಶ್ರೀ ನಿಜಲಿಂಗಪ್ಪ ಸಮಿತಿ; ಗ್ರಾಮಾಂತರ ಸಾಲದ ಸಹಕಾರಿ ಸಂಘಗಳ ಕುರಿತು ಶ್ರೀ ಮೆಹತಾ ಸಮಿತಿ (1959) ಇವು ಸಹಕಾರಿ ಚಳವಳಿ ಬೆಳೆಸಲು ಅನೇಕ ಸಲಹೆಗಳನ್ನು ಸೂಚಿಸಿದವು. 1956ರಲ್ಲಿ ವಿಶಾಲ ಮೈಸೂರು ರಾಜ್ಯವಾದಾಗ ಮುಂಬಯಿ, ಮದರಾಸ್ ಮತ್ತು ಹೈದರಾಬಾದ್ ರಾಜ್ಯಗಳಿಂದ ಕೆಲವು ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಸೇರಿದವು. ಆ ಜಿಲ್ಲೆಗಳಲ್ಲೂ ಸಹಕಾರ ಚಳವಳಿ ಸಾಕಷ್ಟು ಬೆಳೆದುದರಿಂದ ಅಲ್ಲಿ ಸಹಕಾರ ಸಂಘಗಳನ್ನು ಸಂಘಟಿಸುವುದು ಅಷ್ಟು ತೊಡಕಾಗಲಿಲ್ಲ. ಆ ಜಿಲ್ಲೆಗಳಲ್ಲೂ ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕುಗಳು ಸ್ಥಾಪನೆಯಾದವು.

1958ರಿಂದ ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಒಂದು ಸೇವಾ ಸಹಕಾರ ಸಂಘ ಇರಬೇಕೆಂಬ ನೀತಿಗೆ ಅನುಗುಣವಾಗಿ ಬಹುಸಂಖ್ಯೆಯ ಸೇವಾ ಸಹಕಾರ ಸಂಘಗಳ ಸ್ಥಾಪನೆಯಾಯಿತು. ಸಹಕಾರ ಸಂಘಗಳು ವ್ಯವಸಾಯೇತರ ಕ್ಷೇತ್ರದಲ್ಲೂ ಗಮನಾರ್ಹ ಪ್ರಗತಿ ಸಾಧಿಸಿದವು. ಕುಶಲ ಕೆಲಸಗಳು, ಗೃಹನಿರ್ಮಾಣ, ಮಾರಾಟ, ಬಳಕೆ, ಮುದ್ರಣ, ಪ್ರಕಾಶನ, ಉದ್ಯೋಗ, ಹಣಕಾಸು, ಶಿಕ್ಷಣ, ಕೈಗಾರಿಕೆ, ಸಾಗಣಿಕೆ, ಹೀಗೆ ಆರ್ಥಿಕ ರಂಗದ ಬಹುತೇಕ ಕ್ಷೇತ್ರಗಳನ್ನು ಅವು ವ್ಯಾಪಿಸಿವೆ. ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಸಹಕಾರ ಸಂಘಗಳು 22,096 (1975) ಅದರಲ್ಲೂ ಪ್ರಾಥಮಿಕ ವ್ಯವಸಾಯ ಸಾಲದ ಸಹಕಾರ ಸಂಘಗಳು 8.252 ಬಳಕೆದಾರರ ಸಹಕಾರ ಸಂಘಗಳು 1,349, ವ್ಯವಸಾಯೇತರ ಸಾಲಸಂಘಗಳು; 8252 ಅದರಲ್ಲಿ ನೇಕಾರರ ಸಹಕಾರ ಸಂಘಗಳು 826 (1974-75)[4]. ಉಳಿದವು ಇತರೆ ರೀತಿಯ ಸಹಕಾರ ಸಂಘಗಳು. ಹೀಗೆ ಬೃಹತ್ಪ್ರಮಾಣದಲ್ಲಿ ಬೆಳೆದಿರುವ ಸಹಕಾರಿ ವ್ಯವಸ್ಥೆ ದೇಶದ ಪ್ರಮುಖ ಅಭಿವೃದ್ಧಿ ಅಂಗವಾಗಿದೆ. ಆದ್ದರಿಂದ ವ್ಯಕ್ತಿಯ ಮತ್ತು ದೇಶದ ಅಭಿವೃದ್ಧಿಯಲ್ಲಿ ಇದರ ಪಾತ್ರವನ್ನು ಮನಗಾಣುವುದು ಬಹುಮುಖ್ಯ.

ಆರ್ಥಿಕ ಶೋಷಣೆಗಳನ್ನು ತಪ್ಪಿಸುವುದು ಮತ್ತು ಪ್ರತಿಯೊಬ್ಬರಿಗೂ ಸೂಕ್ತವಾಗಿ ಸಲ್ಲತಕ್ಕ ಪ್ರತಿಫಲವನ್ನು ದೊರೆಯುವಂತೆ ಮಾಡುವುದು ಸಹಕಾರ ಸೇವೆಯ ಗುರಿ. ಎರಡನೆಯದಾಗಿ ಅದು ವ್ಯಕ್ತಿ ಈಡೇರಿಸಿಕೊಳ್ಳಲಾಗದುದನ್ನು ಸಾಮುದಾಯಿಕ ಅಥವಾ ಸಂಘಟನೆಯಿಂದ ಸಾಧಿಸಿಕೊಳ್ಳುವ ಸಾಧನ. ಆದ್ದರಿಂದ ಬಂಡವಾಳಶಾಹಿಯೊಡನೆ ಮತ್ತು ಏಕಸ್ವಾಮ್ಯವಾದಿಯೊಡನೆ ಸಹಕಾರ ಕೂಡಿಬರುವುದಿಲ್ಲ. ಸಹಕಾರಿ ಸಂಘಗಳು ವ್ಯಾಪಾರಿ ವೃತ್ತಿ ಹೊಂದದ ಸೇವಾನಿಷ್ಠವಾದ ಸಂಸ್ಥೆಗಳು. ಇವು ಪ್ರಜಾತಂತ್ರಾತ್ಮಕ ಸಮಾಜವಾದಿ ದೇಶಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲವು. ಪ್ರಜಾಪ್ರಭುತ್ವದಂತೆಯೇ ಸಹಕಾರವೂ ಒಂದು ಜೀವನ ವಿಧಾನ. ಈ ಕ್ಷೇತ್ರದಲ್ಲಿ ಕೆಲಸಮಾಡುವ ಸಂಘಸಂಸ್ಥೆಗಳಿಗೆ ತನ್ನದೇ ಆದ ನೀತಿಸಂಹಿತೆ ಇದೆ ಮತ್ತು ತತ್ವ, ಧೋರಣೆಗಳಿವೆ. ಸ್ವಯಂಪ್ರೇರಿತ ಸದಸ್ಯತ್ವ, ಸಮಾನತೆ, ಪ್ರಜಾಪ್ರಭುತ್ವ ವಿಧಾನ, ತಾಟಸ್ಥ್ಯ ನಿಲುವು, ಸೇವಾವೃತ್ತಿ, ಪರಸ್ಪರ ಸಹಾಯ, ಸಾರ್ವತ್ರಿಕ ಸ್ವರೂಪ, ನ್ಯಾಯಪರ ನಿರ್ವಹಣೆ ಮೊದಲಾದವನ್ನು ಸಹಕಾರಿ ತತ್ವಗಳೆಂದು ಪರಿಗಣಿಸಲಾಗಿದೆ. ಸಹಕಾರಿ

ಸಂಘಗಳಲ್ಲಿ ಅವು ಯಾವ ಉದ್ದೇಶದಿಂದ ಸ್ಥಾಪಿತವಾಗಿಯೋ ಆ ಉದ್ದೇಶಕ್ಕೆ, ಅರ್ಹವಾದ ಪ್ರತಿಯೊಬ್ಬರಿಗೂ ಪ್ರವೇಶಾವಕಾಶ ಮತ್ತು ಸದಸ್ಯರಾದ ಪ್ರತಿಯೊಬ್ಬರಿಗೂ ಸಮಾನ ಹಕ್ಕು, ಹೊಣೆಗಳಿರುವುದು ಇಲ್ಲಿ ಗಮನಿಸಬೇಕಾದ ಅಂಶ. ಇದರಿಂದಾಗಿ ಈ ಸಂಘಗಳು ಸರ್ವ ಜನರ ಸಂಘಗಳಾಗಿದ್ದು ಸಾರ್ವಜನಿಕ ಹಿತಕಾಯುವ ಸಂಸ್ಥೆಗಳಾಗಿವೆ.

ಸಹಕಾರಿ ಸಂಘಗಳಲ್ಲಿ ಸದಸ್ಯರು ಡೈರೆಕ್ಟರಾಗಿ, ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಈ ಪ್ರತಿನಿಧಿಗಳಿಂದ ಕೂಡಿದ ಕಾರ್ಯಸಮಿತಿ ಸಂಘವನ್ನು ಅಥವಾ ಬ್ಯಾಂಕನ್ನು ನಡೆಸುತ್ತದೆ. ಈ ಕಾರ್ಯಕಾರಿ ಸಮಿತಿಯ ಸದಸ್ಯರು ತಮ್ಮ ಕೃತ್ಯಗಳಿಗೆ ಸಂಘಕ್ಕೂ ಸರ್ಕಾರಕ್ಕೂ ಹೊಣೆಯಾಗಿ ರುತ್ತಾರೆ. ಈ ಸಂಘಗಳು ತಮ್ಮ ಸದಸ್ಯರಿಗೆ ಅಗತ್ಯ ಸಾಧನ ಸಲಕರಣೆಗಳನ್ನು ಸಾಲವನ್ನು, ವಸ್ತುಗಳನ್ನು ಒದಗಿಸಬೇಕು. ಹಾಗೂ ಇವುಗಳನ್ನು ಸೂಕ್ತಕಾಲದಲ್ಲಿ ಒದಗಿಸುವುದೂ ಸಂಘದ ಜವಾಬ್ದಾರಿ. ಸದಸ್ಯರಿಗೆ ಅಗತ್ಯವಿರುವ ನೆರವು ಸೂಕ್ತಕಾಲದಲ್ಲಿ ದೊರೆಯದೆ ಹೋದರೆ ರೈತ ನಾಗಲಿ, ಕುಶಲಕರ್ಮಿಯಾಗಲಿ, ಕಾರ್ಮಿಕನಾಗಲಿ ಈ ಸಂಘಗಳಿಂದ ಹೆಚ್ಚು ಉಪಯೋಗ ಪಡೆಯಲಾರ. ಆದ್ದರಿಂದ ಸಹಕಾರಿ ಸಂಘಗಳು ಅಥವಾ ಬ್ಯಾಂಕುಗಳು ವ್ಯವಸ್ಥಿತವಾಗಿ ಕೆಲಸ ನಿರ್ವಹಿಸಿದರೆ ಮಾತ್ರ ತಮ್ಮ ಉದ್ದೇಶ ಈಡೇರಿಸಬಲ್ಲವು. ಬಳಕೆದಾರರ, ಕಾರ್ಮಿಕರ ಮತ್ತು ಇತರ ಸಹಕಾರಿ ಸಂಘ ಸಂಸ್ಥೆಗಳಿಗೂ ಈ ಅಂಶ ಅನ್ವಯಿಸುತ್ತದೆ.

ಸಹಕಾರಿ ಸಂಘಗಳು ಭಾರತದಲ್ಲಿ ಅತ್ಯಂತ ಮಹತ್ವಪೂರ್ಣ ಸಂಸ್ಥೆಗಳಾಗಿವೆ. ಭಾರತ ಸರ್ಕಾರ ಸಹಕಾರಿ ಸಂಸ್ಥೆಗಳನ್ನು ದೇಶದ ಅಭಿವೃದ್ಧಿ ಕಾರ್ಯಕ್ಕೆ ನಿಯೋಜಿಸಿಕೊಳ್ಳುತ್ತಿದೆ. ಇವು ಬಂಡವಾಳಶಾಹಿಗಳ ವಿರುದ್ಧ ರಕ್ಷಣೆ ಒದಗಿಸುವ ಸಂಸ್ಥೆಗಳು ಮಾತ್ರವಾಗಿರದೆ ದೇಶದ ಅಭಿವೃದ್ಧಿ ಕಾರ್ಯದಲ್ಲಿ ದೊಡ್ಡ ಹೊರೆಹೊತ್ತಿವೆ. ಭಾರತದ ರಿಸರ್ವ್ ಬ್ಯಾಂಕ್ ರಾಜ್ಯಗಳ ಮೂಲಕ, ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ಗಳ ಮೂಲಕ, ಹಣಕಾಸಿನ ಕಾರ್ಪೊರೇಷನ್‌ಗಳ ಮೂಲಕ ವಿವಿಧ ಸಹಕಾರಿ ಬ್ಯಾಂಕುಗಳಿಗೆ ಮತ್ತು ಸಂಘಗಳಿಗೆ ಹಣಕಾಸಿನ ಪೂರೈಕೆ ಮಾಡು ತ್ತದೆ. ಈ ಬ್ಯಾಂಕುಗಳು ಮತ್ತು ಸಂಘಗಳು ತಮ್ಮ ಸದಸ್ಯರಿಗೆ ನೆರವು ಒದಗಿಸುತ್ತವೆ. ಉದಾ ಹರಣೆಗೆ ರೈತ ಜಮೀನನ್ನು ಹೊಂದಿದ್ದರೂ ಎತ್ತು, ಗಾಡಿ, ನೇಗಿಲು, ಗೊಬ್ಬರ ಇತ್ಯಾದಿಗಳಿಲ್ಲದೆ ವ್ಯವಸಾಯ ಸಾಗದು. ಇದಕ್ಕೆಲ್ಲ ಮತ್ತು ಆಗಾಗ ಜಮೀನು ದುರಸ್ತು ಮಾಡಿಸಲು ಹಣಬೇಕು. ಅದೇ ರೀತಿ ಒಬ್ಬ ಕುಶಲ ಕೆಲಸದವನು ತನ್ನ ವೃತ್ತಿಗೆ ಸಂಬಂಧಿಸಿದ ಉಪಕರಣಗಳಿಲ್ಲದೆ ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸಲಾರ. ಒಂದು ಕಾಲಕ್ಕೆ ಸರಳವೆನಿಸಿದ್ದ ಪಶುಪಾಲನೆ ಇಂದು ಮುಖ್ಯ ಜೀವನೋಪಾಯಗಳಲ್ಲೊಂದಾಗಿದೆ. ಅದನ್ನು ವೈಜ್ಞಾನಿಕವಾಗಿ, ವ್ಯವಸ್ಥಿತವಾಗಿ ಮಾಡಲು ಬಂಡವಾಳ ಬೇಕು. ಇಂತಹ ಕೆಲಸಗಳು ಹಿಂದೆ ಸರಾಗ ಜೀವನ ಮಾರ್ಗಗಳಾಗದೆ ಕೇವಲ ಹೊಟ್ಟೆಪಾಡಿನ ಕಸಬುಗಳಾಗಿದ್ದವು. ಆಗ ಬಹು ಜನರು ಶ್ರೀಮಂತರ, ಲೇವಾದೇವಿಗಾರರ ಸಾಲಗಾರರಾಗಿ ಬಡ್ಡಿ ಬಾಜಿ ತೆರುತ್ತಿದ್ದುದರಿಂದ ಅವರ ಶ್ರಮ ದುಡಿಮೆಯ ಹೆಚ್ಚು ಭಾಗ ಸೋರಿ ಹೋಗುತ್ತಿತ್ತು. ಪ್ರಜಾಪ್ರಭುತ್ವ ದೇಶದಲ್ಲಿ ಇಂತಹ ಶೋಷಣೆ ತಪ್ಪಿಸಿ ಎಲ್ಲರ ಹಿತ ಕಾಯು ವುದೇ ಈ ಸಹಕಾರ ಸಂಘಗಳ ಸ್ಥಾಪನೆಯ ಉದ್ದೇಶ. ವಿವಿಧ ಕಸಬು ಅಥವಾ ಉದ್ಯಮ ಗಳಿಗೆ ಪ್ರತ್ಯೇಕ ಸಹಕಾರ ಸಂಘಗಳಿದ್ದು ಅವು ಹಣ ಮತ್ತು ವಸ್ತುಗಳ ರೂಪದಲ್ಲಿ ಜನರಿಗೆ ಸಾಲ ನೀಡಿ ಜನರು ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ನೆರವಾಗುತ್ತವೆ. ಸರ್ಕಾರ ಈ ಸಹ ಕಾರಿ ಸಂಸ್ಥೆಗಳಿಗೆ ಪೂರ್ಣ ಬೆಂಬಲ ಕೊಟ್ಟು ನಿಂತಿದೆ. ಜಿಲ್ಲಾ ಬ್ಯಾಂಕುಗಳು ಮತ್ತು ತಾಲ್ಲೂಕು ಮಟ್ಟದ ಬ್ಯಾಂಕುಗಳು ಮತ್ತು ಸಂಘಗಳ ಮೂಲಕ ಜನರಿಗೆ ಅಗತ್ಯ ಸಾಲ ಮತ್ತು ವಸ್ತು ಗಳು ದೊರೆಯುವಂತೆ ನೋಡಿಕೊಳ್ಳುತ್ತದೆ. ಹಾಗೆಂಯೇ ರೈತರು ಬೆಳೆದ ದವಸ ಧಾನ್ಯಗಳನ್ನು

ಮತ್ತು ಕುಶಲ ಕರ್ಮಿಗಳು ತಯಾರಿಸಿದ ವಸ್ತುಗಳನ್ನು ಕೊಂಡು ಅವರಿಗೆ ಯೋಗ್ಯ ಬೆಲೆ ಕೊಡಿ ಮಾರಾಟ ವ್ಯವಸ್ಥೆ ಮಾಡುವ ಸಹಕಾರ ಸಂಘಗಳೂ ಇವೆ. ನಿಗದಿ ಬೆಲೆಯಲ್ಲಿ ಮಾರುಕಟ್ಟೆ ಸಮಿತಿಗಳು ಜನರಿಗೆ ಗೊಬ್ಬರ, ಉಪಕರಣಗಳು, ಮತ್ತಿತರ ವಸ್ತುಗಳನ್ನು ಮಾರಾಟ ಮಾಡುವ ವ್ಯವಸ್ಥೆಯೂ ಇದೆ.

ಕೈಗಾರಿಕೆಗಳ ಸ್ಥಾಪನೆಗೆ ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು ಸಾಲ ಮತ್ತಿತರ ರೂಪದಲ್ಲಿ ನೆರವು ನೀಡುತ್ತವೆ. ಸರ್ಕಾರದ ಇತರ ಇಲಾಖೆಗಳಿಂದ ತಾಂತ್ರಿಕ ನೆರವುಗಳನ್ನೊದಗಿಸುತ್ತವೆ. ನಗರಗಳಲ್ಲಿ ಹೆಚ್ಚಾಗಿರುವ ಬಳಕೆದಾರರ ಸಹಕಾರ ಸಂಘಗಳು ತಮ್ಮ ಸದಸ್ಯರಿಗಾಗಿ ಮತ್ತು ಸಾರ್ವಜನಿಕರಿಗಾಗಿ ಅನೇಕ ದಿನ ಬಳಕೆ ವಸ್ತುಗಳನ್ನು ಮಾರುವ ವ್ಯವಸ್ಥೆ ಮಾಡುತ್ತವೆ. ಸರ್ಕಾರವೂ ಈ ಸಂಘಗಳ ಮೂಲಕ ಸಕ್ಕರೆ, ಬಟ್ಟೆ ಮೊದಲಾದ ನಿಯಂತ್ರಿತ ವಸ್ತುಗಳನ್ನು ಜನರಿಗೆ ಒದಗಿಸುವ ಕ್ರಮಕೈಗೊಳ್ಳುತ್ತದೆ.

1952ರಿಂದ ಪ್ರತಿ ಬ್ಲಾಕ್ ಅಥವಾ ತಾಲ್ಲೂಕು ಮಟ್ಟದಲ್ಲಿ ಸಾಮುದಾಯಿಕ ಅಭಿವೃದ್ಧಿ ಯೋಜನೆ (Community Development Scheme) ಪ್ರಾರಂಭವಾಯಿತು. ಗ್ರಾಮಾಂತರ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿ ಸಾಧನೆಯೇ ಈ ಯೋಜನೆಯ ಪ್ರಮುಖ ಗುರಿ. ಈ ಯೋಜನೆಯಲ್ಲಿ ಸಹಕಾರಿ ಚಟುವಟಿಕೆಯ ವಿಸ್ತರಣೆಯೂ ಸೇರಿದೆ. ಅಲ್ಲಿಂದ ಸಹಕಾರಿ ಚಳವಳಿಯನ್ನು ಸಾರ್ವಜನಿಕರು ಮತ್ತು ಸರ್ಕಾರ ಈ ಎರಡು ಶಕ್ತಿಗಳೂ ಮುನ್ನಡೆಸುತ್ತಿವೆ. ಇದು ದೇಶದ ಪ್ರಗತಿಯಲ್ಲಿ ಸಹಕಾರದ ಮಹತ್ವ ಎಷ್ಟಿದೆ ಎಂಬುದಕ್ಕೆ ಸಾಕ್ಷಿ.

ಸಹಕಾರಿ ಸಂಘಗಳು ಎಷ್ಟೇ ದೊಡ್ಡ ಸಂಘಟನೆ ಪಡೆದಿದ್ದರೂ ಅವು ಬಹಳ ಸೂಕ್ಷ್ಮವಾಗಿರುತ್ತವೆ. ಇಲ್ಲಿ ಅವುಗಳ ಆಡಳಿತ ನಡೆಸುವವರು ಅವುಗಳ ಸೌಲಭ್ಯ ಪಡೆಯುವವರು, ಒಬ್ಬರೇ ಆಗಿರುವುದೇ ಅದಕ್ಕೆ ಕಾರಣ. ವಾಣಿಜ್ಯ ಬ್ಯಾಂಕುಗಳಾದರೆ, ಸರ್ಕಾರಿ ಇಲಾಖೆಗಳಾದರೆ ಅಲ್ಲಿ ಅದಕ್ಕೆ ಬೇಕಾದ ಸಿಬ್ಬಂದಿ ಇರುತ್ತದೆ; ಜವಾಬ್ದಾರಿ ಅಧಿಕಾರಿಗಳಿರುತ್ತಾರೆ. ಅಲ್ಲಿನ ಹಿತಕಾಯುವ ಹೊಣೆ ಅವರ ಮೇಲೆ ಬಿದ್ದಿರುತ್ತದೆ. ಆದರೆ ಸಹಕಾರ ಸಂಘಗಳನ್ನು ನಡೆಸುವವರು ಖಾಸಗಿ ವ್ಯಕ್ತಿಗಳು, ಸಂಘವಾಗಲಿ ಸರಕಾರವಾಗಲಿ ಇವರ ಮೇಲೆ ನೇರ ಹಿಡಿತ ಹೊಂದಿರುವುದಿಲ್ಲ. ಸಂಘದ ಅಥವಾ ಬ್ಯಾಂಕಿನ ಸದಸ್ಯರು ತಮ್ಮಲ್ಲೇ ಕೆಲವರಿಗೆ ಅದರ ಕಾರ್ಯನಿರ್ವಹಣಾ ಜವಾಬ್ದಾರಿ ವಹಿಸಿರುತ್ತಾರೆ. ಸದಸ್ಯರು ನಂಬಿಕೆ ಇಟ್ಟು ವಹಿಸಿದ ಸಾರ್ವಜನಿಕ ಕಾರ್ಯವನ್ನು ಪ್ರಾಮಾಣಿಕವಾಗಿ, ನಿಸ್ವಾರ್ಥವಾಗಿ, ದಕ್ಷವಾಗಿ ನಡೆಸದಿದ್ದರೆ ಅದು ಅವರಿಗೆ ದ್ರೋಹಬಗೆದಂತಾಗುತ್ತದೆ. ಇದರಿಂದ ಸಾರ್ವಜನಿಕ ಅಭಿವೃದ್ಧಿಗೆ ಹಾನಿ ಎಸಗಿದಂತಾಗುತ್ತದೆ. ಸಹಕಾರಿ ಕ್ಷೇತ್ರ ಗೋಮಾಳವಿದ್ದಂತೆ. ಅಲ್ಲಿ ಊರ ಜಾನುವಾರುಗಳು ನೆಮ್ಮದಿಯಿಂದ ಕೂಡಿಮೇಯಲು ಅವಕಾಶವಿರಬೇಕು. ಕೆಲವೊಮ್ಮೆ ಈ ಗೋಮಾಳದಲ್ಲಿ ಗೂಳಿಗಳು ಸೇರಿಕೊಂಡು ಇತರ ದನಗಳನ್ನು ಮೇಯದಂತೆ ಮಾಡಿ ಓಡಿಸುವ ಪರಿಸ್ಥಿತಿ ಮೂಡುವುದುಂಟು. ಹಾಗೆಯೇ ಸಹಕಾರಿ ಕ್ಷೇತ್ರದಲ್ಲಿ ಕೆಲವರು ಅಧಿಪತಿಗಳಂತೆ ವರ್ತಿಸುವುದುಂಟು. ಇದರಿಂದ ಸಹಕಾರಿ ಸಂಘಗಳು ಕೆಲವರ ಸ್ವಾಮ್ಯಕ್ಕೆ ಒಳಪಡುತ್ತವೆ. ಅವರು ಹಣದ ಪ್ರಭಾವದಿಂದ ಗುಂಪುಗಾರಿಕೆಯ ಪ್ರಭಾವದಿಂದ ಸಂಘದ ಅಧಿಕಾರ ಸೂತ್ರ ಹಿಡಿಯುತ್ತಾರೆ. ಈ ಪರಿಸ್ಥಿತಿ ಸಹಕಾರಿ ಸಂಘದಲ್ಲಿ ಹಣ ದುರುಪಯೋಗವಾಗುವ ಇಲ್ಲವೆ ಸಂಘದ ಸಂಪನ್ಮೂಲ ಕೆಲವರಿಗೇ ಮೀಸಲಾಗುವುದಕ್ಕೆ ಅವಕಾಶಕೊಡುತ್ತದೆ.

ಸಹಕಾರಿ ಸಂಘಗಳು ಯಾವುದೇ ರೀತಿಯಿಂದ ಕುಂಠಿತವಾದರೆ ಅದು ಸಂಘದ ಅಭಿವೃದ್ಧಿಗೆ ಹಾನಿಕರವಾಗುವುದಲ್ಲದೆ ಸಮಾಜದ ನೈತಿಕ ಮಟ್ಟವನ್ನು ಕುಂದಿಸುತ್ತದೆ. ವಿಶ್ವ

ಯಿಲ್ಲದ ಅಥವಾ ಮುಗ್ಧ ಹಳ್ಳಿಗರನ್ನು ಸಂಘಗಳ ಅಥವಾ ಬ್ಯಾಂಕುಗಳ ಅಧಿಕಾರ ವರ್ಗದವರು ಇಲ್ಲವೆ ಸಿಬ್ಬಂದಿ ವರ್ಗದವರು ಮೋಸಗೊಳಿಸಿರುವ ಪ್ರಕರಣಗಳು ಕೇಳಿಬರುತ್ತವೆ. ಸಾಲಗಾರರು ಸಾಲವನ್ನು ಮರು ಪಾವತಿ ಮಾಡಿದಾಗ ಅವರಿಗೆ ಸೂಕ್ತ ರಸೀದಿ ಕೊಡದೆ ಕೊನೆಗೆ ಎರಡನೆಯ ಬಾರಿ ಅವರು ಸಾಲ ಕಟ್ಟಬೇಕಾದ ಪರಿಸ್ಥಿತಿ ತರಬಹುದು. ಹಾಗೆಯೇ ಸಾಲಗಾರನಿಗೆ ಕಡಿಮೆ ಹಣಕೊಟ್ಟು ಹೆಚ್ಚು ಮೊತ್ತಕ್ಕೆ ಸಹಿಹಾಕಿಸಿಕೊಂಡು ಅವನು ಮರುಪಾವತಿ ಮಾಡುವಾಗ ಪೇಚಿಗೆ ಸಿಲುಕಿಸಬಹುದು. ತಿಳಿದ ಜನ ಕಾನೂನುಗಳ ನಿರ್ಬಂಧದಿಂದ ತಪ್ಪಿಸಿಕೊಂಡು ಬಡವರನ್ನು, ಮುಗ್ಧರನ್ನೂ ಸಿಕ್ಕಿಸುತ್ತಾರೆ. ಇದು ಕೇವಲ ಒಬ್ಬೊಬ್ಬ ಸದಸ್ಯನಿಗೆ ಮಾಡಿದ ದ್ರೋಹವಾಗದೆ ನಮ್ಮ ದೇಶದ ಜನತೆಯ ಪ್ರಾಮಾಣಿಕತೆಗೆ, ನಂಬಿಕೆಗೆ ಮಾಡಿದ ದ್ರೋಹವಾಗುತ್ತದೆ.

ಕರ್ನಾಟಕ ಸರ್ಕಾರ ಇತ್ತೀಚೆಗೆ ಸಹಕಾರ ಸಂಘಗಳ ಸುಧಾರಣೆಗಾಗಿ ಸಹಕಾರಿ ಕಾನೂನಿಗೆ ಅನೇಕ ತಿದ್ದುಪಡಿಗಳನ್ನು ತಂದಿದೆ. ಸಹಕಾರಿ ಸಂಘಸಂಸ್ಥೆಗಳು ಕೆಲವರ ಸ್ವಜನಾಸಕ್ತಿಗೆ ಒಳಗಾಗದಂತೆ ತಡೆಯಲು ಕಾನೂನು ಮಾಡಿದೆ. ದುರುಪಯೋಗ ತಡೆಯಲು ಕಾನೂನುಗಳಿದ್ದರೂ ಸದಸ್ಯರ ಜಾಗೃತಿ ತುಂಬಾ ಅಗತ್ಯವಾಗುತ್ತದೆ. ಸದಸ್ಯರು ತಮ್ಮ ಹಕ್ಕುಬಾಧ್ಯತೆಗಳನ್ನು ಅರಿತುಕೊಂಡು ನಡೆಯುವುದು ಅಪೇಕ್ಷಣೀಯ. ಅನೇಕವೇಳೆ ಸಾಲ ಪಡೆದವರು ಸೂಕ್ತ ಕಾಲದಲ್ಲಿ ಸಾಲ ಹಿಂದಿರುಗಿಸದೆ ಸಹಕಾರ ಸಂಘಗಳು ನೆನೆಗುದಿಗೆ ಬೀಳುವುದುಂಟು. ಇನ್ನು ಕೆಲವು ಸದಸ್ಯರು ಪಡೆದ ಸಾಲವನ್ನು ಸದುಪಯೋಗ ಮಾಡದೆ ಮರುಪಾವತಿ ಮಾಡಲು ಸಾಧ್ಯವಾಗದೇ ಹೋಗುವುದುಂಟು. ಯಾರೇ ಕರ್ತವ್ಯಚ್ಯುತರಾದರೂ ಸಂಘದ ಮತ್ತು ಸದಸ್ಯರ ಅಭಿವೃದ್ಧಿಗಳೆರಡಕ್ಕೂ ಕೆಡುಕಾಗುತ್ತದೆ. ಸಹಕಾರಿ ಸಂಘಗಳು ದಕ್ಷತೆಯಿಂದ ಕಾರ್ಯನಿರ್ವಹಿಸಿದರೆ ತನ್ನ ಸದಸ್ಯರಿಗೆ ಮತ್ತು ತನ್ಮೂಲಕ ದೇಶಕ್ಕೆ ಅಪಾರ ಸೇವೆಸಲ್ಲಿಸಿದಂತಾಗುತ್ತದೆ.

— ಸಹಕಾರಿ ಚಳವಳಿಯ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಸಲು ಪ್ರಚಾರ ಮತ್ತು ಶಿಕ್ಷಣದ ಅಗತ್ಯವಿದೆ. ಈ ನಿಟ್ಟಿನಲ್ಲಿ ಕೆಲವು ಸಂಸ್ಥೆಗಳು ಕಾರ್ಯನಿರತವಾಗಿವೆ. ಸಹಕಾರಿ ಚಳವಳಿಯನ್ನು ಬೆಳೆಸುವುದೇ ರಾಷ್ಟ್ರೀಯ ಮತ್ತು ರಾಜ್ಯಮಟ್ಟದಲ್ಲಿ ಸ್ಥಾಪಿತವಾಗಿರುವ ಸಹಕಾರಿ ಯೂನಿಯನ್‌ಗಳ ಮುಖ್ಯ ಕಾರ್ಯವಾಗಿದೆ. ಅವು ಸಹಕಾರದ ಬಗ್ಗೆ ಪ್ರಚಾರ ಭಾಷಣಗಳನ್ನು ಏರ್ಪಡಿಸುವುದು, ಸದಸ್ಯರಿಗೆ ತರಬೇತಿ ನೀಡುವುದು, ಸಾಹಿತ್ಯ ಪ್ರಕಟಿಸುವುದು ಮೊದಲಾದ ಕಾರ್ಯದಲ್ಲಿ ತೊಡಗಿವೆ. ಪ್ರತಿ ಜಿಲ್ಲೆಯಲ್ಲಿ ಒಂದೊಂದು ಸಹಕಾರಿ ಯೂನಿಯನ್ ಸ್ಥಾಪಿತವಾಗಿದೆ. ಅದು "ಸದಸ್ಯರ ಶಿಕ್ಷಣ ಕಾರ್ಯಕ್ರಮ" ನಡೆಸುತ್ತದೆ. ವಾರ್ತಾಚಿತ್ರಗಳನ್ನು ಪ್ರದರ್ಶಿಸುತ್ತದೆ. ಸಹಕಾರಿ ಗ್ರಂಥಾಲಯಗಳನ್ನು ಸ್ಥಾಪಿಸುವುದು, ಅಧ್ಯಯನ ಪ್ರವಾಸಗಳನ್ನು ಏರ್ಪಡಿಸುವುದು, ಸಹಕಾರಿ ಸಮ್ಮೇಳನಗಳನ್ನು ನಡೆಸುವುದು, ಸಹಕಾರಿ ಸಪ್ತಾಹಗಳನ್ನು ಆಚರಿಸುವುದು ಇತ್ಯಾದಿ ಕಾರ್ಯಗಳನ್ನೂ ಅದು ಕೈಗೊಳ್ಳುತ್ತದೆ. ಸಹಕಾರಿ ಸಂಘಗಳ ಮತ್ತು ಬ್ಯಾಂಕುಗಳ ಸಿಬ್ಬಂದಿ ವರ್ಗಕ್ಕೆ ಮತ್ತು ಮಂಡಳಿಯ ಸದಸ್ಯರಿಗೆ ಇದು ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡುತ್ತದೆ. ಇದರ ಜೊತೆಗೆ ರಾಜ್ಯಸರ್ಕಾರದ ಸಹಕಾರಿ ಇಲಾಖೆಯು ಮೂಲಕವೂ ಸಹಕಾರಿ ಚಳವಳಿಯ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳುತ್ತದೆ. ಕೆಲವು ವಿಶ್ವವಿದ್ಯಾನಿಲಯಗಳೂ ಸಹಕಾರದ ಬಗ್ಗೆ ಬೋಧನೆ ಪ್ರಾರಂಭಿಸಿವೆ.

ಸಹಕಾರ ಕ್ಷೇತ್ರ ರಾಷ್ಟ್ರಗಳ ಗಡಿ ದಾಟಿ ಅಂತರರಾಷ್ಟ್ರೀಯ ರಂಗವನ್ನೂ ಪ್ರವೇಶಿಸಿದೆ. 1895ರಲ್ಲಿ 'ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ' ಸಂಸ್ಥೆ ಸ್ಥಾಪನೆಯಾಯಿತು. ಅದರ ಕೇಂದ್ರ ಕಚೇರಿ ಲಂಡನ್ನಿನಲ್ಲಿದೆ. ಮೂರು ವರ್ಷಗಳಿಗೊಮ್ಮೆ ಅಂತರರಾಷ್ಟ್ರೀಯ ಸಮ್ಮೇಳನ ನಡೆಯುತ್ತದೆ. ಇದರ ಏಷ್ಯಾದ ಶಾಖೆಯ ಕೇಂದ್ರ ಸಂಸ್ಥೆ ನವದೆಹಲಿಯಲ್ಲಿ ಸ್ಥಾಪಿತವಾಗಿದೆ.

ವಿವಿಧ ಸಹಕಾರ ಸಂಘಗಳ ಫೆಡರೇಷನ್‌ಗಳು ರಚಿತವಾಗಿವೆ. ಇಂದು ಸಹಕಾರವು ಪ್ರಪಂಚದ ಪ್ರಮುಖ ಆರ್ಥಿಕ ಕಾರ್ಯಾಂಗಗಳಲ್ಲೊಂದೆನಿಸಿದೆ. ಸುದ್ದಿ, ಸಮಾಚಾರ, ತಾಂತ್ರಿಕ ಸಲಹೆಗಳು, ಸಂಶೋಧನೆ ಮತ್ತು ಪುಸ್ತಕ ಪ್ರಕಟಣೆಗಳ ರಂಗದಲ್ಲಿ ಅಂತರರಾಷ್ಟ್ರೀಯ ಸಹಕಾರ ದೊರೆಯುತ್ತಿದೆ.

ಕರ್ನಾಟಕ ಸರ್ಕಾರ ಸಹಕಾರಿ ಕ್ಷೇತ್ರವನ್ನು ಪರಿಣಾಮಕಾರಿಯಾಗಿ ದೇಶದ ಅಭಿವೃದ್ಧಿಯಲ್ಲಿ ತೊಡಗಿಸಲು ಹಲವು ಕ್ರಮಗಳನ್ನು ಕೈಗೊಂಡಿದೆ. ಸಣ್ಣ ಪ್ರಮಾಣದ ಗ್ರಾಮೀಣ ಸಹಕಾರ ಸಂಸ್ಥೆಗಳನ್ನು ಒಂದುಗೂಡಿಸುವ ಮೂಲಕ ಅವುಗಳ ಕಾರ್ಯನಿರ್ವಹಣೆ ಹೆಚ್ಚು ಸಂಘಟಿತವಾಗಿಯೂ ವ್ಯವಸ್ಥಿತವಾಗಿಯೂ ನಡೆಯುವಂತೆ ಮಾಡಿದೆ. ಸಹಕಾರಿ ಸಂಸ್ಥೆಗಳು ಮತ್ತು ಬ್ಯಾಂಕ್‌ಗಳಲ್ಲಿ ನಾಮಕರಣ ಸದಸ್ಯರನ್ನು ನೇಮಿಸುವ ಮೂಲಕ ಸಹಕಾರಿ ಕ್ಷೇತ್ರದಲ್ಲಿ ಕೆಲವರು ಸ್ಥಾಪಿಸಿದ್ದ ಯಜಮಾನ್ಯವನ್ನು ತೊಡೆದು ಹಾಕಿದೆ. ಸಂಸ್ಥೆಗಳ ಅಧ್ಯಕ್ಷಸ್ಥಾನ ಒಬ್ಬರೇ ಹೊಂದಿರುವ ಬಗ್ಗೆ ಕಾಲಮಿತಿ ಹಾಕುವ ಮೂಲಕ ಸಂಸ್ಥೆಗಳ ನಿರ್ವಹಣೆಗೆ ಹೆಚ್ಚು ಜನರಿಗೆ ಅವಕಾಶ ಕಲ್ಪಿಸಿದೆ. ಇತ್ತೀಚಿನವರೆಗೂ ಹರಿಜನ ಗಿರಿಜನರು, ಬಡವರು, ದುರ್ಬಲರು, ಮತ್ತು ಹಿಂದುಳಿದ ವರ್ಗಗಳ ಗಣನೀಯ ಭಾಗಗಳವರೆಗೂ ಸಹಕಾರ ಸಂಘಗಳ ಸೇವೆ ಮುಟ್ಟಿರಲಿಲ್ಲ. ಈ ವರ್ಗದ ಜನರ ಅಭಿವೃದ್ಧಿಗಾಗಿ ಇಂದು ಹಾಕಿಕೊಳ್ಳಲಾಗಿರುವ ವ್ಯಾಪಕ ಯೋಜನೆಗಳಲ್ಲಿ ಸಹಕಾರ ಸಂಸ್ಥೆಗಳನ್ನು ತೊಡಗಿಸುವ ವ್ಯಥ ಪ್ರಯತ್ನವೂ ರಾಜ್ಯ ಸರ್ಕಾರದಿಂದ ನಡೆದಿದೆ. ಆದರೆ ಈ ನಿಟ್ಟಿನಲ್ಲಿ ಸಾಗಬೇಕಾದ ಹಾದಿ ಸಾಕಷ್ಟಿದೆ. ಇವರ ಯಶಸ್ಸಿಗೆ ಜನತೆಯ ಉತ್ಸಾಹವೂ ಅತ್ಯಗತ್ಯ.

ಸಹಕಾರಿ ಚಟುವಟಿಕೆ ದೇಶದ ಅಭಿವೃದ್ಧಿಯ ಸೋಪಾನ, ಅದು ಜನಜೀವನದಲ್ಲಿ ಹಾಸುಹೊಕ್ಕಾಗಿ ವ್ಯಾಪಿಸಿದಷ್ಟು ಅದರಿಂದ ಜನತೆಯ ಕಲ್ಯಾಣ ಸಾಧ್ಯ. ಸಹಕಾರಿ ವಿಧಾನ ಬಂಡವಾಳಶಾಹಿಯ ಶೋಷಣೆ ಮತ್ತು ಕಮ್ಯೂನಿಸಂನ ಏಕಸ್ವಾಮ್ಯ—ಇವೆರಡಕ್ಕೂ ಹೊರತಾದ ಸುವರ್ಣ ಮಾಧ್ಯಮ. ಇಂತಹ ಉಪಯುಕ್ತ ಸಹಕಾರಿ ಸಂಸ್ಥೆಗಳ ಏಳಿಗೆ ಅಡಗಿರುವುದು ಸಹಕಾರಿ ಚಳವಳಿಯ ಮತ್ತು ತತ್ವಗಳ ಮಹತ್ವವನ್ನು ಅರಿತು ನಡೆಯುವುದರಲ್ಲಿ. ಸಹಕಾರಿ ಸಂಸ್ಥೆಗಳು ಸ್ವಾರ್ಥಸಾಧಕರ ಕಾರಾಸ್ಥಾನವಾಗದೆ, ರಾಜಕೀಯದ ಅಗ್ನಿಕುಂಡವಾಗದೆ, ಸೇವಾ ನಿಷ್ಠೆಯಿಲ್ಲದವರ ಸುಪ್ಪತ್ತಿಗೆಯಾಗದೆ: ಅಸಹಾಯಕರ ಆಶ್ರಯಸ್ಥಾನವಾಗಿ ದುರ್ಬಲರ ದೇಗುಲವಾಗಿ, ಸೇವಾನಿರತರ ಕಾರ್ಯಶಾಲೆಯಾದರೆ ಮಾತ್ರ ಜನತೆಗೆ, ನಾಡಿಗೆ ಅಷ್ಟರಮಟ್ಟಿಗೆ ಅವುಗಳ ಉಪಯೋಗ ಹೆಚ್ಚುತ್ತದೆ.

ಅಡಿಟಿಪ್ಪಣಿ

1 ಕೆ. ಎಸ್. ಕೇಶವಮೂರ್ತಿ : ಸಹಕಾರ ಪು. ೫, ಮೈಸೂರು, 1975

2 ಅದೇ. ಪು ೮–೯.

3 ಕೆ. ಎಸ್. ಕೇಶವಮೂರ್ತಿ : ಸಹಕಾರ, ಪುಟ 150, ಮೈಸೂರು, 1975.

4. ಕರ್ನಾಟಕ ರಾಜ್ಯದಲ್ಲಿ ಸಹಕಾರ ಚಳವಳಿಯ ಸಾಧನೆ, ಪು 29–32. ಕರ್ನಾಟಕ ರಾಜ್ಯ ಸಹಕಾರಿ ಯೂನಿಯನ್, 1977.

5. Karnataka State Gazeteer-Shimoga District p. 247 1975.

ಬಾ. ರಾ. ಗೋಪಾಲ್

ಚಿಂತನ-೮

೧

ಬಗೆದಪ್ಪೆರ್ನೆ ಕೊಟ್ಟ ಕೊಣ್ಡ ಮನೆಯುಮಮುೞಿಯಲ್

ನಮ್ಮ ದೇಶದಲ್ಲಿ ಸ್ತ್ರೀಯನ್ನು ವಿಶೇಷವಾದ ಗೌರವದಿಂದ ಕಾಣಲಾಗುತ್ತದೆ. ನಾಡಿನ ಸಂಸ್ಕೃತಿಯನ್ನು ರಕ್ಷಿಸುವುದರಲ್ಲಿ, ಪ್ರಜೆಗಳನ್ನು ಸುಸಂಸ್ಕೃತರಾಗಿಸುವಲ್ಲಿ ಆಕೆಯದು ವಿಶಿಷ್ಟ ಪಾತ್ರ. ಸಮಾಜದಲ್ಲಿ ಆಕೆಯದು ಅತಿ ಜವಾಬ್ದಾರಿಯಾದ ಸ್ಥಾನ.

11ನೆಯ ಶತಮಾನದ ಮಧ್ಯಭಾಗದಲ್ಲಿ ಮೈಸೂರು ಜಿಲ್ಲೆಯಲ್ಲಿ ನುಗುನಾಡೆಂಬ ಒಂದು ಆಡಳಿತದ ವಿಭಾಗವಿದ್ದಿತು. ಅದರ ಪ್ರಭು ರವಿಗ. ಆತನ ಮಗಳು ದೇಕಬ್ಬೆ. ನವಿಲೆನಾಡಿನ ಮುಖ್ಯಸ್ಥನಾದ ಪೆರ್ವ್ವಯಲ ಏಚನ ಪತ್ನಿ. ಚೋಳವಂಶದ ರಾಜೇಂದ್ರ ಇವರಿಗೆಲ್ಲಾ ಅಧಿಪ. ದಾಯಾದಿಗಳ ಜಗಳದಲ್ಲಿ ಒಬ್ಬನನ್ನು ಇರಿದು ಕೊಂದನೆಂಬ ಅಪಾದನೆಯ ಮೇಲೆ ಏಚ ತಲಕಾಡಿನಲ್ಲಿ ಮರಣದಂಡನೆಗೆ ಗುರಿಯಾದ. ಗಂಡನ ಈ ದುರಂತದ ಸುದ್ದಿ ಕೇಳಿದ ದೇಕಬ್ಬೆ ಕೊಂಡಕ್ಕೆ ಹಾರಿ ಪ್ರಾಣತ್ಯಾಗ ಮಾಡಿದಳು. ಮಹಾಸತಿಯಾದಳು. ಆ ಸಮಯದಲ್ಲಿ ಆಕೆಯ ತಾಯಿ ತಂದೆಗಳು ಬಂಧು ಬಾಂಧವರು ಆಕೆಯನ್ನು ತಡೆಯಲು ಯತ್ನಿಸಿದಾಗ ಆಕೆ "ನುಗುನಾಡಧಿಪತಿ ರವಿಗನ ಮಗಳಾಗಿಯುಮನ್ತೆ ನವಿಲೆನಾಡಧಿಪತಿಗಾಂ ನೆಗಳೆ ಸತಿಯಾಗಿ ಬಾಳ್ದುದು ಬಗೆವಪ್ಪೆರ್ನೆ ಕೊಟ್ಟ ಕೊಣ್ಡ ಮನೆಯುಮಮುೞಿಯಲ್" ಎಂದು ನುಡಿದು ಅವರನ್ನು ಸಂತೈಸಿ ದಾನಧರ್ಮಗಳನ್ನು ಮಾಡಿ ಮಹಾಸತಿಯಾದಳು. ಆಗ ಆಕೆ ಹೇಳಿದ ಮಾತುಗಳು ಚಿಕ್ಕದಾದರೂ ಚೊಕ್ಕವಾಗಿವೆ. 'ಬಗೆವಪ್ಪೆರ್ನೆ ಕೊಟ್ಟ ಕೊಣ್ಡ ಮನೆಯುಮಮುೞಿಯಲ್'. ಇದು ಭಾರತೀಯ ಸ್ತ್ರೀಯ ವೈಶಿಷ್ಟ್ಯ.

ಹೆಂಗಸರಿಗೆ ವಿವಾಹವಾಗುವವರೆವಿಗೂ ಹುಟ್ಟಿದ ತೌರುಮನೆ–ಕೊಟ್ಟಮನೆ. ನಂತರ ಅತ್ತೆ–ಮಾವಂದಿರ ಗಂಡನ, ಕೊಣ್ಡಮನೆ. ಆಕೆಯ ಜವಾಬ್ದಾರಿ ಹಿರಿದು. ತನ್ನವರಾಗಿದ್ದ ಎಲ್ಲರನ್ನೂ ತೊರೆದು ಹೊಸ ಸನ್ನಿವೇಶದಲ್ಲಿ ಎಲ್ಲರನ್ನೂ ತನ್ನವರಾಗಿ ಮಾಡಿಕೊಳ್ಳಬೇಕಾದ ಜವಾಬ್ದಾರಿ. ಇಂತಹ ಸಂದರ್ಭದಲ್ಲಿ ಒಂದು ಕಡೆ ತೌರುಮನೆಗೂ ಮತ್ತೊಂದು ಕಡೆ ಗಂಡನ ಮನೆಗೂ ಯಶಸ್ಸನ್ನು ತರಬೇಕು. ಆಕೆಯಿಂದ ಯಾರೊಬ್ಬರಿಗೂ ಅಪಕೀರ್ತಿಯುಂಟಾಗಬಾರದು.

ಸೌಂದರ್ಯ ಸ್ತ್ರೀಯರಿಗೆ ಪ್ರಕೃತಿ ನೀಡಿದ ವರ. ಆದರೆ ಅದು ಶಾಪವೂ ಆಗಬಹುದು. ದಾಂಪತ್ಯ ಮಧುರವಾಗಿರಬೇಕಾದಲ್ಲಿ ಪರಸ್ಪರ ಅನುರಾಗ ಮುಖ್ಯ. ಸ್ತ್ರೀ ಪತಿಗೆ ಮಾತ್ರ ಅನುರಾಗ ತೋರಿಸುತ್ತಾಳೆ. ಇದರೊಡನೆ ಆಕೆಯ ವ್ಯವಹಾರ ಅವನು ಆಕೆಯನ್ನು ಗೌರವ

ದಿಂದ ಕಾಣುವಂತಹುದಿರಬೇಕು. ಸಮಾಜದಲ್ಲಿ ಶಾಂತಿ ಸಮಾಧಾನಗಳಿರಬೇಕಾದಲ್ಲಿ ಅದು ಮೊದಲು ಪ್ರತಿಯೊಂದು ಸಂಸಾರದಲ್ಲೂ ಇರಬೇಕು. ಮನೆಗೆದ್ದು ಮಾರು ಗೆಲ್ಲು ಎಂಬುದೊಂದು ನಾಣ್ನುಡಿ. ನಾರಿ ಸುತ್ತಲಿನವರ ಮನವನ್ನು ಗೆಲ್ಲಬೇಕು. ಅದು ಆಕೆಯ ನಡವಳಿಕೆಯಿಂದಷ್ಟೆ ಸಾಧ್ಯ. ಆಕೆಯಲ್ಲಿ 'ತನ್ನಿನಿಯಂಗೆ ಚಿತ್ತದೊಳ್ಪಿರಿದನುರಾಗಮುಂ ಪಡೆವ ರೂಪು' ಇರಬೇಕು. ಇದು ಕೇವಲ ಬಾಹ್ಯಸೌಂದರ್ಯವಲ್ಲ. ಅಂತರ್ಯದ ಸೊಬಗಿಲ್ಲದಿದ್ದಲ್ಲಿ ಬಾಹ್ಯದ ರೂಪ ವ್ಯರ್ಥ. ಇತರರಿಗೆ ಸಂಬಂಧಿಸಿದಂತೆ 'ವಿನೇಯ ಜನಾಂತರಂಗದೊಳ್ನಿರುಪಮಭಕ್ತಿಯಂ ಪಡೆವ ಪೆಂಪು' ಇರಬೇಕು.

ಸುಪ್ರಸಿದ್ಧಳಾದ ರಾಣಿ ಶಾಂತಲದೇವಿಯ ತಾಯಿ ಜಿನಭಕ್ತೆ. ತಂದೆ ಶಿವಭಕ್ತ. ಕೈಹಿಡಿದ ಪತಿಯಾದರೋ ಶ್ರೀವೈಷ್ಣವ ಸಿದ್ಧಾಂತಕ್ಕೆ ಒಲಿದವ. ಸ್ವತಃ ಆಕೆ ತನ್ನಮಟ್ಟಿಗೆ ತಾಯಿಯಂತೆ ಜಿನಗನ್ಧೋದಕ ಪವಿತ್ರೀಕೃತೋತ್ತಮಾಂಗೆ. ಆದರೆ ಮಗಳಾಗಿ, ಪತ್ನಿಯಾಗಿ, ಅರಸಿಯಾಗಿ, ಆಕೆ ಎಲ್ಲರನ್ನೂ ಒಲಿಸಬೇಕಿತ್ತು. ಹಾಗೆ ಮಾಡಿ ಆಕೆ ಚತುಸ್ಸಮಯಸಮುದ್ಧರಣಕರಣಕಾರಣೆ ಪುಣ್ಯೋಪಾರ್ಜನಕರಣಕಾರಣೆ ಎಂದು ಖ್ಯಾತಿವೆತ್ತಳು. ಪತಿಯ ಅನುರಾಗವನ್ನು ಗೆಲಿದು ತಾನು ಕಟ್ಟಿಸಿದ ಬಸದಿಗೆ ಶಾಂತಲೆ ಅರಸನಿಂದ ಗ್ರಾಮಗಳನ್ನು ಪ್ರಾರ್ಥಿಸಿ ಪಡೆದು ದತ್ತಿಯಾಗಿ ಬಿಟ್ಟಳು. ಆದರ್ಶ ಸ್ತ್ರೀ, ಸಾಧ್ವೀಮಣಿ ಎನಿಸಿಕೊಂಡಳು. ಸಂಸ್ಕೃತಿಗೆ, ಧರ್ಮಕ್ಕೆ ಸ್ತ್ರೀ ಊರುಗೋಲಿದ್ದಂತೆ. ಆಕೆ ಧರ್ಮರತಳಾಗಿದ್ದಲ್ಲಿ ಆಕೆಯ ಮಕ್ಕಳು, ಕೈಹಿಡಿದ ಪತಿ ಧರ್ಮರತರಾಗಲು ಯತ್ನಿಸುತ್ತಾರೆ.

ಸ್ತ್ರೀ ತಾಯಿಯೂ ಹೌದು. ಮಕ್ಕಳಿಗೆ ಮೊದಲ ಗುರುವೂ ಹೌದು. ಸ್ಮಿತವದನೆಯಾಗಿ ಖಂಡಿತವಾದ ತತ್ವಗಳನ್ನು ಆಕೆ ಮಕ್ಕಳಿಗೆ ಹೇಳಬಲ್ಲಳು. "ನುಡಿವ ಸತ್ಯದೊಳು ನಡೆವುದುತ್ತಮ ಧರ್ಮದೊಳ್ ಒಳ್ಪಿನೇಳ್ಗೆಯಂ ಪಿಡಿಪಿಡಿಮುಂ ತುಟಂಬಿಡಿದಿರೆಂದಿರುಗಂ ಮೊಲೆಯುಣ್ಬ ಕಾಲದೊಳೆ ತಡೆಯದೆ ಕೇಳುದಾತ್ತಗುಣನಿಂ ತಿಳಿಯುಮ್ಮನೆಂದು ಗಲ್ಲಮಂ ಮಿಡಿಮಿಡಿದಂದು ತಾಯ್ ಕಲಿಸೆ ಕಲ್ತಸಖಂಡಿತಚಕ್ರಮಂ" ಎಂದು ಒಂದು ಶಾಸನದಲ್ಲಿ ಹೇಳಿದೆ. ಲಕ್ಷ್ಮೀಧರಾಮಾತ್ಯನ ತಾಯಿ ಎದೆಹಾಲು ಕುಡಿಸುವ ದಿನದಿಂದಲೂ 'ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸು' ಎಂದೆಲ್ಲ ಉಪದೇಶ ನೀಡುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯವೇ.

ಹೀಗೆ ಸ್ತ್ರೀ ಮಗಳಾಗಿ, ಪತ್ನಿಯಾಗಿ, ತಾಯಿಯಾಗಿ ಸಮಾಜದ ಸಂಸ್ಕೃತಿಯ ಆಧಾರ ಸ್ತಂಭದಂತಿದ್ದಾಳೆ. ಸಮಾಜದಲ್ಲಿ ಆಕೆಯ ಪಾತ್ರ ವಿಶಿಷ್ಟವಾಗಿದೆ.

೨

ಸನ್ಯಾಸ–ಸಮ್ಯಕ್‌ಜ್ಞಾನ

ಮನಸ್ಸನ್ನು ಶುದ್ಧಿಗೊಳಿಸಿ ಕ್ಷಣಿಕವಾದ ಲೌಕಿಕ ಸುಖಗಳಿಗೆ ಆಶಿಸದೆ ಶಾಶ್ವತ ಸಿದ್ಧಿಯನ್ನು ಪಡೆಯಲು ತಪಸ್ಸನ್ನು ಮಾಡಬೇಕು. ಜೈನರು ಸಲ್ಲೇಖನವೆಂಬ ಹೆಸರಿನ ಒಂದು ವ್ರತವನ್ನು ಆಚರಿಸುತ್ತಾರೆ. ಇದು ಬಾಳಿನ ಅಂತ್ಯದಲ್ಲಿ ಅವರು ಅನುಸರಿಸಬಹುದೆಂದು ಹೇಳಲಾದ ಒಂದು ವಿಧಾನ. ಅನೇಕ ಜೈನಋಷಿಗಳೂ ಜಿನಧರ್ಮೀಯರೂ ತನ್ಮೂಲಕ ಸಮಾಧಿಮರಣವನ್ನು ಹೊಂದಿದ್ದಾರೆ. ಇದು ಆದರ್ಶ ರೀತಿಯ ಮರಣ.

ರೂಪ, ಲೀಲೆ (ಸುಖ), ಸಂಪತ್ತು, ವೈಭವಗಳು ಸ್ಥಿರವಲ್ಲ. ಯಾರಿಗೂ ನಿಲ್ಲುವುದಿಲ್ಲ. 'ಸುರಚಾಪಂ ಬೋಲೆ, ವಿದ್ಯುಲ್ಲತೆಗಳ ತೆಱವೋಲ್ ಮಂಜುವೋಲ್ತೋರಿ ಬೇಗಂ ಪಿಱಿಗುಂ ಶ್ರೀ

ರೂಪಲೀಲಾಧನವಿಭವಮುಹಾಂಶಿಗಳ್ಗಿಲ್ಲವಾರ್ಗ್ಗಂ,' ಮಿಂಚಿನಂತೆ, ಕಾಮನ ಬಿಲ್ಲಿನಂತೆ, ಮಂಜಿನಂತೆ ಇವು ಬೇಗನೆ ಕರಗುತ್ತವೆ. ಇದು ಪರಮಾರ್ತ್ಥ ಎಂದು 7ನೆಯ ಶತಮಾನದ ಶ್ರವಣ ಬೆಳಗೊಳದ ಶಾಸನವೊಂದು ಸಾರಿ ಹೇಳುತ್ತದೆ. ಈ ಮೋಹಗಳನ್ನು ಅಗಲಿ ವಿಷಯಗಳನ್ನು ಇಂದ್ರಿಯಗಳನ್ನು ಕ್ರಮದಿಂದ ಆತ್ಮವಶಕ್ಕೆ ತರಬೇಕು. ಆ ಕ್ರಮ ತಪಸ್ಸು. ಇದು ಹಲವಾರು ವಿಧಗಳಲ್ಲಿ ಆಚರಿಸಬಹುದಾದದ್ದು. 'ನೆಱೆದಾದ ವ್ರತಶೀಲನೋಂಪಿಗುಣದಿಂ ಸ್ವಾಧ್ಯಾಯ ಸಂಪತ್ತಿನಿಂ' ಈ ತಪಧರ್ಮವನ್ನು ಸಾಧಿಸಬಹುದು. ಉತ್ತಮವಾದ ನಡತೆ, ಜ್ಞಾನಾರ್ಜನೆ ಮುಂತಾದುವುಗಳು ಸಾಧನಗಳು. ಇದರಿಂದ ಎಲ್ಲ ವಿಧದ ಸುಖಗಳು ಲಭಿಸುತ್ತವೆ. ಸರ್ವೇಶ್ವರಜ್ಞಾನಸಂಪ್ರಾಪ್ತವಾಗುತ್ತದೆ. ಮತ್ತಿನ್ನೇನು ಬೇಕು? 'ಸಂಪ್ರಾಪ್ಯ ಸರ್ವೇಶ್ವರಜ್ಞಾನಂ ನಾನ್ತಮಿದಂ ಕಿಮುತ್ರ ತಪಸಾ ಸರ್ವ್ವಂ ಸುಖಂ ಪ್ರಾಪ್ಯತೇ ಎನ್ನುತ್ತದೆ ಇನ್ನೊಂದು ಶಾಸನ.

ಇದರ ಆಚರಣೆ ಹೇಳಿದಷ್ಟು ಸುಲಭವಲ್ಲ. ದುರಿತಗಳೆಂಬ ವೃಕ್ಷವನ್ನು ಮೂಲೋತ್ಪಾಟನಗೊಳಿಸಬೇಕು. ಅಜ್ಞಾನವೆಂಬ ಶೈಲ ನಮ್ಮನ್ನು ಹೊದಿಕೆಯಂತೆ ಆವರಿಸಿರುವಾಗ ಅದನ್ನು ಕಿತ್ತೊಗೆಯಬೇಕು. ಮೂಢವಾದರೂ ಸ್ಥಿರವಾದ ಮಿಥ್ಯಾತ್ವವನ್ನು ಮೆಟ್ಟಬೇಕು. ಪಂಚೇಂದ್ರಿಯಗಳೆಂಬ ಗಂಧೇಭಗಳನ್ನು ಓಡಿಸಬೇಕು. 'ದುರಿತಾ ಭೂದ್ರುಹಮಾನ್ಕಿಳ್ತ್ತುಱಿ ಪೊದೆವಜ್ಞಾನಶೈಲೇಂದ್ರಮಾನ್ಪೋೞ್ ದುರಮಿಥ್ಯಾತ್ವಪ್ರಮೂಢಸ್ಥಿರತರನೃಪನಾನ್ಮೆಟ್ಟಿ ಗಂಧೇಭಮುಯ್ದಾನ್' ಚರಿತಶ್ರೀ ಎಂಬ ಜೈನ ಋಷಿ. ಈ ಸಾಧನೆ 'ಬಾಳಾಮೇಲ್‌ಶಿಖಿಮೇಲ್ ಸರ್ಪದ ಮಹಾದನ್ತಾಗ್ರದುಳ್ಸಲ್ವವೋಲ್'–ಕತ್ತಿಯ ಅಲುಗಿನಮೇಲೆ, ಜ್ವಲಿಸುತ್ತಿರುವ ಅಗ್ನಿಯಮೇಲೆ, ಉಗ್ರವಿಷವುಳ್ಳ ಸರ್ಪದ ದಂತದಮೇಲೆ–ನಡೆದಷ್ಟು ಕಷ್ಟ. ಇದನ್ನು ತಪಸ್ಸಿನಿಂದಲೇ ಸಾಧಿಸಬೇಕು. ಐಹಿಕ ಚಿಂತನೆಯನ್ನು ತ್ಯಜಿಸಿ ಪಾರಮಾರ್ಥಿಕ ಜ್ಞಾನ ಸಂಪಾದಿಸಿ ಅರ್ಹತ್ ಎನಿಸಿಕೊಳ್ಳುವುದು ಸುಲಭಸಾಧ್ಯವಲ್ಲ.

ಇಲ್ಲಿ ಯಾವ ದೈವಕೃಪೆಗೂ ಮೊರೆಹೋಗುವ ಪ್ರಶ್ನೆಯೇ ಇಲ್ಲ. ಕೇವಲ ಸ್ವಪ್ರಯತ್ನದಿಂದ ಪರಿಶ್ರಮದಿಂದ ಸಾಧಿಸಬೇಕಾದುದು ಇದು. ಪುರುಷಯತ್ನಕ್ಕೆ ಇಲ್ಲಿ ಪ್ರಾಮುಖ್ಯತೆ. ಸರ್ವಸ್ವವನ್ನು ತ್ಯಜಿಸಿ ಅತಿ ಸಂಯಮದಿಂದ ಬಾಳಬೇಕು. ಇದೊಂದು ಕಠೋರ ತಪಸ್ಸು. ಮಲಧಾರಿದೇವರೆಂಬ ಜೈನ ಮುನಿಗಳು ಇಂತಹ ತಪಸ್ಸನ್ನಾಚರಿಸಿದರು. ಮಱೆದುಮ ದೊಮ್ಮೆ ಲೌಕಿಕದ ವಾರ್ತೆಯನಾಡದ, ಕೆತ್ತಬಾಗಿಲಂ ತೆಱೆಯದ, ಭಾನುವಸ್ತಮಿತನಾಗಿರೆ ಪೋಗದ, ಮೆಯ್ಯನೊಮ್ಮೆಯುಂ ತುಱಿಸದ, ಕುಕ್ಕುಟಾಸನಕೆ ಸೋಲದ ಆ ಮುನಿ ಘೋರ ದುಶ್ಚರತಪಶ್ಚರಿತ್ರರಾಗಿದ್ದರು. ಸಹಜ ಶತ್ರುವಾದ ಮನ್ಮಥನೊಡನೆ ಹೋರಾಡಿದ ಈತನ ದೇಹ ಮಲದಿಂದ ವೃತ್ತಸರ್ಪದಂತೆ ಆಗಿತ್ತು. ಅದನ್ನು ಛೇದಿಸಲಾಗದ ಲತಾಂತಶರಾಂಗಿಯನ್ನು ಈತ ಪಳಂಚಿ ತೂಳ್ದು ಒಡಿಸಿದ. ಇದು ಸನ್ಯಾಸ ನಿಷ್ಠೆ. ಪರಮಾರ್ತ್ಥಸಾಧನಕ್ಕೆ ಸೋಪಾನ.

ಇಂತಹ ಪರಿಶ್ರಮದಿಂದ ಸಮ್ಯಕ್ ಜ್ಞಾನವನ್ನು ಪಡೆದವನಿಗೆ ಯಾವುದು ಕಷ್ಟ? ಏತರ ಭಯ? ಈ ಶರೀರದ ಮೇಲೆ ಏತರ ಮೋಹ ಇದ್ದೀತು? ತಸ್ಮಾತ್ ಕಿಂ ಗಹನಂ? ಕುತೋ ಭಯವಶಃ? ಕಾಮಾಸ್ತ್ರ ಪೀಡಾ ರತಿಃ? ಆರ್ಹಂತ್ಯಂ ವಿರತಮುಧು ನಾಸಸ್ತಮೋಹಾದಿರೂಪಂ ತತ್ಸಂಪ್ರಾಪ್ತೇ ಶಿಲ ತಪಸು ಸಮುಯಂ ಸರ್ವೇಶ್ವರ ಪಡೆದು ತ್ರಿಕಾಲ ಸುರಪತಿಸುಖೇ ಚಕ್ರಿಸೌಖ್ಯೇ ಚ ತೃಷ್ಣಾ. ಅನಂತಜ್ಞಾನದ ಆರ್ಹಂತ್ಯವನ್ನು ಪಡೆದು, ಅದರಲ್ಲಿಯೇ ಮನಸ್ಸನ್ನು ನಿಲಿಸಿಕೊಳಿಸಿದಾಗ ಇಂದ್ರಪದವಿಯ ಸುಖ, ಚಕ್ರವರ್ತಿಯ ಸೌಖ್ಯಗಳಿಗಾಗಿ ಹಾತೊರೆಯುವಿಕೆ ಇಲ್ಲವಾಗುತ್ತದೆ. ಅಜ್ಞಾನಿಯು ಬಾಹ್ಯದ ರಾಗದ್ವೇಷಗಳಿಂದ ಕಲಕಿದ ಮನಸ್ಸುಳ್ಳವನಾಗುತ್ತಾನೆ. ಆದರೆ ಜ್ಞಾನಿ ಅದರಿಂದ ಮುಕ್ತನಾಗಿ ಸದಾ ಸಾಧನೆಯಲ್ಲಿಯೇ ಮುಳುಗಿರುತ್ತಾನೆ.

ಅಜಾನನ್ನಾತ್ಮಾನಂ ಸಕಳವಿಷಯಜ್ಞಾನವಪುಷಂ
ಸದಾ ಶಾನ್ತಂ ಸ್ವಾನ್ತಃಕಿರಣಮಪಿ ತತ್ಸಾಧನತಯಾ
ಬಹೀರಾಗದ್ವೇಷ್ಯೈಃ ಕಲುಷಿತಮನಾಃ ಕೋಽಪಿಯತತಾಂ
ಕಥಜ್ಞಾನನ್ನೇಸಂ ಕ್ಷಣಮಪಿ ತತೋಽನ್ಯತ್ರ ಯತತೇ ॥

೩

ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವ ಪದ್ಧತಿ ಭಾರತಕ್ಕೆ ಹೊಸದೇನಲ್ಲ. ಅದರಲ್ಲೂ ಸ್ಥಳೀಯ ಆಡಳಿತ ಬಹುಮಟ್ಟಿಗೆ ಪ್ರಜಾಭಿಪ್ರಾಯದ ತಳಹದಿಯಮೇಲೆ ರೂಪಿತವಾಗಿತ್ತು. ಆರ್ಯರ ಕಾಲದಲ್ಲಿ ಸಭಾ–ಸಮಿತಿಗಳಿದ್ದದ್ದು ಎಲ್ಲರಿಗೂ ತಿಳಿದ ವಿಷಯವೇ. ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಸ್ಥಳೀಯ ಆಡಳಿತಕ್ಕೆ ಸಂಬಂಧಿಸಿದಂತೆ ಇಂತಹ ಸಭೆಗಳಿದ್ದುವು. ಅಗ್ರಹಾರಗಳಿಗೆ ಮಹಾಜನರು ಮುಖ್ಯರಾಗಿದ್ದರು. ಇತರ ಗ್ರಾಮಗಳಲ್ಲಿ ಪ್ರಜೆಗಳು, ಗಾವುಂಡುಗಳು, ಪ್ರಭುಮುಖ್ಯರು ಕೂಡಿದ ಆಡಳಿತ ಸಭೆಗಳಿದ್ದು, ಗ್ರಾಮದ ಹಿತರಕ್ಷಣೆ ಅವರ ಜವಾಬ್ದಾರಿಯಾಗಿತ್ತು. ಈ ಸಭೆಗಳ ಸದಸ್ಯರು ಕಾಲಕಾಲಕ್ಕೆ ಚುನಾಯಿತರಾಗುತ್ತಿದ್ದರು.

ತಮಿಳುನಾಡಿನಲ್ಲಿ ದೊರೆತ ಅಪರೂಪವಾದ ಎರಡು ಶಾಸನಗಳಲ್ಲಿ ಇಂತಹ ಚುನಾವಣೆಗಳಿಗಾಗಿ ಉಮೇದುವಾರರಾಗಬಹುದಾದವರ ಅರ್ಹತೆಗಳು, ಚುನಾವಣೆಯ ಪದ್ಧತಿಗಳನ್ನು ಕುರಿತಾದ ವಿವರಗಳಿವೆ. ಸಾಮಾನ್ಯ ಆಡಳಿತಕ್ಕೆ ಸಂಬಂಧಿಸಿದಂತೆ ಸಂವತ್ಸರವಾರಿಯಂ ಅಂದರೆ ವಾರ್ಷಿಕಸಮಿತಿ, ಮತ್ತು ತೋಟ್ಟವಾರಿಯಂ (ತೋಟಸಮಿತಿ) ಮತ್ತು ಏರಿವಾರಿಯಂ (ಕೆರೆ ಸಮಿತಿ) ಎಂಬ ವಿಶಿಷ್ಟ ಸಮಿತಿಗಳಿಗೆ ಗ್ರಾಮದ 30 ಕುಟುಂಬಗಳಿಂದ ಒಬ್ಬೊಬ್ಬ ಪ್ರತಿನಿಧಿ ಆಯ್ಕೆಯಾಗುತ್ತಿದ್ದು, ಹೀಗೆ ಆಯ್ಕೆಯಾದವರಲ್ಲಿ 12 ಜನ ವಾರ್ಷಿಕ ಸಮಿತಿಗೂ, 12 ಜನ ತೋಟಸಮಿತಿಗೂ ಉಳಿದ 6 ಜನ ಕೆರೆಯ ಸಮಿತಿಗೂ ಸದಸ್ಯರಾಗುತ್ತಿದ್ದರು.

ಆಯ್ಕೆಯಾಗಬಯಸುವ ಸದಸ್ಯರ ಅರ್ಹತೆಗಳನ್ನು ಕುರಿತ ವಿವರಗಳು ಇಂದು ನಮ್ಮ ಪ್ರತಿನಿಧಿಸಭೆಗಳಿಗೆ ನಾವು ಆಯ್ಕೆಮಾಡುವ ಸದಸ್ಯರು ಎಂತಹವರಾಗಿರಬೇಕು ಎಂಬುದನ್ನು ನಾವೇ ಆಲೋಚಿಸುವಂತೆ ಮಾಡುತ್ತದೆ. ಮೊದಲನೆಯದು ವಯಸ್ಸು. ಅವರು ‘ಎೞುಬದು ಪ್ರಾಯತ್ತಿನ್ ಕೀೞ್ ಮುಪ್ಪತ್ತೈನ್ದು ಪ್ರಾಯತ್ತಿನ್ ಮೇಱ್ಪಟ್ಟಾರ್’–70ರೊಳಗೆ 35ರ ಮೇಲೆ ವಯಸ್ಸಾದವರಾಗಿರಬೇಕು ಎರಡನೆಯದು ಆಸ್ತಿ. ಅರೈಕ್ಕಾನಿಲಮೇ ಉಡೈಯನಾಗಿರಬೇಕು. ಕನಿಷ್ಠವಾದ ವಿದ್ಯಾರ್ಹತೆ–ಒಂದು ವೇದ ಅಥವಾ ನಾಲ್ಕು ಭಾಷ್ಯಗಳಲ್ಲಿ ಒಂದನ್ನು ವ್ಯಾಖ್ಯಾನಿಸುವ ಶಕ್ತಿ ಇದ್ದವನಾಗಿರಬೇಕು.

ಇವೆಲ್ಲಕ್ಕಿಂತಲೂ ಮುಖ್ಯವಾದುದು ಅರ್ಥಶೌಚನುಮ್ ಆತ್ಮಶೌಚನುಮ್ ಉಡೈಯರಾಗಿರಬೇಕು ಎಂಬ ನಿಬಂಧನೆ. ಅರ್ಥಶೌಚ ಆತ್ಮಶೌಚ ಎಂಬ ಮಾತುಗಳು ಗಮನಾರ್ಹ. ಅರ್ಥಶೌಚ ಎಂಬುದು ಆಡಳಿತದಲ್ಲಿರುವವರು ಧನವನ್ನು ಅರ್ಜಿಸುವುದರಲ್ಲಿ ಶುಚಿತ್ವವನ್ನು ಪಾಲಿಸಬೇಕು ಎಂಬುದನ್ನು ಸೂಚಿಸುತ್ತದೆ. ನ್ಯಾಯಮಾರ್ಗಗಳಿಂದಲೇ ಹಣವನ್ನು ಗಳಿಸಿರಬೇಕು. ಆತ್ಮಶೌಚ ಎಂಬುದು ಉತ್ತಮವಾದ ಗುಣಶೀಲಗಳನ್ನು ಹೊಂದಿರಬೇಕೆಂಬುದನ್ನು ಸೂಚಿಸುತ್ತದೆ. ಅಧಿಕಾರ ಸ್ಥಾನದಲ್ಲಿರುವವರೇ ದುರ್ಮಾರ್ಗಿಗಳಾಗಿದ್ದರೆ ಅವರ ಆಡಳಿತ ಸಮಾಶಯಗಳಿಂದ

ಕೂಡಿರುತ್ತದೆ ಎಂಬುವಾದರೂ ಹೇಗೆ? ಇಲ್ಲಿ ಇನ್ನೂ ಒಂದು ಮಾತನ್ನು ಹೇಳಿದೆ. ಹೀಗೆ ಸದಸ್ಯರಾಗಿರುವವರು ಹತ್ತಿರದ ಸಂಬಂಧಿಗಳು_ಸ್ವಂತ ಸೋದರ, ಮಾವ, ಭಾವಮೈದ, ಅಳಿಯ, ಮಗ ಮುಂತಾದವರು_ಆತನ ಸ್ಥಾನದಲ್ಲಿ ಮುಂದಿನ ಚುನಾವಣೆಗೆ ಉಮೇದುವಾರರಾಗಿ ನಿಲ್ಲಬಾರದು.

ಕೆಲವರು ಚುನಾವಣೆಗೆ ಅನರ್ಹರು, 'ಎಪ್ಪೇರ್‌ಪಟ್ಟವಾರಿಯಜ್ಗಳುಮ್ ಸೆಯ್ದು ಕಣಕ್ಕು ಕಾಟ್ಟಾದೇ ಇರುನ್ದಾರ್ಯೆಯುಮ್ ಅಗಮ್ಯಾಗಮನತ್ತಿಲುಮ್ ನಾಲುಮಹಾಪಾದಗತ್ತಿಲುಮ್ಮೆಬಿತ್ತು ಪಟ್ಟಾರ್ಯೆಯುಮ್ ಪರದ್ರವ್ಯಂ ಅಪಹರಿತ್ತಾನ್ಯೆಯುಂ' ಚುನಾವಣೆಗೆ ಉಮೇದುವಾರರನ್ನಾಗಿ ಆರಿಸಬಾರದು. ಒಮ್ಮೆ ಸಮಿತಿಗೆ ಸದಸ್ಯರಾದವರು ಆ ಸಮಿತಿಗೆ ಸಂಬಂಧಿಸಿದಂತೆ ತಮ್ಮಲ್ಲಿದ್ದ ಲೆಕ್ಕಪತ್ರಗಳನ್ನು ಒಪ್ಪಿಸದೆ ಹೋದಲ್ಲಿ, ವ್ಯಭಿಚಾರ ಮುಂತಾದ ಮಹಾಪಾತಕಗಳನ್ನು ಮಾಡಿದಲ್ಲಿ, ಪರರ ದ್ರವ್ಯವನ್ನು ಅಪಹರಿಸಿದಲ್ಲಿ, ಅಂತಹವರು ಸದಸ್ಯತ್ವಕ್ಕೆ ಅನರ್ಹರಾಗುತ್ತಾರೆ. ಲೆಕ್ಕಪತ್ರಗಳನ್ನಿರಿಸಿದ ವ್ಯಕ್ತಿ ಲೆಕ್ಕಪತ್ರಗಳ ಸಮಿತಿಗೆ ಲೆಕ್ಕವನ್ನೊಪ್ಪಿಸಿ ಅದು ಸರಿಯಾಗಿದೆ, ಆತನು ಶುದ್ಧ ಎಂದು ತೀರ್ಮಾನವಾದ ಮೇಲಷ್ಟೆ ಬೇರೆ ಲೆಕ್ಕಪತ್ರಗಳನ್ನಿಡಲು ಅರ್ಹನಾಗುತ್ತಾನೆ. ಚುನಾವಣೆಗೆ ಮತ್ತೊಮ್ಮೆ ಉಮೇದುವಾರನಾಗಲು ಯೋಗ್ಯನಾಗುತ್ತಾನೆ.

ದುಷ್ಕರ್ಮಿಗಳ, ಪಾತಕಿಗಳ ಸಹವಾಸ ಮಾಡಿದವರು, ಪ್ರಾಯಶ್ಚಿತ್ತ ಮಾಡಿಕೊಂಡ ಹೊರತು ಸದಸ್ಯರಾಗಲು ಅರ್ಹರಾಗುವುದಿಲ್ಲ. ಕತ್ತೆಯಮೇಲೆ ಸವಾರಿ ಮಾಡಿದಾತನನ್ನು, ಕೂಟದಾಖಲೆಗಳನ್ನು ಸೃಷ್ಟಿಸಿದಂತಹವನನ್ನು ಸಹ ಚುನಾವಣೆಯಿಂದ ನಿಷೇಧಿಸಬೇಕು. ಅಲ್ಲದೆ ಸದಸ್ಯರಾಗಿ ಕರ್ತವ್ಯಗಳನ್ನು ಪಾಲಿಸದಿದ್ದರೆ ಅದೊಂದು ಅಪರಾಧವೆಂದು ಭಾವಿಸಿ ಅಂತಹವರನ್ನು ಸದಸ್ಯತ್ವದಿಂದ ಕಿತ್ತುಹಾಕಬೇಕು ಎನ್ನುತ್ತದೆ ಈ ಶಾಸನಗಳು.

ಕರ್ನಾಟಕದಲ್ಲಿ ಇಂತಹ ಮಹಾಜನರನ್ನು ಯಮನಿಯಮಸ್ವಾಧ್ಯಾಯಧ್ಯಾನಧಾರಣ ಮೋನಾನುಷ್ಠಾನಪರಾಯಣರೆಂದು, ಯಜನಯಾಜನಅಧ್ಯಯನಅಧ್ಯಾಪನದಾನಪ್ರತಿಗ್ರಹಧರ್ಮ ಷಟ್ಕರ್ಮನಿರತರೆಂದು, ಶಿಷ್ಟಜನಾಭೀಷ್ಟತುಷ್ಟಿಪ್ರದಾನಸನ್ಮಾನಕಮಹೀಜಾತರೆಂದು ವರ್ಣಿಸಲಾಗಿದೆ.

ಪ್ರಜೆಗಳ ಹಿತಾಕಾಂಕ್ಷೆಗಾಗಿ ಶ್ರಮಿಸುವ ಇಂತಹವರು ಆದರ್ಶನಾಗರಿಕರಾಗಿದ್ದು ತಮ್ಮ ಗುರುತರ ಜವಾಬ್ದಾರಿಯನ್ನರಿತು ನ್ಯವಹರಿಸಬೇಕೇ ಹೊರತು ತಮಗೆ ಲಭಿಸಿದ ಅಧಿಕಾರದ ದುರುಪಯೋಗ ಮಾಡಿಕೊಂಡು, ಸ್ವಾರ್ಥಸಾಧಿಸುವುದು ಮಹಾಪರಾಧ ಎಂಬುದು ಈ ಶಾಸನಗಳ ಆಶಯ.

ಇಂದು ನಮಗೆ ಇಂತಹ ಪ್ರತಿನಿಧಿಗಳು ಅವಶ್ಯಕ, ನಾಡನ್ನು ಕಟ್ಟಲು, ರಕ್ಷಿಸಲು, ಶ್ರೇಯಸ್ಸಿಗೆ ಕೊಂಡೊಯ್ಯಲು ಇಂತಹ ನಿಬಂಧನೆಗಳನ್ನು ಹಾಕಿಕೊಳ್ಳುವುದು ಉತ್ತಮ.

೪

ದಾನ-ರಕ್ಷಣೆ

ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ದಾನ-ಧರ್ಮಾದಿಗಳನ್ನು ಮಾಡುವುದು ಪುಣ್ಯಕಾರ್ಯಗಳಲ್ಲೊಂದೆಂದು ಭಾವಿಸಿಕೊಂಡು ಬಂದಿದ್ದೇವೆ. ದೇವಸ್ಥಾನಗಳಿಗೆ, ಮಠಗಳಿಗೆ, ಬ್ರಾಹ್ಮಣರಿಗೆ ಭೂದಾನಗಳನ್ನು ಗೋದಾನಗಳನ್ನು ಮಾಡುವುದು ಸಾಂಪ್ರದಾಯಿಕವಾಗಿ ನಡೆದು ಬಂದ ಪದ್ಧತಿ. ದೇವಸ್ಥಾನಗಳು ಸಾಮಾಜಿಕ ಸಂಸ್ಥೆಗಳೂ ವಿದ್ಯಾಕೇಂದ್ರಗಳೂ ಆಗಿದ್ದುವು.

ಕಾಲಕ್ರಮೇಣ ಮಠಗಳು ಸಹ ಇಂತಹುದೇ ಹೊಣೆಗಾರಿಕೆಯನ್ನು ಹೊತ್ತವು. ಬ್ರಾಹ್ಮಣರು ವಾಸ್ತವಿಕವಾಗಿ ಅಧ್ಯಯನ–ಅಧ್ಯಾಪನಗಳಲ್ಲಿ ತೊಡಗಿರುವವರು. ಇಂತಹ ಸಂಸ್ಥೆಗಳ ಚಟುವಟಿಕೆಗಳ ಅವಶ್ಯಕವಾದ ಆರ್ಥಿಕ ಬೆಂಬಲ ಅವುಗಳಿಗೆ ದೊರೆತ ದಾನಗಳಿಂದಲೇ ಲಭಿಸುತ್ತಿತ್ತು. ಉಪಾಧ್ಯಾಯ ವೃತ್ತಿಯನ್ನು ಮುಖ್ಯ ಕಸುಬನ್ನಾಗಿ ಕೈಕೊಂಡ ಉಪಾಧ್ಯಾಯರು–ಬ್ರಾಹ್ಮಣರು–ಸಮಾಜದ ರಕ್ಷಣೆಗೆ ಒಳಗಾಗಿದ್ದರು. ಅವರ ಸಂರಕ್ಷಣಾರ್ಥವಾಗಿ ಅವರಿಗೆ ಭೂಮಿ ದಾನ ಮಾಡುವುದು ಪುಣ್ಯ ಕಾರ್ಯವೆಂದು ಭಾವಿಸಲಾಗಿತ್ತು. ಆದರಿಂದ ಮಹತ್ತರವಾದ ಪುಣ್ಯ ಲಭಿಸುತ್ತದೆ ಎಂಬುದೊಂದು ನಂಬಿಕೆ. ಶಾಸನಗಳಲ್ಲಿ ಇದಕ್ಕೆ ಸಂಬಂಧಿಸಿದ ಶ್ಲೋಕಗಳು ಅನೇಕವು ಕಂಡುಬಂದಿವೆ.

> ಅಶ್ವಮೇಧಸಹಸ್ರಾಣಿ ವಾಜಪೇಯಶತಾನಿಚ
> ಪೌಣ್ಡರೀಕಸಹಸ್ರಾಣಿ ಭೂಮಿದಾನಾಧಿಕಂ ಫಲಂ

ಭೂಮಿದಾನ ಮಾಡಿದರೆ ಸಹಸ್ರ ಅಶ್ವಮೇಧ ಪೌಣ್ಡರೀಕ ಯಾಗಗಳನ್ನೂ ನೂರು ವಾಜಪೇಯ ಯಾಗಗಳನ್ನೂ ಮಾಡಿದಷ್ಟು ಫಲ ಬರುತ್ತವೆ.

> ಆಯುಃಪುತ್ರಾ ಧನಂ ಸೌಖ್ಯ ಸೌಭಾಗ್ಯಂ ರಾಜ್ಯಮಕ್ಷಯಂ
> ಅಭಿಶ್ರೇಷ್ಠ್ಯಂ ಯಶಃಸ್ವರ್ಗಂ ಭೂಮಿದೋಃ ಲಭತೇ ಫಲಮ್

ಭೂಮಿದ:–ಭೂಮಿ ದಾನ ಮಾಡಿದವನು–ಆಯುಸ್ಸು, ಪುತ್ರರು, ಧನ, ಸೌಖ್ಯ, ಸೌಭಾಗ್ಯ· ಅಕ್ಷಯವಾದ ರಾಜ್ಯಗಳಿಗಿಂತಲು ಶ್ರೇಷ್ಠತಮವಾದ ಯಶಸ್ಸನ್ನು ಪಡೆಯುತ್ತಾನೆ.
ಇದು ಧರ್ಮಕಾರ್ಯ. ಪ್ರತಿಯೊಬ್ಬರೂ ಪಾಲಿಸಬೇಕಾದುದು.

> ಚಲಾ ಲಕ್ಷ್ಮೀಶ್ಚಲಾಃ ಪ್ರಾಣಾಶ್ಚಲಂ ಜೀವಿತಯೌವನಮ್
> ಚಲಾಚಲೇ ಹಿ ಸಂಸಾರೇ ಧರ್ಮ ಏಕೋ ಹಿ ನಿಶ್ಚಲಃ

ಲಕ್ಷ್ಮಿ, ಪ್ರಾಣ, ಜೀವನ, ಯೌವನ ಇವು ಯಾವುವೂ ಸ್ಥಿರವಲ್ಲ, ಧರ್ಮವೊಂದೇ ಸ್ಥಿರವಾದುದು,

> ಧರ್ಮಾತ್ ವಿವರ್ಧತೇ ರಾಜ್ಯಂ ಧರ್ಮಾತ್ ಕೀರ್ತಿಶ್ಚ ಶಾಶ್ವತೇ
> ಧರ್ಮಾತ್ ತೃಪ್ಯಂತಿ ಪಿತರೋಃ ಧರ್ಮಾತ್ ತುಷ್ಯಂತಿ ದೇವತಾಃ

ಧರ್ಮದಿಂದ ನಡೆದಾಗ ರಾಜ್ಯ ವರ್ಧಿಸುತ್ತದೆ, ಕೀರ್ತಿ ಶಾಶ್ವತವಾಗುತ್ತದೆ, ಪಿತೃಗಳು ತೃಪ್ತಿ ಹೊಂದುತ್ತಾರೆ. ದೇವತೆಗಳು ಸಂತೋಷಗೊಳ್ಳುತ್ತಾರೆ.

ವಾಲ್ಮೀಕಿ ರಾಮಾಯಣದಲ್ಲಿ ಶ್ರೀರಾಮ ವನವಾಸಕ್ಕೆ ಹೊರಟಾಗ ಕೌಸಲ್ಯೆ ಆತನಿಗೆ ಅದನ್ನೇ ಹೇಳುತ್ತಾಳೆ. ಧೈರ್ಯದಿಂದ ನಿಯಮದಿಂದ ನೀನು ಧರ್ಮವನ್ನು ಪಾಲಿಸಿದರೆ ಧರ್ಮ ನಿನ್ನನ್ನು ಕಾಪಾಡುತ್ತದೆ.

> ಯಂ ಪಾಲಯಸಿ ಧರ್ಮ್ಮಂ ತ್ವಂ ಧೃತ್ಯಾ ಚ ನಿಯಮೇನ ಚ
> ಸ ವೈ ರಾಘವಶಾರ್ದೂಲ ಧರ್ಮಸ್ತ್ವಾಂ ಅಭಿರಕ್ಷತು

ಎನ್ನುತ್ತಾಳೆ.

ಆದರೆ ಮಾನವ ದೌರ್ಬಲ್ಯವೊಂದಿದೆಯಲ್ಲ! ದಾನ ಧರ್ಮಾದಿಗಳನ್ನು ಮಾಡುವುದು ಸುಲಭ. ಆದರೆ ಅದನ್ನು ರಕ್ಷಿಸುವುದು ಅಷ್ಟು ಸುಲಭವಲ್ಲ. ಸ್ವಂ ದಾತುಂ ಸುಮಹಚ್ಛಕ್ಯಂ ದುಃಖಮನ್ಯಾರ್ಥಪಾಲನಂ. ಮಧ್ಯಪ್ರದೇಶದ ತಾರಾಚಂಡೀಗ್ರಾಮದಲ್ಲಿನ ಶಾಸನವೊಂದು ಕ್ರಿ.ಶ. 1169ನೆಯ ವರ್ಷದ ಸ್ವಾರಸ್ಯಕರ ಸನ್ನಿವೇಶವನ್ನು ವಿವರಿಸುತ್ತದೆ. ಕಲಹಂಡಿ ಗ್ರಾಮದ ವಿಪ್ರರು ಅಲ್ಲಿನ ಭೂಮಿ ತಮಗೆ ದಾನವಾಗಿ ಬಂದುದೆಂದು ತೋರಿಸುವ ಕೂಟ

ಶಾಸನವೊಂದನ್ನು. ಗಾಧಿನಗರ (ಕನೋಜ)ದ ಅಧಿಪನ ದಾಸನಾದ ದೇಉ ಎಂಬಾತನಿಗೆ ಲಂಚ ಕೊಟ್ಟು, ಸಿದ್ಧಗೊಳಿಸುತ್ತಾರೆ ಅವರ ಆಧಾರದ ಮೇಲೆ ಆ ಭೂಮಿಗಳ ತೆರಿಗೆಗಳನ್ನು ಕೊಡು ವುದಿಲ್ಲ. ವಿಚಾರಿಸಿದಾಗ ನಿಜಾಂಶ ತಿಳಿದುಬರುತ್ತದೆ. ಅರಸ ಅವರ ಈ ಕುಟಿಲತೆಯನ್ನು ತೋರಿಸಿ ಅವರಿಗೆ ಸೂಜಿ ಮೊನೆಯಷ್ಟು ಭೂಮಿಯೂ ಇಲ್ಲವೆಂದು ನಿರೂಪಿಸಿ ಅಲ್ಲಿನ ತೆರಿಗೆಗಳನ್ನು ತನ್ನ ವಂಶಜರು ವಸೂಲು ಮಾಡಿಕೊಳ್ಳಬಹುದೆಂದು ಶಾಸನ ಹಾಕಿಸಿದ.

ಸ್ವಸ್ತ್ಯುದ್ಗತ ಪ್ರಥಿತ ಕೀರ್ತಿಧರಃಸಮುಂತಾದ್ದೇವಃ ಪ್ರತಾಪಧವಲೋ ವದತಿ ಸ್ವವಂಶಂ।
ಗ್ರಾಮೇಷ್ವಮೀಷು ಕಲಹಂಡಿಸವಿಶಾಪಗೇಷು ವಿಪ್ರೈಃ ಸುವರ್ಣಹಲಜೈರಿಹ ಛದ್ಮನಾ ಯತ್ ॥
ಉತ್ಕೋಚ್ಯ ಗಾದಿನಗರಾಧಿಪ ದಾಸಿ ದೇಊ ಹಸ್ತಾತ್ ಕುತಾಮ್ರಮಿಮುಕಂ ಪ್ರಗೃಹೀತಮಾಸ್ತೇ।
ನಾತ್ರಪ್ರತೀತಿವಿಷಯಃ ಪರಿತೋವಿಧೇಯಃ ಶೂಚ್ಯಗ್ರಭೇದ್ಯಮಪಿಭೂಮಿತಲಂ ನ ತೇಷಾಂ॥

ಇವನ್ನು ಮನಗಂಡೇ ತತ್ಸಂಬಂಧವಾದ ಶಾಸನಗಳನ್ನು ಸಹ ನಿರೂಪಿಸಲಾಗಿದೆ. ನೀತಿ ನಿಯಮಾವಳಿಗಳನ್ನು ರೂಪಿಸಿಕೊಂಡ ಸಮಾಜ ಅಂತಹ ನಿಯಮಗಳ ಉಲ್ಲಂಘನೆಯನ್ನು ತಡೆಗಟ್ಟಲೂ ಸಹ ಕ್ರಮ ಕೈಗೊಳ್ಳುತ್ತದೆ. ಹಿಂದೆ ಜನರು ಧರ್ಮಭೀರುಗಳು, ಪಾಪಭೀರು ಗಳು ಆಗಿದ್ದ ಕಾರಣ ದೈವಶಾಪದ ಭಯ, ಪಾಪದ ಭಯ ಅವರನ್ನು ಅಂತಹ ಕೃತ್ಯಗಳನ್ನು ಮಾಡದಂತೆ ತಡೆಯುತ್ತಿದ್ದವು. ಇಂತಹ ದಾನಗಳನ್ನು ದುರುಪಯೋಗಪಡಿಸಿಕೊಳ್ಳಬಾರದು. ಅವು ದೇವಸ್ವಗಳು-ಘೋರವಿಷ.

ನ ವಿಷಂ ವಿಷಮಿತ್ಯಾಹುಃ ದೇವಸ್ವಂ ವಿಷಮುಚ್ಯತೇ. ವಿಷ ಅದನ್ನು ಪ್ರಾಶನ ಮಾಡಿದ ಒಬ್ಬನನ್ನು ಕೊಂದರೆ ದೇವಸ್ವ ಕುಲವನ್ನೇ ಹಾಳುಮಾಡುತ್ತದೆ.

ವಿಷಮೇಕಾಕಿನಂ ಹಂತಿ ದೇವಸ್ವಂ ಪುತ್ರಪೌತ್ರಿಕಮ್

ಅರಸರು ಇಂತಹ ದಾನಗಳನ್ನು ಮಾಡಿದಾಗ ತಮ್ಮ ವಂಶದ ಮುಂದಿನ ಅರಸರು, ಅಥವಾ ಬೇರಾವ ವಂಶದ ಅರಸರು, ಇವುಗಳನ್ನು ಕಾಪಾಡಿಕೊಂಡು ಬರಬೇಕು. ಅಂತಹವರ ಪಾದ ಗಳನ್ನು ತಮ್ಮ ಶಿರಸ್ಸಿನಲ್ಲಿ ಧರಿಸುತ್ತೇವೆ ಎಂದು ಪ್ರಾರ್ಥಿಸುತ್ತಿದ್ದರು.

ಮದ್ವಂಶಜಾಃ ಪರಮಹೀಪತಿ ವಂಶಜಾ ವಾ
ಪಾಪಾದಪೇತಮನಸಾ ಭುವಿಭೂಮಿಪಾಲಾಃ
ಯೇ ಪಾಲಯಂತಿ ಮಮಧರ್ಮಮಿದಂ ಸಮಸ್ತಂ
ತೇಷಾಂ ಮಯಾ ವಿರಚಿತೋರಂಜಲಿರೇಷ ಮೂರ್ಧ್ನಿ

೫

ಉಚ್ಚ-ನೀಚ

ಅಸ್ಪೃಶ್ಯರು ಎನಿಸಿಕೊಳ್ಳುವ ನಮ್ಮ ಸಮಾಜದ ಬಾಂಧವರ ಉದ್ಧಾರಕ್ಕಾಗಿ, ಏಳಿಗೆ ಗಾಗಿ ಶ್ರಮಿಸಿದ ನಮ್ಮ ದೇಶದ ಪ್ರಮುಖರಲ್ಲಿ ಗಾಂಧೀಜಿಯವರಿಗೆ ಅತ್ಯುನ್ನತವಾದ ಸ್ಥಾನ ವಿದೆ ಸಮಾಜದ ಒಂದು ವರ್ಗವನ್ನು ದೂರೀಕರಿಸುವ ದೃಷ್ಟಿ ಅನ್ಯಾಯವಾದದ್ದು; ಅರ್ಥ ಹೀನವಾದದ್ದು. ಇದರಿಂದ ನಾಡಿಗೇ ಕಳಂಕ ಎಂಬುದನ್ನು ಅವರು ಒತ್ತಿ ಹೇಳಿದರು. ಸಮಾಜದಲ್ಲಿ ಅಂತಹವರನ್ನು ಅವರು ಹರಿಜನರೆಂದು ಕರೆದರು. ತಮ್ಮ ಜೀವನವನ್ನು ಹರಿಜನೋದ್ಧಾರಕ್ಕಾಗಿ ಮುಡಿಪಿಟ್ಟ ಮಹಾತ್ಮರವರು.

ವಾಸ್ತವಿಕವಾಗಿ ಹರಿಜನ ಎಂಬ ಹೆಸರು ಹೊಸದೇನಲ್ಲ. ಬಹಳ ಹಿಂದೆಯೇ ಇಂತಹವರನ್ನು ತಿರುಕುಲತ್ತಾರ್ (ಶ್ರೇಷ್ಠವಾದ ಕುಲದವರು, ಶ್ರೀಕುಲದವರು) ಎಂದು ಕರೆಯಲಾಗಿದೆ. ಶ್ರೀವೈಷ್ಣವಧರ್ಮಾನುಯಾಯಿಗಳಾದ ಇವರು ಸಮಾಜದಿಂದ ಬಹಿಷ್ಕೃತರಾಗಿರಲಿಲ್ಲ. ಬದಲು ಸಮಾಜದ ಒಂದು ಅವಿಭಾಜ್ಯ ಅಂಗವಾಗಿದ್ದರು

ಶ್ರವಣಬೆಳಗೊಳದಲ್ಲಿ ವಿಜಯನಗರದ ಅರಸನಾದ ಮೊದಲನೆಯ ಬುಕ್ಕರಾಯನ ಶಾಸನವೊಂದಿದೆ. ಇದು ಸುಪ್ರಸಿದ್ಧವಾದ ಶಾಸನವೇ. ಜೈನರಿಗೂ ಭಕ್ತರೆನಿಸಿದ ಶ್ರೀವೈಷ್ಣವಧರ್ಮಾನುಯಾಯಿಗಳಿಗೂ 'ಸಂವಾದವಾದಲ್ಲಿ' ಅರಸನು ಅವರೀರ್ವರನ್ನೂ ಕರೆಸಿ ವೈಷ್ಣವರ ಕೈಯಲ್ಲಿ ಜೈನರ ಕೈ ಹಿಡಿದುಕೊಟ್ಟು ಎರಡು ದರ್ಶನಗಳಿಗೂ ಭೇದವಿಲ್ಲೆಂದು ಉಪದೇಶಿಸಿ ಅವರ ನಡುವೆ ಸಾಮರಸ್ಯವನ್ನೇರ್ಪಡಿಸಿದ. ಆ ಸಂದರ್ಭದಲ್ಲಿ ಅಲ್ಲಿ ನೆರೆದಿದ್ದ ಹದಿನೆಂಟುನಾಡ ಶ್ರೀವೈಷ್ಣವರಲ್ಲಿ ಪವಿತ್ರಕ್ಷೇತ್ರಗಳ ಆಚಾರ್ಯರೂ, ಸಮಯಿಗಳು, ಸಕಲ ಸಾತ್ವಿಕರೂ ನೈಷ್ಠಿಕರು, ತಿರುಪಣಿ ತಿರುವಡಿ ತಂಣ್ಣೀರವರು, ನಲ್ವತ್ತೆಂಟು ಜನಂಗಳು, ಸಾಮಂತ ಬೋವಕ್ಕಳು ತಿರಿಕುಲ ಜಾಂಬವಕುಲವೊಳಗಾದವರೂ ಸೇರಿದ್ದರು. ಇವರನ್ನೆಲ್ಲಾ ಒಟ್ಟಾಗಿ ಶ್ರೀವೈಷ್ಣವರೆಂದು ಕರೆದಿರುವುದು ಗಮನಾರ್ಹ. ತಿರುಪಣಿ ಎಂಬುದು ಸಾರ್ವಜನಿಕ ಕಾಮಗಾರಿಕೆಲಸ ಮಾಡುವವರಿಗೆ ಅನ್ವಯಿಸುವ ಮಾತು. ತಿರುವಡಿ ತಿರುವಡಿಗಳು ಸ್ವಾಮಿಯ ಪಾದಸೇವಕರು. ಹಾಗೆಯೇ ತಿರಿಕುಲ–ತಿರುಕುಲ ಎಂಬ ಮಾತು ಹರಿಜನ ಎಂಬ ಮಾತಿನ ತಮಿಳು ರೂಪ. ಜಾಂಬವ ಕುಲದವರು ಸಹ ಇಂತಹ ಈಗ ನಾವು ಹಿಂದುಳಿದವರೆಂದು ಹೇಳುವ. ಅನ್ಯಾಯವಾಗಿ ಅಸ್ಪೃಶ್ಯರೆಂದು ಹೇಳುವ ಜನ ಶಾಸನದಲ್ಲಿ ಇವರನ್ನೆಲ್ಲಾ ಶ್ರೀವೈಷ್ಣವರೆನ್ನಲಾಗಿದೆ. ದೈವ ಸನ್ನಿಧಿಯಲ್ಲಿ ಉಚ್ಚ–ನೀಚ ಎಂಬ ಭೇದಭಾವಗಳು ಎಂದಿಗೂ ಸಲ್ಲದು.

ಮೇಲುಕೋಟೆಯಂತಹ ಕ್ಷೇತ್ರದಲ್ಲಿ ಇವರಿಗೆ ದೇವಾಲಯ ಪ್ರವೇಶದ ಒಂದು ಹಕ್ಕನ್ನು ನೀಡಲಾಗಿದೆ ಎಂಬುದು ಗಮನಾರ್ಹ. ವೈರಮುಡಿ ದಿನದಂದು ಇವರದು ವಿಶಿಷ್ಟವಾದ ಪಾತ್ರ.

ಶ್ರೀ ರಾಮಾನುಜಾಚಾರ್ಯರಿಗೆ ಗೋಷ್ಠಿಪೂರ್ಣರು ತಿರುಮಂತ್ರೋಪದೇಶ ಮಾಡಿದಾಗ ಅದು ಗೋಪ್ಯವಾಗಿರತಕ್ಕದೆಂದೂ ಅದನ್ನು ಅನ್ಯರ ಸಮಕ್ಷಮದಲ್ಲಿ ಉಚ್ಚರಿಸಬಾರದೆಂದೂ ಆದೇಶಿಸಿದರು. ಆದರೆ ಮುಕ್ತಿ ಕೇವಲ ಕೆಲವರಿಗೆ ಮಾತ್ರ ಸೀಮಿತವಾದದ್ದೆಂಬುದನ್ನು ಒಪ್ಪದ ಆಚಾರ್ಯರು ತಿರುಗೋಷ್ಠಿಯೂರ್ ದೇವಾಲಯದ ಗೋಪುರವನ್ನು ಹತ್ತಿ ಅಲ್ಲಿನ ಎಲ್ಲ ಪ್ರಜೆಗಳನ್ನೂ ಬರಮಾಡಿಕೊಂಡು ಅವರಿಗೆ ದಿವ್ಯಮಂತ್ರದ ಮಹತ್ವವನ್ನು ನಿರೂಪಿಸಿ ಉಚ್ಚಸ್ವರದಿಂದ 'ಓಂನಮೋ ನಾರಾಯಣಾಯ' ಎಂಬ ಮಂತ್ರವನ್ನು ಅವರಿಗೆ ಉಪದೇಶಿಸಿದರು. ದಿಗ್ಭ್ರಾಂತರಾದ ಗೋಷ್ಠಿಪೂರ್ಣರು 'ಗೋಪ್ಯತೆಯನ್ನು ಕಾಪಾಡಿಕೊಳ್ಳದಿದ್ದ ಕಾರಣ ನೀನು ನರಕಕ್ಕೆ ಹೋಗುತ್ತೀಯೆಂಬುದನ್ನು ಮರೆತೆಯಾ' ಎಂದು ಕೇಳಿದಾಗ 'ಈ ಮಂತ್ರವನ್ನು ಕೇಳಿದ ಸಹಸ್ರಾರು ಜನರು ಮುಕ್ತಿಮಾರ್ಗಕ್ಕೈದುವುದಾದರೆ ನಾನೊಬ್ಬನು ನರಕಕ್ಕೆ ಹೋಗುವುದು ಸಂತೋಷದಾಯಕವೇ' ಎಂದು ಉತ್ತರಿಸಿದರು.

ದೈವಸಾಕ್ಷಾತ್ಕಾರಕ್ಕೆ ಜಾತಿಕುಲಗಳು ಎಂದೂ ಅಡ್ಡಿಯಿಲ್ಲ. ದೇವರಿಗೆ ಶರಣಾದ ಪ್ರತಿಯೊಬ್ಬನೂ ಪ್ರಪತ್ತಿಯನ್ನೈದುವನು ಎಂಬುದು ಆಚಾರ್ಯರ ಖಚಿತವಾದ ಅಭಿಪ್ರಾಯವಾಗಿತ್ತು. ರಾಮಾನುಜರ ಶಿಷ್ಯವರ್ಗದಲ್ಲೂ ಇಂತಹುದೇ ಮನೋಭಾವವನ್ನು ಕಾಣುತ್ತೇವೆ. ಮರನೇರ್‌ನಂಬಿ ಒಬ್ಬ ಅಸ್ಪೃಶ್ಯ. ತೀಕ್ಷ್ಣವಾದ ಖಾಯಿಲೆಯಿಂದ ಬಳಲುತ್ತಿದ್ದ ಈತನಿಗೆ ಪೆರಿಯನಂಬಿ ಪ್ರೀತಿ ವಾತ್ಸಲ್ಯಗಳಿಂದ ಶುಶ್ರೂಷೆ ಮಾಡಿದ. ಊರ ಹೊರವಲಯದಲ್ಲಿ ವಾಸಿಸುತ್ತಿದ್ದ ಮರನೇರನಿಗೆ ಆಹಾರವನ್ನು ದಿನವೂ ಒಯ್ದು ಕೊಡುತ್ತಿದ್ದ. ಸಂಪ್ರದಾಯನಿಷ್ಠ ಬ್ರಾಹ್ಮ

ಣರು ಪೆರಿಯನಂಬಿಯ ಈ ನಡತೆಯನ್ನು ಟೀಕಿಸಿದಾಗ ರಾಮಾನುಜಾಚಾರ್ಯರು ಆತನನ್ನು ಶ್ಲಾಘಿಸಿ ಆತನ ಸೇವಾಮನೋಭಾವಕ್ಕೆ ಆತನನ್ನು ಅಭಿನಂದಿಸಿ ಇತರರನ್ನು ಅವರ ಸಂಕುಚಿತ ದೃಷ್ಟಿಗಾಗಿ ನಿಂದಿಸಿದರು.

ರಾಮಾನುಜರಿಗೂ ಮೊದಲು ಶ್ರೀವೈಷ್ಣವ ಸಿದ್ಧಾಂತಗಳನ್ನು ಪ್ರತಿಪಾದಿಸಿದ ಆಳ್ವಾರ್‌ಗಳಲ್ಲಿ ಅಂತ್ಯಕುಲಜರೂ ಇದ್ದರೆಂಬುದನ್ನು ಮರೆಯಲಾಗದು. ಹನ್ನೆರಡು ಆಳ್ವಾರರುಗಳಲ್ಲಿ ಎಲ್ಲ ಜಾತಿ–ವರ್ಗಗಳಿಗೆ ಸೇರಿದವರಿದ್ದಾರೆ. ಮೂವರು ಬ್ರಾಹ್ಮಣರು, ನಾಲ್ವರ ಕುಲಗೋತ್ರಗಳು ಗೊತ್ತಿಲ್ಲ. ಒಬ್ಬರು ಸ್ತ್ರೀ, ಒಬ್ಬ ಅರಸ. ತಿರುಪ್ಪಾಣಾಳ್ವಾರ್ ಪಂಚಮ ಕುಲದವರು. ತಿರುಮಂಗೈ ಚತುರ್ಥವರ್ಣದ ನೀಲ ಎಂಬ ಸೇನಾಧಿಪತಿಯ ಮಕ್ಕಳು. ನಮ್ಮಾಳ್ವಾರ್ ವೆಲ್ಲಾಳ ಕುಲದವರು. ಆದರೆ ಇವರೆಲ್ಲ ಅಪೂರ್ವ ಪ್ರತಿಭೆಯಿಂದ ಜ್ಞಾನಿಗಳಾಗಿ ಭಕ್ತಿಯಿಂದ ದೇವರನ್ನು ಒಲಿಸಿಕೊಂಡವರು. ಶ್ರೀ ವೈಷ್ಣವರು ಇವರನ್ನು ಭಕ್ತಿಯಿಂದ ಆರಾಧಿಸುತ್ತಾರೆ. ಇಲ್ಲಿ ಕುಲವೇಕೆ ಅಡ್ಡ ಬಂದಿಲ್ಲ? ಶ್ರೀರಂಗದಲ್ಲಿನ ಒಬ್ಬ ಪರೈಯ ಆಳ್ವಾರರ ಪ್ರಬಂಧಗಳನ್ನು ಹಾಡುತ್ತಾ ಭಾವಪರವಶನಾಗುತ್ತಿದ್ದ. ನದಿಗೆ ಹೋಗುವ ಮಾರ್ಗದಲ್ಲಿ ಪ್ರತಿದಿನ ಇವನ್ನು ಕೇಳುತ್ತಿದ್ದ ರಾಮಾನುಜರು ಒಮ್ಮೆ ಆತನ ಕುಟೀರಕ್ಕೆ ಹೋಗಿ ಅಲ್ಲಿ ಮೂರು ಘಂಟೆಗಳ ಕಾಲ ಆತನು ಹಾಡುತ್ತಿದ್ದ ಪ್ರಬಂಧಗಳನ್ನು ಕೇಳಿ ಆನಂದಿಸಿದರು. ಅಸ್ಪೃಶ್ಯರೆನ್ನಲಾದ ತಿರುಪ್ಪಾಣಾಳ್ವರರನ್ನು ಬ್ರಾಹ್ಮಣ ಭಕ್ತರು ತಮ್ಮ ಭುಜದ ಮೇಲೆ ಕೂರಿಸಿಕೊಂಡು ದೇವಸ್ಥಾನಕ್ಕೆ ಹೋಗುತ್ತಿದ್ದರೆಂಬುದನ್ನು ಕೇಳಿ ತಿಳಿದ ರಾಮಾನುಜರಲ್ಲಿ ಎಲ್ಲ ಮಾನವರೂ ಒಂದೇ, ಎಲ್ಲರಲ್ಲಿಯೂ ಒಬ್ಬನೇ ದೇವನಿದ್ದಾನೆಂದಾಗ ಕೆಲವರು ಅಸ್ಪೃಶ್ಯರೇಕೆ? ದೇಹಶುದ್ಧಿ, ಆತ್ಮಶುದ್ಧಿ ಮುಖ್ಯವೇ ಹೊರತು ಉಚ್ಚನೀಚರೆಂಬ ಭೇಧ ಮಾನವರಿಗೆ ಸಲ್ಲದು ಎಂಬ ಭಾವ ಸ್ಫುರಿಸಿದುದು ಆಶ್ಚರ್ಯದ ಮಾತಲ್ಲ.

೬

ನಿಷ್ಠೆ

ನಿಷ್ಠೆ ಎಂಬುದು ಇಂದಿನ ವರ್ಷಗಳಲ್ಲಿ ಅಪರೂಪವಾಗುತ್ತಿರುವ ಒಂದು ಗುಣ. ಇದು ಹಲವಾರು ವಿಧಗಳಲ್ಲಿ ವ್ಯಕ್ತವಾಗುವಂತಹುದು. ಗುರುನಿಷ್ಠೆ, ಧರ್ಮನಿಷ್ಠೆ, ತತ್ವನಿಷ್ಠೆ, ಸ್ವಾಮಿನಿಷ್ಠೆ, ಇತ್ಯಾದಿ. ಇದೊಂದು ವ್ರತವಿದ್ದಂತೆ. ಒಬ್ಬರು ಇನ್ನೊಬ್ಬರಲ್ಲಿ ವಿಶ್ವಾಸವನ್ನಿಟ್ಟಾಗ ಆ ವಿಶ್ವಾಸವನ್ನು ಕಾಪಾಡಿಕೊಳ್ಳುವುದು, ಅಂತಹ ವಿಶ್ವಾಸಕ್ಕೆ ಅರ್ಹರಾಗುವುದು ಸುಲಭವಲ್ಲ. ವೈಯಕ್ತಿಕಲಾಭ, ಆತ್ಮಪ್ರತಿಷ್ಠೆ ಮುಂತಾದುವುಗಳು ನಿಷ್ಠೆಗೆ ಮಾರಕ. ರಾಜಕೀಯದಲ್ಲಿ ಬಹುಶಃ ಅತ್ಯವಶ್ಯಕವಾದ ಒಂದು ಗುಣ ಇದು. ಒಂದು ಪಕ್ಷವನ್ನು, ಒಬ್ಬ ನಾಯಕನನ್ನು ಯಾವುದೇ ಕಾರಣದಿಂದಾಗಲೀ ಸೇರಿದಾಗ, ಆ ಪಕ್ಷಕ್ಕೆ ಆ ನಾಯಕನಿಗೆ ನಿಷ್ಠಾವಂತನಾಗಿರುವುದು ಬಹುಪೊತ್ತು, ಕಷ್ಟಸಾಧ್ಯವಾದ ಗುಣ. ಇಂದು ಆ ಗುಣ ಲೋಪವಾಗಿರುವುದು ರಾಜಕೀಯ ಪಕ್ಷಗಳಿಗೆ ಆತಂಕಕಾರಿಯಾಗಿರುವ ಅಂಶ.

ಇದಕ್ಕೆ ಮನೋನಿಗ್ರಹ, ಸಂಯಮ, ಧೈರ್ಯಗಳು ಬೆಂಬಲವಾಗಿರಬೇಕು. ಮಹಾಭಾರತದಲ್ಲಿ ಕರ್ಣ ಇಂತಹ ನಿಷ್ಠೆಗೆ ಖ್ಯಾತಿವೆತ್ತವನು. ದಾನಶೂರನೆನಿಸಿದ ಕರ್ಣ ಉತ್ತಮ ಸ್ವಾಮಿನಿಷ್ಠನೂ ಹೌದು. ಇತರರು ತೆಗಳಿದಾಗ ತನಗೆ ನೆರವಾಗಿ ಸಹಾಯ ಮಾಡಿದಾತ ಈತನ ಸ್ವಾಮಿಯಾದ ದುರ್ಯೋಧನ. ಇವರಿಬ್ಬರೂ ಪರಮಾಪ್ತ ಸಖರಾಗಿದ್ದರು. ಕರ್ಣನ ಶೌರ್ಯ ದುರ್ಯೋಧನನಿಗೆ ಧೈರ್ಯವನ್ನು ನೀಡಿತ್ತು. ಆದರೆ ಕರ್ಣ ಕುಂತೀಪುತ್ರ. ಆದ್ದರಿಂದ

ಪಾಂಡವರ ಸೋದರ ಎಂಬುದನ್ನರಿತ ಶ್ರೀಕೃಷ್ಣ ಕರ್ಣನಿಗೆ ಆತನ ಜನ್ಮರಹಸ್ಯವನ್ನರುಹಿ, ಆತ ಪಾಂಡವರ ಪಕ್ಷಕ್ಕೆ ಸೇರುವಂತೆ ಆತನನ್ನು ಪ್ರಚೋದಿಸಿದ. ಪಾಂಡವರು ಗೆದ್ದರೆ, ನೀನೂ ರಾಜನಾಗುತ್ತೀಯ, ಅವರೆಲ್ಲರನ್ನು ಸೇವಿಸಿದಂತೆ ದ್ರೌಪದಿ ನಿನ್ನನ್ನೂ ಸೇವಿಸುತ್ತಾಳೆ ಎಂದೆಲ್ಲ ಹೇಳಿ ಮಣ್ಣಿನ, ಹೆಣ್ಣಿನ ಆಮಿಷವನ್ನು ಒಡ್ಡಿದ. ಆದರೆ ಕರ್ಣ ಅಂತಹ ಪ್ರಚೋದನೆಗಳಿಗೆ ಮಣಿಯಲಿಲ್ಲ. ಸ್ವತಃ ತನ್ನ ತಾಯಿಯ ಪ್ರಾರ್ಥನೆಯನ್ನು ಆತ ದೃಢಮನಸ್ಸಿನಿಂದ ತಳ್ಳಿಹಾಕಿದ. ಕಾರಣ ಸ್ವಾಮಿನಿಷ್ಠೆ. ದುರ್ಯೋಧನ ಒಳ್ಳೆಯವನಲ್ಲದಿರಬಹುದು. ಇತರರು ಆತನನ್ನು ಬೇರೆ ಬೇರೆ ರೀತಿಗಳಲ್ಲಿ ತೆಗಳಬಹುದು. ಆದರೆ ಆತ ತನಗೆ ಆಶ್ರಯ ನೀಡಿದ ಸ್ವಾಮಿ. ಆತನನ್ನು ಬಿಟ್ಟು ಇನ್ನೊಬ್ಬರನ್ನು ಒಲಿಸುವ, ಸೇವಿಸುವ ಯೋಚನೆಯೂ ಸಹ ತಪ್ಪು. ಆತ ತನ್ನನ್ನು ವಿಶಿಷ್ಟವಾಗಿ ಕಂಡಿದ್ದಾನೆ. ತನ್ನ ಸಹಾಯವನ್ನು ನಂಬಿದ್ದಾನೆ. ಆತನಿಗೆ ಬೆಂಬಲ ನೀಡುವುದು ತನ್ನ ಧರ್ಮ. ಪರಿಣಾಮಗಳೇನೇ ಆದರೂ ಧರ್ಮನಿಷ್ಠೆಗೆ ಎಂದೂ ಚ್ಯುತಿ ಉಂಟಾಗಬಾರದು ಎಂದು ಭಾವಿಸಿದ ಕರ್ಣ ಪಾಂಡವರ ವಿರುದ್ಧ ಹೋರಾಡಿದ.

ಕರ್ನಾಟಕದ ಇತಿಹಾಸದಲ್ಲಿ ಇಂತಹ ನಿಷ್ಠಾವಂತ ಸೇವಕರು ಸಾವಿರಾರು ಜನ ಕಾಣಿಸಿಕೊಂಡಿದ್ದಾರೆ. ಅನೇಕರು ಹೇಳಹೆಸರಿಲ್ಲದವರಾಗಿದ್ದಾರೆ. ಇಂತಹವರನ್ನು ಗರುಡರೆಂದು ಕರೆಯಲಾಗಿದೆ. ಹೊಯ್ಸಳರ ಕಾಲದಲ್ಲಿ ಆ ಅರಸರ ಹಿಂದೆ ಇಂತಹ ಸೈನಿಕರ ಪಡೆಯೇ ಇರುತ್ತಿತ್ತು. ಇವರು ತಮ್ಮ ಅರಸನ ಪ್ರಾಣಕ್ಕೆ ತಮ್ಮ ಪ್ರಾಣ ನೀಡುವಂತಹವರಾಗಿದ್ದರು. ಇದು ಎಷ್ಟರಮಟ್ಟಿಗೆ ಇತ್ತೆಂದರೆ, ತಮ್ಮ ಅರಸ ಮಡಿದಾಗ ಆತನೊಡನೆಯೇ ಗರುಡರೆನಿಸಿಕೊಳ್ಳುವವರೂ ಸಹ ಪ್ರಾಣತ್ಯಾಗ ಮಾಡಿಕೊಳ್ಳುತ್ತಿದ್ದರು.

ಅಗ್ರಹಾರ ಬಾಚಹಳ್ಳಿಯಲ್ಲಿ ಮುಗಿಲಕುಲವೆಂಬ ಮನೆತನವೊಂದಿದ್ದಿತು. ಈ ಮನೆತನಕ್ಕೆ ಸೇರಿದವರೆಲ್ಲ ಹೊಯ್ಸಳ ಅರಸರ ಲೆಂಕವಾಳಿಗಳಾಗಿದ್ದರು. ಎಱೆಯಂಗ, ಬಿಟ್ಟಿದೇವ ನರಸಿಂಹ, ಇಮ್ಮಡಿ ಬಲ್ಲಾಳ, ಇಮ್ಮಡಿ ನರಸಿಂಹ, ಸೋಮೇಶ್ವರ ಮೊದಲಾದ ಅರಸರಿಗೆಲ್ಲ ಈ ಕುಲದವರು ಲೆಂಕರಾಗಿದ್ದು ಅವರ ಆಣತಿಯಂತೆ ಶತ್ರುಸೈನ್ಯದೊಡನೆ ಕಾದಿಯೋ, ಅವರೊಡನಿದ್ದು ಅವರ ಗರುಡರಾಗಿಯೋ, ಮರಣವನ್ನಪ್ಪಿದರು.

ಕನ್ನೆಯನಾಯಕ ತನ್ನ ಮೂವರು ಪತ್ನಿಯರೊಡನೆಯೂ, ಹತ್ತುಮಾನಿಸ ಲೆಂಕಿತಿಯರುಂ, ಯಿಪ್ಪತ್ತೊಂದು ಮಾನಿಸ ಲೆಂಕರುಂ ಬೆರಸಿ ಗಜಮಸ್ತಕದಲ್ಲಿ ಆರು ಬಾರಿ ಗರುಡನನಪ್ಪಿ ಬಾಸೆಯ ಪೂರಯಿಸಿದನು. ಇದು ಸೋಮೇಶ್ವರನೊಡನೆ. ಇದಕ್ಕೂ ಮೊದಲು ಗಂಡನಾರಾಯಣಸೆಟ್ಟಿ ತನ್ನ ಪತ್ನಿ ಮತ್ತು ಐವರು ಲೆಂಕರೊಡನೆ ಎಱೆಯಂಗನಿಗಾಗಿ, ಕೂರೆಯನಾಯಕ ತನ್ನ ಈರ್ವರು ಪತ್ನಿಗಳ ಮತ್ತು ಏಳು ಲೆಂಕರೊಡನೆ ಮೊದಲನೆಯ ನರಸಿಂಹನಿಗಾಗಿ ಗರುಡರಾದರು. ಸಹಸ್ರಫಣಾಧರನೆನಿಸಿದ ಆದಿಶೇಷ ಗರುಡನನ್ನೆದುರಿಸಲಾಗದೆ ಭೂಮಿಯಡಿಗೆ ಇಳಿದುಹೋದ. ಆದರೆ ಕನ್ನೆಯನಾಯಕ ಹಾಗೆ ಮಾಡದೆ 'ರಾಯಲೆಂಕರ್ ಪತಿಯುಪೆಱಗೆ ಕೀೞ್ಪಟ್ಟು ಬಾೞ್ವಂವೆತ್ತಂ ಸುಡೆ ತಂತಂಮಂಗಮಂ ಸುತ್ತಳಿಯದೆ ತಲೆಯಂ ಬೇಱಿ ವೇಱೂಱಿ ಮೇಂಗಾಲೆಡೆಯೊಳ್ ಮೇಲ್ವಾಹೆಮೆಂಬೀ ನೆವದೊಳೆ ತಪಮಂ ಮಾಡುತ್ತಿರ್ದಪ್ಪರೆಂಬಂತೆ' ಗರುಡನನಪ್ಪಿ ಅಸುನೀಗಿದನೆನ್ನುತ್ತದೆ ಶಾಸನ. ಸ್ವಾಮಿ ಮಡಿದಾಗ ಆತನ ಲೆಂಕರು ಬಾಳುವುದಾದರೂ ಸರಿಯಲ್ಲ ಎಂದು ಭಾವಿಸಿ ಅಲುಗಾಡದೆ ತಪಗೈಯುವವನಂತೆ ನಿಂತ ಗರುಡ ತನ್ನ ತಲೆಯನ್ನು ಬೇರ್ಪಡಿಸಿಕೊಂಡ. ಇದು ಸ್ವಾಮಿನಿಷ್ಠೆಗೆ ಉತ್ಕೃಷ್ಟ ನಿದರ್ಶನ.

ಪುಸ್ತಕಲೋಕ

ಅಂಶಲಕ್ಷಿ ಅರ್ಥಶಾಸ್ತ್ರ, ಲೇಖಕರು : ಸಿ. ಕೆ. ರೇಣುಕಾರ್ಯ. ಪ್ರಕಾಶಕರು : ಆರ್. ಎಮ್. ಪ್ರಕಾಶನ ಮೈಸೂರು. ಪುಟಗಳು 430

ಅರ್ಥಶಾಸ್ತ್ರವನ್ನು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡುವವರಿಗೆ ಪಠ್ಯಪುಸ್ತಕದ ಕೊರತೆಯಿದೆ. ಇದನ್ನು ಸುಧಾರಿಸುವ ದಿಕ್ಕಿನಲ್ಲಿ ಸಿ. ಕೆ. ರೇಣುಕಾರ್ಯ ಅವರ 'ಅಂಶಲಕ್ಷಿ ಅರ್ಥಶಾಸ್ತ್ರ' ಒಂದು ಸ್ವಾಗತಾರ್ಹ ಕೃತಿ.

ಅಂಶಲಕ್ಷಿ ಅರ್ಥಶಾಸ್ತ್ರ, ಹೆಸರೇ ಸೂಚಿಸುವಂತೆ, ಅರ್ಥಶಾಸ್ತ್ರದ ಒಂದು ಪ್ರಮುಖ ಭಾಗ. ಇದು ಮೌಲ್ಯಸಿದ್ಧಾಂತ ಹಾಗೂ ವಿತರಣಾ ಸಿದ್ಧಾಂತವನ್ನು ಕುರಿತ ಅಧ್ಯಯನಾಂಗ. ಗಣಿತಶಾಸ್ತ್ರೀಯ ಸಾಧನಗಳನ್ನು ಬಳಸಿಕೊಂಡು ಅಂಶಲಕ್ಷಿ ಅರ್ಥಶಾಸ್ತ್ರದ ಸಮಗ್ರ ಪರಿಚಯವನ್ನು ಒದಗಿಸುವುದು ಲೇಖಕರ ಉದ್ದಿಶ್ಯವಾಗಿದೆ.

ಕ್ಲಿಷ್ಟವಾದ ಈ ಅರ್ಥಶಾಸ್ತ್ರೀಯ ಸಿದ್ಧಾಂತವನ್ನು ಲೇಖಕರು ಸರಳ ಶೈಲಿಯಲ್ಲಿ ಸಾಕಷ್ಟು ವ್ಯಾಪಕವಾಗಿ ನಿರೂಪಿಸಿದ್ದಾರೆ. ಅನುಭೋಗ ಸಿದ್ಧಾಂತದ ವಿತರಣೆ, ಬೇಡಿಕೆ ಸ್ಥಿತಿಸ್ಥಾಪಕತ್ವ, ಮಾರುಕಟ್ಟೆಗಳಲ್ಲಿ ಬೆಲೆಯ ನಿರ್ಧಾರ–ಈ ಭಾಗಗಳ ವಿವರಣೆ ಸುಲಭಗ್ರಾಹ್ಯವೂ, ಉತ್ತಮವೂ ಆಗಿರುವುದಲ್ಲದೆ, ಈ ಕ್ಷೇತ್ರಗಳ ಆಧುನಿಕ ಬೆಳವಣಿಗೆಯನ್ನು ಗುರುತಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರದ ಪಠ್ಯಕ್ರಮದಲ್ಲಿ ನಮೂದಿಸಿರುವ ಗಣಿತಶಾಸ್ತ್ರದ ಭಾಗವನ್ನು ಬೋಧಿಸಲು ಈ ಕೃತಿಯು ಕೈಪಿಡಿಯಾಗಿದೆ. ಆದರೆ ತ್ರಿಕೋನ ಮಿತೀಯ ಪ್ರಮಾಣಗಳನ್ನು ತಿಳಿಯದ ಓದುಗರಿಗೆ ಸರಳರೇಖಾ ಬಿಂಬಕದ ಕೆಲವು ರೂಪಗಳು ಅರ್ಥವಾಗುತ್ತವೆ ಎಂದು ನಿರೀಕ್ಷಿಸುವುದು ತಪ್ಪಾಗುತ್ತದೆ. ಬೇಡಿಕೆ ಸ್ಥಿತಿಸ್ಥಾಪಕತ್ವ ಮತ್ತು ಸರಳ ರೇಖಾಬಿಂಬಕ ಕಾರ್ಯ ನಿಯೋಜನೆಗಳನ್ನು ವಿವರಿಸುವುದರಲ್ಲಿ ಗಣಿತ ಶಾಸ್ತ್ರೀಯ ಸಾಧನಗಳನ್ನು ಲೇಖಕರು ಸೂಕ್ತವಾಗಿ ಬಳಸಿಕೊಂಡಿದ್ದಾರೆ. ವಿವಿಧ ಮಾರುಕಟ್ಟೆಗಳಲ್ಲಿ ಬೆಲೆಗಳನ್ನು ನಿರ್ಣಯಿಸುವುದರಲ್ಲಿಯೂ ಗಣಿತಶಾಸ್ತ್ರೀಯ ವಿವರಣೆಯನ್ನು ಒದಗಿಸಿದ್ದರೆ ಉತ್ತಮವಾಗುತ್ತಿತ್ತೇನೊ. ಇಲ್ಲಿನ ವಿವರಣೆಗೆ ಬಳಸಿಕೊಂಡಿರುವ ಪಾರಿಭಾಷಿಕಗಳು ಸೆಕೆಂಡರಿ ಶಿಕ್ಷಣ ಇಲಾಖೆಯ ಶಬ್ದ ಕೋಶಕ್ಕೆ (ಗಣಿತಶಾಸ್ತ್ರ) ಹೊಂದಿಕೊಂಡಿರುವುದರಿಂದ, ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟವೆನಿಸುವುದಿಲ್ಲ. ಅಲ್ಲದೆ ಈ ಪಾರಿಭಾಷಿಕಗಳು ಗಟ್ಟಿಯಾಗಿ ನಿಲ್ಲುತ್ತವೆ ಎಂದೂ ಹೇಳಬಹುದು.

ಉತ್ಪಾದನಾ ಸಿದ್ಧಾಂತಕ್ಕೆ ಸಂಬಂಧಿಸಿದ ಪ್ರತಿಫಲ ನಿಯಮಗಳನ್ನು (ಅಧ್ಯಾಯ 9), ಉತ್ಪಾದನಾ ಬಿಂಬಕ ಪರಿಭಾವನೆಯನ್ನು ಬಳಸಿಕೊಂಡು ನಿರೂಪಿಸಿದ್ದರೆ ಓದುಗರಿಗೆ ಉತ್ಪಾದನಾ ಬಿಂಬಕ ಮತ್ತು ಪ್ರತಿಫಲ ನಿಯಮಗಳ ಪರಸ್ಪರ ಸಂಬಂಧವು ಸ್ಪಷ್ಟವಾಗುತ್ತಿತ್ತೆಂದು ತೋರುತ್ತದೆ.

ಇನ್ನು ನಿರೂಪಣೆಯಲ್ಲಿ ಅಸ್ಪಷ್ಟತೆ ಕೆಲವು ಕಡೆಗಳಲ್ಲಿ ಕಾಣಿಸುತ್ತದೆ. ಉದಾ: "$Y = \frac{10 + 2X}{8}$ ಎನ್ನುವ ಸಮೀಕರಣದಲ್ಲಿ ಎಡಭಾಗದಲ್ಲಿ ನಮೂದಿಸಿರುವ ಚರವನ್ನು

ಅವಲಂಬಿ ಚಲವೆಂದು ಕರೆಯಲಾಗುತ್ತದೆ. ಸಮೀಕರಣದ ಬಲಭಾಗದಲ್ಲಿ ನಮೂದಿಸಿರುವ ಚರವನ್ನು ಅವಲಂಬಿ ಚಲವೆಂದು ಕರೆಯಲಾಗುತ್ತದೆ." (ಪುಟ 49). ಮುದ್ರಣ ದೋಷಗಳು ಅಷ್ಟಾಗಿ ಕಂಡುಬರುವುದಿಲ್ಲವಾದರೂ ಆದಾನ-ವಿದಾನ ವಿಶ್ಲೇಷಣೆಯ ಒಂದು ಅಂಕಿ ಪದಕದಲ್ಲಿ (ಪುಟ. 380) ತುಂಬ ಪ್ರಮಾದಕರವಾದ ದೋಷವೊಂದು ಕಂಡುಬರುತ್ತದೆ. (ಎರಡನೆ ನೀಟಸಾಲಿನಲ್ಲಿ 1150ಕ್ಕೆ ಬದಲಾಗಿ 1500 ಎಂದು ಮುದ್ರಿತವಾಗಿದೆ). ಬಳಕೆಯಲ್ಲಿರುವ ಕೆಲವು ಪಾರಿಭಾಷಿಕಗಳನ್ನು ಲೇಖಕರು ಬಳಸಿಕೊಳ್ಳಬಹುದಿತ್ತು:. (ಉದಾ : ಮನಾಪಲಿಸ್ಟಿಕ್ =ಏಕಸ್ವಾಮ್ಯಯುತ ಪೈಪೋಟಿ ಮತ್ತು ಆಲಿಗೋಪಲಿ= ಬಹುಜನಸ್ವಾಮ್ಯ ಇತ್ಯಾದಿ) ಸ್ವಲ್ಪ ಸಾವಧಾನವಾಗಿ ಪ್ರಕಟಣ ಪೂರ್ವ ಪರಿಶೀಲನೆ ಮಾಡಿದ್ದರೆ ಇಂಥ ದೋಷಗಳನ್ನು ನಿವಾರಿಸಬಹುದಿತ್ತು.

ಒಟ್ಟಿನಲ್ಲಿ ಸರಳ ಶೈಲಿಯಲ್ಲಿ ಅರ್ಥಶಾಸ್ತ್ರದ ಸಿದ್ಧಾಂತವನ್ನು ಆದಷ್ಟು ಮಟ್ಟಿಗೆ ಗಣಿತ ಶಾಸ್ತ್ರೀಯ ಸಾಧನಗಳ ಮೂಲಕ ಪರಿಚಯಿಸಿರುವ ಸಿ. ಕೆ. ರೇಣುಕಾರ್ಯರವರ ಈ ಕೃತಿಯು ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಸಕಾಲಿಕ ನೆರವು ನೀಡುವುದೇ ಅಲ್ಲದೆ ಜನಪ್ರಿಯ ಪಠ್ಯ ಪುಸ್ತಕವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಅರ್ಥಶಾಸ್ತ್ರ ತತ್ವವಿವೇಚನೆ, ಲೇಖಕರು : ಸಿ. ಬಿ. ಚಂದ್ರಶೇಖರಪ್ಪ, ವಾಯ್. ಎಲ್. ಇನಾಮದಾರ, ಜಿ. ವಿ. ಭಟ್, ಎಂ. ಸಿ. ಕೊಪ್ಪ. ಜಿ. ಆರ್. ಕರಗುದರಿ. ಪ್ರಕಾಶಕರು : ಕನ್ನಡ ಅಧ್ಯಯನ ಪೀಠ ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಅರ್ಥಶಾಸ್ತ್ರವನ್ನು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಲು ಪಠ್ಯಪುಸ್ತಕ ಯೋಜನೆಯ ಆಶ್ರಯದಲ್ಲಿ ನುರಿತ ಅಧ್ಯಾಪಕರಿಂದ ರಚಿತವಾದ ಕೃತಿ 'ಅರ್ಥಶಾಸ್ತ್ರ ತತ್ವವಿವೇಚನೆ'. ಕರ್ನಾಟಕ ವಿಶ್ವವಿದ್ಯಾಲಯದ ದ್ವಿತೀಯ ಬಿ. ಎ. ಪಠ್ಯಕ್ರಮಕ್ಕೆ ಅನುಗುಣವಾಗಿರುವ ಈ ಕೃತಿಯ ವಿಷಯವು ಅರ್ಥಶಾಸ್ತ್ರದ ಕೆಲವು ಪ್ರಮುಖ ಭಾಗಗಳಾದ ಅನುಭೋಗಸಿದ್ಧಾಂತ, ಮೌಲ್ಯ ಸಿದ್ಧಾಂತ, ವಿತರಣಾ ಸಿದ್ಧಾಂತ, ಕೇನ್ಸನ ಉದ್ಯೋಗ ಮೀಮಾಂಸೆ ಮತ್ತು ಕೆಲವು ಪ್ರಮುಖ ಅರ್ಥಶಾಸ್ತ್ರಜ್ಞರ ಆರ್ಥಿಕ ಚಿಂತನೆಯನ್ನು ಒಳಗೊಂಡು ವಿಶಾಲವಾದ ಸ್ವರೂಪವನ್ನು ಪಡೆದಿದೆ. ಇಂಥ ವಿಸ್ತಾರದಿಂದಲೇ, ಇಲ್ಲಿ ಅರ್ಥಶಾಸ್ತ್ರದ ವಿವಿಧ ಭಾಗಗಳ ಬಗ್ಗೆ ಸ್ಥೂಲವಿವರಣೆಯು ದೊರಕುತ್ತದೆಯಾದರೂ ನಿರೂಪಣೆಯ ಸಮಗ್ರತೆ ಅಲ್ಲಲ್ಲಿ ಕುಂಟಿದುವುದು ಕಂಡುಬರುತ್ತದೆ.

ಹದಿನೇಳು ಅಧ್ಯಾಯಗಳನ್ನು ಹೊಂದಿರುವ ಪುಸ್ತಕ. ಕೃತಿಯ ಶೈಲಿ ಪಠ್ಯಪುಸ್ತಕಕ್ಕೆ ತಕ್ಕಂತೆ ಸರಳವಾಗಿದೆ. ಮೊದಲನೆಯ ಭಾಗದಲ್ಲಿ ಅರ್ಥಶಾಸ್ತ್ರದ ವ್ಯಾಖ್ಯೆ, ಅನುಭೋಗ, ಸಮತೋಲನ, ಮತ್ತು ಮೌಲ್ಯಸಿದ್ಧಾಂತವನ್ನು ವಿವೇಚಿಸಲಾಗಿದೆ. ಅರ್ಥಶಾಸ್ತ್ರದ ವ್ಯಾಖ್ಯೆಯ ಬಗ್ಗೆ ದೀರ್ಘ ವಿವರಣೆಯನ್ನು ಕೊಡುವುದರ ಬಗ್ಗೆ ಅಭಿವೃದ್ಧಿ ಪೂರಕ ಅರ್ಥಶಾಸ್ತ್ರದ ವ್ಯಾಖ್ಯೆಯನ್ನು ಸಾಕಷ್ಟು ವಿವರವಾಗಿ ಚರ್ಚಿಸಲಾಗಿರುವುದರಿಂದ ಅರ್ಥಶಾಸ್ತ್ರದ ವ್ಯಾಖ್ಯೆಯ ಆಧುನಿಕ ಒಲವು ಸ್ಪಷ್ಟವಾಗಿ ನಿರೂಪಿತವಾಗಿದೆ.

ಅನುಭೋಗ ಸಿದ್ಧಾಂತದಲ್ಲಿ ಔದಾಸೀನ ವಕ್ರರೇಖೆಯ ವಿಶ್ಲೇಷಣೆ ಸುದೀರ್ಘವಾಗಿದೆ. ಆದರೆ ಔದಾಸೀನ ವಕ್ರರೇಖೆಯ ಮೂಲಕ ಬೇಡಿಕೆಯ ನಿಯಮಗಳನ್ನು ಹೇಗೆ ನಿರೂಪಿಸಬಹುದು ಎಂಬುದನ್ನು ವಿವರಿಸದೇ ಇರುವುದರಿಂದ 'ಉಪಭೋಗ' ಮತ್ತು 'ಬೇಡಿಕೆ' ಎಂಬ ಎರಡನೆಯ ಅಧ್ಯಾಯವು ಒಂದು ದೃಷ್ಟಿಯಿಂದ ಅಪೂರ್ಣ ಎಂದೆನಿಸುತ್ತದೆ. ಮೌಲ್ಯಸಿದ್ಧಾಂತ ಮತ್ತು ವಿತರಣಾ ಸಿದ್ಧಾಂತದ ನಿರೂಪಣೆ ಸವಿಸ್ತಾರ, ಸ್ಪಷ್ಟ. ಇದು ಕೃತಿಯ ಮೊದಲನೆಯ ಭಾಗದ ಉತ್ತಮ ಖಂಡವಾಗಿದೆ.

ಕೃತಿಯ ಎರಡನೆಯ ಭಾಗದಲ್ಲಿ 'ಸಮಗ್ರ ಲಕ್ಷ್ಯ ಅರ್ಥಶಾಸ್ತ್ರ'ದ ಸಂಕ್ಷಿಪ್ತ ವಿವರಣೆ ಇದೆ. ಕೇನ್ಸನ ಮೂಲ ಆರ್ಥಿಕ ಸಾಧನೆಗಳ ವಿಶ್ಲೇಷಣೆಯು ದೊರಕುವುದಿಲ್ಲ. ಸ್ಥೂಲವಾಗಿ, ಉದ್ಯೋಗ ಮತ್ತು ಉತ್ಪನ್ನದ ಸಮತೋಲನದ ಮಾದರಿಯ ಪರಿಚಯವಾಗುತ್ತದೆ ಅಷ್ಟೆ.

ಮೂರನೆಯ ಭಾಗದಲ್ಲಿ ಪ್ರಮುಖ ಕ್ಲಾಸಿಕಲ್ ಮತ್ತು ಅಧುನಿಕ ಶಾಸ್ತ್ರಜ್ಞರ ಆರ್ಥಿಕ ಚಿಂತನೆಗಳನ್ನು ನಿರೂಪಿಸಲಾಗಿದೆ. ಮೌಲ್ಯ ಸಿದ್ಧಾಂತ ಹಾಗೂ ವಿತರಣಾ ಸಿದ್ಧಾಂತದ ಬಗ್ಗೆ ವಿವಿಧ ಅರ್ಥಶಾಸ್ತ್ರಜ್ಞರ ವಿಚಾರಧಾರೆಯನ್ನು ತೃಪ್ತಿಕರವಾಗಿ ವಿವರಿಸಲಾಗಿದೆ.

ಒಟ್ಟು ಹೇಳಬೇಕೆಂದರೆ, ಈ ಕೃತಿಯು ಅರ್ಥಶಾಸ್ತ್ರದ ಮೂಲತತ್ವಗಳ ಪರಿಚಯವನ್ನು ಒದಗಿಸುತ್ತದೆ. ನಿರ್ವಹಣೆ ಸರಳವಾಗಿದ್ದು, ವಿದ್ಯಾರ್ಥಿಗಳ ಮೆಚ್ಚುಗೆಯನ್ನು ಪಡೆಯುವಂತಿದೆ. ಅನುಭವಿ ಅಧ್ಯಾಪಕರುಗಳ ಇಂಥ ಸಾಮೂಹಿಕ ಪ್ರಯತ್ನ ಶ್ಲಾಘನೀಯ.

ರಾ. ಕೇಶವ್

ಮಾನವಿಕ ಕರ್ಣಾಟಕ

ಸಂಪುಟ ೬

೧೯೭೫ – ೭೬

ಸೂಚಿ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

ವಿಷಯಸೂಚಿ

ಲೇಖನಗಳು

ಪುಸ್ತಕಲೋಕ

ಲೇಖಕ ಸೂಚಿ

ಮಾನವಿಕ ಕರ್ನಾಟಕ

ಸಂಪುಟ ೮

೧೯೭೭ – ೭೮

ಸೂಚಿ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

10

ವಿಷಯಸೂಚಿ

ಲೇಖನಗಳು

ಪುಸ್ತಕಲೋಕ

ಲೇಖಕ ಸೂಚಿ

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ ಮೈಸೂರು–೫೭೦ ೦೦೬